ಸೋಮವಾರ, ನವೆಂಬರ್ 15, 2021 | ₹ 6.00

ಪ್ರಜಾವಾ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

2016ರಲ್ಲಿ ಅಧಿಕಾರದಲ್ಲಿದ್ದವರು ಮಾಡಿದ್ದೇನು?: ಬಸವರಾಜ ಬೊಮ್ಮಾಯಿ

‘ಯಾರನ್ನೂ ಬಿಡಲ್ಲ, ಬಲಿ ಹಾಕ್ತೇವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಟ್ ಕಾಯಿನ್ ಪ್ರಕರಣದಲ್ಲಿ ಭಾಗಿಯಾದ ಯಾರನ್ನೂ ಬಿಡುವುದಿಲ್ಲ. ಯಾರೇ ಇದ್ದರೂ ಮುಖ, ಮುಲಾಜಿಲ್ಲದೆ ಬಲಿ ಹಾಕುತ್ತೇವೆ. ಈ ವಿಚಾರದಲ್ಲಿ ಹಿಂದೆ ಮುಂದೆ ನೋಡುವ ಪ್ರಶ್ನೆಯೇ ಇಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟ ಮಾತುಗಳಲ್ಲಿ ಹೇಳಿದರು.


ಬಸವರಾಜ ಬೊಮ್ಮಾಯಿ

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ಈ ಪ್ರಕರಣವನ್ನು ಬಯಲಿಗೆಳೆದವರೇ ನಾವು. ತನಿಖೆ ಮಾಡಿದ್ದು, ಇ.ಡಿ ಮತ್ತು ಸಿಬಿಐಗೆ ಶಿಫಾರಸು ಮಾಡಿದ್ದು ನಮ್ಮ ಸರ್ಕಾರ. ಇ.ಡಿಯಿಂದ ತನಿಖೆ ನಡೆಯುತ್ತಿದೆ. ಸಿಬಿಐ ಇಂಟರ್‌ಪೋಲ್‌ಗೂ ವಹಿಸಲಾಗಿದೆ. ಅವರು ಕೋರಿದ ಅಗತ್ಯ ಮಾಹಿತಿಗಳನ್ನು ಒದಗಿಸಲಾಗಿದೆ’ ಎಂದರು.

‘ಈ ಪ್ರಕರಣದಲ್ಲಿ ರಾಷ್ಟ್ರಕ್ಕೆ, ರಾಜ್ಯಕ್ಕೆ, ವ್ಯಕ್ತಿಗಳಿಗೆ ಮೋಸವಾಗಿದ್ದರೆ, ಮೋಸ ಮಾಡಿದವರ ಮೇಲೆ ಮುಲಾಜಿಲ್ಲದೆ ಕ್ರಮ ಜರುಗಿಸಲಾಗುವುದು’ ಎಂದೂ ಮುಖ್ಯಮಂತ್ರಿ ಸ್ಪಷ್ಟಪಡಿಸಿದರು.

‘ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಕೇಳಿರುವ ಆರು ಪ್ರಶ್ನೆಗಳಿಗೆ ಉತ್ತರ ನೀಡಲಾಗಿದೆ. ಈ ಪ್ರಕರಣಕ್ಕೆ 2016ರಿಂದ ಕರ್ನಾಟಕದೊಂದಿಗೆ ಸಂಬಂಧ ಇರುವುದಾದರೆ, ಆಗ ಅಧಿಕಾರದಲ್ಲಿದ್ದ ಅವರ (ಕಾಂಗ್ರೆಸ್) ಸರ್ಕಾರ ತನಿಖೆ ಏಕೆ ಕೈಗೊಳ್ಳಲಿಲ್ಲ. ಅವರ ಪಕ್ಷದ ಮುಖ್ಯಮಂತ್ರಿ, ಸಚಿವರು ಯಾಕೆ ಗಮನಹರಿಸಲಿಲ್ಲ. ಆರೋಪಿ ಶ್ರೀಕೃಷ್ಣನನ್ನು ಬಂಧಿಸಿ, ಬಿಟ್ಟು ಕಳುಹಿಸಲಾಯಿತು. ನಿರೀಕ್ಷಣಾ ಜಾಮೀನು ಪಡೆದಾಗಲೂ ವಿಚಾರಣೆಗೆ ಅವಕಾಶವಿತ್ತು. ಮುಕ್ತವಾಗಿ ದೊಡ್ಡ ಪ್ರಮಾಣದಲ್ಲಿ ಬೆಳೆಯಲು ಬಿಟ್ಟು ನಮ್ಮನ್ನು ಈಗ ಏಕೆ ಪ್ರಶ್ನಿಸುತ್ತಿದ್ದಾರೆ’ ಎಂದು ಪ್ರಶ್ನಿಸಿದ ಮುಖ್ಯಮಂತ್ರಿ, ‘ಆರೋಪಿಯನ್ನು ಬಿಟ್ಟು ಕೊಟ್ಟವರಿಂದ ನಾವು ಪಾಠ ಕಲಿಯಬೇಕಿಲ್ಲ’ ಎಂದರು.

‘ಟ್ವಿಟರ್ ಹ್ಯಾಂಡಲ್ ಆಧಾರದಲ್ಲಿ ಸುರ್ಜೇವಾಲಾ ವಿಚಾರಗಳನ್ನು ಪ್ರಸ್ತಾಪಿಸುತ್ತಾರೆ ಎಂದಾದರೆ, ಅದು ಅವರ ಚಿಂತನೆಯ ದಿವಾಳಿತನ. ಈ ರೀತಿ ಆಧಾರರಹಿತ ಆರೋಪಗಳನ್ನು ಮಾಡುವುದು ರಾಷ್ಟ್ರೀಯ ಪಕ್ಷದ ವಕ್ತಾರರಿಗೆ ಶೋಭಿಸುವುದಿಲ್ಲ. ಸಾಂದರ್ಭಿಕ ಪುರಾವೆಗಳನ್ನು ಇಟ್ಟುಕೊಂಡು ಮಾತನಾಡಬೇಕು’ ಎಂದು ಸಲಹೆ ನೀಡಿದರು.

ವಶಪಡಿಸಿಕೊಂಡಿರುವ ಬಿಟ್ ಕಾಯಿನ್‌ಗಳ ಬಗ್ಗೆ ಗೊಂದಲವಿರುವ ಕುರಿತು ಕೇಳಿದ ಪ್ರಶ್ನೆಗೆ, ‘ಆರೋಪಿ ಶ್ರೀಕೃಷ್ಣ ತನ್ನ ಖಾತೆ ಎಂದು ಯಾವುದೋ ಎಕ್ಸ್‌ಚೇಂಜ್ ಖಾತೆ ನೀಡಿದ್ದಾನೆ’ ಎಂದರು

ವದಂತಿ ಹಬ್ಬಿಸುತ್ತಿರುವ ಬಿಜೆಪಿ ಮುಖಂಡರಿಗೆ ಲಗಾಮು: ಶಾ ಸೂಚನೆ



ನವದೆಹಲಿ: ಬಿಟ್ ಕಾಯಿನ್ ಹಗರಣಕ್ಕೆ ಸಂಬಂಧಿಸಿದಂತೆ ವದಂತಿ ಹಬ್ಬಿಸುತ್ತಿರುವ ಕರ್ನಾಟಕದ ಬಿಜೆಪಿ ಮುಖಂಡರನ್ನು ಹತೋಟಿಯಲ್ಲಿಡುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ ಅವರಿಗೆ ಸೂಚಿಸಿದ್ದಾರೆ.

ಕಳೆದ ವಾರ ಅಮಿತ್ ಶಾ ಅವರನ್ನು ಭೇಟಿ ಮಾಡಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಇಬ್ಬರು ಸಚಿವರು ಸೇರಿದಂತೆ ತಮ್ಮದೇ ಪಕ್ಷದ ಮುಖಂಡರು ತಮ್ಮ ಹಾಗೂ ಬಿಜೆಪಿ ಸರ್ಕಾರದ ವಿರುದ್ಧ ವದಂತಿ ಹಬ್ಬಿಸುತ್ತಿದ್ದಾರೆ. ಅವರೇ ಕಾಂಗ್ರೆಸ್ ನಾಯಕರಿಗೆ ಮಾಹಿತಿ ನೀಡುತ್ತಿದ್ದಾರೆ. ಈ ತೆರನಾದ ವದಂತಿಗಳೇ ಕಾಂಗ್ರೆಸ್ ನಾಯಕರ ವಾಗ್ದಾಳಿಗೆ ಆಹಾರವಾಗಿವೆ. ಹೀಗಾಗಿ, ಸರ್ಕಾರವನ್ನು ಅಸ್ಥಿರಗೊಳಿಸಲು ಯತ್ನಿಸುತ್ತಿರುವ ಕೆಲವು ಸಚಿವರು ಹಾಗೂ ಮುಖಂಡರಿಗೆ ಎಚ್ಚರಿಕೆ ನೀಡುವಂತೆ ಬೊಮ್ಮಾಯಿ ಮನವಿ ಮಾಡಿಕೊಂಡಿದ್ದರು ಎನ್ನಲಾಗಿದೆ.

ಅಂಥ ನಾಯಕರನ್ನು ಹದ್ದುಬಸ್ತಿನಲ್ಲಿಡುವ ವಿಚಾರವನ್ನು ಪಕ್ಷ ನೋಡಿಕೊಳ್ಳುತ್ತದೆ ಎಂದು ಭರವಸೆ ನೀಡಿದ್ದ ಅಮಿತ್ ಶಾ, ಬಿಟ್ ಕಾಯಿನ್ ವಿಷಯವಾಗಿ ಕಾಂಗ್ರೆಸ್ ಪಕ್ಷದ ಆರೋಪಕ್ಕೆ ತಕ್ಕ ತಿರುಗೇಟು ನೀಡಬೇಕು ಎಂದು ಸೂಚಿಸಿದ್ದರು. ಬೊಮ್ಮಾಯಿ ಸಮಕ್ಷಮದಲ್ಲೇ ನಡ್ಡಾ ಅವರಿಗೆ ಕರೆ ಮಾಡಿ, ವದಂತಿ ಹಬ್ಬಿಸುತ್ತಿರುವ ನಾಯಕರಿಗೆ ಲಗಾಮು ಹಾಕುವಂತೆ ಸೂಚಿಸಿದ್ದರು ಎಂದು ತಿಳಿದುಬಂದಿದೆ.

ಆ ಬಳಿಕ ಬೊಮ್ಮಾಯಿ ಅವರು, ನಡ್ಡಾ ಅವರನ್ನೂ ಭೇಟಿ ಮಾಡಿದ್ದರು.

ಎನ್‌ಕೌಂಟರ್: ತೇಲ್ತುಂಬ್ಡೆ, ಸಹಚರರ ಗುರುತು ಪತ್ತೆ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ ಗಡ್‌ಚಿರೋಲಿ ಜಿಲ್ಲೆಯಲ್ಲಿ ಶನಿವಾರ ಹತ್ತು ತಾಸು ನಡೆದ ಎನ್‌ಕೌಂಟರ್‌ನಲ್ಲಿ ಮೃತಪಟ್ಟ 26 ಮಂದಿ ನಕ್ಸಲರಲ್ಲಿ ಮಾವೋವಾದಿ ನಾಯಕ ಮಿಲಿಂದ್ ತೇಲ್ತುಂಬ್ಡೆ ಸಹ ಸೇರಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

ಮಿಲಿಂದ್ ತೇಲ್ತುಂಬ್ಡೆ

ಮಾವೋವಾದಿಗಳ ವಿರುದ್ಧದ ಇತ್ತೀಚಿನ ಹೋರಾಟದಲ್ಲಿ ಮಹಾರಾಷ್ಟ್ರ ಪೊಲೀಸ್ ವಿಭಾಗದ ಬೇಹುಗಾರಿಕೆ ದಳ, ಪೊಲೀಸರು ಮತ್ತು ಭದ್ರತಾಪಡೆಗೆ ಅತಿ ದೊಡ್ಡ ಯಶಸ್ಸು ತಂದ ಕಾರ್ಯಾಚರಣೆ ಇದು ಎನ್ನಲಾಗಿದೆ.

ಇಲ್ಲಿಂದ 900 ಕಿ.ಮೀ.ದೂರದ ಮರ್ದಿಂತೋಲಾ ಅರಣ್ಯ ವ್ಯಾಪ್ತಿಯ ಕೊರ್ಚಿ ಎಂಬಲ್ಲಿ ಈ ಎನ್‌ಕೌಂಟರ್ ನಡೆದಿತ್ತು. ಮೃತ ನಕ್ಸಲರ ಗುರುತು ಪತ್ತೆ ಹಚ್ಚುವ ವೇಳೆ ಎಲ್ಗಾರ್ ಪರಿಷತ್ ಪ್ರಕರಣದಲ್ಲಿ ಆರೋಪಿಯಾಗಿರುವ ತೇಲ್ತುಂಬ್ಡೆ ಅವರ ಮೃತದೇಹ ಗುರುತಿಸಲಾಯಿತು ಎಂದು ಅಧಿಕಾರಿ ಹೇಳಿದ್ದಾರೆ.

ಮಿಲಿಂದ್ ತೇಲ್ತುಂಬ್ಡೆ ಅವರನ್ನು ಹುಡುಕಿಕೊಟ್ಟವರಿಗೆ ₹ 50 ಲಕ್ಷ ಬಹುಮಾನ ಘೋಷಿಸಲಾಗಿತ್ತು. ಇವರ ವಿರುದ್ಧ 63 ಪ್ರಕರಣಗಳಿದ್ದವು. ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ಛತ್ತೀಸಗಡದಲ್ಲಿ ಇವರ ಸಂಘಟನೆಯ ಪ್ರಭಾವ ಇತ್ತು.

ಮಿಲಿಂದ್ ತೇಲ್ತುಂಬ್ಡೆ ಅವರು ವಿದ್ವಾಂಸ ಆನಂದ್ ತೇಲ್ತುಂಬ್ಡೆ ಅವರ ಸೋದರ. ಆನಂದ್ ಅವರು ಗೋವಾ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಹಿರಿಯ ಪ್ರೊಫೆಸರ್ ಆಗಿದ್ದು ಎಲ್ಗಾರ್ ಪರಿಷತ್ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತರಾಗಿದ್ದಾರೆ.

ಮಿಲಿಂದ್ ಅವರು ಜೀವಾ, ದೀಪಕ್, ಪ್ರವೀಣ್, ಅರುಣ್, ಸಹ್ಯಾದ್ರಿ ಮತ್ತು ಸುಧೀರ್ ಎಂಬ ಹೆಸರುಗಳಿಂದಲೂ ಗುರುತಿಸಿಕೊಂಡಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎನ್‌ಕೌಂಟರ್ ಸ್ಥಳದಿಂದ ಐದು ಎಕೆ 47 ರೈಫಲ್‌ಗಳು, ಒಂಬತ್ತು ಎಸ್‌ಎಲ್‌ಆರ್ ರೈಫಲ್‌ಗಳು ಸಹಿತ 29 ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಮೃತರ ಪೈಕಿ 20 ಮಂದಿ ಪುರುಷರು ಮತ್ತು ಆರು ಮಂದಿ ಮಹಿಳೆಯರು. ಮೃತರಲ್ಲಿ ಮಿಲಿಂದ್ ತೇಲ್ತುಂಬ್ಡೆ ಅವರ ಇಬ್ಬರು ಅಂಗರಕ್ಷಕರೂ ಇದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತರಾದ ಲೋಕೇಶ್ ಅಲಿಯಾಸ್ ಮಂಗು ಪೊಡ್ಯಂ ಮತ್ತು ಮಹೇಶ್ ಅಲಿಯಾಸ್ ಶಿವಾಜಿ ರಾವ್‌ಜಿ ಗೋಟ ನಕ್ಸಲ್ ಸಂಘಟನೆಯ ವಿಭಾಗೀಯ ಸಮಿತಿ ಸದಸ್ಯರು. ಕಿಶನ್ ಅಲಿಯಾಸ್ ಜೈಮನ್ ಮತ್ತು ಸಣ್ಣು ಅಲಿಯಾಸ್ ಕೊವಚಿ ಅವರು ಕಮಾಂಡರ್‌ಗಳಾಗಿದ್ದರು. ಮೃತರಲ್ಲಿ ಹಲವರ ಬಗ್ಗೆ ಮಾಹಿತಿ ನೀಡಿದವರಿಗೆ ಬಹುಮಾನ ಘೋಷಿಸಲಾಗಿತ್ತು.

ಬೀದಿಯಲ್ಲಿ ರಾತ್ರಿ ಕಳೆದ ಗ್ರಾಮಸ್ಥರು • ಮನೆ ಒಳಗೆ ಹೋಗಲು ಭಯ

ಮಿಟ್ಟಹಳ್ಳಿ: ನಿಲ್ಲದ ನಿಗೂಢ ಸದ್ದು!

ಪ್ರಜಾವಾಣಿ ವಾರ್ತೆ

ಚಿಂತಾಮಣಿ: ತಾಲ್ಲೂಕಿನ ಮಿಟ್ಟಹಳ್ಳಿಯಲ್ಲಿ ಶನಿವಾರ ರಾತ್ರಿ ಮತ್ತೆ ಭಾರಿ ಶಬ್ದ ಕೇಳಿಬಂದಿದೆ. ಗ್ರಾಮಸ್ಥರು ಬೆಚ್ಚಿಬಿದ್ದು ಮನೆಗಳಿಂದ ಹೊರಬಂದು ರಸ್ತೆ, ದೇವಸ್ಥಾನದ ಮುಂಭಾಗ ಮತ್ತಿತರ ಕಡೆಗಳಲ್ಲಿ ರಾತ್ರಿ ಕಳೆದಿದ್ದಾರೆ.

ಮಂಗಳವಾರ ರಾತ್ರಿ ಹಾಗೂ ಬುಧವಾರ ಹಲವಾರು ಬಾರಿ ಶಬ್ದ ಉಂಟಾಗಿತ್ತು. ಗುರುವಾರ, ಶುಕ್ರವಾರ ಶಬ್ದವಿರಲಿಲ್ಲ. ಇನ್ನು ಶಬ್ದ ಬರುವುದಿಲ್ಲ ಎಂದು ನಿಟ್ಟುಸಿರು ಬಿಡುತ್ತಿದ್ದ ಗ್ರಾಮಸ್ಥರಿಗೆ ಶನಿವಾರ ರಾತ್ರಿ 9.50ಕ್ಕೆ ಮತ್ತೆ ಶಬ್ದ ಕೇಳಿ ಬಂದಿದ್ದು, ಮತ್ತೆ ಆತಂಕಕ್ಕೆ ಒಳಗಾಗಿದ್ದಾರೆ. ಭಾರಿ ಚಳಿ ಮತ್ತು ಜಡಿಮಳೆಯಲ್ಲಿಯೇ ಜನರು ಬೀದಿಗಳಲ್ಲಿ ರಾತ್ರಿ ಕಾಲ ದೂಡಿದ್ದಾರೆ.

ಅಪ್ಪಸಾನಹಳ್ಳಿ, ನಂದನವನ, ಗೋನೇಪಲ್ಲಿ, ಕೊಮ್ಮೇಪಲ್ಲಿ, ಗೌಡನಹಳ್ಳಿ, ರಾಸಪ್ಪಲ್ಲಿ, ಅನಪ್ಪಲ್ಲಿ, ವೆಂಕಟರೆಡ್ಡಿಪಾಳ್ಯ, ದೊಡ್ಡಿಹಳ್ಳಿ ಗ್ರಾಮಗಳಲ್ಲೂ ಶಬ್ದ ಕೇಳಿ ಬಂದಿದೆ. ಶನಿವಾರ ರಾತ್ರಿ 7 ಗಂಟೆ ಸಮಯದಲ್ಲಿ ಲಘು ಶಬ್ದ ಕೇಳಿ ಬಂದಿದೆ. ನಂತರ 9.50ರ ಸಮಯದಲ್ಲಿ ಭಯಾನಕ ಶಬ್ದ ಉಂಟಾಗಿದ್ದು ಜನರು ಮನೆಗಳಿಂದ ಹೊರಗೆ ಓಡಿಬಂದಿದ್ದಾರೆ.

ಮನೆಗಳಲ್ಲಿ ಇರಲಾಗುತ್ತಿಲ್ಲ, ಹೊರಗಡೆ ಜಡಿ ಮಳೆ. ಕಳೆದ 5 ದಿನಗಳಿಂದ ಇದೇ ಸ್ಥಿತಿಯನ್ನು ಎದುರಿಸುತ್ತಿದ್ದೇವೆ. ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ಬಂದು ಹೊರಟುಹೋದರು. ಸಮಸ್ಯೆ ಪರಿಹಾರಕ್ಕೆ ಕ್ರಮಕೈಗೊಳ್ಳಲಿಲ್ಲ. ರಾತ್ರಿ ಸಮಯದಲ್ಲಿ ಇಲ್ಲೇ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ಮೊಕ್ಕಾಂ ಮಾಡಿದರೆ ಅವರಿಗೆ ಸ್ಥಿತಿ ಅರ್ಥವಾಗುತ್ತದೆ ಎಂದು ಗ್ರಾಮಸ್ಥರು ಆಕ್ರೋಶ ಹೊರಹಾಕಿದ್ದಾರೆ.

‘ಅಧಿಕಾರಿಗಳು ಗ್ರಾಮದಲ್ಲೇ ಮೊಕ್ಕಾಂ ಹೂಡಲಿ’

ಪ್ರತಿನಿತ್ಯ ಆತಂಕದಲ್ಲಿ ಕಾಲ ಕಳೆಯುತ್ತಿದ್ದೇವೆ. ಮಕ್ಕಳಿಗೆ ಶಾಲೆ ಇಲ್ಲ. ಅನೇಕರು ಸಂಬಂಧಿಕರ ಮನೆಗಳಿಗೆ ಗುಳೇ ಹೋಗುತ್ತಿದ್ದಾರೆ. ಮನೆಯಲ್ಲಿ ಅಡುಗೆ ಮಾಡಲು ಹೆದರುವಂತಾಗಿದೆ. ತಾತ್ಕಾಲಿಕವಾಗಿ ಬೇರೆ ಕಡೆ ವ್ಯವಸ್ಥೆಯನ್ನಾದರೂ ಮಾಡಲಿ ಅಥವಾ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು ಗ್ರಾಮದಲ್ಲಿ ನಮ್ಮೊಡನೆ ಇರಲಿ ಎಂದು ಗ್ರಾಮದ ನಿವಾಸಿಗಳು ಒತ್ತಾಯಿಸಿದ್ದಾರೆ.

ದತ್ತ ಮಾಲಾಧಾರಿಗಳ ಬಸ್ ಮೇಲೆ ಕಲ್ಲು ತೂರಾಟ

ಕೋಲಾರ: ಚಿಕ್ಕಮಗಳೂರು ಜಿಲ್ಲೆಯ ದತ್ತ ಪೀಠಕ್ಕೆ ಹೊರಟಿದ್ದ ದತ್ತ ಮಾಲಾಧಾರಿಗಳ ಬಸ್ ಮೇಲೆ ಅನ್ಯ ಕೋಮಿನ ಯುವಕರ ಗುಂಪು ನಗರದ ಕ್ಲಾಕ್‌ಟವರ್ ಬಳಿ ಭಾನುವಾರ ಬೆಳಗಿನ ಜಾವ ಕಲ್ಲು ತೂರಾಟ ನಡೆಸಿದ್ದಾರೆ. ಘಟನೆಯ ನಂತರ ಸ್ಥಳದಲ್ಲಿ ಕೆಲಹೊತ್ತು ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು.

ಘಟನೆಯಲ್ಲಿ ಮೂವರು ದತ್ತ ಮಾಲಾಧಾರಿಗಳಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಪೊಲೀಸರು ಐವರನ್ನು ವಶಕ್ಕೆ ಪಡೆದಿದ್ದಾರೆ. ಸುಮಾರು ನೂರು ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ.

ಎಂ.ಬಿ ರಸ್ತೆಯ ಕ್ಲಾಕ್‌ಟವರ್ ಬಳಿ ಅನ್ಯ ಕೋಮಿನ ಯುವಕರ ಎರಡು ಗುಂಪುಗಳ ನಡುವೆ ಜಗಳವಾಗಿ ವಸೀಂ ಬೇಗ್ ಎಂಬಾತನಿಗೆ ಚಾಕುವಿನಿಂದ ಇರಿಯಲಾಗಿತ್ತು. ಹೀಗಾಗಿ ಸ್ಥಳದಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಗುಂಪು ಗೂಡಿದ್ದರು. ಇದೇ ವೇಳೆಗೆ ಕ್ಲಾಕ್‌ಟವರ್ ಮಾರ್ಗವಾಗಿ ಬಸ್‌ನಲ್ಲಿ ಬಂದ ದತ್ತ ಮಾಲಾಧಾರಿಗಳು ‘ಜೈ ಶ್ರೀರಾಮ್’ ಎಂದು ಘೋಷಣೆ ಕೂಗಿದ್ದಾರೆ.

ಆಗ ಜನರ ಗುಂಪಿನಲ್ಲಿದ್ದ ಕೆಲವರು ಘೋಷಣೆ ಕೇಳಿ ಬಸ್ ಅಡ್ಡಗಟ್ಟಿ ಕಲ್ಲು ತೂರಿದ್ದಾರೆ. ಬಳಿಕ ದತ್ತ ಮಾಲಾಧಾರಿಗಳು ಮತ್ತು ಅನ್ಯ ಕೋಮಿನ ಯುವಕರ ಗುಂಪಿನ ನಡುವೆ ವಾಗ್ವಾದ ನಡೆದು ಬಿಗುವಿನ ವಾತಾವರಣ ಸೃಷ್ಟಿಯಾಯಿತು.

ಜಿಲ್ಲಾಧಿಕಾರಿ ಆರ್.ಸೆಲ್ವಮಣಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡೆಕ್ಕಾ ಕಿಶೋರ್‌ಬಾಬು ಘಟನಾ ಸ್ಥಳಕ್ಕೆ ಬಂದು ದತ್ತ ಮಾಲಾಧಾರಿಗಳೊಂದಿಗೆ ಮಾತುಕತೆ ನಡೆಸಿ ಪರಿಸ್ಥಿತಿ ತಿಳಿಗೊಳಿಸಿದರು.

ಘಟನೆಯಿಂದ ಆಕ್ರೋಶಗೊಂಡ ದತ್ತ ಮಾಲಾಧಾರಿಗಳು ಕಲ್ಲು ತೂರಾಟ ನಡೆಸಿದ ಕಿಡಿಗೇಡಿಗಳನ್ನು ಬಂಧಿಸುವಂತೆ ಆಗ್ರಹಿಸಿ ನಗರ ಪೊಲೀಸ್ ಠಾಣೆ ಎದುರು ಪ್ರತಿಭಟನೆ ಮಾಡಿದರು. ಪೊಲೀಸರು ಘಟನೆ ಸಂಬಂಧ ಸುಮಾರು 100 ಮಂದಿ ವಿರುದ್ಧ ಪ್ರಕರಣ ದಾಖಲಿಸಿ ಐವರನ್ನು ವಶಕ್ಕೆ ತೆಗೆದುಕೊಂಡ ನಂತರ ದತ್ತ ಮಾಲಾಧಾರಿಗಳು ಪ್ರತಿಭಟನೆ ಕೈಬಿಟ್ಟು ಮತ್ತೊಂದು ಬಸ್‌ನಲ್ಲಿ ದತ್ತ ಪೀಠಕ್ಕೆ ತೆರಳಿದರು.

8 ಸಾವಿರದ ಗಡಿಯೊಳಗೆ ಕೋವಿಡ್

ಬೆಂಗಳೂರು: ರಾಜ್ಯದಲ್ಲಿ 236 ಕೋವಿಡ್ ಪ್ರಕರಣಗಳು ಭಾನುವಾರ ದೃಢಪಟ್ಟಿದ್ದು, ಸಕ್ರಿಯ ಪ್ರಕರಣಗಳು 7,997ಕ್ಕೆ ಇಳಿಕೆ ಕಂಡಿದೆ.

ರಾಜ್ಯದ 24 ಜಿಲ್ಲೆಗಳಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳು 100ರ ಗಡಿಯೊಳಗೆ ಇವೆ. ಬೀದರ್, ಗದಗ ಹಾಗೂ ಹಾವೇರಿಯಲ್ಲಿ ಕೋವಿಡ್ ಪ್ರಕರಣ ಇಲ್ಲ. ಬೆಂಗಳೂರಿನಲ್ಲಿ ಗರಿಷ್ಠ (6,600) ಸಕ್ರಿಯ ಪ್ರಕರಣಗಳಿವೆ.

ಬೆಂಗಳೂರಿನಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ0.84 ರಷ್ಟು ದೃಢಪಟ್ಟಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,145ಕ್ಕೆ ಏರಿಕೆಯಾಗಿದೆ.

ರಾಜ್ಯದಲ್ಲಿ ಒಂದು ದಿನದಲ್ಲಿ 96 ಸಾವಿರ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.24 ರಷ್ಟು ವರದಿಯಾಗಿದೆ.

ಮೂರು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 13 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್ ಸೇರಿದಂತೆ 13 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ. ಬೆಂಗಳೂರಿನಲ್ಲಿ 152 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.91 ಲಕ್ಷ ದಾಟಿದೆ.

ಸೋಂಕಿತರಲ್ಲಿ 264 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.45 ಲಕ್ಷ ದಾಟಿದೆ.

ರಾಜ್ಯದ ಕೋವಿಡ್ ಅಂಕಿ–ಅಂಶ

29,91,850	ಒಟ್ಟು ಪ್ರಕರಣಗಳು (29,91,614 ನಿನ್ನೆಯ ವಿವರ) ▲
7,997	ಸಕ್ರಿಯ ಪ್ರಕರಣಗಳು ▼
29,45,679	ಗುಣಮುಖರಾದವರು ▲
38,145	ಒಟ್ಟು ಸಾವು ▲

ದಿನದ ಏರಿಕೆ

ಹೊಸ ಪ್ರಕರಣ	236	▼
ಗುಣಮುಖ	264	▲
ಸಾವು	02	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

‘ಸಿ.ಎಂ ಬದಲಾಗಲ್ಲ’

ಬಾಗೇಪಲ್ಲಿ: ‘ಮುಂದಿನ ವಿಧಾನಸಭಾ ಚುನಾವಣೆ ತನಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬದಲಾಗುವುದಿಲ್ಲ. ಸಿ.ಎಂ ಬದಲಾವಣೆ ಎನ್ನುವುದು ಕಾಂಗ್ರೆಸ್ ಹುಟ್ಟುಹಾಕಿದ ರಾಜಕೀಯ ಕುತಂತ್ರ’ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಬಿಟ್ ಕಾಯಿನ್ ಪ್ರಕರಣದಲ್ಲಿ ಕಾಂಗ್ರೆಸ್ ಅನಗತ್ಯವಾಗಿ ಬೊಮ್ಮಾಯಿ ಹೆಸರು ಎಳೆಯುತ್ತಿದೆ. ಈ ಮೂಲಕ ಜನರಲ್ಲಿ ಗೊಂದಲ ಸೃಷ್ಟಿಸುತ್ತಿದೆ ಎಂದು ಟೀಕಿಸಿದರು.

ಭಾನುವಾರ ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜಕೀಯ ಲಾಭಕ್ಕಾಗಿ ಕಾಂಗ್ರೆಸ್ ಬಿಟ್ ಕಾಯಿನ್ ಪ್ರಕರಣದ ಬಗ್ಗೆ ಮಾತನಾಡುತ್ತಿದ್ದಾರೆ. ಇದರಿಂದ ರಾಜಕೀಯ ಲಾಭ ಆಗುವುದಿಲ್ಲ ಎಂದರು.

ಸೋಂಪುರದ ರೈತರೊಬ್ಬರ ಹೊಲದಲ್ಲಿ ನೆಲಕ್ಕುರುಳಿರುವ ರಾಗಿ ಬೆಳೆ

ಸತತ ಮಳೆಗೆ ನೆಲಕಚ್ಚಿದ ರಾಗಿ ಬೆಳೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಕೆಲವು ದಿನಗಳಿಂದ ಎಡೆಬಿಡದೆ ಸುರಿದ ಮಳೆಯಿಂದಾಗಿ ಸೋಂಪುರ ಹೋಬಳಿಯಲ್ಲಿ ರಾಗಿ ತೆನೆಗಳು ನೆಲಕಚ್ಚಿವೆ. ಇನ್ನೇನು ಬೆಳೆ ಕಟಾವಾಗಲಿದೆ ಎಂಬಷ್ಟರಲ್ಲಿ ಸುರಿದ ಮಳೆಯಿಂದಾಗಿ ರೈತನ ವರ್ಷದ ಪರಿಶ್ರಮ ಮಣ್ಣುಪಾಲಾಗಿದೆ.

ನೆಲಮಂಗಲ ತಾಲ್ಲೂಕಿನಲ್ಲಿ ಈ ಬಾರಿ 1,608, ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಬಿತ್ತನೆಯಾಗಿದೆ. ಈ ಬಾರಿ ಮಳೆಗಾಲ ರಾಗಿ ಬೆಳೆಗೆ ಪೂರಕವಾಗಿತ್ತು. ಕಾಲಕಾಲಕ್ಕೆ ಉತ್ತಮ ಮಳೆ ಬಂದಿದ್ದರಿಂದ ರಾಗಿಯೂ ಹುಲುಸಾಗಿ ಬೆಳೆದಿತ್ತು. ತೆನೆ ಬಲಿತು ಒಣಗಿ ಕೊಯಿಲಿನ ಹಂತದಲ್ಲಿ ಮಳೆ ಎಲ್ಲವನ್ನೂ ಕಸಿದುಕೊಂಡಿದೆ. ಎಡೆಬಿಡದೆ ಸುರಿದ ಮಳೆ ಹಾಗೂ ಗಾಳಿಯಿಂದ ಸಾವಿರಾರು ಹೆಕ್ಟೇರ್‌ಗಳಷ್ಟು ರಾಗಿ ಬೆಳೆ ಹಾನಿಗೊಳಗಾಗಿದೆ. ರಾಗಿ ಇಳುವರಿ ಕುಸಿಯುವ ಹಾಗೂ ಹುಲ್ಲು ಕೊಳೆಯುವ ಆತಂಕ ರೈತರಲ್ಲಿ ಮನೆ ಮಾಡಿದೆ.

‘ಕೃಷಿ ಕಾರ್ಮಿಕರ ಕೊರತೆಯಿಂದಾಗಿ ರೈತರು ಇತ್ತೀಚಿನ ದಿನಗಳಲ್ಲಿ ರಾಗಿ ಪೈರು ಕೊಯ್ಲಿಗೆ ಯಂತ್ರ ಬಳಕೆ ಮಾಡುವ ಪರಿಪಾಠ ಹೆಚ್ಚುತ್ತಿದೆ. ಈಗ ಏಕ ಬೆಳೆ ಪದ್ಧತಿ ಹಾಗೂ ಹೆಚ್ಚಾಗಿ ರಸಗೊಬ್ಬರ ಬಳಸುವುದರಿಂದ ಅಲ್ಪಸ್ವಲ್ಪ ಮಳೆ ಬಂದು ಗಾಳಿ ಬೀಸಿದರೂ, ರಾಗಿ ತೆನೆಗಳಲ್ಲಿ ಕಾಳು ಬಲಿಯುತ್ತಿದೆ. ತೆನೆಯ ತೂಕ ಹೆಚ್ಚಾಗಿಯೂ ರಾಗಿ ಪೈರು ನೆಲಕ್ಕೆ ಬಾಗುತ್ತಿದೆ. ಈ ರೀತಿ ಪೈರುಗಳು ಬಾಗಿದ ಹೊಲಗಳನ್ನು ಯಂತ್ರಗಳಲ್ಲೂ ಕೂಯ್ಲು ಮಾಡಲು ಸಾಧ್ಯವಾಗುವುದಿಲ್ಲ. ಇದಕ್ಕೂ ಕೃಷಿ ಕಾರ್ಮಿಕರನ್ನೇ ಆಶ್ರಯಿಸಬೇಕು. ಬಿದ್ದ ರಾಗಿ ಬೆಳೆ ಕೊಯ್ಯಲು ಕಾರ್ಮಿಕರು ಹೆಚ್ಚು ಕೂಲಿ ಕೇಳುತ್ತಾರೆ’ ಎಂದು ಕರಿಮಣ್ಣ ಗ್ರಾಮದ ಸತೀಶ್ ಸಮಸ್ಯೆ ಹೇಳಿಕೊಂಡರು.

‘ಕಳೆದ ವರ್ಷವೂ ಕೊಯಿಲಿನ ಹಂತದಲ್ಲಿ ಮಳೆ ಬಂದು ರಾಗಿ ಪೈರುಗಳು ನೆಲಕಚ್ಚಿದ್ದವು. ರಾಗಿ ಬೆಳೆ ವಿಫಲವಾಗಿ ರಾಸುಗಳ ಮೇವಿಗೂ ಪರದಾಡುವ ಸ್ಥಿತಿ ಉಂಟಾಗಿತ್ತು. ಈ ವರ್ಷ ಮತ್ತೆ ಅಂತಹದ್ದೇ ಪರಿಸ್ಥಿತಿ ಉಂಟಾಗುವ ಭೀತಿ ಎದುರಾಗಿದೆ ’ ಎಂದು ರೈತ ವಿಶ್ವನಾಥ್ ಅಳಲು ತೋಡಿಕೊಂಡರು.

ರಾಗಿಯ ಜೊತೆಗೆ ತೊಗರಿ, ಅವರೇ ಹೂ ಮತ್ತು ಕಾಯಿಗಲೂ ನೆಲಕಚ್ಚಿವೆ. ಇವುಗಳನ್ನು ಬೆಳೆದ ರೈತರೂ ನಷ್ಟ ಅನುಭವಿಸಿದ್ದಾರೆ.

ಮಳೆಯಿಂದಾಗಿ ಜನಜೀವನವೂ ಅಸ್ತವ್ಯಸ್ತಗೊಂಡಿದೆ. ಶೀತ ಗಾಳಿಯ ಜೊತೆಗೆ ಥಂಡಿ ವಾತಾವರಣ ಇದ್ದು, ಜನ ಮನೆಯಿಂದ ಹೊರಬರಲು ಹೆದರುತ್ತಿದ್ದಾರೆ. ಗ್ರಾಮೀಣ ಭಾಗದಲ್ಲಿ ಜಾನುವಾರುಗಳು, ಮೇಕೆ,ಕುರಿ ಮೇಯಿಸಲು ಹಾಗೂ ಮೇವು ಒದಗಿಸಲು ರೈತರು ಪಡಿಪಾಟಲು ಎದುರಿಸುತ್ತಿದ್ದಾರೆ.

ಪರಿಷತ್ ಚುನಾವಣೆ: ‘ಕೈ’ ನಾಯಕರ ಸಭೆ

ಬೆಂಗಳೂರು: ಮುಂಬರುವ ವಿಧಾನಸಭೆ ಚುನಾವಣೆಯ ಜೊತೆಗೆ ಪಕ್ಷ ಸಂಘಟನೆಯ ಕುರಿತಂತೆ ಕಲಬುರಗಿ ವಿಭಾಗೀಯ ಮಟ್ಟದ ಕಾಂಗ್ರೆಸ್ ಮುಖಂಡರ ಸಭೆ ಕೆಪಿಸಿಸಿ ಕಚೇರಿಯಲ್ಲಿ ಭಾನುವಾರ ರಾತ್ರಿ ನಡೆಯಿತು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಎಐಸಿಸಿ ಕಾರ್ಯದರ್ಶಿ ರಮೀಂದರ್ ಸಿಂಗ್ ಔಲಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ ಇದ್ದರು.

ಮುಖಂಡರಾದ ಅಲ್ಲಂ ವೀರಭದ್ರಪ್ಪ, ಈಶ್ವರ ಖಂಡ್ರೆ, ಸಲೀಂ ಅಹ್ಮದ್, ಪ್ರಿಯಾಂಕ್ ಖರ್ಗೆ, ಅಜಯ್ ಸಿಂಗ್ ಇತರರು ಭಾಗವಹಿಸಿದ್ದರು.

ಹೇಮಾ ಹಟ್ಟಂಗಡಿ ಯಶೋಗಾಥೆ ಆಧರಿತ ಪುಸ್ತಕ ಬಿಡುಗಡೆ

‘ಮಹಿಳಾ ಉದ್ಯಮಿಯ ಹೋರಾಟ ಪುರುಷರಿಗಿಂತ ಹೆಚ್ಚು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉದ್ಯಮ ಕಟ್ಟಿ ಬೆಳೆಸುವುದು ಸುಲಭವಲ್ಲ. ಈ ಕ್ಷೇತ್ರವು ಈಗಲೂ ಪುರುಷ ಪ್ರಧಾನವಾದುದು. ಈ ಕ್ಷೇತ್ರದಲ್ಲಿ ಮಹಿಳೆಯು ಸೆಣಸಿ ಗೆಲ್ಲುವುದಕ್ಕೆ ಪುರುಷರಿಗಿಂತ ಮೂರು ಪಟ್ಟು ಹೆಚ್ಚು ಹೋರಾಟ ನಡೆಸಬೇಕಾಗುತ್ತದೆ’ ಎಂದು ಲೇಖಕಿ ಹೇಮಲತಾ ಮಹಿಷಿ ಅಭಿಪ್ರಾಯಪಟ್ಟರು.

‘ಕನ್ಸರ್ವ್’ ವಿದ್ಯುತ್ ಉದ್ಯಮವನ್ನು ಕಟ್ಟಿ ಬೆಳೆಸಿದ ಹೇಮಾ ಹಟ್ಟಂಗಡಿ ಯಶೋಗಾಥೆ ಆಧರಿಸಿದ ‘ಗೂಡಿನಿಂದ ಬಾನಿಗೆ’ ಕೃತಿ ಬಿಡುಗಡೆ ಸಲುವಾಗಿ ಮೈಲ್ಯಾಂಗ್ ಪ್ರಕಾಶನ ಏರ್ಪಡಿಸಿದ್ದ ಆನ್‌ಲೈನ್ ಕಾರ್ಯಕ್ರಮದಲ್ಲಿ ಅವರು ಭಾನುವಾರ ಮಾತನಾಡಿದರು. ಹೇಮಾ ಹಟ್ಟಂಗಡಿಯವರು ಆಶಿಸ್ ಸೇನ್ ಅವರೊಂದಿಗೆ ಸೇರಿ ರಚಿಸಿರುವ ‘ಲಿಫ್ಟ್ ಆಫ್’ ಕೃತಿಯನ್ನು ಸಂಯುಕ್ತಾ ಪುಲಿಗಲ್ ಕನ್ನಡಕ್ಕೆ ಭಾಷಾಂತರಿಸಿದ್ದಾರೆ.

‘ಉತ್ಪನ್ನದಲ್ಲಿ ಗುಣಮಟ್ಟ, ವ್ಯವಹಾರದಲ್ಲಿ ನೈತಿಕತೆ ಹಾಗೂ ಗ್ರಾಹಕರ ಹಿತ ಕಾಪಾಡಿಕೊಂಡು ಹೇಮಾ ಅವರು ವಿದ್ಯುತ್ ಉದ್ಯಮ ಕಟ್ಟಿದರು. ಲಂಚ ಕೊಟ್ಟು ಕೆಲಸ ಮಾಡಿಸುವುದಿಲ್ಲ ಎಂಬ ದೃಢ ನಿರ್ಧಾರದಿಂದಾಗಿ ಅನೇಕ ಗುತ್ತಿಗೆಗಳನ್ನು ಕಳೆದುಕೊಂಡರೂ ರಾಜಿಯಾಗದೆ ಮೇಲ್ಪಂಕ್ತಿ ಹಾಕಿಕೊಟ್ಟರು’ ಎಂದು ಹೇಮಲತಾ ತಿಳಿಸಿದರು.

‘ಮಹಿಳೆಯು ವೃತ್ತಿ ಬದುಕಿನ ಜೊತೆ ಅಡುಗೆ ಮನೆ, ಮಕ್ಕಳ ಲಾಲನೆ ಪಾಲನೆಯ ಹೊಣೆಗಳನ್ನೂ ನಿಭಾಯಿಸಬೇಕಾಗುತ್ತದೆ. ಬೆಳೆಯುವ ಮಕ್ಕಳ ಆರೈಕೆಗೆ ಸಮಯ ನೀಡದಿದ್ದರೆ, ಭವಿಷ್ಯದಲ್ಲಿ ಅದೇ ಪಾಪ ಪ್ರಜ್ಞೆಯಾಗಿ ಕಾಡಬಹುದು. ಈ ಎಲ್ಲ ಕಷ್ಟಗಳನ್ನು ಮೆಟ್ಟಿನಿಂತು ಯಶಸ್ವಿಯಾಗುವ ಮಹಿಳೆಯರು ಪುರುಷರಿಗೂ ಪ್ರೇರಣೆಯಾಗಬೇಕು’ ಎಂದು ಆಶಿಸಿದರು.

ಮಹಿಳೆಯೊಬ್ಬಳು ಬೆಚ್ಚಗಿನ ಗೂಡಿನಿಂದ ಹೊರಬಂದು ಸ್ವಾತಂತ್ರ್ಯದ ಅನುಭವ ಪಡೆದು ಏನೆಲ್ಲಾ ಸಾಧನೆ ಮಾಡಬಹುದು ಎಂಬುದನ್ನು ಈ ಕೃತಿ ತಿಳಿಸುತ್ತದೆ.
ಹೇಮಲತಾ ಮಹಿಷಿ, ಲೇಖಕಿ

ಗೂಡಿನಿಂದ ಬಾನಿಗೆ ಪುಸ್ತಕದ ದರ	₹350
ಇ–ಬುಕ್ ಆವೃತ್ತಿಯ ದರ	₹149
ಧ್ವನಿಮುದ್ರಿತ ಆವೃತ್ತಿಯ ದರ	₹249
ಸಂಪರ್ಕ: www.mylang.in	

ಈ ಕೃತಿ ಕನ್ನಡದಲ್ಲಿ ಪ್ರಕಟವಾಗಿ ನನ್ನಂತಹ ಇತರ ಮಹಿಳೆಯರಿಗೂ ಪ್ರೇರಣೆ ಆಗಬೇಕು ಎಂಬ ಆಸೆ ಇತ್ತು. ಅದನ್ನು ಮೈಲ್ಯಾಂಗ್ ಪ್ರಕಾಶನವು ಸಾಕಾರಗೊಳಿಸಿದೆ
ಹೇಮಾ ಹಟ್ಟಂಗಡಿ
ಮೂಲ ಕೃತಿಯ ಲೇಖಕಿ

ಸಂಯುಕ್ತಾ ಪುಲಿಗಲ್, ‘ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಗೆ ಹೆಜ್ಜೆಹೆಜ್ಜೆಗೂ ಸವಾಲುಗಳೇ. ಹೇಮಾ ಅವರು ಬೆಂಗಳೂರಿನ ಎಸ್.ಪಿ.ರಸ್ತೆಯ ಮಳಿಗೆಗೆ ಹೋದಾಗ ‘ನಿಮ್ಮೊಂದಿಗೆ ಗಂಡಸರು ಯಾರೂ ಬಂದಿಲ್ಲವೇ’ ಎಂಬ ಪ್ರಶ್ನೆಯನ್ನು ಎದುರಿಸಬೇಕಾಯಿತು. ಶಾಲೆಯಿಂದ ಮನೆಗೆ ಮರಳಿದ ಮಗುವು ತಲೆಯಲ್ಲಿರುವ ನೂರೆಂಟು ಯೋಚನೆಗಳನ್ನೆಲ್ಲ ಹಂಚಿಕೊಳ್ಳುವುದನ್ನು ಕೇಳುವ ತುಡಿತ ಪ್ರತಿ ತಾಯಿಗೂ ಇರುತ್ತದೆ. ಉದ್ಯಮದ ಸಲುವಾಗಿ ವಿದೇಶಿ ಪ್ರವಾಸದಲ್ಲಿದ್ದಾಗ ಹೇಮಾ, ಶಾಲೆಯಿಂದ ಮರಳಿದ ಮಗನೊಂದಿಗೆ ಮಾತನಾಡಲು ರಾತ್ರಿ 3 ಗಂಟೆಗೆ ಎಚ್ಚರಗೊಂಡು ಕರೆ ಮಾಡಿದ್ದರು. ಮುಳುಗುತ್ತಿದ್ದ ಕಂಪನಿಯನ್ನು ಮೇಲಕ್ಕೆತ್ತುವಲ್ಲಿ ಹಸುಗೂಸಿನ ತಾಯಿಯೊಬ್ಬರು ತೋರಿದ ಕೆಚ್ಚೆದೆ ಪ್ರತಿ ಮಹಿಳೆಗೂ ದಾರಿದೀಪ’ ಎಂದು ಹೇಳಿದರು.

ಹೇಮಾ ಹಟ್ಟಂಗಡಿ, ‘ಪತಿ ಅಶೋಕ್ ಬೆಂಬಲವಿಲ್ಲದಿದ್ದರೆ ನನ್ನ ಕತೆ ಹೇಳಿಕೊಳ್ಳುವ ಸಂದರ್ಭವೇ ಬರುತ್ತಿರಲಿಲ್ಲ. ಈ ಕೃತಿಯ ನಿಜವಾದ ನಾಯಕ ಅವರೇ. ಈ ರೀತಿ ಮಾರ್ಗದರ್ಶನ ಮಾಡುವ ಆದರ್ಶ ಪುರುಷರ ಅಗತ್ಯವಿದೆ’ ಎಂದರು.

ತಕ್ಷಶಿಲಾ ಸಂಸ್ಥೆಯ ಸ್ಥಾಪಕ ನಿತಿನ್ ಪೈ, ‘ನೈತಿಕತೆ ಹಾಗೂ ಮೌಲ್ಯಗಳನ್ನು ಅಳವಡಿಸಿಕೊಂಡು ಉದ್ಯಮ ಕ್ಷೇತ್ರದಲ್ಲಿ ಬೆಳೆಯುವ ಮಾದರಿಯನ್ನು ಈ ಕೃತಿ ತೋರಿಸುತ್ತದೆ. ಉದ್ಯೋಗಿಗಳಿಗೆ ನೈತಿಕ ಸ್ಥೈರ್ಯ ತುಂಬುವಲ್ಲಿ, ಬಿಕ್ಕಟ್ಟುಗಳನ್ನು ಬಗೆಹರಿಸುವಲ್ಲಿಯೂ ಇದು ನೆರವಾಗುತ್ತದೆ’ ಎಂದರು.

ಪವಮಾನ್ ಅಥಣಿ ಹಾಗೂ ವಸಂತ ಶೆಟ್ಟಿ ಭಾಗವಹಿಸಿದರು. ಮೈಲ್ಯಾಂಗ್ ಪ್ರಕಾಶನವು ಈ ಕೃತಿಯನ್ನು ಪುಸ್ತಕ, ಆಡಿಯೊ ಬುಕ್ ಹಾಗೂ ಇ–ಬುಕ್ ರೂಪದಲ್ಲಿ ಪ್ರಕಟಿಸಿದೆ.

ಸೋಮವಾರ, ನವೆಂಬರ್ 15, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 316 | ಪುಟ 16

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ತರಗತಿ ಕಲಿಕೆಗಿಂತ ಚೂರು ಭಿನ್ನವಾಗಿರುವ ಪ್ರಾಜೆಕ್ಟ್ ಆಧಾರಿತ ಕಲಿಕೆಯು ವಿದ್ಯಾರ್ಥಿಗಳಿಗೆ ವಿಮರ್ಶಾತ್ಮಕ ಚಿಂತನೆ, ಯೋಜನಾ ನಿರ್ವಹಣೆಯಲ್ಲಿ ಸಹಾಯಕವಾಗಿದೆ.

ಸುಚಿತ್ರಾ ಫಿಲ್ಮ್ 'ಸೊಸೈಟಿ' ಹಕ್ಕು ಕಸಿದ 'ಅಕಾಡೆಮಿ' 3A

ಪರಿಷತ್ ಚುನಾವಣೆ: ಮೂರೂ ಪಕ್ಷಗಳಲ್ಲಿ ಆಕಾಂಕ್ಷಿಗಳ ದೊಡ್ಡ ದಂಡು

ಆಳ-ಅಗಲ
ನಕ್ಸಲರ ಮೇಲೆ ಪ್ರಹಾರ

ಸಿಬಿಐ, ಇ.ಡಿ. ನಿರ್ದೇಶಕರ ಅವಧಿ ವಿಸ್ತರಣೆ 6

ಟಿಕೆಟ್‌ಗೆ ತೀವ್ರ ಲಾಬಿ: ಆಯ್ಕೆ ಕಗ್ಗಂಟು 5

ಒಳ ಪುಟಗಳು

ಕಲ್ಲಿದ್ದಲು ಬಳಕೆ ನಿಗ್ರಹ ಪ್ರಸ್ತಾವ ಕೈಬಿಟ್ಟ ಸಭೆ 6

20 ಪಂಟರ್ 'ಚಾಟಿಂಗ್': ವಿಶ್ವವ್ಯಾಪಿ 'ಹ್ಯಾಕಿಂಗ್' 5

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬೆಲೆ ಏರಿಕೆ ಬಿಸಿ: ನಿರ್ಮಾಣ ವಲಯ ತತ್ತರ

ಕಾದ ಕಬ್ಬಿಣ; ಸುಡುವ ಸಿಮೆಂಟ್

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಸ್ವಂತಕ್ಕೊಂದು ಬೆಚ್ಚನೆಯ ಗೂಡಿರಬೇಕು ಎಂಬುದು ಎಲ್ಲರ ಕನಸು. ಸ್ವಂತ ಸೂರಿನ ಕನಸು ನನಸಾಗಿಸಲು ಹೊರಟವರ ಕೈಗಳಿಗೆ ಬೆಲೆ ಏರಿಕೆಯ ಬಿಸಿಯಲ್ಲಿ ಕಾದಿರುವ ಕಬ್ಬಿಣ ಬರೆ ಹಾಕುತ್ತಿದ್ದರೆ, ಸುಡುತ್ತಿರುವ ಸಿಮೆಂಟ್ ಅವರ ಕನಸಿಗೇ ಕೊಳ್ಳಿ ಇಟ್ಟಿದೆ.

'ಸಾಲ ಮಾಡಿ ಮನೆ ಕಟ್ಟು, ಮನೆ ಮಾರಿ ಸಾಲ ತೀರಿಸು' ಎಂಬ ಮಾತೊಂದು ಚಾಲ್ತಿಯಲ್ಲಿದೆ. ಮನೆ ನಿರ್ಮಾಣಕ್ಕೆ ಮುಂದಾದವರು ಏಕಾಏಕಿ ಕಟ್ಟಡ ಸಾಮಗ್ರಿಗಳ ಬೆಲೆ ಏರಿದ್ದರಿಂದಾಗಿ ಸಾಲ ಮಾಡಿಯೂ ಮನೆ ಕಾಮಗಾರಿ ಪೂರ್ಣಗೊಳಿಸಲು ಸಾಧ್ಯವಾಗದೆ ಪರಿತಪಿಸುತ್ತಿದ್ದಾರೆ.

ಜಿಎಸ್‌ಟಿ ಮತ್ತು ಇಂಧನ ದರ ಏರಿಕೆಯಿಂದ ನಿರ್ಮಾಣ ವಲಯಕ್ಕೆ ಬೇಕಿರುವ ಕಚ್ಚಾ ವಸ್ತುಗಳ ಬೆಲೆಯೂ ಗಗನ ಮುಟ್ಟಿದೆ. ಕಳೆದ ಐದು ವರ್ಷಕ್ಕೆ ಹೋಲಿಸಿದರೆ ಕಬ್ಬಿಣ, ಸಿಮೆಂಟ್, ಮರಳು, ಇಟ್ಟಿಗೆ ಸೇರಿ ಎಲ್ಲಾ ವಸ್ತುಗಳ ಬೆಲೆಯೂ ಬಹುತೇಕ ದುಪ್ಪಟ್ಟಾಗಿದೆ. ಅದರಲ್ಲೂ ಕಳೆದ ಒಂದು ವರ್ಷದ ಅವಧಿಯಲ್ಲೇ ಶೇ 40ರಿಂದ ಶೇ 50ರಷ್ಟು ದರ ಹೆಚ್ಚಳವಾಗಿದೆ. ಸಾಧಾರಣ ದರ್ಜೆಯ 10 ಚದರ (ಒಂದು ಸಾವಿರ ಚದರ ಅಡಿ) ಮನೆ ನಿರ್ಮಾಣಕ್ಕೆ ₹10 ಲಕ್ಷ ಇದ್ದ ನಿರ್ಮಾಣ ವೆಚ್ಚ ಈಗ ₹20 ಲಕ್ಷ ದಾಟಿದೆ. ಒಳಾಂಗಣಕ್ಕೆ ಬಳಸುವ ವಸ್ತುಗಳ (ಮರ, ಟೈಲ್ಸ್, ಸ್ಯಾನಿಟರಿ ಸಲಕರಣೆ ಇತ್ಯಾದಿ) ಗುಣಮಟ್ಟಕ್ಕೆ ತಕ್ಕಂತೆ ನಿರ್ಮಾಣ ವೆಚ್ಚ ಇನ್ನಷ್ಟು ಹೆಚ್ಚಾಗಲಿದೆ.

ಕೂಡಿಟ್ಟಿರುವ ಹಣ, ಬ್ಯಾಂಕ್ ಸಾಲ ಎಲ್ಲವನ್ನೂ ಲೆಕ್ಕಾಚಾರ ಮಾಡಿಕೊಂಡು ಮನೆ ನಿರ್ಮಾಣಕ್ಕೆ ಒಂದು ವರ್ಷಗಳ ಹಿಂದೆ ಯೋಜನೆ ಸಿದ್ಧಪಡಿಸಿ ಕೆಲಸ ಆರಂಭಿಸಿದವರು ಈಗ ಕಷ್ಟಕ್ಕೆ ಸಿಲುಕಿಕೊಂಡಿದ್ದಾರೆ. ಮನೆ ನಿರ್ಮಾಣ ಆರಂಭಿಸಿದಾಗ ಇದ್ದ ಖುಷಿ ಅವರ ಮುಖದಲ್ಲೀಗ ಮಾಯವಾಗಿದೆ. ಅರ್ಧಕ್ಕೆ ನಿಂತಿರುವ ಕಾಮಗಾರಿ ಬಗ್ಗೆ ಕೇಳಿದರೆ ಕಣ್ಣಾಲಿಗಳನ್ನು ತುಂಬಿಕೊಂಡು ನಿಲ್ಲುತ್ತಾರೆ.

4ನೇ ಪುಟ ನೋಡಿ

ಒಂದೂವರೆ ಪಟ್ಟು ಹೆಚ್ಚಳ

ಮಂಜುನಾಥ ಭಟ್

'₹80 ಲಕ್ಷದಲ್ಲಿ ಮನೆ ಕಟ್ಟಲು 2020ರ ಡಿಸೆಂಬರ್‌ನಲ್ಲಿ ಯೋಜನೆ ಸಿದ್ಧಪಡಿಸಿ ಮನೆ ನಿರ್ಮಾಣದ ಲೆಕ್ಕಾಚಾರ ಹಾಕಿದ್ದೆವು. ಎಲ್ಲಾ ವಸ್ತುಗಳ ಬೆಲೆ ಏರಿಕೆ ಆಗಿರುವುದರಿಂದ ಅರ್ಧದಷ್ಟು ಕಾಮಗಾರಿಗೇ ಹಣ ಖರ್ಚಾಗಿ ಹೋಗಿದೆ' ಎಂದು ಕಗ್ಗದಾಸನಪುರದ ಮಾರುತಿನಗರದಲ್ಲಿ ಮನೆ ನಿರ್ಮಿಸುತ್ತಿರುವ ಮಂಜುನಾಥ್ ಭಟ್ ಹೇಳುತ್ತಾರೆ.

'ಯೋಜನೆ ರೂಪಿಸಿದ್ದಾಗ ಕಬ್ಬಿಣದ ಬೆಲೆ ಕೆ.ಜಿಗೆ ₹48, ಸಿಮೆಂಟ್ ದರ ಚೀಲಕ್ಕೆ ₹300 ಇತ್ತು. ಈಗ ಕಬ್ಬಿಣದ ದರ ₹78ಕ್ಕೆ, ಸಿಮೆಂಟ್ ದರ ₹550 ಆಗಿದೆ. ಬಾಕಿ ಕೆಲಸ ಪೂರ್ಣಗೊಳಿಸಲು ಏನು ಮಾಡಬೇಕು ಎಂಬುದೇ ಗೊತ್ತಾಗುತ್ತಿಲ್ಲ' ಎಂದು ಅವರು ಅಸಹಾಯಕತೆ ವ್ಯಕ್ತಪಡಿಸುತ್ತಾರೆ.

ವಸ್ತುಗಳು	5 ವರ್ಷದ ಹಿಂದೆ ಇದ್ದ ದರ	ಕೋವಿಡ್ ಪೂರ್ವ ದರ	ಪ್ರಸ್ತುತ ದರ
ಕಬ್ಬಿಣ(ಟನ್ ₹ಗಳಲ್ಲಿ)	34,000-44,000	44,000-54,000	68,000-78,000
ಸಿಮೆಂಟ್(ಚೀಲಕ್ಕೆ ₹ಗಳಲ್ಲಿ)	210	270	480-550
ಎಂ ಸ್ಯಾಂಡ್ (ಟನ್‌ಗೆ ₹ಗಳಲ್ಲಿ)	700-800	1,500-1,700	2,300-2,500
ಮಣ್ಣಿನ ಇಟ್ಟಿಗೆ(₹ಗಳಲ್ಲಿ)	4	6	8
ಸಿಮೆಂಟ್ ಇಟ್ಟಿಗೆ(₹ಗಳಲ್ಲಿ)	24	35	48

ಜಿಎಸ್‌ಟಿಯೂ ಹೊರೆ

ಕಚ್ಚಾ ವಸ್ತುಗಳ ಬೆಲೆ ಏರಿಕೆ ಆದಂತೆ ಜಿಎಸ್‌ಟಿ ಹೊರೆಯೂ ಹೆಚ್ಚಾಗುತ್ತಿದ್ದು, ನಿರ್ಮಾಣ ವಲಯ ತೀವ್ರ ಸಂಕಷ್ಟ ಎದುರಿಸುವಂತಾಗಿದೆ.

ಒಂದು ವರ್ಷದ ಅವಧಿಯಲ್ಲೇ ಕಬ್ಬಿಣದ ಬೆಲೆ ಶೇ 58ರಷ್ಟು, ಸಿಮೆಂಟ್ ದರ ಶೇ 35, ಪಿವಿಸಿ ಪೈಪ್ ದರ ಶೇ 40ರಷ್ಟು, ಎಲೆಕ್ಟ್ರಿಕಲ್ ಕೇಬಲ್‌ಗಳ ದರ ಶೇ 45, ಸ್ಯಾನಿಟರಿ ಸಲಕರಣೆಗಳ ದರ ಶೇ 15ರಷ್ಟು ಹೆಚ್ಚಾಗಿದೆ. ಹೆಚ್ಚಾದ ದರಕ್ಕೇ ಜಿಎಸ್‌ಟಿ ದರ ಕೂಡ ಸೇರಿಕೊಂಡು ಗ್ರಾಹಕರಿಗೆ ಹೊರೆಯಾಗುತ್ತಾ ಹೋಗುತ್ತದೆ. ಉದಾಹರಣೆಗೆ ಒಂದು ಟನ್ ಕಬ್ಬಿಣಕ್ಕೆ ₹44 ಸಾವಿರ ಇದ್ದಾಗ ಶೇ 18ರಷ್ಟು ಅಂದರೆ ₹7,920 ಜಿಎಸ್‌ಟಿ ಸೇರ್ಪಡೆಯಾಗುತ್ತಿತ್ತು. ಸದ್ಯ ಅಷ್ಟೇ ಕಬ್ಬಿಣಕ್ಕೆ ₹78 ಸಾವಿರ ಇದ್ದು, ಅದಕ್ಕೆ ₹14,040 ಜಿಎಸ್‌ಟಿ ಸೇರಿಕೊಳ್ಳುತ್ತಿದೆ.

'ಅಪಾರ್ಟ್‌ಮೆಂಟ್ ಸಮುಚ್ಚಯ ನಿರ್ಮಾಣಕ್ಕೆ ಯೋಜನೆ ಸಿದ್ಧಪಡಿಸಿದ್ದಾಗ ಇದ್ದ ದರ ಈಗ ದುಪ್ಪಟ್ಟಾಗಿದೆ. ಇದರ ಹೊರೆಯನ್ನು ಅನಿವಾರ್ಯವಾಗಿ ನಾವು ಗ್ರಾಹಕರ ಮೇಲೆಯೇ ಹಾಕಬೇಕಾಗುತ್ತದೆ. ಜಿಎಸ್‌ಟಿ ಹೊರೆಯನ್ನಾದರೂ ಸರ್ಕಾರ ಕಡಿಮೆ ಮಾಡಬೇಕು' ಎಂದು ಕ್ರೆಡಾಯ್ ಬೆಂಗಳೂರು ಘಟಕದ ಭಾಸ್ಕರ್ ಟಿ.ನಾಗೇಂದ್ರಪ್ಪ ಒತ್ತಾಯಿಸಿದರು.

ಮಳೆ: ಗೋಡೆ ಕುಸಿದು ನಾಲ್ವರು ಸಾವು

ಬೆಂಗಳೂರು: ರಾಜ್ಯದ ವಿವಿಧೆಡೆ ಭಾನುವಾರ ಮಳೆ ಸಂಬಂಧಿತ ಅವಘಡಗಳಲ್ಲಿ ಬಾಲಕ ಸೇರಿದಂತೆ ನಾಲ್ವರು ಮೃತಪಟ್ಟಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಗೋಡೆ ಕುಸಿದು ಗರ್ಭಿಣಿ ಸೇರಿದಂತೆ ಒಂದೇ ಕುಟುಂಬದ ಮೂವರು ಮತ್ತು ಮಂಡ್ಯ ಜಿಲ್ಲೆಯಲ್ಲಿ ಬಾಲಕನೊಬ್ಬ ಮೃತಪಟ್ಟಿದ್ದಾರೆ.

4

ಮಕ್ಕಳ ವಿರುದ್ಧದ ಸೈಬರ್ ಪ್ರಕರಣ: ರಾಜ್ಯದಲ್ಲೂ ಅಧಿಕ

ನವದೆಹಲಿ : 2019ಕ್ಕೆ ಹೋಲಿಸಿದಲ್ಲಿ 2020ರಲ್ಲಿ ಮಕ್ಕಳ ವಿರುದ್ಧದ ಸೈಬರ್ ಅಪರಾಧ ಪ್ರಕರಣಗಳು ಶೇ 400 ರಷ್ಟು ಹೆಚ್ಚಳವಾಗಿದೆ. ಕರ್ನಾಟಕದಲ್ಲಿ 144 ಪ್ರಕರಣಗಳು ವರದಿಯಾಗಿವೆ ಎಂದು ಎನ್‌ಸಿಆರ್‌ಬಿ ವರದಿ ಬಹಿರಂಗಪಡಿಸಿದೆ.

6

'ಎಸ್–400' ಕ್ಷಿಪಣಿ ವ್ಯವಸ್ಥೆ ಪೂರೈಕೆ ಆರಂಭಿಸಿದ ರಷ್ಯಾ

ಮಾಸ್ಕೊ (ಪಿಟಿಐ): ಭಾರತಕ್ಕೆ 'ಎಸ್–400' ವಾಯುರಕ್ಷಣಾ ಕ್ಷಿಪಣಿ ವ್ಯವಸ್ಥೆಗಳನ್ನು ಪೂರೈಸುವ ಪ್ರಕ್ರಿಯೆಗೆ ರಷ್ಯಾ ಚಾಲನೆ ನೀಡಿದೆ.

6

ಆಸ್ಟ್ರೇಲಿಯಾಗೆ ಮೊದಲ ವಿಶ್ವಕಪ್ ಸಂಭ್ರಮ

ದುಬೈ: ಆಸ್ಟ್ರೇಲಿಯಾ ತಂಡವು ಇದೇ ಮೊದಲ ಸಲ ಟಿ20 ಕ್ರಿಕೆಟ್ ವಿಶ್ವಕಪ್ ಗೆದ್ದುಕೊಂಡಿತು. ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು 8 ವಿಕೆಟ್‌ಗಳಿಂದ ನ್ಯೂಜಿಲೆಂಡ್ ವಿರುದ್ಧ ಜಯಿಸಿತು.

11

ನಗರದಲ್ಲಿ ಇಂದು

ಪಿಇಎಸ್ ವಿಶ್ವವಿದ್ಯಾಲಯದ ಘಟಿಕೋತ್ಸವ: ಭಾಷಣ–ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು, ಫಲಕ ಅನಾವರಣ–ರಾಜ್ಯಪಾಲ ಥಾವರಚಂದ್ ಗೆಹಲೋತ್, ಅಧ್ಯಕ್ಷತೆ ಮತ್ತು ಪದವಿ ಪ್ರದಾನ–ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್. ದೊರೆಸ್ವಾಮಿ, ಪ್ರಮಾಣವಚನ ಬೋಧನೆ–ಡಿ.ಜವಾಹರ್, ಸ್ಥಳ–ಸಭಾಂಗಣ, ಎಂಆರ್‌ಡಿ ಕಟ್ಟಡ, ಪಿಇಎಸ್ ವಿಶ್ವವಿದ್ಯಾಲಯ, ಬೆಳಿಗ್ಗೆ 11.30


ಎಂ.ವೆಂಕಯ್ಯ ನಾಯ್ಡು

ಕಾರ್ತಿಕ ದೀಪೋತ್ಸವ: ಸಾನ್ನಿಧ್ಯ–ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಮಂಗಳಾನಂದನಾಥ ಸ್ವಾಮೀಜಿ, ರಮಾನಂದ ಸ್ವಾಮೀಜಿ, ಉಪಸ್ಥಿತಿ–ದ್ವಾರಕಾನಾಥ್, ಲಕ್ಷ್ಮೀನಾರಾಯಣ, ಆಯೋಜನೆ, ಸ್ಥಳ–ಸಾಮರಸ್ಯ ಗತಿವಿಧಿ, ಬಾಗಲೂರು ಕಾಲೊನಿ, ಸಂಜೆ 4

ಕನ್ನಡ ರಾಜ್ಯೋತ್ಸವ ಮತ್ತು ಕದಂಬ ಕನ್ನಡ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ–ಶಿವರುದ್ರ ಸ್ವಾಮೀಜಿ, ಉದ್ಘಾಟನೆ–ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ, ಪುಷ್ಪಾರ್ಚನೆ–ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್, ಅತಿಥಿಗಳು–‘ಪ್ರಜಾವಾಣಿ’ಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ನಂದೀಶ್ ಹಂಚೆ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮೀಳಾ ನಾಯ್ಡು, ಆಯೋಜನೆ–ಕರುನಾಡ ವಿಜಯಸೇನೆ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 5.30

ಕುಂದುಕೊರತೆ ಜನದನಿ

ನಿಮ್ಮ ಪ್ರದೇಶದಲ್ಲಿ ಜಲಮಂಡಳಿ ಸಮರ್ಪಕವಾಗಿ ನೀರು ಪೂರೈಸುತ್ತಿಲ್ಲವೇ? ನೀವು ಓಡಾಡುವ ರಸ್ತೆಯಲ್ಲಿ ಗುಂಡಿ ಬಿದ್ದಿದೆಯೇ? ಕಸ ರಾಶಿ ಬಿದ್ದಿದೆಯೇ ಅಥವಾ ನಿತ್ಯ ವಿಹಾರಕ್ಕೆ ಹೋಗುವ ಉದ್ಯಾನ ಪಾಳುಬಿದ್ದಿದೆಯೇ? ಬಸ್‌ಗಳು ಬರುತ್ತಿಲ್ಲವೇ? ಸಮಸ್ಯೆಗಳು ತಾಂಡವವಾಡುತ್ತಿವೆಯೇ? . . . ನಿಮ್ಮ ಅಹವಾಲುಗಳಿಗೆ ‘ಪ್ರಜಾವಾಣಿ’ ಧ್ವನಿಯಾಗಲಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಜಲಮಂಡಳಿ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ), ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ (ಬೆಸ್ಕಾಂ) ಸಂಬಂಧಿಸಿದ ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in.

ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ಬೀದಿ ದೀಪ ದುರಸ್ತಿಪಡಿಸಿ

ಅಬ್ಬಿಗೆರೆಯ ವೆಂಕಟೇಶ್ವರ ಬಡಾವಣೆಯ ಗಣಪತಿ ದೇವಸ್ಥಾನ ರಸ್ತೆಯಲ್ಲಿರುವ ಬೀದಿದೀಪ ವರ್ಷಗಳಿಂದ ಕೆಟ್ಟಿದೆ. ಈ ಬಗ್ಗೆ ಪಾಲಿಕೆ ಅಧಿಕಾರಿಗಳಿಗೆ ಲಿಖಿತ ದೂರು ಸಲ್ಲಿಸಿದ್ದೇನೆ. ಬೀದಿದೀಪ ನಿರ್ವಹಣಾ ವಿಭಾಗವು ಹೊಸ ಎಲ್ಇಡಿ ದೀಪಗಳಿಗೆ ಟೆಂಡರ್ ಕರೆದಿರುವುದಾಗಿ ಉತ್ತರಿಸಿತು. ಆದರೆ, ಎರಡು ವರ್ಷ ಕಳೆದರೂ ಬೀದಿದೀಪದ ಸ್ಥಿತಿ ಹಾಗೆಯೇ ಇದೆ.

ಸಂಜೆ ನಂತರ ಈ ರಸ್ತೆಯಲ್ಲಿ ಸಂಚರಿಸಲು ಜನರು ಹೆದರುತ್ತಾರೆ. ಟ್ಯೂಬ್‌ಲೈಟ್ ದೀಪಗಳು ಪದೇ ಪದೇ ಹಾಳಾಗುತ್ತವೆ. ಅದನ್ನೇ ಹಲವು ರಸ್ತೆಗಳಲ್ಲಿ ಅಳವಡಿಸಲಾಗಿದೆ. ಬೀದಿದೀಪಗಳನ್ನು ಕೂಡಲೇ ದುರಸ್ತಿಗೊಳಿಸಿ, ಇಲ್ಲಿನ ನಿವಾಸಿಗಳಿಗೆ ಅನುಕೂಲ ಮಾಡಿಕೊಡಿ.

ವರದರಾಜನ್, ಅಬ್ಬಿಗೆರೆ

ಅಬ್ಬಿಗೆರೆಯ ಗಣಪತಿ ದೇವಸ್ಥಾನ ರಸ್ತೆಯಲ್ಲಿ ಹಾಳಾಗಿರುವ ಬೀದಿದೀಪ.

ರಸ್ತೆ ಮೇಲೆ ಹರಿಯುವ ಕೊಳಚೆ ನೀರು

ಹೊಸಕೆರೆಹಳ್ಳಿಯ ನೈಸ್ ರಸ್ತೆ ಅಂಡರ‍್‌ಪಾಸ್ ಮಾರ್ಗ ಪಾಲಿಕೆಯಿಂದ ಸಂಪೂರ್ಣ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಈ ಮುಖ್ಯರಸ್ತೆಯಲ್ಲಿ ಶಾಲಾ ವಿದ್ಯಾರ್ಥಿಗಳು, ಹಿರಿಯ ನಾಗರಿಕರು, ವಾಹನ ಸವಾರರು, ಪ್ರತಿನಿತ್ಯವೂ ಕಸ, ಕೊಳಕು ಹಾಗೂ ಕೊಳಚೆ ನೀರಿನ ದುರ್ನಾತದ ಜೊತೆಗೆ ಸಂಚರಿಸುವುದು ಅನಿವಾರ್ಯವಾಗಿದೆ. ಹಲವು ಪ್ರತಿಷ್ಠಿತ ಅಪಾರ್ಟ್‌ಮೆಂಟ್ ಸಮುಚ್ಚಯಗಳಿಗೆ ಇದೇ ರಸ್ತೆ ಸಂಪರ್ಕ ಕಲ್ಪಿಸುತ್ತದೆ.

ಅಂಡರ‍್‌ಪಾಸ್ ರಸ್ತೆಯ ಕಳಪೆ ಹಾಗೂ ಅವೈಜ್ಞಾನಿಕ ಕಾಮಗಾರಿಯಿಂದ ಚರಂಡಿ ನೀರು ರಸ್ತೆಯ ಮೇಲೆ ಹರಿಯುತ್ತದೆ. ಇದರಿಂದ ಉಂಟಾಗುವ ಗಬ್ಬುನಾತದಿಂದ ಮೂಗು ಮುಚ್ಚಿಕೊಂಡೇ ಸಾರ್ವಜನಿಕರು ಸಾಗುತ್ತಾರೆ. ಇದರ ಪಕ್ಕದಲ್ಲೇ ಹರಿಯುವ ವೃಷಭಾವತಿ ಕಾಲುವೆಗೆ ಕಸ ಸೇರುತ್ತಿದೆ. ಈ ಪ್ರದೇಶದಲ್ಲಿ ದನ, ನಾಯಿ, ಹಂದಿಗಳಿಂದ ಕಾಟ ಹೆಚ್ಚಾಗಿದೆ. ಚರಂಡಿಯ ಕೊಳಚೆ ನೀರು ರಸ್ತೆ ಮೇಲೆ ಹರಿಯದಂತೆ ತಡೆಯಬೇಕು. ಕಸ ವಿಲೇವಾರಿ ಹಾಗೂ ಕೋಳಿ ಸಾಗಣೆ ವಾಹನಗಳ ನಿಲುಗಡೆಗೆ ಅವಕಾಶ ನೀಡಬಾರದು. ಕಸ ಸುರಿಯುವುದನ್ನು ತಡೆಯಲು ಮಾರ್ಷಲ್‌ವೊಬ್ಬರನ್ನು ನೇಮಿಸಿ.

ಕೆ.ನರಸಿಂಹ ಭಟ್, ಹೊಸಕೆರೆಹಳ್ಳಿ

ಹೊಸಕೆರೆಹಳ್ಳಿ ನೈಸ್‌ರಸ್ತೆ ಅಂಡರ್‌ಪಾಸ್‌ನಲ್ಲಿ ಕೊಳಚೆ ನೀರಿನಲ್ಲೇ ವಾಹನಗಳ ಸಂಚಾರ.

ಕೆಸರುಮಯವಾಗಿರುವ ಕೆ.ಆರ್‌ಪುರ ಬಸ್ ನಿಲ್ದಾಣ

ಬಸ್‌ನಿಲ್ದಾಣದ ಬಳಿಯೇ ಕೆಸರು

ಪ್ರತಿ ಬಾರಿ ಮಳೆ ಬಂದಾಗ ಕೆ.ಆರ್.ಪುರ ಬಸ್ ನಿಲ್ದಾಣ ಕೆಸರು ಗದ್ದೆಯಂತಾಗುತ್ತದೆ. ಕೆಸರಿನಲ್ಲೇ ಪ್ರಯಾಣಿಕರ ಪರದಾಟ ಹೇಳತೀರದು. ನಿಲ್ದಾಣದಲ್ಲಿ ಮಳೆ–ಬಿಸಿಲಿಗೂ ಆಸರೆ ಇಲ್ಲ. ಸಾವಿರಾರು ಪ್ರಯಾಣಿಕರು ವಿವಿಧೆಡೆಗೆ ಸಂಚರಿಸುವ ಕೆ.ಆರ್.ಪುರ ಬಸ್ ನಿಲ್ದಾಣದಲ್ಲಿ ಮೂಲ ಸೌಕರ್ಯಗಳು ಮರೆಯಾಗಿವೆ. ಸಂಬಂಧಪಟ್ಟ ಅಧಿಕಾರಿಗಳು ಮೌನ ತಾಳಿದ್ದಾರೆ.

ಮೆಟ್ರೊ ಕಾಮಗಾರಿ ಪ್ರಗತಿಯಲ್ಲಿದ್ದು, ಇಲ್ಲೇ ಇರುವ ಬಸ್ ನಿಲ್ದಾಣದ ಅವ್ಯವಸ್ಥೆಯಿಂದ ಪ್ರಯಾಣಿಕರು ಬೇಸತ್ತಿದ್ದಾರೆ. ಮಳೆ ಬಂದಾಗ ಪ್ರಯಾಣಿಕರು ಬಸ್ ಹತ್ತಲು ಹಾಗೂ ಬೇಸಿಗೆಯಲ್ಲಿ ನೆರಳಿಗಾಗಿ ಪರದಾಡುತ್ತಾರೆ. ತುರ್ತು ಬಳಕೆಗೆ ನಿಲ್ದಾಣದಲ್ಲಿ ಸುಸಜ್ಜಿತವಾದ ಶೌಚಾಲಯಗಳೂ ಇಲ್ಲ, ಕೂರಲು ಸಮರ್ಪಕವಾದ ಆಸನ ವ್ಯವಸ್ಥೆ ಇಲ್ಲ. ಸ್ಥಳೀಯರು ಹಲವು ಬಾರಿ ಮನವಿ ಮಾಡಿದರೂ ನಿಲ್ದಾಣದ ಸ್ಥಿತಿ ಬದಲಾಗಿಲ್ಲ.

ಸತೀಶ್, ಪ್ರಯಾಣಿಕ

ಬೀದಿನಾಯಿಗಳ ಕಾಟ ತಪ್ಪಿಸಿ

ಕುಮಾರಪಾರ್ಕ್ ಪಶ್ಚಿಮ ಬಡಾವಣೆಯ ಬಿಡಿಎ ಕಚೇರಿ ಹಾಗೂ ರೈಲ್ವೆ ಪ್ಯಾರಲೆಲ್ ರಸ್ತೆಯ ಸುತ್ತಮುತ್ತ ಬೀದಿನಾಯಿಗಳ ಹಾವಳಿ ಹೆಚ್ಚಾಗಿದೆ. ಪಾದಚಾರಿಗಳು ಹಾಗೂ ವಾಯುವಿಹಾರಿಗಳಿಗೆ ಬೀದಿನಾಯಿಗಳಿಂದ ಹೆಚ್ಚು ಸಮಸ್ಯೆ ಆಗುತ್ತಿದೆ. ಪಾಲಿಕೆ ಅಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಂಡು ನಾಯಿಗಳ ಕಾಟದಿಂದ ಮುಕ್ತಿ ನೀಡಿ.

ಎಚ್.ಎಸ್.ಚಂದ್ರಶೇಖರ್, ಸ್ಥಳೀಯ

ಸರೋವರ ಕೆರೆ ರಸ್ತೆ ಸಂಪರ್ಕ ಸರಿಪಡಿಸಿ

ರಾಮಮೂರ್ತಿನಗರದ ಕಲ್ಕೆರೆ ಹಾಗೂ ವಿವಿಧ ಬಡಾವಣೆಗಳಿಂದ ಕನಕ ಸರೋವರ ಕೆರೆಗೆ ಸಂಪರ್ಕ ಕಲ್ಪಿಸುವ ಮಾರ್ಗ ಸಂಪೂರ್ಣವಾಗಿ ಹದಗೆಟ್ಟಿದೆ. ಇದರಿಂದ ವಾಯುವಿಹಾರಿಗಳ ಸಂಚಾರಕ್ಕೆ ತೊಂದರೆಯಾಗಿದೆ. ಕೆರೆಯನ್ನು ಪಾಲಿಕೆ ಇತ್ತೀಚೆಗಷ್ಟೇ ಅಭಿವೃದ್ಧಿ ಮಾಡಿದೆ. ಹಾಗಾಗಿ, ವಾಯುವಿಹಾರಕ್ಕೆ ಬರುವವರ ಸಂಖ್ಯೆ ಹೆಚ್ಚಾಗಿದೆ. ಆದರೆ, ಕೆರೆಯನ್ನು ಸಂಪರ್ಕಿಸುವ ರಸ್ತೆಯಲ್ಲಿ ಸಂಚಾರ ದುಸ್ತರವಾಗಿದೆ.

ಬಿಳಿಶಿವಾಲೆ ಹಾಗೂ ಹೊರಮಾವು ಕಡೆಯಿಂದ ಬರುವವರಿಗೆ ರಸ್ತೆ ಚೆನ್ನಾಗಿದೆ. ಬಂಜಾರ ಬಡಾವಣೆ, ಕಲ್ಕೆರೆ, ಕನಕ ನಗರ, ಎನ್‌ಆರ್‌ಐ ಬಡಾವಣೆಗಳಿಂದ ಬರುವ ವಾಯುವಿಹಾರಿಗಳಿಗೆ ರಸ್ತೆ ತಲೆ ನೋವಾಗಿ ಪರಿಣಮಿಸಿದೆ. ಕೆರೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಟ್ಟಡ ತ್ಯಾಜ್ಯ ಸುರಿಯಲಾಗುತ್ತಿದೆ. ತ್ಯಾಜ್ಯ ಸುರಿಯಲು ಬರುವ ಲಾರಿ, ಟ್ರ್ಯಾಕ್ಟರ್, ಟ್ರಕ್‌ಗಳಿಂದಲೂ ಈ ರಸ್ತೆ ಹಾಳಾಗಿದೆ. ಇಷ್ಟೆಲ್ಲ ನಡೆದಿದ್ದರೂ ಪಾಲಿಕೆ ಮತ್ತು ಕೆರೆ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿಲ್ಲ.

ವಿಕಾಸ್ ರಾಥೋಡ್, ಸ್ಥಳೀಯ

ಕನಕ ಸರೋವರ ಕೆರೆಗೆ ಸಂಪರ್ಕ ಕಲ್ಪಿಸುವ ರಸ್ತೆಯ ದುಸ್ಥಿತಿ.

ಛಲವಾದಿ ಪಾಳ್ಯದ ಪೆನ್ಷನ್ ಮೊಹಲ್ಲಾ ರಸ್ತೆ ಪಕ್ಕದಲ್ಲಿ ರಾಶಿ ಬಿದ್ದಿರುವ ಕಸ.

ಕಸ ವಿಲೇವಾರಿ ಅಸಮರ್ಪಕ

ಚಾಮರಾಜಪೇಟೆ ಕ್ಷೇತ್ರದ ಛಲವಾದಿ ಪಾಳ್ಯ ಮತ್ತು ಕೆ.ಆರ್.ಮಾರುಕಟ್ಟೆಯಲ್ಲಿ ಕಸ ವಿಲೇವಾರಿ ಸಮರ್ಪಕವಾಗಿ ಆಗುತ್ತಿಲ್ಲ. ಈ ಎರಡೂ ಪ್ರದೇಶಗಳಲ್ಲಿ ಎಲ್ಲೆಂದರಲ್ಲಿ ಕಸದ ರಾಶಿಗಳು ಕಣ್ಣಿಗೆ ರಾಚುತ್ತವೆ. ಕಸ ವಿಲೇವಾರಿ ಅವ್ಯವಸ್ಥೆ ಬಗ್ಗೆ ಪ್ರಶ್ನಿಸಿದವರಿಗೆ ಗುತ್ತಿಗೆದಾರರು ದರ್ಪದಿಂದ ಮಾತನಾಡುತ್ತಾರೆ.

ಕಸ ವಿಂಗಡಣೆಯನ್ನೇ ಈ ಭಾಗಗಳಲ್ಲಿ ಮಾಡುವುದಿಲ್ಲ. ಕಸ ಸಂಗ್ರಹಿಸುವ ವಾಹನಕ್ಕೆ ನೋಂದಣಿ ಸಂಖ್ಯೆ, ವಲಯದ ಹೆಸರೂ ಇಲ್ಲ. ಕಸ ಸಂಗ್ರಹಿಸುವ ಮುನ್ನ ವಾಹನಗಳು ಘೋಷಣೆ ಮಾಡುವುದಿಲ್ಲ. ಅಧಿಕಾರಿಗಳ ಕಾರ್ಯವೈಖರಿಗೆ ಇವುಗಳೇ ಸಾಕ್ಷಿ. ತೆರಿಗೆಯನ್ನು ಸಕಾಲದಲ್ಲಿ ಕಟ್ಟಿಸಿಕೊಳ್ಳುವ ಪಾಲಿಕೆ ಅಧಿಕಾರಿಗಳು ವಿಲೇವಾರಿಯನ್ನೂ ಸರಿಯಾಗಿ ಮಾಡಲಿ. ಈ ಕ್ಷೇತ್ರದ ಗುತ್ತಿಗೆದಾರರ ಮೇಲೆ ಸೂಕ್ತ ಕ್ರಮ ಕೈಗೊಳ್ಳಿ.

ಪ್ರಭಾಕರ್, ಚಾಮರಾಜಪೇಟೆ

CONNECT

ಬೆಂಗಳೂರಿನ ಬನಶಂಕರಿಯಲ್ಲಿ ಮಾರಾಟ
ಕಾಂಚೀಪುರಂ ಎ.ಜಿ. ಬಾಬು ಸಾಹ್ ರೇಷ್ಮೆ ಸೀರೆ ವ್ಯಾಪಾರಿಗಳು
ಶ್ರೀ ಹರಿ ಕಲ್ಯಾಣ ಮಂಟಪ
ಕೊನೆಯ ದಿನ 5 ಗಂಟೆಗೆ ಮುಗಿಯುತ್ತದೆ
ನಂ. 5–136/17, 30ನೇ ಮೈನ್, ಬನಶಂಕರಿ 3ನೇ ಹಂತ, ಬೆಂಗಳೂರು–560 085. ಮೊ. : 6385697571
ದಿನಾಂಕ: 14,15,16,17 & 18 ನವೆಂಬರ್ 2021
ಬೆಳಿಗ್ಗೆ 11.00 ರಿಂದ ರಾತ್ರಿ 7.00 ರವರೆಗೆ
ಯಾವುದೇ ವಿನಿಮಯವಿಲ್ಲ, ಹಿಂತಿರಿಗಿಸುವುದಿಲ್ಲ
ಮಾಸ್ಕ್ ಕಡ್ಡಾಯ
ಮಕ್ಕಳಿಗೆ ಹಾಗೂ 60 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳಿಗೆ ಪ್ರವೇಶವಿಲ್ಲ
At a time only 50 persons are allowed
ಕೈಚೀಲ ಮತ್ತು ಸಾಮಾನುಗಳನ್ನು ಒಳಗೆ ಅನುಮತಿಸಲಾಗುವುದಿಲ್ಲ
ನಮ್ಮ ಚಾನೆಲ್ ಅನ್ನು ಸಬ್‌ಸ್ಕ್ರೈಬ್ ಮಾಡಿ ಎ.ಜಿ. ಬಾಬು ಸಾಹ್ YouTube
ಹೊಸ ಮಾರಾಟ ಮತ್ತು ಮಾಹಿತಿಗಾಗಿ ಬೆಲ್ ಐಕಾನ್ ಅನ್ನು ಒತ್ತಲು ಮರೆಯದಿರಿ

ಬೆಂಗಳೂರಿನ ರಾಜಾಜಿನಗರದಲ್ಲಿ ಮಾರಾಟ
ಕಾಂಚೀಪುರಂ ಎ.ಜಿ. ಬಾಬು ಸಾಹ್ ರೇಷ್ಮೆ ಸೀರೆ ವ್ಯಾಪಾರಿಗಳು
ಶ್ರೀ ಚೌಡೇಶ್ವರಿ ಕಲ್ಯಾಣ ಮಂಟಪ
ನಂ. 127, ಪಶ್ಚಿಮ ಕಾರ್ಡ್ ರಸ್ತೆ, ರಾಜಾಜಿನಗರ ಇಂಡಸ್ಟ್ರಿಯಲ್ ಟೌನ್, ಗಣಪತಿ ಪೆಟ್ರೋಲ್ ಬಂಕ್ ಪಕ್ಕ, ರಾಜಾಜಿನಗರ, ಬೆಂಗಳೂರು–560044, ಮೊ. : 6385697571
ದಿನಾಂಕ: 16,17,18 ಮತ್ತು 19 ನವೆಂಬರ್ 2021
ಬೆಳಿಗ್ಗೆ 11.00 ರಿಂದ ರಾತ್ರಿ 7.00 ರವರೆಗೆ
ಯಾವುದೇ ವಿನಿಮಯವಿಲ್ಲ, ಹಿಂತಿರಿಗಿಸುವುದಿಲ್ಲ
ಮಾಸ್ಕ್ ಕಡ್ಡಾಯ
ಮಕ್ಕಳಿಗೆ ಹಾಗೂ 60 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳಿಗೆ ಪ್ರವೇಶವಿಲ್ಲ
At a time only 50 persons are allowed
ಕೈಚೀಲ ಮತ್ತು ಸಾಮಾನುಗಳನ್ನು ಒಳಗೆ ಅನುಮತಿಸಲಾಗುವುದಿಲ್ಲ
ನಮ್ಮ ಚಾನೆಲ್ ಅನ್ನು ಸಬ್‌ಸ್ಕ್ರೈಬ್ ಮಾಡಿ ಎ.ಜಿ. ಬಾಬು ಸಾಹ್ YouTube
ಹೊಸ ಮಾರಾಟ ಮತ್ತು ಮಾಹಿತಿಗಾಗಿ ಬೆಲ್ ಐಕಾನ್ ಅನ್ನು ಒತ್ತಲು ಮರೆಯದಿರಿ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Hotel & Restaurant

OPPORTUNITY TO Run Food Counters in IT & Industrial Sector. Further Details Contact: 6366367258, 6366226523.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Business Offers

Distributors

PARTNER TO manage the teamat Rajajinagar with zero investment. Call 7019246661

Finance

NRI'S INVESTMENT And Finance AvailableOn LowInterest AgainstProperties, Land& Building,Sites,Flats, Converted& AgricultureLandsCall: 7411265189

JOB OPPORTUNITIES

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

EDUCATIONAL

Admission

JOIN BEFORE 20-11-2021 MBA/ MCA/ M.Sc (IT, CS, Maths). 4- Semesters. Examinations in January-2022 at Bangalore. South Indian UGC, NAAC 'A' GRADE INNOVATIVE GOVT UNIVERSITY. Employees Eligible. Low fee. Asha Institute: 9448460103/ 7093438248.

ONE SITTING: LL.B (3&5 Years, Can Practice, Limited Seats) Also B.Tech/ Diploma/ MBA/ MCA/ BBA/ BCA/ B.Sc/ B.Com/ PU/ SSLC. Asha Institute: Bangalore. Ph: 9448460103/ 7093438248

DH Classifieds
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information contact:
9880856233 /9845114560
9886213331

ಸ್ತನ ಕ್ಯಾನ್ಸರ್– ಚರ್ಚೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಣಿಪಾಲ್ ಆಸ್ಪತ್ರೆಗಳು ಹಾಗೂ ಡಿಎಚ್ ಬ್ರ್ಯಾಂಡ್‌ಸ್ಪಾಟ್‌ನ ಸಹಯೋಗದಲ್ಲಿ ‘ಸ್ತನ ಕ್ಯಾನ್ಸರ್ ಕುರಿತು ಯುವಜನರಿಗೆ ಮಾಹಿತಿ ಮತ್ತು ಆರಂಭಿಕ ಹಂತದಲ್ಲೇ ತಡೆಗಟ್ಟುವಿಕೆ’ ಕುರಿತು ತಜ್ಞ ವೈದ್ಯರ ಚರ್ಚಾ ಕಾರ್ಯಕ್ರಮ ನ.15ರಂದು ಸಂಜೆ 5.30ಕ್ಕೆ ನಡೆಯಲಿದೆ.

ಮಣಿಪಾಲ್ ಆಸ್ಪತ್ರೆಗಳ ವೈದ್ಯರಾದ ಡಾ.ಎಸ್.ಪಿ.ಸೋಮಶೇಖರ್, ಡಾ.ಪೂನಂ ಪಾಟೀಲ, ಡಾ.ಬಿ.ಸಿ.ಅಶೋಕ್, ಡಾ.ರೂಪಾ ಅನಂತಸಿವನ್ ಚರ್ಚೆಯಲ್ಲಿ ಭಾಗವಹಿಸಲಿದ್ದಾರೆ.

ಸ್ತನ ಕ್ಯಾನ್ಸರ್‌ನ ಆರಂಭಿಕ ಲಕ್ಷಣಗಳು, ಚಿಕಿತ್ಸೆ, ಜೀವನಶೈಲಿಯ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಸ್ತನ ಕ್ಯಾನ್ಸರ್‌ನ ಭಯವನ್ನು ಹೋಗಲಾಡಿಸುವ ಸಂಬಂಧ ಮಣಿಪಾಲ್ ಆಸ್ಪತ್ರೆಗಳ ತಜ್ಞ ವೈದ್ಯರು ಚರ್ಚೆಯಲ್ಲಿ ಮಾತನಾಡಲಿದ್ದಾರೆ.

ಚರ್ಚೆಯಲ್ಲಿ bit.ly/BREASTCA ಮೂಲಕ ಭಾಗವಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮಹಿಳೆ, ಮಕ್ಕಳಿಗೆ ಪ್ರತ್ಯೇಕ ಆಸ್ಪತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಇನ್ಫೆಂಟ್ರಿ ರಸ್ತೆಯಲ್ಲಿ ಸ್ಪರ್ಶ್ ಆಸ್ಪತ್ರೆಗಳ ಸಮೂಹವು ಮಹಿಳೆಯರು ಮತ್ತು ಮಕ್ಕಳ ಚಿಕಿತ್ಸೆಗಾಗಿ ನಿರ್ಮಿಸಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು ಭಾನುವಾರದಿಂದ ಕಾರ್ಯಾರಂಭ ಮಾಡಿದೆ.

‘ಸ್ತ್ರೀರೋಗ, ಹೃದ್ರೋಗ, ಶ್ವಾಸಕೋಶ ಸೇರಿದಂತೆ ವಿವಿಧ ಸಮಸ್ಯೆಗಳಿಗೆ ಚಿಕಿತ್ಸೆ ನೀಡಲಾಗುತ್ತದೆ. ಆಸ್ಪತ್ರೆಯು ಅತ್ಯಾಧುನಿಕ ತಂತ್ರಜ್ಞಾನಗಳನ್ನು ಹೊಂದಿದ್ದು, ಅವನ್ನು ನಿರ್ವಹಿಸಲು ನಮ್ಮಲ್ಲಿ ತಜ್ಞ ವೈದ್ಯರಿದ್ದಾರೆ’ ಎಂದು ಆಸ್ಪತ್ರೆಯ ಅಧ್ಯಕ್ಷ ಮತ್ತು ಮೂಳೆ ಶಸ್ತ್ರಚಿಕಿತ್ಸಕ ಡಾ. ಶರಣ್ ಶಿವರಾಜ್ ಪಾಟೀಲ್ ತಿಳಿಸಿದರು.

‘ಮಹಿಳೆಯರು ಮತ್ತು ಮಕ್ಕಳಿಗೆ ಬಹುಮಾದರಿ ಆರೈಕೆ ನೀಡಲಿದ್ದೇವೆ. ವೈದ್ಯಕೀಯ ಸಂಕೀರ್ಣತೆಗಳನ್ನು ಸುಲಲಿತವಾಗಿ ನಿರ್ವಹಿಸಲು ಅನುಭವಿ ವೈದ್ಯರಿದ್ದಾರೆ’ ಎಂದು ಆಸ್ಪತ್ರೆಯ ನಿರ್ದೇಶಕಿ ಡಾ. ಪ್ರತಿಮಾ ರೆಡ್ಡಿ ಹೇಳಿದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶಾಸಕ ಶಾಮನೂರು ಶಿವಶಂಕರಪ್ಪ, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ್, ಶಾಸಕ ಜಗದೀಶ್ ಶೆಟ್ಟರ್ ಮತ್ತಿತರರು ಇದ್ದರು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಅಜಕ್ಕಳ ಗಿರೀಶ್ ಭಟ್ ಬೇಸರ

‘ಜಾಲತಾಣಗಳಲ್ಲಿ ಮುಳುಗಿರುವ ಯುವಜನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯುವ ಸಮೂಹ ಇತ್ತೀಚಿನ ದಿನಗಳಲ್ಲಿ ಫೇಸ್‌ಬುಕ್, ವಾಟ್ಸ್‌ಆ್ಯಪ್‌ನಂತಹ ಸಾಮಾಜಿಕ ಜಾಲತಾಣಗಳಲ್ಲಿ ಮುಳುಗಿ ಹೋಗಿದ್ದು, ಪುಸ್ತಕ ಓದುವ ಹವ್ಯಾಸ ಕಡಿಮೆಯಾಗುತ್ತಿದೆ. ಇದು ಆರೋಗ್ಯಕರ ಬೆಳವಣಿಗೆ ಅಲ್ಲ’ ಎಂದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಅಜಕ್ಕಳ ಗಿರೀಶ್ ಭಟ್ ಬೇಸರ ವ್ಯಕ್ತಪಡಿಸಿದರು.

ಅ.ನ.ಕೃ.ಪ್ರತಿಷ್ಠಾನವು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘ಅನಕೃ ಪ್ರಶಸ್ತಿ’ ಹಾಗೂ ‘ಕೆ.ಟಿ.ಚಂದ್ರಶೇಖರ್ ಸಾಹಿತ್ಯಶ್ರೀ ಪ್ರಶಸ್ತಿ’ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಅ.ನ.ಕೃಷ್ಣರಾಯರು (ಅನಕೃ) ಚಿಕ್ಕ ವಯಸ್ಸಿನಲ್ಲೇ ಬರವಣಿಗೆ ಆರಂಭಿಸಿದರು. ಅವರು ಸದಾ ಕಾಲ ನೆನಪಿನಲ್ಲಿ ಉಳಿಯುವ ಸಾಹಿತ್ಯವನ್ನು ಕನ್ನಡ ಸಾಹಿತ್ಯಲೋಕಕ್ಕೆ ನೀಡಿದ್ದಾರೆ. ಕಾದಂಬರಿ ಸೇರಿದಂತೆ ವೈವಿಧ್ಯಮಯ ಸಾಹಿತ್ಯ ರಚಿಸಿದ್ದರು’ ಎಂದರು.

ಟಿ.ವಿ.ವೆಂಕಟಾಚಲಶಾಸ್ತ್ರಿ ಅವರಿಗೆ ‘ಅನಕೃ ಪ್ರಶಸ್ತಿ’ ಹಾಗೂ ಪೊಲೀಸ್ ಅಧಿಕಾರಿ ಸವಿತಾ ಶ್ರೀನಿವಾಸ್ ಅವರಿಗೆ ‘ಕೆ.ಟಿ.ಚಂದ್ರಶೇಖರ್ ಸಾಹಿತ್ಯಶ್ರೀ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಪ್ರತಿಷ್ಠಾನದ ಶೋಭಾ ಗೌತಮ್, ಲೇಖಕಿ ಎಲ್.ಜಿ.ಮೀರಾ, ಅಜಕ್ಕಳ ಗಿರೀಶ್ ಭಟ್, ಶಾ.ಮಂ.ಕೃಷ್ಣರಾವ್, ಪಿ.ವಿ.ನಾರಾಯಣ, ಗೌತಮ್ ಅನಕೃ, ವಕೀಲ ಆಶೋಕ ಹಾರನಹಳ್ಳಿ, ಲೇಖಕಿ ಸಂಧ್ಯಾರೆಡ್ಡಿ ಇದ್ದಾರೆ.

‘ಸಂಗೀತ ಮತ್ತು ಕಲೆಗಳ ಆಸಕ್ತಿ ಉಳ್ಳವರು ಉತ್ತಮ ಸಾಹಿತ್ಯ ರಚಿಸುತ್ತಾರೆ ಎನ್ನುವ ಮಾತಿದೆ. ಅದರಂತೆ ಕಲಾ ಪ್ರೇಮಿಗಳೂ ಆಗಿದ್ದ ಅನಕೃ ಅವರಿಂದ ಸಂಧ್ಯಾರಾಗ ಸೇರಿದಂತೆ ಹಲವಾರು ಉತ್ತಮ ಕೃತಿಗಳು ಮೂಡಿಬಂದಿವೆ’ ಎಂದು ಹೇಳಿದರು.

‘ಅನಕೃ ಪ್ರಶಸ್ತಿ’ ಸ್ವೀಕರಿಸಿ ಮಾತನಾಡಿದ ವಿದ್ವಾಂಸ ಟಿ.ವಿ.ವೆಂಕಟಾಚಲಶಾಸ್ತ್ರಿ,‘ ಅಪರಿಚಿತರನ್ನೂ ಪ್ರೀತಿ, ವಿಶ್ವಾಸದಿಂದ ಮಾತನಾಡಿಸುವುದು ಅನಕೃ ಅವರ ಸ್ವಭಾವವಾಗಿತ್ತು. ಹೆಚ್ಚು ಓದುಗರನ್ನು ಸೃಷ್ಟಿಸಿದ್ದ ಅವರು ತಮ್ಮ ಜೊತೆಗೆ ಹಲವರನ್ನು ಬೆಳೆಸಿದರು’ ಎಂದು ನೆನೆದರು.

ಅನಕೃ ಶಿಷ್ಯ ಶಾ.ಮಂ.ಕೃಷ್ಣರಾಯ, ‘ಕನ್ನಡಕ್ಕಾಗಿ ಹೋರಾಟದ ಮೂಲಕ ಶ್ರಮಿಸಿದ ಅನಕೃ ಅವರನ್ನು ಸರ್ಕಾರ ನೆನೆಯುತ್ತಿಲ್ಲ. ಅಖಂಡ ಕರ್ನಾಟಕದ ಹೋರಾಟದಲ್ಲಿ ಅವರು ಮುಂಚೂಣಿಯಲ್ಲಿದ್ದರು. ಆರ್ಥಿಕ ಸಂಕಷ್ಟದ ಕಾಲದಲ್ಲೂ ಎದೆಗುಂದಲಿಲ್ಲ. ಅವರ ಸಾಧನೆಗಳನ್ನು ಯುವ ಸಮೂಹಕ್ಕೆ ತಿಳಿಸಬೇಕಾಗಿದೆ. ಆದರೆ, ಸರ್ಕಾರದ ಈ ನಡೆ ಬಹಳ ಬೇಸರ ಉಂಟುಮಾಡಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರಶಸ್ತಿ ಪ್ರದಾನ: ಪೊಲೀಸ್ ಅಧಿಕಾರಿಯಾಗಿರುವ ಲೇಖಕಿ ಸವಿತಾ ಶ್ರೀನಿವಾಸ್ ಅವರಿಗೆ ‘ಕೆ.ಟಿ.ಚಂದ್ರಶೇಖರ್ ಸಾಹಿತ್ಯಶ್ರೀ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಅನಕೃ ಸ್ವರ್ಣ ಜಯಂತಿಯ ಸ್ಮರಣ ಗ್ರಂಥ ‘ಅದಮ್ಯ ಚೇತನ’ ಪುಸ್ತಕ ಬಿಡುಗಡೆ ಮಾಡಲಾಯಿತು.

ವಿಮಾನ ತುರ್ತು ಭೂಸ್ಪರ್ಶ

ಗುವಾಹಟಿ (ಪಿಟಿಐ): ಮಣಿಪುರದಲ್ಲಿ ಉಗ್ರರ ದಾಳಿಯಿಂದ ಹುತಾತ್ಮರಾದ ಅಸ್ಸಾಂ ರೈಫಲ್ಸ್‌ನ ಯೋಧರ ಮತ್ತು ಕುಟುಂಬ ಸದಸ್ಯರ ಮೃತದೇಹವನ್ನು ಸಾಗಿಸುತ್ತಿದ್ದ ಸೇನಾ ವಿಮಾನವೊಂದು ಭಾನುವಾರ ಅಸ್ಸಾಂನ ಜೋರ್ಹಟ್ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿದೆ ಎಂದು ಸೇನೆಯ ವಕ್ತಾರರು ತಿಳಿಸಿದ್ದಾರೆ.

ತಾಂತ್ರಿಕ ದೋಷ ಕಾಣಿಸಿಕೊಂಡ ಪರಿಣಾಮ ತುರ್ತು ಭೂಸ್ಪರ್ಶ ಮಾಡಲಾಗಿದೆ. ಮೃತದೇಹಗಳನ್ನು ಜೋರ್ಹಟ್ ವಿಮಾನ ನಿಲ್ದಾಣದಲ್ಲಿರಿಸಿ, ಸೋಮವಾರ ಕೊಂಡೊಯ್ಯಲಾಗುವುದು ಎಂದಿದ್ದಾರೆ.

ಮಣಿಪುರದ ಚುರಚಾಂದ್‌ಪುರ ಜಿಲ್ಲೆಯಲ್ಲಿ ನಡೆದ ದಾಳಿಯಲ್ಲಿ ನಾಲ್ವರು ಯೋಧರು, ಸೇನಾಧಿಕಾರಿ ವಿಪ್ಲವ್ ತ್ರಿಪಾಠಿ, ಅವರ ಪತ್ನಿ ಮತ್ತು ಮಗ ಸೇರಿದಂತೆ 7 ಮಂದಿ ಮೃತಪಟ್ಟಿದ್ದರು.

ಡಾ.ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಚಿರಂಜೀವಿ ಸಿಂಗ್ ಅವರು ‘ಹೋಗಿಬನ್ನಿ ಋತುಗಳೇ’ ಕೃತಿ ಬಿಡುಗಡೆ ಮಾಡಿದರು. (ಎಡದಿಂದ) ಖಲೀಲ್–ಉರ್–ರೆಹಮಾನ್, ಎಚ್.ಎಸ್. ಶಿವಪ್ರಕಾಶ್, ಅಜಯ್ ಕುಮಾರ್ ಸಿಂಗ್, ಎಚ್.ಎಲ್ .ಪುಷ್ಪಾ ಇದ್ದರು –ಪ್ರಜಾವಾಣಿ ಚಿತ್ರ

ಕನ್ನಡದಂತೆ ಗಟ್ಟಿತನದ ಕಾವ್ಯ ಬೇರೆ ಭಾಷೆಯಲ್ಲಿಲ್ಲ: ಚಿರಂಜೀವಿ ಸಿಂಗ್

ಬೆಂಗಳೂರು: ‘ವಿವಿಧ ಭಾರತೀಯ ಭಾಷೆಗಳ ಸಾಹಿತ್ಯ ಅಭ್ಯಸಿಸಿದ್ದೇನೆ. ಕನ್ನಡ ಭಾಷೆಯಲ್ಲಿ ಇರುವಂತಹ ಕಾವ್ಯದ ಗಟ್ಟಿತನ ಬೇರೆ ಭಾಷೆಯಲ್ಲಿ ಕಾಣಸಿಗುವುದಿಲ್ಲ’ ಎಂದು ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್ ತಿಳಿಸಿದರು.

ಡಾ.ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಎಚ್.ಎಸ್. ಶಿವಪ್ರಕಾಶ್ ಅವರ ‘ಹೋಗಿ ಬನ್ನಿ ಋತುಗಳೇ’ ಕೃತಿ ಬಿಡುಗಡೆ ಮಾಡಿದ ಅವರು, ‘ಶಿವಪ್ರಕಾಶ್ ಪುಸ್ತಕದಲ್ಲಿ ದೃಷ್ಟಿ ವಿಶಾಲತೆ, ಪ್ರಶ್ನಿಸುವಿಕೆಯನ್ನು ಕಾಣಬಹುದು. ಜಾಗತಿಕ ಸಾಹಿತ್ಯಕ್ಕೆ ಇದು ದೊಡ್ಡ ಕೊಡುಗೆ ಆಗಲಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಿವೃತ್ತ ಡಿಜಿಪಿ ಅಜಯ್ ಕುಮಾರ್ ಸಿಂಗ್, ‘ಶಿವಪ್ರಕಾಶ್ ಅವರೊಂದಿಗಿನ ಒಡನಾಟದಿಂದ ವಚನ ಸಾಹಿತ್ಯವನ್ನು ಹಿಂದಿ ಭಾಷೆಗೆ ಅನುವಾದ ಮಾಡುವ ಅಕಾಶ ಸಿಕ್ಕಿತ್ತು. ಅವರ ಕಾವ್ಯದಲ್ಲಿ ವೈವಿಧ್ಯತೆಯನ್ನು ಕಾಣಬಹುದಾಗಿದ್ದು, ವಿಷಯ, ಭಾಷೆ, ಶೈಲಿ ಮತ್ತು ಶಬ್ದ ವಿನ್ಯಾಸದಲ್ಲಿ ಹೊಸತನವಿದೆ. ಭಾರತೀಯ ಸಾಹಿತ್ಯದ ಸೌಂದರ್ಯವನ್ನು ಅವರು ಹೆಚ್ಚು ಮಾಡಿದ್ದಾರೆ’ ಎಂದು ಹೇಳಿದರು.

ಕವಿ ಖಲೀಲ್–ಉರ್–ರೆಹಮಾನ್, ‘ಕಾವ್ಯವು ಎಲ್ಲಕ್ಕಿಂತ ಮಿಗಿಲಾದ ಕಲೆಯಾಗಿದೆ. ಅದನ್ನು ಸೃಷ್ಟಿಸುವಾಗ ಅಪಾರ ಜ್ಞಾನ ಹಾಗೂ ಭಾಷೆಯ ಮೇಲೆ ಹಿಡಿತ ಅಗತ್ಯ. ಶಿವಪ್ರಕಾಶ್ ಅವರಿಗೆ ಸಮಾಜದ ಬಗ್ಗೆ ಇರುವ ಕಾಳಜಿಯನ್ನು ಪುಸ್ತಕದಲ್ಲಿ ಕಾಣಬಹುದಾಗಿದೆ. ಜಗತ್ತಿನ ವಿವಿಧ ಭಾಷೆಗಳಿಗೆ ಅನುವಾದಗೊಳ್ಳಲು ಈ ಕೃತಿ ಅರ್ಹ’ ಎಂದರು.

ಕೃತಿಯಬಗ್ಗೆಮಾತನಾಡಿದ ಕವಯತ್ರಿಎಚ್.ಎಲ್. ಪುಷ್ಪಾ, ‘ನಿರಂತರ ಹುಡುಕಾಟ ಕೃತಿಯಲ್ಲಿ ಕಾಣಬಹುದಾಗಿದೆ. ಪ್ರಶ್ನೆಗಳೇ ಕವಿತೆಯ ಮೂಲವಾಗಿದ್ದು, ಮತ್ತೆ ಮತ್ತೆ ಕಾಡುತ್ತಾ ಇರುತ್ತವೆ’ ಎಂದರು.

Inspired by our Glorious Heritage
SAMPOORN Empowering Artisans
ಸಂತೆ Santhe®
'back to nature' ... edition xxvii
Celebrating theme nature
Crafts | Textiles | Home | Jewelry
Mix of established Craft Groups & NGOs, New Artisans & Designers
@
The United Theological College
63, Millers Road, Jayamahal, Benson Town, Bangalore-560046
12th to 21st November 2021
11.00 a.m. to 7.30 p.m.
ALL COVID-19 PROTOCOLS OBSERVED
YOUR SAFETY IS OUR PRIORITY
visit us at : www.sampoorn.org
Mob : 9845597553 / 9480337734
Regd. with : O/o. The Development Commissioner, (H), Min. of Textiles, Govt. of India
©Copyright protected

ಕಾಂಗ್ರೆಸ್ ಸದಸ್ಯತ್ವ ನೋಂದಣಿ ಅಭಿಯಾನದಲ್ಲಿ ರಣದೀಪ್ ಸಿಂಗ್ ಸುರ್ಜೆವಾಲ ಪ್ರತಿಪಾದನೆ

‘ದೇಶ ಆಳುತ್ತಿರುವ ಪ್ರಧಾನಿ ಗೆಳೆಯರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇಂದು ಸಂವಿಧಾನದ ಮೇಲೆ ದಾಳಿಯಾಗುತ್ತಿದೆ. ಹಿರಿಯ ನಾಯಕರ ತತ್ವ, ನೀತಿ, ಮೌಲ್ಯಗಳು ಅಪಾಯಕ್ಕೆ ಸಿಲುಕಿವೆ. ಪರಿಶಿಷ್ಟರು, ಶೋಷಿತರು, ಆದಿವಾಸಿಗಳು, ಅಲ್ಪಸಂಖ್ಯಾತರು, ಮಹಿಳೆಯರ ಹಕ್ಕು ಕಸಿಯಲಾಗುತ್ತದೆ. ಅದರ ರಕ್ಷಣೆಗಾಗಿ ಈ ದೇಶಕ್ಕೆ ಕಾಂಗ್ರೆಸ್ ಅಗತ್ಯವಾಗಿದೆ’ ಎಂದು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ಪ್ರತಿಪಾದಿಸಿದರು.

ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಕಾಂಗ್ರೆಸ್ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಚಾಲನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಪ್ರತಿ ಮಹಿಳೆ, ಯುವಕರು, ಪರಿಶಿಷ್ಟರು, ಬಡವರು, ಹಿಂದುಳಿದವರನ್ನು ತಲುಪುವ ಉದ್ದೇಶದಿಂದ ಈ ಅಭಿಯಾನ ಕೈಗೊಂಡಿದ್ದೇವೆ’ ಎಂದರು.

ಕಾಂಗ್ರೆಸ್ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಚಾಲನೆ ಕಾರ್ಯಕ್ರಮದಲ್ಲಿ ವೀರಪ್ಪ ಮೊಯಿಲಿ, ಸಿದ್ದರಾಮಯ್ಯ, ರಣದೀಪ್ ಸಿಂಗ್ ಸುರ್ಜೇವಾಲ, ಡಿ.ಕೆ. ಶಿವಕುಮಾರ್, ಸಲೀಂ ಅಹ್ಮದ್ ಇದ್ದರು –ಪ್ರಜಾವಾಣಿ ಚಿತ್ರ

‘ಅಧಿಕಾರದಲ್ಲಿರುವ ಕೆಲವು ದುಷ್ಟ ಶಕ್ತಿಗಳ ದಾಳಿಯಿಂದ ಕೆಲವರ ಬಳಿ ಮಾತ್ರ ಹಕ್ಕು, ಅಧಿಕಾರ ಉಳಿಯಲಿದೆ. ಉದ್ಯಮಿಗಳು, ಪ್ರಧಾನಿ ನರೇಂದ್ರ ಮೋದಿ ಗೆಳೆಯರು ಈ ದೇಶ ಆಳುತ್ತಾರೆ. ನಾವೆಲ್ಲರೂ ಅವರ ಹಿತಾಸಕ್ತಿಗೆ ಬಲಿಯಾಗಬೇಕಾಗುತ್ತದೆ. ಹೀಗಾಗಿ, ಕಾಂಗ್ರೆಸ್ ಅನಿವಾರ್ಯವಾಗಿದೆ’ ಎಂದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ‘ಬಿಜೆಪಿಯವರಿಗೆ ಭ್ರಷ್ಟಾಚಾರ ಎಂಬುದು ನೀರು ಕುಡಿದಷ್ಟು ಸಲೀಸಾಗಿದೆ. ಹಣ, ಅಧಿಕಾರ ಇದ್ದರೆ ಏನನ್ನು ಬೇಕಾದರೂ ಮಾಡಬಹುದು ಎಂಬುದು ಅವರ ಧೋರಣೆ. ಇಂಥ ಬಿಜೆಪಿಯನ್ನು 2023ರ ಚುನಾವಣೆಯಲ್ಲಿ ಅಧಿಕಾರದಿಂದ ಕಿತ್ತೊಗೆಯಬೇಕು’ ಎಂದರು.

‘ಕೋಮುವಾದಿ ಬಿಜೆಪಿಯಿಂದ ದೇಶದ ಒಗ್ಗಟ್ಟು, ಏಕತೆ ಉಳಿಸಲು ಸಾಧ್ಯವಿಲ್ಲ. ಹೀಗಾಗಿ ಕಾಂಗ್ರೆಸ್‌ಗೆ ಹೊಸ ರಕ್ತ ಬರಬೇಕು, ಹೊಸ ಚಿಂತನೆಗಳು ಬರಬೇಕು, ಬದ್ಧತೆ ಬರಬೇಕು. ಇದಕ್ಕಾಗಿ ಹೊಸಬರನ್ನು ಪಕ್ಷಕ್ಕೆ ಸೇರಿಸಬೇಕು. ಪರಿಶಿಷ್ಟರು, ಹಿಂದುಳಿದವರು, ಅಲ್ಪಸಂಖ್ಯಾತರು, ಮಹಿಳೆಯರು, ರೈತರು, ಕಾರ್ಮಿಕರು, ವಿದ್ಯಾರ್ಥಿಗಳು, ಯುವ ಜನರು ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ ಸೇರಬೇಕು’ ಎಂದರು.

‘ನೈಜ ಸದಸ್ಯತ್ವಕ್ಕೆ ಮಾತ್ರ ಗಮನ ನೀಡಬೇಕು. ಎಲ್ಲೋ ಕುಳಿತು ಸದಸ್ಯರ ಹೆಸರು ಬರೆದುಕೊಂಡು ಬರದೆ, ಪ್ರತಿ ಮನೆಗೆ ತೆರಳಿ ಐದು ರೂಪಾಯಿ ಪಡೆದು, ಪಕ್ಷದ ಬಗ್ಗೆ ಅರಿವು ಮೂಡಿಸಿ, ಪಕ್ಷಕ್ಕೆ ಕರೆತರುವ ಕೆಲಸ ಮಾಡಬೇಕು’ ಎಂದು ಸೂಚಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ‘ನೀವೆಲ್ಲ ಕಬ್ಬಿಣದಂತೆ. ಕಬ್ಬಿಣದಲ್ಲಿ ಕತ್ತರಿ ಮಾಡಬಹುದು. ಸೂಜಿಯನ್ನೂ ಮಾಡಬಹುದು. ಬಿಜೆಪಿಯವರು ಈ ದೇಶ ಹಾಗೂ ಸಮಾಜವನ್ನು ತುಂಡರಿಸುವ ಕತ್ತರಿಯಂತೆ ಕೆಲಸ ಮಾಡುತ್ತಿದ್ದಾರೆ. ನಾವು ಸೂಜಿಯಂತೆ ಸಮಾಜವನ್ನು ಒಂದು ಮಾಡೋಣ’ ಎಂದು ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದರು.

‘ಕನಿಷ್ಠ 50 ಲಕ್ಷ ಸದಸ್ಯರನ್ನು ಮಾಡುವ ಗುರಿ ಹೊಂದಬೇಕು. ಯುವ ಕಾಂಗ್ರೆಸ್, ಮಹಿಳಾ ಕಾಂಗ್ರೆಸ್ ಹಾಗೂ ಇತರ ಘಟಕಗಳು ತಲಾ 1 ಲಕ್ಷ ಸದಸ್ಯತ್ವ ಮಾಡಬೇಕು. ಮನೆ, ಮನೆಗೂ ತೆರಳಿ ಹೃದಯ ಗೆಲ್ಲಬೇಕು’ ಎಂದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ಮುಖಂಡ ವೀರಪ್ಪ ಮೊಯಿಲಿ ಇದ್ದರು. ಆರಂಭದಲ್ಲಿ ಜವಾಹರಲಾಲ್ ನೆಹರೂ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

‘ಡೀಕೆ… ಡೀಕೆ…’; ‘ಹೌದು ಹುಲಿಯಾ’

‘ಡೀಕೆ… ಡೀಕೆ…’ ಎಂದು ಕೂಗಿದ ಕಾರ್ಯಕರ್ತರ ವಿರುದ್ಧ ಗರಂ ಆದ ಡಿ.ಕೆ. ಶಿವಕುಮಾರ್, ‘ಹೀಗೆ ಕೂಗುವವರು ಹೊರಗೆ ಹೋಗಿ. ಯಾವ ಡೀಕೆ..?’ ಎಂದು ಗದರಿದರು. ‘ನೀವು ಪಕ್ಷಕ್ಕೆ ದ್ರೋಹ ಮಾಡುತ್ತಿದ್ದೀರಿ. ವ್ಯಕ್ತಿ ಪೂಜೆ ಮಾಡಬೇಡಿ. ಇಲ್ಲಿ ಯಾವ ಹೆಸರೂ ಇರಬಾರದು. ಕೇವಲ ಕಾಂಗ್ರೆಸ್ ಎಂಬುದೊಂದೇ ಇರಬೇಕು’ ಎಂದರು.

‘ಕೋವಿಡ್ ಬಂದಾಗ ಚಪ್ಪಾಳೆ ತಟ್ಟಿ, ಗಂಟೆ ಹೊಡಿರಿ, ಜಾಗಟೆ ಬಾರಿಸಿ, ದೀಪ ಹಚ್ಚಿ ಎಂದು ಮೋದಿ ಹೇಳಿದರು. ಇವರಿಗಿಂತ ಮೌಢ್ಯದ ಪ್ರತಿಪಾದಕ ಇನ್ನೊಬ್ಬರಿಲ್ಲ’ ಎಂದು ಸಿದ್ದರಾಮಯ್ಯ ಹೇಳಿದಾಗ, ಕಾರ್ಯಕರ್ತನೊಬ್ಬ ‘ಹೌದು ಹುಲಿಯಾ’ ಎಂದು ಕೂಗಿದ್ದು ಕೇಳಿಸಿತು.

ಸುದ್ದಿ 2 ನಿಮಿಷ

ಕಾಂಗ್ರೆಸ್ಸಿನದು ಹುಳಿ ಹಿಂಡುವ ರಾಜಕಾರಣ: ಪಾಟೀಲ ಟೀಕೆ

ಬೆಂಗಳೂರು: ‘ಬಿಟ್ ಕಾಯಿನ್ ಹೆಸರಿನಲ್ಲಿ ಕಾಂಗ್ರೆಸ್ ನಾಯಕರು ರಾಜ್ಯ ಸರ್ಕಾರದ ಮೇಲೆ ಗೂಬೆ ಕೂರಿಸಲು ಹವಣಿಸುತ್ತಿದ್ದಾರೆ’ ಎಂದು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಆರೋಪಿಸಿದ್ದಾರೆ.

‘ಭ್ರಷ್ಟಾಚಾರಕ್ಕೆ ಆಸ್ಪದ ಇಲ್ಲದಂತೆ ಜನಪರ ಆಡಳಿತ ನೀಡುತ್ತಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಕಾರ್ಯವೈಖರಿ ಕಂಡು ಕಾಂಗ್ರೆಸಿಗರು ಹತಾಶರಾಗಿದ್ದಾರೆ’ ಎಂದಿದ್ದಾರೆ.

‘ಈ ಹಗರಣದ ಮಾಹಿತಿಯನ್ನು ಬಿಜೆಪಿ ನಾಯಕರೇ ತಮಗೆ ನೀಡುತ್ತಿದ್ದಾರೆ ಎಂದು ಕಾಂಗ್ರೆಸ್‌ನ ಮುಖಂಡರೊಬ್ಬರು ಹೇಳುವ ಮೂಲಕ ತನಿಖೆಯ ಹಾದಿ ತಪ್ಪಿಸಲು ಮತ್ತು ಬಿಜೆಪಿಯಲ್ಲಿ ಹುಳಿ ಹಿಂಡಿ ಒಡಕು ಸೃಷ್ಟಿಸಲು ಹವಣಿಸಿದ್ದಾರೆ. ಈ ವಿಚಾರದಲ್ಲಿ ವಿವಾದ ಸೃಷ್ಟಿಸಿ ರಾಜಕೀಯ ದುರ್ಲಾಭ ಪಡೆದುಕೊಳ್ಳಬಹುದು ಎಂಬ ಹಗಲುಗನಸು ಕಾಣುತ್ತಿರುವ ಕಾಂಗ್ರೆಸ್ ನಾಯಕರಿಗೆ ಇದೇ ಪ್ರಕರಣ ಮುಂದಿನ ದಿನಗಳಲ್ಲಿ ತಿರುಗುಬಾಣವಾಗಲಿದೆ’ ಎಂದು ಪ್ರತಿಕ್ರಿಯಿಸಿದ್ದಾರೆ.

‘ಬಿಜೆಪಿಯಲ್ಲಿ ಆಂತರಿಕ ಒಗ್ಗಟ್ಟು ಗಟ್ಟಿಯಾಗಿದೆ. ಕಾಂಗ್ರೆಸ್ಸಿನಂತೆ, ‘ಒಂದು ಮನೆ ಹಲವು ಬಾಗಿಲು’ ಎಂಬಂಥ ಪರಿಸ್ಥಿತಿ ಇಲ್ಲ. ಈ ಹಗರಣ ಕೆಲವು ಕಾಂಗ್ರೆಸ್ ಮುಖಂಡರ ಕಾಲಿಗೆ ಈಗಾಗಲೇ ಸುತ್ತಿಕೊಂಡಿರುವುದು ಬಹಿರಂಗವಾಗಿದ್ದರೂ, ಸ್ವತಃ ಗಾಜಿನ ಮನೆಯಲ್ಲಿ ಕುಳಿತು ಕಲ್ಲು ಹೊಡೆಯುವ ದುಸ್ಸಾಹಸಕ್ಕೆ ಇಳಿದಿರುವುದು ವಿಚಿತ್ರ’ ಎಂದು ಟೀಕಿಸಿದ್ದಾರೆ.

ಬಸ್ಸಿಗೆ ಗುದ್ದಿದ ಕಾರು; ಯುವಕ ಸಾವು

ಬೆಂಗಳೂರು: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ವೋಲ್ವೊ ಬಸ್ ಹಾಗೂ ಕಾರಿನ ನಡುವೆ ಸಂಭವಿಸಿದ ಅಪಘಾತದಲ್ಲಿ ಭವಿನ್ ಶರ್ಮಾ (23) ಎಂಬುವರು ಮೃತಪಟ್ಟಿದ್ದಾರೆ.

‘ಮುಂಬೈನ ಭವಿನ್, ಕಾರಿನಲ್ಲಿ ವಿಮಾನ ನಿಲ್ದಾಣಕ್ಕೆ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ. ಕಾರಿನ ಚಾಲಕ ರವಿಕುಮಾರ್ (34) ಹಾಗೂ ಇನ್ನೊಬ್ಬ ಪ್ರಯಾಣಿಕ ಆಕಾಶ್ ಸಿಂಗ್ (24) ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದು ಚಿಕ್ಕಜಾಲ ಸಂಚಾರ ಠಾಣೆ ಪೊಲೀಸರು ಹೇಳಿದರು.

‘ಆಗ ತಾನೇ ಕರ್ತವ್ಯಕ್ಕೆ ಹಾಜರಾಗಿದ್ದ ಬಿಎಂಟಿಸಿ ಸಿಬ್ಬಂದಿ, ವಿಮಾನ ನಿಲ್ದಾಣ ಮಾರ್ಗದ ವೋಲ್ವೊ ಬಸ್ ತೆಗೆದುಕೊಂಡು ಚಿಕ್ಕಜಾಲ ಮೇಲ್ಸೇತುವೆ ಬಳಿ ರಾತ್ರಿ 11.45ರ ಸುಮಾರಿಗೆ ಹೊರಟಿದ್ದರು. ಬಸ್ಸಿನಲ್ಲಿ ಪ್ರಯಾಣಿಕರು ಇರಲಿಲ್ಲ. ವೇಗವಾಗಿ ಕಾರು ಚಲಾಯಿಸಿಕೊಂಡು ಬಂದಿದ್ದ ರವಿಕುಮಾರ್, ವೋಲ್ವೊ ಬಸ್ಸಿನ ಹಿಂಭಾಗಕ್ಕೆ ವಾಹನವನ್ನು ಗುದ್ದಿಸಿದ್ದ. ಇದರಿಂದಾಗಿ ಕಾರು ಜಖಂಗೊಂಡಿತ್ತು. ಮುಂದಿನ ಆಸನದಲ್ಲಿ ಕುಳಿತಿದ್ದ ಭವಿನ್, ತೀವ್ರ ಗಾಯಗೊಂಡು ಮೃತಪಟ್ಟರು’ ಎಂದು ತಿಳಿಸಿದರು.

ಮಹಿಳಾ ದೌರ್ಜನ್ಯಗಳ ಬಗ್ಗೆ ಶಿಬಿರದಲ್ಲಿ ಚರ್ಚೆ

ಬೆಂಗಳೂರು: ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ ಬೆಂಗಳೂರು ಜಿಲ್ಲಾ ಸಮಿತಿ ವತಿಯಿಂದ ನಗರದ ಮತ್ತಿಕೆರೆ ಜ್ಞಾನತೇಜ ಶಾಲೆಯಲ್ಲಿ ಮಹಿಳಾ ಶಿಬಿರವನ್ನು ಭಾನುವಾರ ಹಮ್ಮಿಕೊಳ್ಳಲಾಗಿತ್ತು.

ಗೃಹಿಣಿಯರು, ಆಶಾ ಕಾರ್ಯಕರ್ತೆಯರು, ಮನೆಗೆಲಸದ ಹೆಣ್ಣುಮಕ್ಕಳು, ವಿದ್ಯಾರ್ಥಿನಿಯರು ಸೇರಿದಂತೆ ಎಲ್ಲ ವರ್ಗದ ಮಹಿಳೆಯರು ಶಿಬಿರದಲ್ಲಿ ಭಾಗವಹಿಸಿದ್ದರು.

ಕೋವಿಡ್ ಹಾಗೂ ಮಹಿಳೆ, ಬೆಲೆ ಏರಿಕೆ, ಮಹಿಳಾ ದೌರ್ಜನ್ಯ ಹಾಗೂ ಪರಿಹಾರ ಮುಂತಾದ ವಿಷಯಗಳ ಕುರಿತು ಚರ್ಚೆ ನಡೆಯಿತು. ಸಿನಿಮಾ ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮ- ಹಾಗೂ ಕ್ರೀಡೆ ಮುಂತಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು.

ಸಂಘಟನೆಯ ರಾಜ್ಯ ಕಾರ್ಯದರ್ಶಿ ಎಸ್.ಶೋಭಾ,‘ಕೋವಿಡ್ ನಂತರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ಮಾನಸಿಕ ಬಲವನ್ನು ಹೆಚ್ಚಿಸಿಕೊಳ್ಳುತ್ತಾ ಸಮಸ್ಯೆಗಳ ವಿರುದ್ಧ ಹೋರಾಡಬೇಕು’ ಎಂದರು.

ರಾಜ್ಯ ಘಟಕದ ಅಧ್ಯಕ್ಷೆ ಬಿ.ಆರ್.ಅಪರ್ಣ, ‘ಸಾವಿತ್ರಿಬಾಯಿ ಫುಲೆ, ವಿದ್ಯಾಸಾಗರರ ಆದರ್ಶಗಳು ನಮ್ಮ ಮುಂದಿವೆ. ನಾವು ಸಂಘಟಿತರಾದರೆ, ಉತ್ತಮ ಸಮಾಜ ನಿರ್ಮಿಸಲು ಸಾಧ್ಯ’ ಎಂದು ಹೇಳಿದರು.

ಕಪ್ಪು ಪಟ್ಟಿ ಧರಿಸಿ ಮೌನ ಪ್ರತಿಭಟನೆ • ತಾಯಿ ಸಂಸ್ಥೆಗೆ ನ್ಯಾಯ ಒದಗಿಸಲು ಆಗ್ರಹ

ಸುಚಿತ್ರಾ ಫಿಲ್ಮ್ ‘ಸೊಸೈಟಿ’ ಹಕ್ಕು ಕಸಿದ ‘ಅಕಾಡೆಮಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸುಚಿತ್ರಾ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿಯು ಸುಚಿತ್ರ ಫಿಲ್ಮ್ ಸೊಸೈಟಿಯ ಹಕ್ಕು ಕಸಿದುಕೊಳ್ಳುತ್ತಿದ್ದು, ತಾಯಿ ಸಂಸ್ಥೆಗೆ ಅನ್ಯಾಯವಾಗುತ್ತಿದೆ’ ಎಂದು ಆರೋಪಿಸಿ ಸೊಸೈಟಿ ಸದಸ್ಯರು ನಗರದಲ್ಲಿ ಮೌನ ಪ್ರತಿಭಟನೆ ನಡೆಸಿದರು.

ಬನಶಂಕರಿ ಎರಡನೇ ಹಂತದಲ್ಲಿರುವ ಸುಚಿತ್ರಾ ಕಟ್ಟಡದ ಎದುರು ಭಾನುವಾರ ಸೇರಿದ್ದ ಸದಸ್ಯರು, ಕಪ್ಪು ಪಟ್ಟಿ ಧರಿಸಿ ಅಸಮಾಧಾನ ವ್ಯಕ್ತಪಡಿಸಿದರು. ಸ್ಥಳೀಯ ಬನಶಂಕರಿ ಸೇವಾವೃದ್ಧಿ ಸಂಘದ ಸದಸ್ಯರು ಹಾಗೂ ಸಿನಿಮಾ ಪ್ರಿಯರು ಸಹ ಪ್ರತಿಭಟನೆಯಲ್ಲಿ ಭಾಗವಹಿಸಿದರು.

‘ಸುಚಿತ್ರಾ ಫಿಲ್ಮ್ ಸೊಸೈಟಿ ಸ್ಥಾಪನೆಯಾದ ನಂತರವೇ ಅಕಾಡೆಮಿ ಸ್ಥಾಪನೆ ಆಗಿದೆ. ಅಕಾಡೆಮಿಗೆ ಸೊಸೈಟಿಯೇ ತಾಯಿ. ಆದರೆ, ಈಗ ತಾಯಿಯನ್ನೇ ಹೊರಗೆ ಹಾಕುವ ಪ್ರಯತ್ನಗಳು ನಡೆದಿವೆ. ನಮ್ಮ ಸ್ಥಾನ ಹಾಗೂ ಹಕ್ಕಿಗಾಗಿ ಪ್ರತಿಭಟನೆ ನಡೆಸಬೇಕಾದ ಅನಿವಾರ್ಯತೆ ಬಂದಿದೆ’ ಎಂದು ಸೊಸೈಟಿ ಅಧ್ಯಕ್ಷರೂ ಆದ ನಿರ್ದೇಶಕ ಬಿ. ಸುರೇಶ್ ಹೇಳಿದರು.

‘ಸುಚಿತ್ರಾ ಫಿಲ್ಮ್ ಸೊಸೈಟಿಗೆ ಅನ್ಯಾಯವಾಗುತ್ತಿದೆ’ ಎಂದು ಆರೋಪಿಸಿ ಸೊಸೈಟಿ ಸದಸ್ಯರು ನಗರದಲ್ಲಿ ಭಾನುವಾರ ಮೌನ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

‘ಸಿನಿಮಾ ಆಸಕ್ತರು ಸೇರಿಕೊಂಡು ಚಾಮರಾಜಪೇಟೆಯ ಕೊಠಡಿಯೊಂದರಲ್ಲಿ 1971ರಲ್ಲಿ ಸೊಸೈಟಿ ಆರಂಭಿಸಿದರು. ಸೊಸೈಟಿ ಕೆಲಸ ಗುರುತಿಸಿದ್ದ ಸರ್ಕಾರ, ಸಿನಿಮಾ ಪ್ರದರ್ಶನಕ್ಕೆ ಅನುಕೂಲವಾಗಲೆಂದು ಬನಶಂಕರಿಯಲ್ಲಿ ನಾಗರಿಕ ಸೌಲಭ್ಯ (ಸಿಎ) ನಿವೇಶನ ನೀಡಿತ್ತು. ನಿವೇಶನ ನೋಡಿಕೊಳ್ಳಲು ಟ್ರಸ್ಟ್ ಬೇಕೆಂದು ಸರ್ಕಾರ ಹೇಳಿತ್ತು. ಅದೇ ಕಾರಣಕ್ಕೆ 1979ರಲ್ಲಿ ಸುಚಿತ್ರಾ ಸಿನಿಮಾ ಅಕಾಡೆಮಿ ಸ್ಥಾಪಿಸಲಾಯಿತು.’

‘ಸೊಸೈಟಿ ಸದಸ್ಯರೇ ಅಕಾಡೆಮಿಗೂ ಸದಸ್ಯರಾಗಿದ್ದರು. ಸಿನಿಮಾ ಪ್ರದರ್ಶನ ಮಾತ್ರವಲ್ಲದೇ ಸಾಂಸ್ಕೃತಿಕ ಚಟುವಟಿಕೆಗಳಿಗೂ ವೇದಿಕೆಯಾಗಿತ್ತು. ಹೀಗಾಗಿ, ಸುಚಿತ್ರಾ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ ಎಂಬುದಾಗಿ ಹೆಸರು ಬದಲಾಯಿಸಲಾಯಿತು. ಅಕಾಡೆಮಿ ಆಡಳಿತಾತ್ಮಕ ವೆಚ್ಚವನ್ನೂ ಸೊಸೈಟಿಯಿಂದಲೇ ಭಾಗಶಃ ಭರಿಸಲಾಗುತ್ತಿತ್ತು’ ಎಂದೂ ಸುರೇಶ್ ತಿಳಿಸಿದರು.

‘ಪುರವಂಕರ ಸಂಸ್ಥೆ ಜೊತೆ 2015ರಲ್ಲಿ ಒಪ್ಪಂದ ಮಾಡಿಕೊಂಡು ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಪಡೆದು ಕಟ್ಟಡ ನವೀಕರಣ ಮಾಡಲಾಗಿತ್ತು. ಇದೇ ನೆಪದಲ್ಲಿ ಅಕಾಡೆಮಿ ಹೆಸರಿನ ಮುಂದೆ ಪುರವಂಕರ ಹೆಸರು ಸೇರಿಸಲಾಗಿದೆ. ಸೊಸೈಟಿ ಅಧ್ಯಕ್ಷರನ್ನು ಆಹ್ವಾನಿತರೆಂದು ಹೇಳಿ ಡೀಡ್ ಸಹ ಬದಲಾಯಿಸಲಾಗಿದೆ’ ಎಂದೂ ಅವರು ಆರೋಪಿಸಿದರು.

ಬಾಡಿಗೆ ಹೆಚ್ಚಳ: ‘ಸುಚಿತ್ರಾ ಕಟ್ಟಡದ ಪ್ರಾಂಗಣದಲ್ಲಿ ಸುಚಿತ್ರಾ ಫಿಲ್ಮ್ ಸೊಸೈಟಿ ಕಚೇರಿ ಇದೆ. ಇದಕ್ಕೆ ತಿಂಗಳಿಗೆ ₹ 50 ಸಾವಿರ ಬಾಡಿಗೆ ಪಾವತಿಸುವಂತೆ ಅಕಾಡೆಮಿ ಹೇಳುತ್ತಿದೆ. ಕಟ್ಟಡದ ಸಭಾ ಭವನದ ಬಾಡಿಗೆಯನ್ನು ₹5 ಸಾವಿರ ದಿಂದ ₹10 ಸಾವಿರಕ್ಕೆ ಏರಿಸಲಾಗಿದೆ’ ಎಂದೂ ಸುರೇಶ್ ಮಾಹಿತಿ ನೀಡಿದರು.

‘ಸೊಸೈಟಿ ಅಧ್ಯಕ್ಷರನ್ನು ಟ್ರಸ್ಟ್‌ನ ಶಾಶ್ವತ ಸದಸ್ಯರನ್ನಾಗಿ ಮಾಡಬೇಕು. ಸೊಸೈಟಿ ಕಾರ್ಯಕಾರಿ ಸದಸ್ಯರೊಂದಿಗೆ ಚರ್ಚಿಸಿ ಬಾಡಿಗೆ ದರ ನಿಗದಿ ಮಾಡಬೇಕು. ಯಾವುದೇ ಅಡೆ-ತಡೆಗಳು ಇಲ್ಲದಂತೆ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಸೊಸೈಟಿಗೆ ಮುಕ್ತ ಅವಕಾಶ ಮಾಡಿಕೊಡಬೇಕು’ ಎಂದೂ ಅವರು ಒತ್ತಾಯಿಸಿದರು.

ಲೇಖಕಿ ವಿಜಯಮ್ಮ, ನಿರ್ದೇಶಕರಾದ ಗಿರೀಶ್ ಕಾಸರವಳ್ಳಿ, ಸುರೇಶ್ ಹೆಬ್ಳೀಕರ್, ಕಥೆಗಾರ ವಿವೇಕ ಶಾನಬಾಗ್ ಹಾಗೂ ಇತರರು ಪ್ರತಿಭಟನೆಯಲ್ಲಿದ್ದರು.

ಸಾಲದ ಹೊರೆ: ರೈತ ಮಹಿಳೆ ಆತ್ಮಹತ್ಯೆ

ಚಿಕ್ಕಜಾಜೂರು: ಸಮೀಪದ ಬಂಡೆಬೊಮ್ಮೇನಹಳ್ಳಿ ವಡ್ಡರಹಟ್ಟಿ ಗ್ರಾಮದಲ್ಲಿ ಭಾನುವಾರ ಸಾಲದ ಹೊರೆಯಿಂದ ರೈತ ಮಹಿಳೆಯೊಬ್ಬರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ರತ್ನಮ್ಮ (50) ಆತ್ಮಹತ್ಯೆ ಮಾಡಿಕೊಂಡವರು.

‘ಮುತ್ತುಗದೂರಿನ ಕರ್ನಾಟಕ ಗ್ರಾಮೀಣ ಬ್ಯಾಂಕ್‌ನಲ್ಲಿ ₹2 ಲಕ್ಷ, ಚಿತ್ರದುರ್ಗ ಜಿಲ್ಲಾ ಸಹಕಾರ ಬ್ಯಾಂಕ್‌ನಲ್ಲಿ ₹ 80 ಸಾವಿರ ಹಾಗೂ ಸ್ವಸಹಾಯ ಸಂಘಗಳಲ್ಲಿ ₹60 ಸಾವಿರ ಸೇರಿ ₹4 ಲಕ್ಷ ಸಾಲ ಇತ್ತು. ಈ ವರ್ಷವೂ ಬೆಳೆ ಹಾನಿಯಾಗುವ ಭೀತಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ಕುಟುಂಬದವರು ತಿಳಿಸಿದ್ದಾರೆ.

ಮಧುಮೇಹ ಕುರಿತು ಜಾಗೃತಿ ಮೂಡಿಸಲು ಬಿಬಿಎಂಪಿಯ ವಸಂತನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ಭಾನುವಾರ ಜಾಥಾ ನಡೆಯಿತು

ವಿಶ್ವ ಮಧುಮೇಹ ದಿನ: ಆರೋಗ್ಯ ಶಿಬಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಮಧುಮೇಹ ದಿನದ ಅಂಗವಾಗಿ ಬಿಬಿಎಂಪಿ ವಿವಿಧ ಆರೋಗ್ಯ ಕೇಂದ್ರಗಳಲ್ಲಿ, ಲಾಲ್‌ಬಾಗ್ ಮತ್ತು ಕಬ್ಬನ್ ಉದ್ಯಾನದಲ್ಲಿ ಸಾರ್ವಜನಿಕರಿಗೆ ಉಚಿತ ಆರೋಗ್ಯ ಶಿಬಿರಗಳನ್ನು ಭಾನುವಾರ ಏರ್ಪಡಿಸಲಾಯಿತು. ಈ ರೋಗ ನಿಯಂತ್ರಣದ ಕುರಿತು ಜಾಗೃತಿ ಮೂಡಿಸಲು ಜಾಥಾ ನಡೆಯಿತು.

ಉದ್ಯಾನಗಳಲ್ಲಿ ಮುಂಜಾನೆ ವಾಯು ವಿಹಾರಕ್ಕೆ ಬಂದವರು ನಡೆದ ಈ ಶಿಬಿರಗಳಲ್ಲಿ ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ವಿವಿಧ ಶಿಬಿರಗಳಲ್ಲಿ ಒಟ್ಟು 768 ಮಂದಿ ಆರೋಗ್ಯ ತಪಾಸಣೆಗೆ ಒಳಗಾಗಿದ್ದು, ಅವರಲ್ಲಿ 90 ಮಂದಿ ಮಧುಮೇಹ ಹೊಂದಿರುವುದು ಪತ್ತೆಯಾಗಿದೆ. ಈಗಾಗಲೇ ಮಧುಮೇಹ ಹೊಂದಿದ್ದ 71 ಮಂದಿ ರಕ್ತ ಪರೀಕ್ಷೆ ಮಾಡಿಸಿಕೊಂಡರು. ಆರೋಗ್ಯ ತಪಾಸಣೆ ಮಾಡಿಸಿಕೊಂಡ 27 ಮಂದಿ ಅಧಿಕ ರಕ್ತದೊತ್ತಡ ಹೊಂದಿರುವುದು ಕಂಡುಬಂದಿದೆ. ಈ ಹಿಂದೆಯೇ ಅಧಿಕ ರಕ್ತದೊತ್ತಡ ಹೊಂದಿದ್ದ 107 ಮಂದಿಯೂ ಮತ್ತೆ ತಪಾಸಣೆ ಮಾಡಿಸಿಕೊಂಡರು.



‘ಯುವಜನರ ದಿಕ್ಕು ತಪ್ಪಿಸುವ ಸರ್ಕಾರಗಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆ ಮತ್ತು ಅಸಮಾನತೆಗಳು ದೇಶದ ಜನಸಾಮಾನ್ಯರನ್ನು ಉಸಿರುಗಟ್ಟಿಸುವ ಮಟ್ಟಕ್ಕೆ ಬೆಳೆದಿವೆ. ಇವುಗಳನ್ನು ಪರಿಹರಿಸಬೇಕಿದ್ದ ಸರ್ಕಾರಗಳು ಲವ್ ಜಿಹಾದ್, ಅಯೋಧ್ಯೆ ಸೇರಿದಂತೆ ದಿನಕ್ಕೊಂದು ಅನವಶ್ಯಕ ವಿಚಾರಗಳ ಮೂಲಕ ಯುವಜನತೆಯ ದಿಕ್ಕು ತಪ್ಪಿಸುತ್ತಿವೆ’ ಎಂದು ರಾಷ್ಟ್ರೀಯ ಕಾನೂನು ಶಾಲೆಯ ಪ್ರಾಧ್ಯಾಪಕ ಬಾಬು ಮ್ಯಾಥ್ಯು ಹೇಳಿದರು.

ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಒ) ವತಿಯಿಂದ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಬೆಂಗಳೂರು ಜಿಲ್ಲಾ ಯುವಜನ ಸಮ್ಮೇಳನದಲ್ಲಿ ಅವರು ಮಾತನಾಡಿದರು.

‘ಬ್ರಿಟೀಷರ ಕಾಲದಿಂದಲೂ ನಾವು ಈ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಸ್ವಾತಂತ್ರ್ಯದ ನಂತರ ಇವು ಮತ್ತಷ್ಟು ಬಿಗಡಾಯಿಸುತ್ತಲೇ ಇದ್ದು, ಕಡಿಮೆಯಾಗಿಲ್ಲ. ಈ ಸಮಸ್ಯೆಗಳಿಗೆ ಇಂದಿನ ವ್ಯವಸ್ಥೆಯ ಚೌಕಟ್ಟಿನೊಳಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಿಲ್ಲ’ ಎಂದರು.

ಕಾರ್ಯಕ್ರಮದಲ್ಲಿ (ಎಡದಿಂದ) ಪ್ರೊ.ಬಾಬು ಮ್ಯಾಥ್ಯು, ಎಐಡಿವೈಒ ಬೆಂಗಳೂರು ಘಟಕದ ಅಧ್ಯಕ್ಷ ಕೃಷ್ಣ, ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ಎಂ.ಎನ್.ಶ್ರೀರಾಮ್ ಮತ್ತು ಎಐಡಿವೈಒನ ಜಿ.ಎಸ್.ಕುಮಾರ್ ಇದ್ದರು –ಪ್ರಜಾವಾಣಿ ಚಿತ್ರ

‘ನಮಗೆ ಹೊಸ ಚಿಂತನೆಯ ಅವಶ್ಯಕತೆ ಇದ್ದು, ಯುವಕರು ಇತಿಹಾಸ ಅರ್ಥಮಾಡಿಕೊಂಡು ದೇಶದ ಬದಲಾವಣೆಗೆ ಶ್ರಮಿಸಬೇಕು. ನಿರುದ್ಯೋಗ ಹಾಗೂ ಅಸಮಾನತೆ ಇರದಂತಹ ಸಮಾಜ ನಿರ್ಮಾಣಕ್ಕೆ ಪ್ರಯತ್ನಿಸಬೇಕು’ ಎಂದು ಹೇಳಿದರು.

ಎಸ್‌ಯುಸಿಐ(ಸಿ) ಪಕ್ಷದ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಎಂ.ಎನ್.ಶ್ರೀರಾಮ್, ‘ದೇಶದ ಕೆಲವೇ ಜನ ತಮ್ಮ ಆಸ್ತಿಯನ್ನು ಒಂದೇ ವರ್ಷದಲ್ಲಿ ದುಪ್ಪಟ್ಟು ಮಾಡಿಕೊಂಡಿದ್ದಾರೆ. ಇದಕ್ಕೆ ಸರ್ಕಾರದ ನೀತಿಗಳೇ ಪ್ರಮುಖ ಕಾರಣ’ ಎಂದು ದೂರಿದರು.

ಎಐಡಿವೈಒ ರಾಜ್ಯ ಕಾರ್ಯದರ್ಶಿ ಜಿ.ಎಸ್.ಕುಮಾರ್, ‘ದೇಶದಲ್ಲಿ ಇಂದು ಅತ್ಯಂತ ನಿಷ್ಕರುಣಿ ಸರ್ಕಾರ ಇದೆ. ಒಂದು ವರ್ಷದಿಂದ ನಡೆಯುತ್ತಿರುವ ಕೃಷಿಕರ ಹೋರಾಟದಲ್ಲಿ ನೂರಾರು ಜನ ಪ್ರಾಣ ತ್ಯಾಗ ಮಾಡಿದ್ದರೂ ಈ ಸರ್ಕಾರ ತನ್ನ ಮೊಂಡುತನ ಬಿಡುತ್ತಿಲ್ಲ. ಸರ್ಕಾರಕ್ಕೆ ತನ್ನ ಘನತೆಗೆ ಧಕ್ಕೆಯಾಗುತ್ತದೆ ಎಂಬ ಚಿಂತೆಯಿತ್ತೇ ಹೊರತು ಜನರ ಪ್ರಾಣದ ಬಗ್ಗೆ ಅಲ್ಲ’ ಎಂದರು.

ಸಮ್ಮೇಳನದಲ್ಲಿ 41 ಜನರ ಹೊಸ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಲಾಯಿತು. ವಿನಯ್ ಸಾರಥಿ ನೂತನ ಜಿಲ್ಲಾಧ್ಯಕ್ಷರಾಗಿ, ಜಯಣ್ಣ ಜಿಲ್ಲಾ ಕಾರ್ಯದರ್ಶಿಯಾಗಿ ಆಯ್ಕೆಯಾದರು.



ವಜ್ರದ ಉಂಗುರ ಕಳವು: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಬೈಲ್ ಅಂಗಡಿ ಹಾಗೂ ವಿಶ್ವನಾಥಪುರ ಬಳಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ನಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಮಂಜುನಾಥ್ (34) ಎಂಬಾತನನ್ನು ಅನ್ನಪೂರ್ಣೇಶ್ವರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಬಂಧಿತ ಮಂಜುನಾಥ್, ನಗರದ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ ಸೆಕ್ಯುರಿಟಿ ಸಿಬ್ಬಂದಿ ಆಗಿ ಕೆಲಸ ಮಾಡುತ್ತಿದ್ದ. ಆತನಿಂದ ₹22.30 ಲಕ್ಷ ಮೌಲ್ಯದ 3 ವಜ್ರದ ಉಂಗುರಗಳು ಹಾಗೂ ಎರಡು ಮೊಬೈಲ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಸುಲ್ತಾನ್‌ಪೇಟೆಯ ಮಂಜುನಾಥ್, ಅನ್ನಪೂರ್ಣೇಶ್ವರಿನಗರದ ಮೊಬೈಲ್ ಅಂಗಡಿಯೊಂದರಲ್ಲಿ ಜುಲೈ 11ರಂದು ರಾತ್ರಿ ಕಳ್ಳತನ ನಡೆಸಿ, ಪರಾರಿಯಾಗಿದ್ದ. ಈ ಬಗ್ಗೆ ಅಂಗಡಿ ಮಾಲೀಕ ದೂರು ನೀಡಿದ್ದರು.’

‘ತನಿಖೆಯಲ್ಲಿ ಆರೋಪಿ ಸುಳಿವು ಸಿಕ್ಕಿತು. ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿದ್ದ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ತಪ್ಪೊಪ್ಪಿಕೊಂಡ’ ಎಂದೂ ತಿಳಿಸಿದರು.

ಕೆಲಸಕ್ಕಿದ್ದ ಸ್ಥಳದಲ್ಲಿ ಕಳವು: ‘ಹಲವು ಕೃತ್ಯದಲ್ಲಿ ಆರೋಪಿ ಭಾಗಿಯಾಗಿದ್ದ ಅನುಮಾನ ಬಂದಿತ್ತು. ಹೀಗಾಗಿ, ಆರೋಪಿಯನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಲಾಗಿತ್ತು. ವಜ್ರದ ಉಂಗುರ ಕದ್ದಿರುವುದಾಗಿ ಆತ ಮಾಹಿತಿ ನೀಡಿದ್ದ’ ಎಂದು ಪೊಲೀಸರು ಹೇಳಿದರು.

‘ತಾನು ಕೆಲಸಕ್ಕಿದ್ದ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ಗೆ ನುಗ್ಗಿ, ಅಲ್ಲಿಂದ ವಜ್ರದ ಉಂಗುರಗಳನ್ನು ಕದ್ದಿದ್ದ’ ಎಂದರು.

ಚಿತ್ರಾವಳಿ

ಬೆಂಗಳೂರು ದಕ್ಷಿಣ ವ್ಯಾಪ್ತಿಯ ಬಂಡೇನಲ್ಲಸಂದ್ರ ಗ್ರಾಮದ ಸೋಮೇಶ್ವರ ದೇವಾಲಯದ ಆವರಣದಲ್ಲಿ ಗಂಧದನಾಡು ಜನಪರ ವೇದಿಕೆ, ಆರ್.ಕೆ.ರಮೇಶ್ ಅಭಿಮಾನಿ ಬಳಗ ಹಾಗೂ ವಿವಿಧ ಆರೋಗ್ಯ ಸಂಸ್ಥೆಗಳ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಆರೋಗ್ಯ ತಪಾಸಣಾ ಶಿಬಿರವನ್ನು ಕಾಂಗ್ರೆಸ್ ಮುಖಂಡ ಆರ್.ಕೆ.ರಮೇಶ್ ಉದ್ಘಾಟಿಸಿ ಮಾತನಾಡಿದರು. ಕಾಂಗ್ರೆಸ್ ಮುಖಂಡ ಪ್ರಹ್ಲಾದ್ ರೆಡ್ಡಿ, ಗಂಧದ ಜನಪರ ವೇದಿಕೆಯ ಸ್ವಾಭಿಮಾನಿ ಸತೀಶ್, ಹೇಮಂತ್ ಕುಮಾರ್, ವೈದ್ಯರಾದ ದಿನೇಶ್, ನಿವೇದಿತಾ, ಸಿಬೂ, ವಿನಯ್ ಹಾಗೂ ಇತರರು ಇದ್ದರು.



‘ಚಾರುಮತಿ ಪ್ರಕಾಶನ’ ಹೊರತಂದಿರುವ ಲೇಖಕ ಸುಬ್ರಹ್ಮಣ್ಯ ನಾಡಿಗೇರ್ ಅವರ ‘ದಾರಿದೀಪ’ ಪುಸ್ತಕವನ್ನು ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಡಾ. ವೂಡೇ ಪಿ. ಕೃಷ್ಣ ನಗರದಲ್ಲಿ ಭಾನುವಾರ ಬಿಡುಗಡೆ ಮಾಡಿದರು. ವಿಧಾನ ಪರಿಷತ್ ಸದಸ್ಯ ಯು.ಬಿ. ವೆಂಕಟೇಶ್, ಚಿಂತಕ ಮಾ. ವೆಂಕಟರಾಮು, ಪ್ರಕಾಶಕ ಬಿ.ಎಸ್. ವಿದ್ಯಾರಣ್ಯ ಚಿತ್ರದಲ್ಲಿದ್ದಾರೆ –ಪ್ರಜಾವಾಣಿ ಚಿತ್ರಗಳು

ಬಿಬಿಎಂಪಿಯಲ್ಲಿ 39 ಹೊಸ ಹುದ್ದೆಗಳ ಸೃಷ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ನಗರ ಯೋಜನೆ ವಿಭಾಗವನ್ನು ಬಲವರ್ಧನೆ ಮಾಡುವ ಸಲುವಾಗಿ 39 ಹೊಸ ಹುದ್ದೆಗಳನ್ನು ಸೃಷ್ಟಿಸಿ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ. ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಅಧಿಕಾರಿಗಳನ್ನು ನಿಯೋಜನೆ ಮಾಡುವ ಮೂಲಕ ಈ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ.

2020ರ ಬಿಬಿಎಂಪಿ ಕಾಯ್ದೆಯ ಕಲಂ 98 (2)ರ ಅನ್ವಯ, ಮುಖ್ಯ ಆಯುಕ್ತರ ಅಧೀನದಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ದರ್ಜೆಗೆ ಕಡಿಮೆ ಇಲ್ಲದಂತೆ ಮುಖ್ಯ ನಗರ ಯೋಜಕರನ್ನು ಮತ್ತು ವಲಯ ಕಚೇರಿಗಳಲ್ಲಿ ವಲಯ ಆಯುಕ್ತರ ಅಧೀನದಲ್ಲಿ ನಗರ ಮತ್ತು ಗ್ರಾಮಾಂತರ ಯೋಜನೆ ಉಪನಿರ್ದೇಶಕರ ದರ್ಜೆಗೆ ಕಡಿಮೆ ಇಲ್ಲದ ವಲಯ ನಗರ ಯೋಜಕರನ್ನು ನಿಯೋಜಿಸಬೇಕು. ಆದರೆ, ಬಿಬಿಎಂಪಿಯ 2020ರ ಮಾರ್ಚ್ 16ರ ಹೊಸ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಈ ಹುದ್ದೆಗಳ ಪ್ರಸ್ತಾವ ಇಲ್ಲ. ಹಾಗಾಗಿ ಈ ಹುದ್ದೆಗಳನ್ನು ಹೊಸತಾಗಿ ಸೃಷ್ಟಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತರು 2021ರ ಮಾರ್ಚ್ 19 ರಂದು ಸರ್ಕಾರಕ್ಕೆ ಪ್ರಸ್ತಾಪ ಸಲ್ಲಿಸಿದ್ದರು.

ನಗರ ಯೋಜನೆಗಳಿಗೆ ಸಂಬಂಧಿಸಿ ಹಿಂದೆ ಆಗಿರುವ ಹಾಗೂ ಆಗುತ್ತಿರುವ ಉಲ್ಲಂಘನೆಗಳಿಗೆ ಶುಲ್ಕ, ದಂಡ ಸಂಗ್ರಹ ಹೆಚ್ಚಿಸಿ ಪಾಲಿಕೆಯ ಆದಾಯ ಹೆಚ್ಚಿಸಬೇಕು. ಈ ಹುದ್ದೆಗಳ ಭರ್ತಿಯಿಂದ ಉಂಟಾಗುವ ವೆಚ್ಚವನ್ನು ಬಿಬಿಎಂಪಿಯೇ ಭರಿಸಬೇಕು ಎಂಬ ಷರತ್ತುಗಳಿಗೆ ಒಳಪಟ್ಟು ಈ ಹುದ್ದೆಗಳನ್ನು ಸೃಷ್ಟಿಸಲಾಗಿದೆ.

ಬಿಬಿಎಂಪಿಯ ನಗರ ಯೋಜನೆ ವಿಭಾಗದಲ್ಲಿ ಪ್ರಸ್ತುತ ಒಬ್ಬರು ಹೆಚ್ಚುವರಿ ನಿರ್ದೇಶಕರು, ಇಬ್ಬರು ಜಂಟಿ ನಿರ್ದೇಶಕರು, ಇಬ್ಬರು ಉಪ ನಿರ್ದೇಶಕರು, 7 ಮಂದಿ ಸಹಾಯಕ ನಿರ್ದೇಶಕರು, 42 ಮಂದಿ ನಗರ ಯೋಜಕರ ಹುದ್ದೆಗಳಿವೆ. ಹೆಚ್ಚುವರಿ ಹುದ್ದೆಗಳ ಭರ್ತಿಯಿಂದಾಗಿ ಹುದ್ದೆಗಳ ಸಂಖ್ಯೆ 94ಕ್ಕೆ ಏರಲಿದೆ. ಹೊಸ ಹುದ್ದೆಗಳನ್ನು ಬಿಬಿಎಂಪಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಲು ಪ್ರತ್ಯೇಕವಾಗಿ ಕ್ರಮ ವಹಿಸಲಾಗುತ್ತದೆ ಎಂದು ನಗರಾಭಿವೃದ್ಧಿ ಇಲಾಖೆಯು ಶುಕ್ರವಾರ ಹೊರಡಿಸಿರುವ ಆದೇಶದಲ್ಲಿ ತಿಳಿಸಿದೆ.

ನಗರ ಯೋಜನೆ ವಿಭಾಗ: ಹೊಸ ಹುದ್ದೆಗಳ ವಿವರ

ಹುದ್ದೆ	ಸಂಖ್ಯೆ
ಜಂಟಿ ನಿರ್ದೇಶಕರು	09
ಉಪನಿರ್ದೇಶಕರು	03
ಸಹಾಯಕ ನಿರ್ದೇಶಕರು	21
ನಗರ ಯೋಜಕರು	06

ಪತ್ನಿ ಸಾವಿನಿಂದ ಮಾನಸಿಕವಾಗಿ ನೊಂದಿದ್ದ ಶಂಕರ್

ಭಿಕ್ಷೆ ಬೇಡುತ್ತಿದ್ದ ಟೈಲರ್‌ಗೆ ನೆರವಾದ ಪಿಎಸ್‌ಐ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿ ಮೃತಪಟ್ಟಿದ್ದರಿಂದ ಮಾನಸಿಕವಾಗಿ ನೊಂದು ಭಿಕ್ಷೆ ಬೇಡುತ್ತ ತಿರುಗುತ್ತಿದ್ದ ಶಂಕರ್ (42) ಎಂಬುವರಿಗೆ ಮಡಿವಾಳ ಸಂಚಾರ ಠಾಣೆ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಶಿವರಾಜ್ ಅಂಗಡಿ ಹಾಗೂ ಸಿಬ್ಬಂದಿ ಹೊಸ ಬದುಕು ಕಟ್ಟಿಕೊಳ್ಳಲು ನೆರವಾಗಿದ್ದಾರೆ.

ಪಾವಗಡದ ಶಂಕರ್, ತಮ್ಮೂರಿನಲ್ಲಿ ಟೈಲರ್ ಕೆಲಸ ಮಾಡುತ್ತಿದ್ದರು. ಎರಡೂವರೆ ವರ್ಷದ ಹಿಂದೆ ಪತ್ನಿ ತೀರಿಕೊಂಡಿದ್ದರು. ಅದೇ ನೋವಿನಲ್ಲಿ ಊರು ಬಿಟ್ಟಿದ್ದ ಶಂಕರ್, ಬೆಂಗಳೂರಿಗೆ ಬಂದಿದ್ದರು. ಮಾನಸಿಕ ಸ್ಥಿಮಿತ ಕಳೆದುಕೊಂಡವರಂತೆ ಭಿಕ್ಷೆ ಬೇಡುತ್ತ ತಿರುಗಾಡುತ್ತಿದ್ದರು.

ಮಡಿವಾಳ ಸಂಚಾರ ಠಾಣೆ ಪಿಎಸ್‌ಐ ಶಿವರಾಜ್ ಅಂಗಡಿ ಅವರ ಜೊತೆ ಶಂಕರ್

ಮಡಿವಾಳ ಸಂಚಾರ ಠಾಣೆ ಎದುರು ಇತ್ತೀಚೆಗೆ ಬಂದಿದ್ದ ಶಂಕರ್, ಕೈಯಲ್ಲಿ ಅನ್ನದ ಪೊಟ್ಟಣ ಹಿಡಿದಿದ್ದರು. ‘ಕುಡಿಯಲು ನೀರು ಕೊಡಿ’ ಎಂದು ಜನರ ಬಳಿ ಅಲೆದಾಡುತ್ತಿದ್ದರು. ಅವರ ಸ್ಥಿತಿ ನೋಡಿ ಭಯಗೊಂಡಿದ್ದ ಜನ, ನೀರು ಕೊಡಲು ಹಿಂದೇಟು ಹಾಕಿದ್ದರು. ಸ್ಥಳದಲ್ಲೇ ಕರ್ತವ್ಯದಲ್ಲಿದ್ದ ಪಿಎಸ್‌ಐ ಶಿವರಾಜ್, ಶಂಕರ್ ಅವರಿಗೆ ನೀರು ಕೊಟ್ಟು ಪೂರ್ವಾಪರ ವಿಚಾರಿಸಿದ್ದರು. ಅವಾಗಲೇ ಅವರೊಬ್ಬ ಟೈಲರ್ ಎಂಬುದು ಗೊತ್ತಾಗಿತ್ತು.

‘ತಮ್ಮ ಜೀವನದ ಬಗ್ಗೆ ಹೇಳಿಕೊಂಡಿದ್ದ ಶಂಕರ್, ಚೆನ್ನಾಗಿ ಮಾತನಾಡಿದ್ದರು. ತಾವು ಬರೆದಿದ್ದ ಕವನಗಳನ್ನೂ ವಾಚಿಸಿದ್ದರು. ಅವರ ಬುದ್ಧಿವಂತಿಕೆ ನೋಡಿ, ಹೊಸ ಬದುಕು ಕಟ್ಟಿಕೊಡಬೇಕೆಂದು ಅನಿಸಿತು. ತಲೆಗೂದಲು ಹಾಗೂ ಗಡ್ಡ ಬಿಟ್ಟಿದ್ದ ಶಂಕರ್ ಅವರನ್ನು ಸಲೂನ್‌ಗೆ ಕರೆದೊಯ್ದು ಹೇರ್ ಕಟಿಂಗ್ ಮಾಡಿಸಲಾಯಿತು. ಹೊಸ ಬಟ್ಟೆ ತೊಡಿಸಿ, ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಯಿತು. ಇದಕ್ಕೆಲ್ಲ ಇನ್‌ಸ್ಪೆಕ್ಟರ್ ನವೀನ್‌ಕುಮಾರ್ ಸಹಕಾರ ನೀಡಿದರು’ ಎಂದು ಪಿಎಸ್‌ಐ ಶಿವರಾಜ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮಕ್ಕಳನ್ನು ನೋಡಬೇಕೆಂದು ಹೇಳಿ ಶಂಕರ್ ತಮ್ಮೂರಿಗೆ ಹೋಗಿದ್ದಾರೆ. ಅವರು ವಾಪಸು ಬಂದ ಕೂಡಲೇ, ಬೆಂಗಳೂರಿನ ಸಾಯಿ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಟೈಲರ್ ಕೆಲಸಕ್ಕೆ ಸೇರಿಸಲಾಗುವುದು’ ಎಂದೂ ಹೇಳಿದರು.

ಭಿಕ್ಷುಕನಿಗೆ ಹೊಸ ಬದುಕು ಕಟ್ಟಿಕೊಳ್ಳಲು ಪ್ರಯತ್ನಿಸುತ್ತಿರುವ ಪಿಎಸ್‌ಐ ಹಾಗೂ ಸಿಬ್ಬಂದಿ ಕೆಲಸಕ್ಕೆ ಹಿರಿಯ ಅಧಿಕಾರಿಗಳು ಹಾಗೂ ಸಾರ್ವಜನಿಕರ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಜಿಕೆವಿಕೆಯಲ್ಲಿ ಕೃಷಿ ಖುಷಿ

ಗಮನಸೆಳೆದ ಪಾಲಿಹೌಸ್‌ನ ತೋಟಗಾರಿಕೆ ಬೆಳೆಗಳ ಪ್ರಾತ್ಯಕ್ಷಿಕೆ

ನಿಖರ ಕೃಷಿ–ಖಚಿತ ಆದಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಭ್ಯ ಇರುವ ನೀರಿನ ಸಮರ್ಪಕ ಬಳಕೆ ಮತ್ತು ಕೀಟಗಳ ಹಾವಳಿ ನಿಯಂತ್ರಿಸುವ ಪಾಲಿಹೌಸ್ ಪದ್ಧತಿ ಅಡಿಯಲ್ಲಿ ಬೆಳೆದ ತೋಟಗಾರಿಕೆ ಬೆಳೆಗಳು ಕೃಷಿ ಮೇಳದಲ್ಲಿ ಗಮನಸೆಳೆದವು.

ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿನ ತಾಕುಗಳಲ್ಲಿ ಪಾಲಿಹೌಸ್‌ನಲ್ಲಿ ಬೆಳೆದ ಬಾಳೆ, ಸೌತೆಕಾಯಿ, ದೊಣ್ಣೆ ಮೆಣಸಿನಕಾಯಿ, ಟೊಮೆಟೊ, ಪಪ್ಪಾಯ, ಬದನೆಗಳನ್ನು ಬೆಳೆಸಲಾಗಿದೆ. ಬೆಳೆಗೆ ಅಗತ್ಯವಿರುವಷ್ಟೇ ನೀರು ಮತ್ತು ಗೊಬ್ಬರವನ್ನು ಪೂರೈಸುವುದು ಈ ಪದ್ಧತಿಯ ಪ್ರಮುಖ ಅಂಶ.

ಹಸಿರು ಮನೆಯಲ್ಲಿ ನಿಖರ ಬೇಸಾಯ ಪದ್ಧತಿ ಅಳವಡಿಸಿ ಬೆಳೆದ 300 ಬಾಳೆ ಗಿಡಗಳಿಂದ 2500 ಕೆ.ಜಿ. (60 ಗೊನೆ) ಬಾಳೆ ದೊರೆತಿದ್ದು, ₹47 ಸಾವಿರ ಆದಾಯ ಲಭ್ಯವಾಗಿದೆ.

ಪಾಲಿಹೌಸ್‌ನಲ್ಲಿ ಬೆಳೆದ ಬಾಳೆ ವೀಕ್ಷಿಸುತ್ತಿರುವ ಯುವಕರು
ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಜತೆಗೆ, ಈ ಬಾಳೆಗಳ ನಡುವೆ ಅಂತರ ಬೆಳೆಯಾಗಿ ಬೆಳೆದ ತರಕಾರಿಗಳು, ಹೂಕೋಸು, ಗೆಡ್ಡೆ ಕೋಸು, ಟೊಮೆಟೊನಿಂದ ₹28 ಸಾವಿರ ದೊರೆತಿದೆ. ಇದರಿಂದ ಒಟ್ಟು ₹75 ಸಾವಿರ ಆದಾಯ ದೊರೆತಿದೆ.

ಇದೇ ರೀತಿಯಲ್ಲಿ 132 ಪಪ್ಪಾಯಿ ಗಿಡಗಳಿಂದ 4457 ಕೆ.ಜಿ. ಫಸಲು ದೊರೆತಿದ್ದು, ₹1.33 ಲಕ್ಷ ಆದಾಯ ದೊರೆತಿದೆ. ಅಂತರ ಬೆಳೆಗಳಿಂದ ₹20ಸಾವಿರ ಆದಾಯ ಲಭ್ಯವಾಗಿದೆ. ಹೀಗಾಗಿ ಒಟ್ಟು ₹1.53 ಲಕ್ಷ ಆದಾಯ ಬಂದಿದೆ.

‘ನಿಖರ ಕೃಷಿ ಪದ್ಧತಿಯು ಹನಿ ನೀರಾವರಿ ಸೇರಿದಂತೆ ಹಲವಾರು ತಾಂತ್ರಿಕ ಅಂಶಗಳನ್ನು ಒಳಗೊಂಡಿದೆ. ಪಾಲಿಹೌಸ್ ಈ ಪದ್ಧತಿಯ ಭಾಗ. ಇದು ರಕ್ಷಣಾತ್ಮಕ ಬೇಸಾಯ. ಕೀಟಗಳಿಗೆ ಆಸ್ಪದ ದೊರೆಯುವುದಿಲ್ಲ. ಬೇವಿನ ಎಣ್ಣೆ ಅಥವಾ ಸಾವಯವ ಗೊಬ್ಬರಗಳನ್ನು ಬಳಸಬಹುದು. ಇದು ಮುಖ್ಯವಾಗಿ ರೋಗಮುಕ್ತವಾಗಿರುತ್ತದೆ. ಎಲ್ಲ ರೀತಿ ಬೆಳೆಗಳನ್ನು ಪಾಲಿಹೌಸ್‌ನಲ್ಲಿ ಬೆಳೆಸಬಹುದು’ ಎಂದು ಜಿಕೆವಿಕೆಯ ಸಹಾಯಕ ಪ್ರಾಧ್ಯಾಪಕ ಮತ್ತು ತೋಟಗಾರಿಕೆ ವಿಜ್ಞಾನಿ ಡಾ. ಬಿ.ಜಿ. ಹನುಮಂತರಾಯ ವಿವರಿಸಿದ್ದಾರೆ.

ಕೃಷಿಕರಿಗೆ ನೆರವಾಗುವ ಗ್ರಾಮ ಪಾಠಶಾಲಾ ಆ್ಯಪ್

ಬೆಂಗಳೂರು: ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ಅನುಕೂಲ ಕಲ್ಪಿಸುವ ಜತೆಗೆ ರೈತರಿಗೆ ಹಣಕಾಸಿನ ಸಾಕ್ಷರತೆ ಒದಗಿಸುವ ಆ್ಯಪ್ ಅನ್ನು ಗ್ರಾಮ ಪಾಠಶಾಲಾ ಅಭಿವೃದ್ಧಿಪಡಿಸಿದೆ.

ಖರೀದಿದಾರರು ಮತ್ತು ಮಾರಾಟಗಾರರ ನಡುವೆ ಮಾರುಕಟ್ಟೆಯ ವೇದಿಕೆ ಕಲ್ಪಿಸುವ ನಿಟ್ಟಿನಲ್ಲಿ ಈ ಆ್ಯಪ್ ರೂಪಿಸಲಾಗಿದೆ. ಜತೆಗೆ, ಗ್ರಾಮೀಣ ಪ್ರದೇಶದಲ್ಲಿ ಹಣಕಾಸು ಸಾಕ್ಷರತೆ ಕುರಿತು ಅರಿವು ಮೂಡಿಸುವುದು, ಬೆಳೆ ವಿಮೆಗಳ ಬಗ್ಗೆ ಮಾಹಿತಿ ಒದಗಿಸುವುದು, ಬ್ಯಾಂಕಿಂಗ್ ವಿಷಯಗಳ ಮಾಹಿತಿಗಳು ಇದರಲ್ಲಿ ದೊರೆಯಲಿವೆ.

ಕನ್ನಡ, ತೆಲುಗು ಸೇರಿದಂತೆ ಹನ್ನೊಂದು ಭಾಷೆಯಗಳಲ್ಲಿ ಈ ಆ್ಯಪ್ ಲಭ್ಯ. ಇದರಿಂದ, ರೈತರು ತಮ್ಮ ಮಾತೃಭಾಷೆಯಲ್ಲೇ ವ್ಯವಹರಿಸಲು ಅನುಕೂಲವಾಗುತ್ತದೆ.ಸರ್ಕಾರಿ ಯೋಜನೆಗಳನ್ನು ಸುಲಭವಾಗಿ ತಲುಪಿಸುವುದು, ಹವಾಮಾನ ಮತ್ತು ಬೆಳೆಗಳ ಕುರಿತು ಸಲಹೆಗಳು, ಆದಾಯ ವೃದ್ಧಿಸುವ ಕುರಿತು ಮಾಹಿತಿ, ಕೃಷಿ ಉತ್ಪಾದನೆಯಲ್ಲಿ ಸುಧಾರಣೆ, ನೀರಿನ ಗರಿಷ್ಠ ಬಳಕೆ ಕುರಿತು ರೈತರು ಆ್ಯಪ್ ಮೂಲಕ ಮಾಹಿತಿ ಪಡೆಯಬಹುದು.

‘ಕೃಷಿಕರಿಗೆ ವಿವಿಧ ರೀತಿಯಲ್ಲಿ ನೆರವು ಒದಗಿಸುವ ಉದ್ದೇಶದಿಂದ ಗ್ರಾಮ ಪಾಠಶಾಲಾ ಹೆಸರಿನಲ್ಲೇ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ. ಇದು ಲಾಭರಹಿತವಾಗಿದೆ. ರೈತರಿಗೆ ಅರಿವು ಮೂಡಿಸುವ ಶೈಕ್ಷಣಿಕ ಆ್ಯಪ್ ಸಹ ಇದಾಗಿದೆ. ರೈತರ ಬೇಡಿಕೆ ಮತ್ತು ವಿವಿಧ ವರ್ಗಗಳಿಂದ ಅಭಿಪ್ರಾಯಗಳನ್ನು ಪಡೆದು ಬಳಕೆದಾರರ ಅಗತ್ಯಕ್ಕೆ ತಕ್ಕಂತೆ ಹೊಸ ಅಂಶಗಳನ್ನು ಸೇರಿಸಲಾಗುವುದು ಮತ್ತು ಈಗಿರುವ ಮಾಹಿತಿಗಳಲ್ಲಿ ಕೆಲವು ಬದಲಾವಣೆ ಮಾಡಲಾಗುವುದು. ಬಳಕೆದಾರರ ಸ್ನೇಹಿಯಾಗಿರಬೇಕು ಎನ್ನುವುದೇ ನಮ್ಮ ಉದ್ದೇಶ’ ಎಂದು ಆ್ಯಪ್ ಅಭಿವೃದ್ಧಿಪಡಿಸಿದ ತಂಡದ ಸದಸ್ಯರಾಗಿರುವ ಸುಚಿತ್ರಾ ಕುಲಕರ್ಣಿ ತಿಳಿಸಿದ್ದಾರೆ.

ಜಿಕೆವಿಕೆ ಕೃಷಿ ಮೇಳದಲ್ಲಿ ಎತ್ತಿನ ಬಂಡಿ ಪ್ರದರ್ಶನ

ಇಂಧನರಹಿತ ಉಳುಮೆಗೆ ‘ಸುಧಾರಿತ ಬಂಡಿ’

ಮನೋಹರ್ ಎಂ.

‘ಸುಧಾರಿತ ಉಳುಮೆ ಬಂಡಿ’ಯಲ್ಲಿ ಸವಾರಿ ಮಾಡಿದ ಹೊಸಕೋಟೆಯ ರೈತ ಕಾಂತಕುಮಾರ್ –ಪ್ರಜಾವಾಣಿ ಚಿತ್ರ

ಬೆಂಗಳೂರು: ಡೀಸೆಲ್ ದರ ಏರಿಕೆಯಿಂದ ಕಂಗೆಟ್ಟಿರುವ ರೈತರಿಗೆ ಇಂಧನದ ಬಳಕೆಯಿಲ್ಲದೆ ಜಮೀನು ಉಳುಮೆ ಮಾಡಲು ಸುಧಾರಿತ ಬಂಡಿ ಸಿದ್ಧಗೊಂಡಿದೆ. ಎತ್ತುಗಳನ್ನು ಬಳಸುವ ಈ ಬಂಡಿಯನ್ನು ತಮಿಳುನಾಡು ಮೂಲದ ಅಗ್ನಿ ಕಾರ್ಟ್ ಎಂಬ ಕಂಪನಿ ಅಭಿವೃದ್ಧಿಪಡಿಸಿದೆ.

ಈ ಸುಧಾರಿತ ಉಳುಮೆ ಬಂಡಿ ಬೆಂಗಳೂರಿನ ಜಿಕೆವಿಕೆ ಆವರಣದಲ್ಲಿ ನಡೆಯುತ್ತಿರುವ ‘ಕೃಷಿ ಮೇಳ’ದಲ್ಲಿ ರೈತರ ಹುಬ್ಬೇರುವಂತೆ ಮಾಡಿದೆ. ‘ಮರಳಿ ನೇಗಿಲಿನ ಕಡೆಗೆ’ ಎಂಬ ಆಶಯದೊಂದಿಗೆ ಅಭಿವೃದ್ಧಿಗೊಂಡಿರುವ ಈ ಉಳುಮೆ ಬಂಡಿಯನ್ನು ಕಂಡ ರೈತರು,‘ಟ್ರ್ಯಾಕ್ಟರ್ ಬದಲಿಗೆ ಈ ಬಂಡಿ ಖರೀದಿಸಿದರೆ, ಕಿಸೆಯಲ್ಲಿ ಕಾಸು ಉಳಿಸಬಹುದು’ ಎಂದು ಸಂತಸ ವ್ಯಕ್ತಪಡಿಸಿದರು.

‘ಹಿಂದೆಲ್ಲ ಎತ್ತುಗಳನ್ನು ಕಟ್ಟಿ ನೇಗಿಲಿನಿಂದ ಜಮೀನಿನ ಉಳುಮೆ ನಡೆಯುತ್ತಿತ್ತು. ಎತ್ತುಗಳ ಸಂಖ್ಯೆ ಕಡಿಮೆಯಾದಂತೆ ನೇಗಿಲ ಜಾಗಕ್ಕೆ ಟ್ರ್ಯಾಕ್ಟರ್ ಬಂತು. ಈಗ ಬಹುತೇಕರು ಜಮೀನು ಉಳುಮೆ ಮಾಡಲು ಟ್ರ್ಯಾಕ್ಟರ್ ಅನ್ನೇ ಅವಲಂಬಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಡೀಸೆಲ್ ದರ ಗಗನಕ್ಕೇರಿರುವುದರಿಂದ ರೈತರಿಗೆ ಉಳುಮೆಯೂ ದುಬಾರಿಯಾಗಿದೆ. ಈ ಸಮಸ್ಯೆಗೆ ಪರ್ಯಾಯವಾಗಿ ಹಾಗೂ ಪರಿಹಾರವಾಗಿ ಈ ಇಂಧನರಹಿತ ಉಳುಮೆ ಬಂಡಿ ಅಭಿವೃದ್ಧಿಪಡಿಸಿದ್ದೇವೆ’ ಎನ್ನುತ್ತಾರೆ ಅಗ್ನಿ ಕಾರ್ಟ್ ಸಂಸ್ಥೆಯ ಸ್ಥಾಪಕ ಎ.ಪಿ.ಸಸಿಕುಮಾರ್.

‘ಇದು, ಹಳೆಯ ನೇಗಿಲನ್ನೇ ಹೋಲುತ್ತದೆ. ಆದರೆ, ಮರದ ಬದಲಿಗೆ ಕಬ್ಬಿಣದಲ್ಲಿ ಇದನ್ನು ತಯಾರಿಸಲಾಗಿದೆ. ರೈತರು ಹೆಗಲ ಮೇಲೆ ನೇಗಿಲನ್ನು ಹೊತ್ತು ತೋಟಕ್ಕೆ ಹೋಗುತ್ತಿದ್ದರು. ಇದರಲ್ಲಿ ರೈತರು ಸಂಚರಿಸಲು ಅನುಕೂಲವಾಗುವಂತೆ ಎರಡು ಚಕ್ರಗಳನ್ನು ಅಳವಡಿಸಿದ್ದೇವೆ. ಇದರ ತೂಕವೂ ಕಡಿಮೆ ಇದೆ. ಎತ್ತುಗಳ ಸಹಾಯದಲ್ಲಿ ಒಂದು ಎಕರೆ ಪ್ರದೇಶವನ್ನು 1 ಗಂಟೆ 30 ನಿಮಿಷದಲ್ಲಿ ಉಳುವ ಸಾಮರ್ಥ್ಯವನ್ನು ಈ ಬಂಡಿ ಹೊಂದಿದೆ’ ಎಂದು ವಿವರಿಸಿದರು.

ಡೀಸೆಲ್ ದರ ಹೆಚ್ಚಳದಿಂದ ಟ್ರ್ಯಾಕ್ಟರ್ ನಿರ್ವಹಣೆ ಹೊರೆಯಾಗುತ್ತಿದೆ. ಈ ಬಂಡಿ ಇಷ್ಟವಾಗಿದೆ. ಸದ್ಯದಲ್ಲೇ ಖರೀದಿಸುತ್ತೇನೆ
ಧನಂಜಯ, ಮಂಡ್ಯ ಜಿಲ್ಲೆಯ ರೈತ

‘ದರ ₹ 36 ಸಾವಿರ’

‘ಸುಧಾರಿತ ಉಳುಮೆ ಬಂಡಿಗೆ ₹36 ಸಾವಿರ ದರ ನಿಗದಿ ಮಾಡಲಾಗಿದೆ. ತಮಿಳುನಾಡು ಹಾಗೂ ಕರ್ನಾಟಕದಲ್ಲಿ ಈವರೆಗೆ 100ಕ್ಕೂ ಹೆಚ್ಚು ಬಂಡಿಗಳನ್ನು ರೈತರು ಖರೀದಿಸಿ ಬಳಸುತ್ತಿದ್ದಾರೆ. ಬೆಂಗಳೂರಿನಲ್ಲೂ ನಮ್ಮ ವಿತರಣಾ ಶಾಖೆಯಿದ್ದು, ಆಸಕ್ತರು 9900511170 ಸಂಖ್ಯೆಯನ್ನು ಸಂಪರ್ಕಿಸಬಹುದು’ ಎಂದು ಸಸಿಕುಮಾರ್ ತಿಳಿಸಿದರು.

‘ಇದನ್ನು ಜಮೀನಿನಲ್ಲಿ ಉಳುವ ನೇಗಿಲಿನಂತೆ ಹಾಗೂ ರಸ್ತೆಯ ಮೇಲೆ ಚಲಿಸುವ ಬಂಡಿಯಂತೆ ಎರಡೂ ರೀತಿಯಲ್ಲಿ ಬಳಸಲು ಅನುವಾಗುವಂತೆ ಅಭಿವೃದ್ಧಿಪಡಿಸಿದ್ದೇವೆ. ಹಿಂದೆ ಬಂಡಿಯಲ್ಲಿ ನೇಗಿಲನ್ನು ತರಲಾಗುತ್ತಿತ್ತು. ಈಗ ಬಂಡಿಯೇ ತೋಟದಲ್ಲಿ ನೇಗಿಲಾಗಿ ಉಳುಮೆ ಮಾಡುತ್ತದೆ. ಟ್ರ್ಯಾಕ್ಟರ್‌ನಲ್ಲಿ ಬಳಸುವ ಉಳುಮೆಯ ಎಲ್ಲ ರೀತಿಯ ಸಾಧನಗಳನ್ನೂ ಈ ಬಂಡಿಗೆ ಅಳವಡಿಸಿ ಉಳುಮೆ ಮಾಡಬಹುದು. ಅದಕ್ಕಾಗಿಯೇ ಪ್ರತ್ಯೇಕ ಉಳುಮೆ ಸಾಧನಗಳೂ ನಮ್ಮಲ್ಲಿ ಲಭ್ಯ’ ಎಂದು ಮಾಹಿತಿ ನೀಡಿದರು.

ರೈತರಿಗೆ ಆಸನ: ‘ರೈತರು ಕುಳಿತುಕೊಳ್ಳಲು ಆಸನ ಅಳವಡಿಸಿರುವುದು ಸುಧಾರಿತ ಉಳುಮೆ ಬಂಡಿಯ ಮತ್ತೊಂದು ವಿಶೇಷ. ರೈತನಿಗೆ ಆಯಾಸವಾಗುವುದನ್ನು ಇದು ತಪ್ಪಿಸಲಿದೆ. ಉಳುವಾಗ ರೈತರು ಕೂರುವ ಭಾರದಿಂದಾಗಿ ನೇಗಿಲು ಭೂಮಿಯ ಆಳಕ್ಕೆ ಇಳಿಯುತ್ತದೆ. ಆಸನವು ಈ ಎರಡು ಉದ್ದೇಶಗಳನ್ನು ಈಡೇರಿಸುತ್ತದೆ’ ಎಂದು ಸಸಿಕುಮಾರ್ ವಿವರಿಸಿದರು.

ರೈತರು, ಯುವಕರು, ಕೃಷಿ ಆಸಕ್ತರ ದಂಡು: ₹4.25 ಕೋಟಿ ವಹಿವಾಟು

ಕೃಷಿ ಮೇಳಕ್ಕೆ ತೆರೆ: 8 ಲಕ್ಷ ಮಂದಿ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ತಾಂತ್ರಿಕತೆಗಳ ಅನಾವರಣ, ಹೊಸ ತಳಿಗಳು ಮತ್ತು ಆಧುನಿಕ ತಂತ್ರಜ್ಞಾನದ ಉಪಕರಣಗಳ ಪ್ರದರ್ಶನ ಒಳಗೊಂಡಿದ್ದ ಕೃಷಿ ಮೇಳಕ್ಕೆ ಭಾನುವಾರ ತೆರೆ ಬಿದ್ದಿತು.

ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ನಾಲ್ಕು ದಿನಗಳಿಂದ ನಡೆಯುತ್ತಿದ್ದ ಈ ಮೇಳದಲ್ಲಿ ರೈತರು, ಯುವಕರು, ವಿದ್ಯಾರ್ಥಿಗಳು, ವಿವಿಧ ಕ್ಷೇತ್ರಗಳಲ್ಲಿನ ವೃತ್ತಿಪರರು ಪ್ರಾತ್ಯಕ್ಷಿಕೆ ತಾಕುಗಳು, ಮಳಿಗೆಗಳಿಗೆ ಭೇಟಿ ನೀಡಿ ಮಾಹಿತಿ ಪಡೆದರು. ಮೇಳದ ಕೊನೆಯ ದಿನವೂ ಜನಸಾಗರ ಹರಿದು ಬಂತು. ಭಾನುವಾರ ಮಳೆರಾಯ ಬಿಡುವು ನೀಡಿದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬಂದಿದ್ದರು. ಅದರಲ್ಲೂ ರೈತರಿಗಿಂತಲೂ ನಗರದ ಜನತೆ ಕುಟುಂಬದ ಸದಸ್ಯರೊಂದಿಗೆ ಬಂದಿದ್ದರು. ಮಕ್ಕಳಿಗೆ ಪೋಷಕರು ವಿವಿಧ ಬೆಳೆಗಳ ಬಗ್ಗೆ ಪೋಷಕರು ಪರಿಚಯಿಸಿದರು.

ಕುರಿ, ಕೋಳಿ ಸಾಕಣೆ ಮತ್ತು ಮೀನು ಸಾಕಣೆ, ಪಶುಸಂಗೋಪನೆ, ಹೈನುಗಾರಿಕೆ, ಕೃಷಿ ಯಂತ್ರೋಪಕಣಗಳ ವಿಭಾಗ, ಸಾವಯವ ಹಾಗೂ ಸಿರಿಧಾನ್ಯ ವಿಭಾಗಗಳಿಗೆ ಹೆಚ್ಚಿನ ಜನರು ಲಗ್ಗೆ ಇಟ್ಟರು.

ನಾಲ್ಕು ದಿನಗಳಲ್ಲಿ ಎಂಟು ಲಕ್ಷ ಮಂದಿ ಕೃಷಿ ಮೇಳಕ್ಕೆ ಭೇಟಿ ನೀಡಿದ್ದಾರೆ ಎಂದು ಕೃಷಿ ವಿಶ್ವವಿದ್ಯಾಲಯ ತಿಳಿಸಿದೆ. ಮೊದಲ ದಿನವಾದ ಗುರುವಾರ 66 ಸಾವಿರ, ಎರಡನೇ ದಿನ 1.70 ಲಕ್ಷ, ಮೂರನೇ ದಿನ 3 ಲಕ್ಷ ಮತ್ತು ನಾಲ್ಕನೇ ದಿನವಾದ ಭಾನುವಾರ 2.64 ಲಕ್ಷ ಮಂದಿ ಮೇಳಕ್ಕೆ ಭೇಟಿ ನೀಡಿದ್ದರು.

ಈ ಬಾರಿ ಸಾಮಾಜಿಕ ಜಾಲತಾಣಗಳಲ್ಲೂ ಕೃಷಿ ಮೇಳವನ್ನು ಹೆಚ್ಚಿನ ಸಂಖ್ಯೆಯಲ್ಲಿ ವೀಕ್ಷಿಸಿದ್ದು ವಿಶೇಷವಾಗಿದೆ. ನಾಲ್ಕು ದಿನಗಳಲ್ಲಿ ಒಟ್ಟು 38.11 ಲಕ್ಷ ಮಂದಿ ಮೇಳ ವೀಕ್ಷಿಸಿದ್ದಾರೆ. ಈ ನಾಲ್ಕು ದಿನಗಳಲ್ಲಿ ₹4.25 ಕೋಟಿ ವಹಿವಾಟು ನಡೆದಿದೆ.

ಕೃಷಿ ವಿಶ್ವವಿದ್ಯಾಲಯದಿಂದ ₹50ಕ್ಕೆ ಮುದ್ದೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಮುದ್ದೆ, ಕಾಳು ಸಾರು, ಅನ್ನ–ಸಾಂಬಾರು, ಮೊಸರನ್ನ, ಉಪ್ಪಿನಕಾಯಿ, ಸಿಹಿ ನೀಡಲಾಯಿತು.

ಕೃಷಿಯತ್ತ ಯುವಕರು!

ಕೃಷಿ ಮೇಳಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಭೇಟಿ ನೀಡಿದ್ದು ಗಮನಸೆಳೆಯಿತು. ‘ಕೃಷಿಯತ್ತ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಣೆಗೆ ಒಳಗಾಗಿದ್ದಾರೆ. ಹೀಗಾಗಿ, ಸ್ವಯಂ ಆಸಕ್ತಿಯಿಂದ ಬಂದಿದ್ದಾರೆ. ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನಗಳ ಅಳವಡಿಕೆ ಸೇರಿದಂತೆ ಕಡಿಮೆ ಖರ್ಚಿನಲ್ಲಿ ಹೆಚ್ಚು ಉತ್ಪನ್ನಗಳನ್ನು ಬೆಳೆಯುವ ಕುರಿತು ಯುವಕರು ಮಾಹಿತಿ ಪಡೆದರು’ ಎಂದು ವಿಶ್ವವಿದ್ಯಾಲಯದ ಅಧಿಕಾರಿಗಳು ತಿಳಿಸಿದರು.

‘ಆಹಾರ ಉತ್ಪಾದನೆ ಹೆಚ್ಚಿಸಲು ಹಸಿರು ಕ್ರಾಂತಿ ಅಗತ್ಯ’

‘ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿ ಸಾಧಿಸಲು ಹಸಿರು ಕ್ರಾಂತಿ ಪ್ರಮುಖ ಪಾತ್ರ ವಹಿಸಿತು’ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

‘ಕೃಷಿ ಮೇಳ-2021’ರ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ‘ಹಸಿರು ಕ್ರಾಂತಿಯು ದೇಶವನ್ನು ಆಹಾರದ ಬಿಕ್ಕಟ್ಟಿನಿಂದ ಹೊರತಂದಿದೆ. ಭಾರತೀಯ ಕೃಷಿ ಅಭಿವೃದ್ಧಿ ಹೊಂದಲು ಉತ್ತಮ ಕೃಷಿ ಪದ್ಧತಿ ಅಗತ್ಯವಿದೆ’ ಎಂದು ಪ್ರತಿಪಾದಿಸಿದರು.

‘ನ್ಯಾನೊ ತಂತ್ರಜ್ಞಾನ, ಕೃಷಿಯಲ್ಲಿ ಡ್ರೋನ್‌ಗಳ ಬಳಕೆ, ನೀರಾವರಿಯಲ್ಲಿ ಯಾಂತ್ರೀಕರಣ, ಕೃಷಿ ಯಾಂತ್ರೀಕರಣ, ನೈಸರ್ಗಿಕ ಮತ್ತು ಸಾವಯವ ಕೃಷಿ, ಸುಸ್ಥಿರ ಕೃಷಿ ಪದ್ಧತಿಗಳು ಮತ್ತು ರೈತ ಸ್ನೇಹಿ ಹೊಸ ನವೋದ್ಯಮಗಳನ್ನು ಉತ್ತೇಜಿಸುವುದು ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಏಳು ಕೃಷಿ ಸಾಧಕರಿಗೆ ರಾಜ್ಯಮಟ್ಟದ ಕೃಷಿ ಪ್ರಶಸ್ತಿಗಳನ್ನು ರಾಜ್ಯಪಾಲರು ಪ್ರದಾನ ಮಾಡಿದರು. ‘ಎಚ್.ಡಿ.ದೇವೇಗೌಡ ರಾಜ್ಯ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ’ ಗೆ ಆಯ್ಕೆಯಾದ ಹಾಸನ ಜಿಲ್ಲೆಯ ದೊಡ್ಡಮಗ್ಗೆಯ ಎಂ.ಸಿ.ರಂಗಸ್ವಾಮಿ, ‘ಡಾ.ಎಂ.ಎಚ್.ಮರೀಗೌಡ ರಾಜ್ಯ ಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿ’ಗೆ ಆಯ್ಕೆಯಾದ ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡ ತುಮಕೂರಿನ ಟಿ.ಎಂ.ಅರವಿಂದ, ‘ಕ್ಯಾನ್ ಬ್ಯಾಂಕ್ ರಾಜ್ಯ ಮಟ್ಟದ ಅತ್ಯುತ್ತಮ ರೈತ ಮಹಿಳೆ ಪ್ರಶಸ್ತಿ’ಗೆ ಆಯ್ಕೆಯಾದ ಹಾಸನ ಜಿಲ್ಲೆಯ ಯಡೂರು ಗ್ರಾಮದ ವೈ.ಜಿ.ಮಂಜುಳಾ, ‘ಕ್ಯಾನ್ ಬ್ಯಾಂಕ್ ರಾಜ್ಯ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ’ಗೆ ಆಯ್ಕೆಯಾದ ದೊಡ್ಡಬಳ್ಳಾಪುರ ತಾಲ್ಲೂಕಿನ ಲಕ್ಷ್ಮಿದೇವಿಪುರದ ಸಿ. ನವಿಕ್ರಮ್, ‘ಆರ್.ದ್ವಾರಕೀನಾಥ್ ಅತ್ಯುತ್ತಮ ರೈತ ಪ್ರಶಸ್ತಿ’ಗೆ ಆಯ್ಕೆಯಾದ ಕೋಲಾರ ಜಿಲ್ಲೆಯ ಅರಿನಾಗನಹಳ್ಳಿ ಮುನಿರೆಡ್ಡಿ, ‘ಆರ್.ದ್ವಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿ’ಗೆ ಆಯ್ಕೆಯಾದ ದೊಡ್ಡಬಳ್ಳಾಪುರದ ಹಾಡೋನಹಳ್ಳಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಎ.ಪಿ.ಮಲ್ಲಿಕಾರ್ಜುನಗೌಡ, ‘ಎಂ.ಎಚ್.ಮರೀಗೌಡ ಅತ್ಯುತ್ತಮ ತೋಟಗಾರಿಕಾ ಸಂಶೋಧನಾ ರಾಷ್ಟ್ರೀಯ ದತ್ತಿ ಪ್ರಶಸ್ತಿ’ಗೆ ಆಯ್ಕೆಯಾದ ಬಾಗಲಕೋಟೆ ತೋಟಗಾರಿಕಾ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕ ಎಚ್.ಪಿ.ಮಹೇಶ್ವರಪ್ಪ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಗರದ ಜಿಕೆವಿಕೆಯಲ್ಲಿ ನಡೆದ ಕೃಷಿಮೇಳದ ಸಮಾರೋಪ ಸಮಾರಂಭದಲ್ಲಿ ಭಾನುವಾರ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಕೃಷಿ ಸಾಧಕರಾದ ಅರವಿಂದ್ ಟಿ.ಎಂ., ಸಿ. ನವಿಕ್ರಮ್, ಮಹೇಶ್ವರಪ್ಪ ಎಚ್.ಪಿ. ಡಾ. ಮಲ್ಲಿಕಾರ್ಜುನ್ ಗೌಡ, ರಂಗಸ್ವಾಮಿ ಎಚ್.ಸಿ., ಮುನಿರೆಡ್ಡಿ ಹಾಗೂ ವೈ.ಜಿ.ಮಂಜುಳಾ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಚಿತ್ರದಲ್ಲಿ ಆರ್ ಶ್ರೀರಾಮ, ಕುಲಪತಿಗಳು ಡಾ.ಎಸ್. ರಾಜೇಂದ್ರ ಪ್ರಸಾದ್, ಡಾ. ಸಿ ರಾಮಂಜನಿ ಗೌಡ ಇದ್ದಾರೆ.
–ಪ್ರಜಾವಾಣಿ ಚಿತ್ರ

ಕೃತಿ ಬಿಡುಗಡೆ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಹೊರತಂದಿರುವ ‘ರೇಷ್ಮೆ ಕೃಷಿ ಆಧುನಿಕ ಬೇಸಾಯ ಪದ್ಧತಿಗಳು’ ಕೃತಿಯನ್ನು ರಾಜ್ಯಪಾಲರು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಿದರು.

ರೇಷ್ಮೆ ಕೃಷಿಕರಿಗೆ ಈ ಪುಸ್ತಕ ಉಪಯುಕ್ತವಾಗಿದೆ. ಒಂದು ತಿಂಗಳ ನಂತರ ಪಿಡಿಎಫ್ ರೂಪದ ಈ ಬಹು ಉಪಯೋಗಿ ಪುಸ್ತಕವನ್ನು ಉಚಿತವಾಗಿ ಮೊಬೈಲ್‌ನಲ್ಲಿ ಪಡೆಯಲು ರೈತರು ವಾಟ್ಸ್‌ಆ್ಯಪ್ ಸಂಖ್ಯೆ: 9535355329 ಅಥವಾ 8553242422ಗೆ ಸಂದೇಶದ ಮೂಲಕ ಮನವಿ ಸಲ್ಲಿಸಿ ಪಡೆದುಕೊಳ್ಳಬಹುದು ಎಂದು ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

ಅಗಸ್ಟಾ ವೆಸ್ಟ್‌ಲ್ಯಾಂಡ್ ಮೇಲಿನ ನಿಷೇಧ ವಾಪಸ್

ನವದೆಹಲಿ (ಪಿಟಿಐ): ಇಟಲಿಯ ಲಿಯೊನಾರ್ಡೊ ಸ್ಪಾ ಮತ್ತು ಅದರ ಅಂಗಸಂಸ್ಥೆ ಅಗಸ್ಟಾ ವೆಸ್ಟ್‌ಲ್ಯಾಂಡ್ ಮೇಲೆ ವಿಧಿಸಲಾಗಿದ್ದ ನಿಷೇಧವನ್ನು ರಕ್ಷಣಾ ಸಚಿವಾಲಯ ಹಿಂತೆಗೆದುಕೊಂಡಿದೆ.

ವಹಿವಾಟು ಕುರಿತಂತೆ ನಿಷೇಧ ಹೇರಲಾಗಿರುವ ವಿವಿಧ ಉದ್ಯಮ ಸಂಸ್ಥೆಗಳ ಪರಿಷ್ಕೃತ ಪಟ್ಟಿಯಲ್ಲಿ ಈ ಎರಡೂ ಸಂಸ್ಥೆಗಳ ಹೆಸರು ಇಲ್ಲ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

2014ರಲ್ಲಿ ₹ 3,500 ಕೋಟಿ ಮೌಲ್ಯದ ವಿವಿಐಪಿ ಹೆಲಿಕಾಪ್ಟರ್‌ಗಳ ಖರೀದಿ ವಹಿವಾಟಿನಲ್ಲಿ ಭ್ರಷ್ಟಾಚಾರ ಪ್ರಕರಣದಲ್ಲಿ ಅಗಸ್ಟಾ ವೆಸ್ಟ್‌ಲ್ಯಾಂಡ್ ಮತ್ತು ಲಿಯೊನಾರ್ಡ್ ಸ್ಪಾ (ಹಿಂದಿನ ಫಿನ್‌ಮೆಕಾನಿಕ) ಸಂಸ್ಥೆಗಳ ಹೆಸರು ಕೇಳಿಬಂದಿತ್ತು. ನಿಷೇಧ ಹೇರಿರುವ ಸಂಸ್ಥೆಗಳ ಪರಿಷ್ಕೃತ ಪಟ್ಟಿ ಕುರಿತ ಸಚಿವಾಲಯ ನ.12ರಂದು ಅಧಿಸೂಚನೆ ಹೊರಡಿಸಿದೆ.

ಒಪ್ಪಂದದ ನಿಯಮ ಉಲ್ಲಂಘನೆ, ವಹಿವಾಟು ಆದೇಶ ಪಡೆಯಲು ರುಷುವತ್ತು ನೀಡಲಾಗಿದೆ ಎಂಬ ಆರೋಪಗಳಿಂದಾಗಿ 12ಎಡಬ್ಲ್ಯು 101 ವಿವಿಐಪಿ ಹೆಲಿಕಾಪ್ಟರ್‌ಗಳ ಪೂರೈಕೆ ಕುರಿತ ಒಪ್ಪಂದವನ್ನು ಭಾರತವು ಈ ಹಿಂದೆ ರದ್ದುಪಡಿಸಿತ್ತು.

ಹಿಂಸೆಗೆ ಪ್ರಚೋದನೆ ದೂರು: ಇಬ್ಬರು ಪತ್ರಕರ್ತೆಯರು ಪೊಲೀಸ್ ವಶಕ್ಕೆ

ಪ್ರಜಾವಾಣಿ ವಾರ್ತೆ

ಗುವಾಹಟಿ: ಕೋಮುಗಲಭೆಗೆ ಸಂಬಂಧಿಸಿದ ವರದಿ ಕುರಿತಂತೆ ಮುಂಬೈ ಮೂಲದ ಇಬ್ಬರು ಪತ್ರಕರ್ತೆಯರನ್ನು ಅಸ್ಸಾಂ ಪೊಲೀಸರು ವಶಕ್ಕೆ ಪಡೆದಿದ್ದು, ವಿಚಾರಣೆಗಾಗಿ ನೆರೆಯ ತ್ರಿಪುರಾಗೆ ಕರೆದೊಯ್ದಿದ್ದಾರೆ

ಡಿಜಿಟಲ್ ಮಾಧ್ಯಮ ಸಂಸ್ಥೆ ಎಚ್ ಡಬ್ಲ್ಯು ನ್ಯೂಸ್‌ನೆಟ್‌ವರ್ಕ್‌ನ ಉದ್ಯೋಗಿಗಳಾದ ಸಮೃದ್ಧಿ ಸಕುನಿಯ ಮತ್ತು ಸ್ವರಾ ಝಾ ವಶಕ್ಕೆ ಪಡೆದ ಪತ್ರಕರ್ತೆಯರು.

ವಿಶ್ವ ಹಿಂದೂ ಪರಿಷತ್‌ನ ಬೆಂಬಲಿಗ ಕಾಂಚನ್‌ದಾಸ್ ಎಂಬವರು ನೀಡಿದ್ದ ದೂರು ಆಧರಿಸಿ ಇವರ ವಿರುದ್ಧ ತ್ರಿಪುರಾದ ಫಟಿಕ್‌ರಾಯ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಗಲಭೆ ಬಾಧಿತ ಪ್ರದೇಶಗಳಿಗೆ ಭೇಟಿ ನೀಡಿದ್ದಾಗ ಈ ಪತ್ರಕರ್ತೆಯರು ಹಿಂದೂಗಳ ವಿರುದ್ಧ ಮುಸಲ್ಮಾನರನ್ನು ಪ್ರಚೋದಿಸಲು ಮುಂದಾಗಿದ್ದರು ಎಂದು ಹೇಳಲಾಗಿದೆ.

ಈ ಇಬ್ಬರು ತಂಗಿದ್ದ ಹೋಟೆಲ್‌ನ ಕೊಠಡಿಗೆ ಬಂದ ಪೊಲೀಸರು ಎಫ್‌ಐಆರ್ ಪ್ರತಿಯನ್ನು ನೀಡಿದರು. ನಮಗೆ ಅಗರ್ತಲಾಗೆ ಹೋಗಲು ಅವಕಾಶ ನೀಡಲಿಲ್ಲ. ಹೋಟೆಲ್‌ನ ಹೊರಗೆ 16–17 ಪೊಲೀಸರನ್ನು ನಿಯೋಜಿಸಲಾಗಿತ್ತು ಎಂದು ಸಮೃದ್ಧಿ ಘಟನೆ ಕುರಿತು ಟ್ವೀಟ್ ಮಾಡಿದ್ದಾರೆ.

ತೂಕ ಹೆಚ್ಚಳಕ್ಕೆ ಪೌಷ್ಟಿಕ ಲಡ್ಡು

• ಡಿ.ಸುರೇಶ್

ಯಲಹಂಕ: ಅಪೌಷ್ಟಿಕತೆಯಿಂದ ಬಳಲುತ್ತಿರುವ ರೈತಮಹಿಳೆಯರಿಗಾಗಿ ಸ್ಥಳೀಯವಾಗಿ ಲಭ್ಯವಿರುವ ಆಹಾರಪದಾರ್ಥಗಳನ್ನು ಬಳಸಿಕೊಂಡು ದಿನನಿತ್ಯದ ಬಳಕೆಗೆ ಕೃಷಿ ವಿಶ್ವವಿದ್ಯಾಲಯದ ಅಖಿಲ ಭಾರತ ಸುಸಂಘಟಿತ ಸಂಶೋಧನಾ ಯೋಜನೆಯಡಿ (ಆಹಾರ-ಪೋಷಣೆ) ಪೌಷ್ಟಿಕ ಲಡ್ಡು ಸಿದ್ಧಪಡಿಸಲಾಗಿದೆ.

ಕೃಷಿ ಮೇಳದಲ್ಲಿ ಈ ಲಡ್ಡುವನ್ನು ಪ್ರದರ್ಶನಕ್ಕಿಡಲಾಗಿತ್ತು. ಭಾರತೀಯ ಕೃಷಿ ಅನುಸಂಧಾನ ಮಂಡಳಿ ಅಧೀನದಲ್ಲಿ ರೈತ ಮಹಿಳೆಯರಿಗಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯ ಅನುದಾನದಲ್ಲಿ ಈ ಸಂಶೋಧನೆಯನ್ನು ಕೈಗೊಳ್ಳಲಾಗಿದೆ. ಸ್ಥಳೀಯವಾಗಿ ಲಭ್ಯವಿರುವರಾಗಿ, ಅಕ್ಕಿ, ಕಡ್ಲೆಬೀಜ, ಹುರಿಗಡಲೆ, ಎಳ್ಳು, ಸೋಯಾ ಅವರೆ, ಹಾಲಿನಪುಡಿ, ಕೊಬ್ಬರಿಪುಡಿ, ಗೋಡಂಬಿ, ಸಕ್ಕರೆ ಮತ್ತು ತುಪ್ಪ ಬಳಸಿ ಈ ಲಡ್ಡು ತಯಾರಿಸಲಾಗುತ್ತದೆ. 100 ಗ್ರಾಂ ತೂಕದ ಲಡ್ಡುವಿನಲ್ಲಿ 515 ಕ್ಯಾಲರಿಗಳಷ್ಟು ಶಕ್ತಿ ಮತ್ತು 9.5 ಗ್ರಾಂ ಪ್ರೋಟಿನ್ ಅಂಶಗಳಿರುತ್ತದೆ. ಕೃಷಿ ಮಹಿಳೆಯರು ದುರ್ಬಲರಾಗಿದ್ದರೆ ದೈಹಿಕ ಶ್ರಮದ ಕೆಲಸ ಕಾರ್ಯನಿರ್ವಹಿಸುವುದು ಕಷ್ಟ. ಅಂತಹವರಿಗಾಗಿಯೇ ಈ ಲಡ್ಡು ತಯಾರಿಸಲಾಗಿದೆ ಎಂದು ಆಹಾರ ಮತ್ತು ಪೋಷಣೆ ವಿಭಾಗದ ಹಿರಿಯ ವಿಜ್ಞಾನಿ ಡಾ.ಕೆ. ಗೀತಾ ಮಾಹಿತಿ ನೀಡಿದರು.



ಪೌಷ್ಟಿಕ ಲಡ್ಡು

ಕಡಿಮೆ ದೇಹತೂಕ ಹೊಂದಿರುವ ಅಪೌಷ್ಟಿಕ ರೈತ ಮಹಿಳೆಯರ ದೈಹಿಕ ಬೇಡಿಕೆಯ ಮೂರನೇ ಒಂದು ಭಾಗದಷ್ಟು ಶಕ್ತಿ ಮತ್ತು ಸಸಾರಜನಕ ಪೂರೈಸುವಷ್ಟು ಲಡ್ಡುವನ್ನು ದೈನಂದಿನ ಆಹಾರದೊಂದಿಗೆ ಪೂರಕ ಆಹಾರವಾಗಿ ನೀಡಲಾಗಿತ್ತು. 120 ದಿನ ಇದನ್ನು ಸೇವಿಸಿದ ಮಹಿಳೆಯರಲ್ಲಿ ದೇಹತೂಕ ಹೆಚ್ಚುವುದರ ಜೊತೆಗೆ ರಕ್ತದ ಹೀಮೊಗ್ಲೋಬಿನ್ ಮಟ್ಟ ಹೆಚ್ಚಾಗಿದೆ ಎಂದು ತಿಳಿಸಿದರು. ಅಪೌಷ್ಟಿಕತೆಯಿಂದ ಬಳಲುತ್ತಿರುವ ಎಲ್ಲರೂ ಈ ಲಡ್ಡನ್ನು ಪೂರಕ ಆಹಾರವಾಗಿ ಬಳಸಬಹುದು. ಇದನ್ನು ತಯಾರಿಸುವ ತಾಂತ್ರಿಕತೆಯನ್ನು ಒಪ್ಪಂದ ಮಾಡಿಕೊಳ್ಳುವ ಮೂಲಕ ಪಡೆದುಕೊಂಡು ಸ್ಟಾರ್ಟ್‌ಅಪ್ ಕಂಪನಿ ಮತ್ತು ಸ್ವಂತ ಉದ್ದಿಮೆ ಆರಂಭಿಸಬಹುದು. ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ, ಶಿಕ್ಷಣ ಮತ್ತು ಆರೋಗ್ಯ ಇಲಾಖೆಗಳ ಮೂಲಕ ಫಲಾನುಭವಿಗಳಿಗೆ ತಲುಪಿಸಬಹುದು ಎಂದು ಆಹಾರ ಮತ್ತು ಪೋಷಣೆ ವಿಭಾಗದ ಕಿರಿಯ ವಿಜ್ಞಾನಿ ಡಾ.ಗೀತಾ ಯಂಕಂಚಿ ತಿಳಿಸಿದರು. ಸಂಪರ್ಕ: 9449523085/ 9448335077

ಪ್ರಜಾವಾಣಿ ಮತ್ತು ಕ್ಯೂಪ
ಪ್ರಸ್ತುತ ಪಡಿಸುತ್ತಿವೆ
ಮೂಕ ಕಥೆಗಳು
ಒಳ್ಳೆಯತನದ ಹಾದಿಯಲ್ಲಿ ಮೊದಲ ಹೆಜ್ಜೆ

ಕಾಯುವ ಕೈ ಎಂದೆಂದಿಗೂ ಮೇಲು ಎಂಬ ನಾಣ್ನುಡಿ ಅದೆಷ್ಟು ನಿಜವೆನಿಸುತ್ತದೆ. ಬೀದಿಗಳಲ್ಲಿ ಆಶ್ರಯವಿಲ್ಲದೆ ಅಲೆದಾಡುವ ಮೂಕಜೀವಿಗಳಿಗೆ ನೆರವಾಗುವುದಕ್ಕಿಂತ ಇನ್ನೊಂದು ಪುಣ್ಯದ ಕಾರ್ಯ ಇರಬಹುದೆ? ಬನ್ನಿ, ಕ್ಯೂಪದೊಂದಿಗೆ ಕೈಜೋಡಿಸಿ, ಬೆಂಗಳೂರಿನ ಸುತ್ತ ನಿರ್ಲಕ್ಷ್ಯ ಮತ್ತು ಕ್ರೌರ್ಯಕ್ಕೊಳಗಾಗಿ ದಿಕ್ಕಿಲ್ಲದೆ ಅಲೆಯುತ್ತಿರುವ ಪ್ರಾಣಿಗಳಿಗೆ ನೆರವಾಗೋಣ. ಅವುಗಳಿಗೆ ಒಂದು ಆಶ್ರಯ ನೀಡೋಣ.

ದತ್ತು ಪಡೆದು ಮೂಕಜೀವಿಗೊಂದು ಆಶ್ರಯ ನೀಡಿ
ಮೂಕಜೀವಿ ಹಿಂಸೆ ವಿರುದ್ಧ ನಿಮ್ಮ ಧ್ವನಿ ಎತ್ತಿ
ಕ್ಯೂಪದೊಂದಿಗೆ ಸ್ವಯಂಸೇವೆಗೆ ಸೇರಿ ಮೂಕಜೀವಿಗಳ ಸಂರಕ್ಷಣೆಗೆ ನೆರವಾಗಿ

ಹೆಚ್ಚಿನ ಮಾಹಿತಿಗಾಗಿ bit.ly/PVCUPAಗೆ ಬೇಟಿ ಕೊಡಿ ಅಥವಾ QR ಕೋಡ್ ಅನ್ನು ಸ್ಕ್ಯಾನ್ ಮಾಡಿ

ಪ್ರಜಾವಾಣಿ
Compassion Unlimited Plus Action CUPA
ಮೂಕ ಕಥೆಗಳು
ಕಾಯುವ ಕೈ ಎಂದೆಂದಿಗೂ ಮೇಲು

ಮಹದೇಶ್ವರ ಬೆಟ್ಟದಲ್ಲಿ ರಸ್ತೆಗೆ ಉರುಳಿದ ಬಂಡೆ • ಪಾಂಡವಪುರ ತಾಲ್ಲೂಕಿನಲ್ಲಿ 78 ಮನೆಗಳು ಭಾಗಶಃ ಕುಸಿತ

ಮಳೆ: ಗೋಡೆ ಕುಸಿದು ನಾಲ್ವರು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಭಾನುವಾರ ಮಳೆ ಸಂಬಂಧಿತ ಅವಘಡಗಳಲ್ಲಿ ಬಾಲಕ ಸೇರಿದಂತೆ ನಾಲ್ವರು ಮೃತಪಟ್ಟಿದ್ದಾರೆ. ಮನೆಯ ಗೋಡೆ ಕುಸಿದು ಚಿತ್ರದುರ್ಗ ಜಿಲ್ಲೆಯಲ್ಲಿ ಗರ್ಭಿಣಿ ಸೇರಿದಂತೆ ಒಂದೇ ಕುಟುಂಬದ ಮೂವರು ಮತ್ತು ಮಂಡ್ಯ ಜಿಲ್ಲೆಯಲ್ಲಿ ಬಾಲಕನೊಬ್ಬ ಮೃತಪಟ್ಟಿದ್ದಾರೆ.

ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನಲ್ಲಿ 78 ಮನೆಗಳು ಭಾಗಶಃ ಕುಸಿದಿವೆ. ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ರಸ್ತೆಯೊಂದು 30 ಅಡಿಯಷ್ಟು ಉದ್ದಕ್ಕೆ ಕುಸಿದಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಡಿಕೆ, ಕಾಫಿ ಬೆಳೆ, ದಾವಣಗೆರೆ ಜಿಲ್ಲೆಯಲ್ಲಿ ರಾಗಿ, ಮೆಕ್ಕೆಜೋಳ ಬೆಳೆಗೆ ಹಾನಿಯಾಗಿದೆ

ಮೈಸೂರು ವರದಿ: ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕು ಕೆನ್ನಾಳು ಗ್ರಾಮದಲ್ಲಿ ಭಾರಿ ಮಳೆಯಿಂದಾಗಿ ಭಾನುವಾರ ಮನೆಯ ಗೋಡೆ ಕುಸಿದು, 11 ವರ್ಷದ ಬಾಲಕ ಮೃತಪಟ್ಟಿದ್ದಾನೆ. 1 ಹಸು, 1 ಕರು, 2 ಮೇಕೆಯೂ ಮೃತಪಟ್ಟಿವೆ.

ಗಗನ್

ಗ್ರಾಮದ ಜಯಮ್ಮ ಅವರ ಮನೆಯ ಒಂದು ಭಾಗ ಕುಸಿದಿದ್ದು, ಅಲ್ಲೇ ಕಟ್ಟಿಹಾಕಿದ್ದ ಜಾನುವಾರುಗಳ ಮೇಲೆ ಬಿದ್ದಿದೆ. ಗೋಡೆ ಕುಸಿದ ವೇಳೆ ಪಕ್ಕದ ಮನೆಯ ಬಳಿ ಕುಳಿತಿದ್ದ ಮಂಜುನಾಥ್ ಅವರ ಪುತ್ರ ಗಗನ್ (11) ಗಾಯಗೊಂಡಿದ್ದು, ಬಳಿಕ ಆಸ್ಪತ್ರೆಯಲ್ಲಿ ಮೃತಪಟ್ಟನು.

ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ ಶನಿವಾರ ಭಾರಿ ಮಳೆಯಾಗಿದೆ. ಹುಣಸನಹಳ್ಳಿ ಗ್ರಾಮದಿಂದ ಬಳ್ಳೇಕೆರೆ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಕೊಚ್ಚಿ ಹೋಗಿದೆ. ಶ್ರೀರಂಗಪಟ್ಟಣ ತಾಲ್ಲೂಕಿನ ನೆಲಮನೆ ಗ್ರಾಮದಿಂದ ಪಾಂಡವಪುರ ತಾಲ್ಲೂಕಿನ ಚಿಕ್ಕಾಡೆ ಮತ್ತು ಪಟ್ಟಸೋಮನಹಳ್ಳಿ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ 30 ಅಡಿಯಷ್ಟು ಕುಸಿದಿದೆ. ಪಟ್ಟಣದ ಶ್ರೀರಂಗನಾಥಸ್ವಾಮಿ ದೇವಾಲಯ ರಸ್ತೆಯಲ್ಲಿರುವ ಸೆಂದಿಲ್ ಕೋಟೆಯ ಪ್ರವೇಶ ದ್ವಾರದ ಎಡ ಭಾಗ ಮತ್ತು ಬಲ ಭಾಗದಲ್ಲಿ 10 ಮೀಟರ್‌ಗೂ ಹೆಚ್ಚು ಕುಸಿದಿದೆ.

ಮೈಸೂರು ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆಯೂ ಶನಿವಾರ ರಾತ್ರಿ ಭಾರಿ ಮಳೆಯಾಗಿದೆ. ಬೋಗಾದಿ ಕೆರೆ ಸುತ್ತಮುತ್ತಲ ಪ್ರದೇಶಗಳು ಜಲಾವೃತಗೊಂಡಿವೆ. ತಾಲ್ಲೂಕಿನಲ್ಲಿ 20 ಮನೆಗಳು ಭಾಗಶಃ ಕುಸಿದಿವೆ. ನಂಜನಗೂಡು ತಾಲ್ಲೂಕಿನಲ್ಲಿ ಎರಡು ಮನೆಗಳು ಕುಸಿದಿವೆ.

ದಿವಾನ್ಸ್ ರಸ್ತೆ ಹಾಗೂ ಗೋಕುಲಂನಲ್ಲಿ ಮರಗಳು ಉರುಳಿವೆ. ಮೈಸೂರು ನಗರದಲ್ಲಿ 6 ಸೆಂ.ಮೀ., ಕೆ.ಆರ್.ನಗರ ತಾಲ್ಲೂಕು ಹಳಿಯೂರಿನಲ್ಲಿ 8 ಸೆಂ.ಮೀ.ನಷ್ಟು ಮಳೆ ಸುರಿದಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮೂಲಗಳು ತಿಳಿಸಿವೆ.

ಚಾಮರಾಜನಗರ ತಾಲ್ಲೂಕಿನ ಸುವರ್ಣಾವತಿ ಜಲಾಶಯ ಭರ್ತಿಯಾಗಿದ್ದು, ನದಿಗೆ ನೀರು ಹರಿಸಲಾಗಿದೆ. ಯಳಂದೂರು ತಾಲ್ಲೂಕು ಕೆಸ್ತೂರಿನಲ್ಲಿ ಮೂರು, ಬಿಳಿಗಿರಿರಂಗನಬೆಟ್ಟದಲ್ಲಿ ಒಂದು ಮನೆ ಕುಸಿದಿದೆ. ಮಹದೇಶ್ವರ ಬೆಟ್ಟದ ರಸ್ತೆಗೆ ಬೃಹತ್ ಬಂಡೆ ಉರುಳಿದೆ.

ಕೊಡಗು ಜಿಲ್ಲೆಯಲ್ಲಿ ಮಳೆ ಮುಂದುವರಿದಿತ್ತು. ಜಿಲ್ಲೆಯ ವಿವಿಧೆಡೆ ಕಾಫಿ ಒಣಗಿಸಲು ಬೆಳೆಗಾರರು ಪರದಾಡುತ್ತಿದ್ದಾರೆ. ಹಾಸನ ಜಿಲ್ಲೆಯಲ್ಲಿ ತುಂತುರು ಮಳೆಯಾಗಿದೆ.

ಮೈಸೂರಿನ ದಿವಾನ್ಸ್ ರಸ್ತೆಯಲ್ಲಿ ಮರ ಉರುಳಿ ಕಾಂಪೌಂಡ್‌ಗೆ ಹಾನಿಯಾಗಿದೆ (ಎಡ ಚಿತ್ರ) ಚಾಮರಾಜನಗರ ಜಿಲ್ಲೆಯ ಮಹದೇಶ್ವರ ಬೆಟ್ಟದ ರಸ್ತೆಯಲ್ಲಿ ಬಂಡೆ ಉರುಳಿರುವುದು –ಪ್ರಜಾವಾಣಿ ಚಿತ್ರಗಳು

ಗರ್ಭಿಣಿ ಸೇರಿ ಒಂದೇ ಕುಟುಂಬದ ಮೂವರ ಸಾವು

ಹಿರಿಯೂರು (ಚಿತ್ರದುರ್ಗ): ತಾಲ್ಲೂಕಿನ ಕಾರೋಬಯ್ಯನಹಟ್ಟಿಯಲ್ಲಿ ಮೂರು ದಿನಗಳಿಂದ ಸುರಿಯುತ್ತಿರುವ ಜಿಟಿಜಿಟಿ ಮಳೆಗೆ ಮನೆಯೊಂದರ ಶಿಥಿಲಗೊಂಡಿದ್ದ ಗೋಡೆ ಕುಸಿದು ಒಂದೇ ಕುಟುಂಬದ ಮೂವರು ಮೃತಪಟ್ಟಿದ್ದಾರೆ.

ಚನ್ನಕೇಶವ (26) ಹಾಗೂ ಅವರ ಪತ್ನಿ ಸೌಮ್ಯ (20) ಸ್ಥಳದಲ್ಲೇ ಮೃತಪಟ್ಟಿದ್ದು, ತೀವ್ರವಾಗಿ ಗಾಯಗೊಂಡಿದ್ದ ಮನೆಯ ಯಜಮಾನ ಕ್ಯಾಸಣ್ಣ (55) ಚಿಕಿತ್ಸೆಗೆ ಸ್ಪಂದಿಸದೇ ಚಿತ್ರದುರ್ಗ ಸರ್ಕಾರಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಭಾನುವಾರ ಬೆಳಗಿನ ಜಾವ ಮನೆಯ ಗೋಡೆ ಕುಸಿದುಬಿದ್ದಿದೆ. ಗೋಡೆ ಬಿದ್ದ ಶಬ್ದ ಕೇಳಿದ ಅಕ್ಕಪಕ್ಕದ ಮನೆಯವರು ರಕ್ಷಣೆಗೆ ಧಾವಿಸುವ ವೇಳೆಗೆ ದಂಪತಿ ಮೃತಪಟ್ಟಿದ್ದರು. ಮತ್ತೊಂದು ಬದಿಯಲ್ಲಿ ಮಲಗಿದ್ದ ಕ್ಯಾಸಪ್ಪನ ಪತ್ನಿ ಪಾರಾಗಿದ್ದಾರೆ.

ಹಿರಿಯೂರು ತಾಲ್ಲೂಕಿನ ಕಾರೋಬಯ್ಯನಹಟ್ಟಿಯಲ್ಲಿ ಕ್ಯಾಸಣ್ಣ ಅವರ ಮನೆಯ ಗೋಡೆ ಕುಸಿದಿರುವುದು

ಸೌಮ್ಯ ಹಾಗೂ ಚನ್ನಕೇಶವ ಒಂಬತ್ತು ತಿಂಗಳ ಹಿಂದಷ್ಟೇ ವಿವಾಹವಾಗಿದ್ದರು. ಸೌಮ್ಯ ಮೂರು ತಿಂಗಳ ಗರ್ಭಿಣಿ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.80	5,533	4,376
ಹಾರಂಗಿ	2,859	2,857.48	1,102	950
ಕಬಿನಿ	2284	2,283.89	2,100	700
ಹೇಮಾವತಿ	2,922	2,908.45	2,743	3,556
ಲಿಂಗನಮಕ್ಕಿ	1,819	1,813.45	2,959	-
ಸೂಪಾ (ಮೀ)	564	555.47	1,274	3,890
ಮಾಣಿ	594.36	586.68	35	-
ತುಂಗಭದ್ರಾ	1,633	1,632.30	8,417	9,134
ಮಲಪ್ರಭಾ	2079.50	2,076.49	-	2,444
ಘಟಪ್ರಭಾ	2175	2,167.69	-	2,620
ಭದ್ರಾ	186	185.40	788	-
ಆಲಮಟ್ಟಿ (ಮೀ)	519.6	518.63	-	1,045
ನಾರಾಯಣಪುರ (ಮೀ)	492.25	491.32	11,400	6,002

* ನೆಲಮಟ್ಟದಿಂದ

ಮೆಟ್ಟೂರು ಜಲಾಶಯ 2 ವರ್ಷದ ನಂತರ ಭರ್ತಿ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ಸೇಲಂ ಜಿಲ್ಲೆ ಮೆಟ್ಟೂರಿನಲ್ಲಿರುವ ಸ್ಟ್ಯಾನ್ಲಿ ಜಲಾಶಯವು ಎರಡು ವರ್ಷದ ಬಳಿಕ ಪೂರ್ಣಪ್ರಮಾಣದಲ್ಲಿ ಭರ್ತಿಯಾಗಿದೆ. ಜಲಾಶಯದ ಗರಿಷ್ಠ ಮಟ್ಟ 120.100 ಅಡಿ. ಕರ್ನಾಟಕದ ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆಯಾಗುತ್ತಿರುವುದು ಇದಕ್ಕೆ ಕಾರಣ.

87 ವರ್ಷ ಹಳೆಯದಾದ ಜಲಾಶಯದ ಮಟ್ಟವು ರಾಜ್ಯದ ವಿವಿಧೆಡೆ ಸುರಿಯುತ್ತಿರುವ ಮಳೆ ಹಾಗೂ ಕರ್ನಾಟಕದಿಂದ ಒಳಹರಿವು ಹೆಚ್ಚಿದ್ದ ಕಾರಣದಿಂದ 119 ಅಡಿಗೆ ತಲುಪಿತ್ತು. ಭಾನುವಾರ ಬೆಳಗಿನ ಜಾವ ಗರಿಷ್ಠ ಮಟ್ಟವನ್ನು ತಲುಪಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಲಾಶಯಕ್ಕೆ ಸದ್ಯ ಒಳಹರಿವಿನ ಪ್ರಮಾಣ 40 ಸಾವಿರ ಕ್ಯೂಸೆಕ್ ಅಡಿ ಇದ್ದರೆ, ನದಿ ಮತ್ತು ಕಾಲುವೆಗೆ 40,150 ಕ್ಯೂಸೆಕ್ ಅಡಿ ನೀರು ಹರಿಸಲಾಗುತ್ತಿದೆ. ಈ ಹಿಂದೆ ಜಲಾಶಯ 2019ರ ಸೆಪ್ಟೆಂಬರ್‌ನಲ್ಲಿ ಎರಡು ಬಾರಿ, ಅ. 23 ಮತ್ತು ನ. 11ರಂದು ಪೂರ್ಣ ಭರ್ತಿಯಾಗಿತ್ತು.

ನದಿಗೆ ಹೆಚ್ಚುವರಿ ನೀರು ಹರಿಸಲಾಗುತ್ತಿರುವ ಕಾರಣದಿಂದ ತಮಿಳುನಾಡು ಸರ್ಕಾರ, ರಾಜ್ಯದ 11 ಜಿಲ್ಲೆಗಳ ಜಿಲ್ಲಾಡಳಿತಗಳಿಗೆ ನದಿಪಾತ್ರದ ಪ್ರದೇಶಗಳಲ್ಲಿ ಕಟ್ಟೆಚ್ಚರವನ್ನು ವಹಿಸುವಂತೆ ಸೂಚನೆಯನ್ನು ನೀಡಿದೆ.

ಕರಾವಳಿ ಜಿಲ್ಲೆಗಳಲ್ಲಿ ‘ಆರೆಂಜ್ ಅಲರ್ಟ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕರಾವಳಿ ಭಾಗದಲ್ಲಿ ಮಳೆ ಮುಂದುವರಿದಿದ್ದು, ನ.15ರಿಂದ 17ರವರೆಗೆ ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಭಾಗದಲ್ಲಿ ಗುಡುಗು, ಸಿಡಿಲು ಸಹಿತ ಭಾರಿ ಮಳೆಯ ಸಾಧ್ಯತೆ ಇರುವುದರಿಂದ ನ.15ರಂದು ‘ಆರೆಂಜ್ ಅಲರ್ಟ್’ ಘೋಷಿಸಲಾಗಿದೆ.

ದಕ್ಷಿಣ ಒಳನಾಡಿನ ಚಾಮರಾಜನಗರ, ಚಿಕ್ಕಮಗಳೂರು, ದಾವಣಗೆರೆ, ಹಾಸನ, ಕೊಡಗು, ಮೈಸೂರು ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲೂ ಮಳೆಯಾಗುವ ಸೂಚನೆಗಳಿರುವುದರಿಂದ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ.

‘ಅಂಡಮಾನ್ ಭಾಗದಲ್ಲಿ ಉಂಟಾಗಿದ್ದ ವಾಯುಭಾರ ಕುಸಿತದ ಪರಿಣಾಮ ಮುಂದುವರಿದಿದೆ. ಹಾಗಾಗಿ, ರಾಜ್ಯದ ಹಲವು ಜಿಲ್ಲೆಗಳಲ್ಲಿ ಮುಂದಿನ ಎರಡು ದಿನಗಳವರೆಗೆ ಮಳೆಯಾಗಲಿದೆ. ಇದೇ 18ರ ನಂತರ ರಾಜ್ಯದಲ್ಲಿ ಮಳೆ ತಗ್ಗಲಿದೆ’ ಎಂದು ಹವಾಮಾನ ತಜ್ಞರು ತಿಳಿಸಿದ್ದಾರೆ.

ಮಳೆ-ಎಲ್ಲಿ, ಎಷ್ಟು?: ಮಂಡ್ಯ ಜಿಲ್ಲೆಯ ಪಾಂಡವಪುರದಲ್ಲಿ ಭಾನುವಾರ 19 ಸೆಂ.ಮೀನಷ್ಟು ಗರಿಷ್ಠ ಮಳೆಯಾಗಿದೆ. ಧರ್ಮಸ್ಥಳ 14, ಶ್ರೀರಂಗಪಟ್ಟಣ 9, ಬೆಳ್ತಂಗಡಿ 6, ಮೈಸೂರು 5, ಪುತ್ತೂರು, ಹಾಸನ, ಪಾವಗಡ 4, ಚಿಂಚೋಳಿ, ತೀರ್ಥಹಳ್ಳಿ, ಸೊರಬ, ಮದ್ದೂರು, ಮಳವಳ್ಳಿ, ನಂಜನಗೂಡು 3, ಕಾರ್ಕಳ, ಚಿಕ್ಕಮಗಳೂರು, ಮಂಡ್ಯ, ಗಂಗಾವತಿ, ಹಿರಿಯೂರು, ಮಡಿಕೇರಿ, ಅರಕಲಗೂಡು, ನೆಲಮಂಗಲ 2, ಮೂಡುಬಿದರೆ, ಗದಗ, ಚಿಂತಾಮಣಿ, ತಿಪಟೂರು, ಕೊಳ್ಳೇಗಾಲದಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ. ದಾವಣಗೆರೆಯಲ್ಲಿ 18 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

‘ಕಾಯಕಶ್ರೀ’ ಪ್ರಶಸ್ತಿಗೆ ಕಿರಣ್ ಬೇಡಿ ಆಯ್ಕೆ

ಪ್ರಜಾವಾಣಿ ವಾರ್ತೆ

ಗೋಕಾಕ (ಬೆಳಗಾವಿ ಜಿಲ್ಲೆ): ‘ಬರುವ ಫೆಬ್ರುವರಿಯಲ್ಲಿ ಗೋಕಾಕದಲ್ಲಿ ಜರುಗಲಿರುವ 17ನೇ ಶರಣ ಸಂಸ್ಕೃತಿ ಉತ್ಸವದಲ್ಲಿ ಶ್ರೀಮಠದಿಂದ ನೀಡುವ ‘ಕಾಯಕಶ್ರೀ’ ಪ್ರಶಸ್ತಿಗೆ ಈ ಬಾರಿ ನಿವೃತ್ತ ಐಪಿಎಸ್ ಅಧಿಕಾರಿ, ಮಾಜಿ ಲೆಫ್ಟಿನೆಂಟ್ ಗವರ್ನರ್ ಕಿರಣ್ ಬೇಡಿ ಆಯ್ಕೆಯಾಗಿದ್ದಾರೆ’ ಎಂದು ಇಲ್ಲಿಯ ಶೂನ್ಯ ಸಂಪಾದನ ಮಠದ ಪೀಠಾಧಿಪತಿ ಮುರುಘರಾಜೇಂದ್ರ ಸ್ವಾಮೀಜಿ ಪ್ರಕಟಿಸಿದರು.

ನಗರದ ಶೂನ್ಯ ಸಂಪಾದನಮಠದಲ್ಲಿ ಶನಿವಾರ ಸಂಜೆ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀಗಳು, ‘ಕಾಯಕಶ್ರೀ ಈ ಪ್ರಶಸ್ತಿಯು ₹1 ಲಕ್ಷ ನಗದು, ಪ್ರಶಸ್ತಿ ಪತ್ರ ಮತ್ತು ಫಲ ತಾಂಬೂಲಗಳನ್ನು ಒಳಗೊಂಡಿದೆ. ಬರುವ ಫೆಬ್ರುವರಿ 1 ರಿಂದ 4ರವರೆಗೆ ನಡೆಯುವ ಶರಣ ಸಂಸ್ಕೃತಿ ಉತ್ಸವದಲ್ಲಿ ಪ್ರಶಸ್ತಿ ಪ್ರದಾನ (ಫೆ.2ರಂದು) ಮಾಡಲಾಗುವುದು ಎಂದು ಹೇಳಿದರು.

ಮಲೆನಾಡು, ಕರಾವಳಿಯ ವಿವಿಧೆಡೆ ಮಳೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಭಾಗ ಹಾಗೂ ಕರಾವಳಿಯ ಕೆಲವೆಡೆ ಭಾನುವಾರ ಧಾರಾಕಾರ ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ, ಕಳಸ ಭಾಗದಲ್ಲಿ ಕಾಫಿ, ಅಡಿಕೆ ಬೆಳೆಗೆ ಹಾನಿಯಾಗಿದೆ. ಕೊಪ್ಪ ಪಟ್ಟಣದ ಸಾರ್ವಜನಿಕರ ಆಸ್ಪತ್ರೆ ಮುಂಭಾಗದ ರಸ್ತೆ ಬದಿಯ ಅಂಗಡಿ ಮಳಿಗೆಗಳಿಗೆ ನೀರು ನುಗ್ಗಿತ್ತು.

ಕಳಸ ಬಳಿಯ ಬಾಳೆಹೊಳೆ ಭಾಗದ ತೋಟಗಳಲ್ಲಿ ನೀರು ಭೋರ್ಗರೆದು ಹರಿದಿದೆ. ಉದುರಿದ್ದ ಅಡಿಕೆ ಕಾಯಿಗಳು ನೀರು ಪಾಲಾಗಿವೆ. ಬದುಗಳು ಕೊಚ್ಚಿ ಹೋಗಿವೆ. ಕೆಲವೆಡೆ ಮಣ್ಣು ಕೊಚ್ಚಿ ಹೋಗಿ ಕೊರಕಲಾಗಿದೆ. ಕಾಫಿ ಗಿಡಗಳಲ್ಲಿನ ಕಾಯಿಗಳು ಉದುರಿವೆ.

ಕೊಪ್ಪ, ಕಳಸ ಭಾಗದ ಕೆಲವೆಡೆ ವಿದ್ಯುತ್ ಪೂರೈಕೆ ಸ್ಥಗಿತವಾಗಿತ್ತು. ಭದ್ರಾ ನದಿಯಲ್ಲಿ ಹರಿವು ತುಸು ಜಾಸ್ತಿಯಾಗಿದೆ. ಚಿಕ್ಕಮಗಳೂರು, ಗಿರಿಶ್ರೇಣಿ, ಶೃಂಗೇರಿ, ಮೂಡಿಗೆರೆ ಭಾಗದಲ್ಲಿ ಸಾಧಾರಣವಾಗಿ ಮಳೆ ಸುರಿದಿದೆ.

ಮಂಗಳೂರು ಹಾಗೂ ಉಡುಪಿ ಜಿಲ್ಲೆಯಲ್ಲಿ ಮುಂಜಾನೆಯಿಂದಲೂ ಮೋಡ ಕವಿದ ವಾತಾವರಣವಿತ್ತು. ಸಂಜೆ 4 ಗಂಟೆಯಿಂದ ರಾತ್ರಿಯವರೆಗೂ ಮಂಗಳೂರು, ಸುಬ್ರಹ್ಮಣ್ಯ, ಮೂಡುಬಿದಿರೆ ಮುಂತಾದೆಡೆ ಗುಡುಗು ಮಿಂಚು ಸಹಿತ ಮಳೆ ಸುರಿದಿದೆ. ಉಡುಪಿಯಲ್ಲಿ ತುಂತುರು ಮಳೆಯಾಗಿದೆ.

ಚಿತ್ರದುರ್ಗ, ಶಿವಮೊಗ್ಗ –ಭಾರಿ ಮಳೆ: (ದಾವಣಗೆರೆ ವರದಿ): ಚಿತ್ರದುರ್ಗ ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗುತ್ತಿದ್ದು, ಹೊಸದುರ್ಗ ತಾಲ್ಲೂಕಿನ ದೇವರಗುಡ್ಡ, ಹಾಲುರಾಮೇಶ್ವರ ಗುಡ್ಡ, ದುಗ್ಗಾವರ ಬೆಟ್ಟ, ಲಕ್ಕಿಹಳ್ಳಿ ಅಂದ್‌ಕಲ್ಲು ಗುಡ್ಡದಿಂದ ಸಾಕಷ್ಟು ನೀರು ಹರಿಯುತ್ತಿದೆ. ಇದರಿಂದ ಜಮೀನುಗಳಲ್ಲಿ ಜೋಪು ಹೆಚ್ಚಾಗಿದೆ. ಹೊಳಲ್ಕೆರೆ, ಚಿಕ್ಕಜಾಜೂರು ಭಾಗದಲ್ಲಿ ಕೊಯ್ಲಿಗೆ ಬಂದಿದ್ದ ರಾಗಿ, ಮೆಕ್ಕೆಜೋಳ ಬೆಳೆಗೆ ಹಾನಿಯಾಗಿದೆ.

ದಾವಣಗೆರೆ ನಗರ ಸೇರಿ ಜಿಲ್ಲೆಯ ಚನ್ನಗಿರಿ, ಬಸವಾಪಟ್ಟಣ, ಮಲೇಬೆನ್ನೂರು, ಸಂತೇಬೆನ್ನೂರು, ಸಾಸ್ವೇಹಳ್ಳಿ ಹಾಗೂ ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಉಚ್ಚಂಗಿದುರ್ಗದಲ್ಲಿ ಮಳೆಯಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಕೋಣಂದೂರು, ಶಿಕಾರಿಪುರ, ಸೊರಬ, ಸಾಗರ, ತೀರ್ಥಹಳ್ಳಿಯ ಹಲವೆಡೆ ಗುಡುಗು ಸಹಿತ ಮಳೆಯಾಗಿದೆ. ಕೆಲವೆಡೆ ವಿದ್ಯುತ್ ಪೂರೈಕೆ ಸ್ಥಗಿತವಾಗಿತ್ತು. ಆಗಾಗ್ಗೆ ಮಳೆ ಸುರಿಯುತ್ತಿರುವ ಕಾರನ ಬೆಳೆ ಕೊಯ್ಲಿಗೆ ತೊಡಕಾಗಿದೆ.

ಜಗಳೂರು: ಈಜಲು ತೆರಳಿದ್ದ ಮೂವರು ಬಾಲಕರ ಸಾವು

ಪ್ರಜಾವಾಣಿ ವಾರ್ತೆ

ಜಗಳೂರು: ಇಲ್ಲಿನ ಕೆರೆಯಲ್ಲಿ ಈಜಲು ಹೋಗಿದ್ದ ಇಬ್ಬರು ಸಹೋದರರು ಸೇರಿ ಮೂವರು ಬಾಲಕರು ಶನಿವಾರ ಮೃತಪಟ್ಟಿದ್ದಾರೆ.

ತಾಲ್ಲೂಕಿನ ಸಂತೆಮುದ್ದಾಪುರ ಮೂಲದವರಾದ ಪಟ್ಟಣದ ನಿವಾಸಿ ಶೇಖಾವತ್ ಅವರ ಪುತ್ರರಾದ ಆಶಿಕ್ (10), ಅಫ್ರಾನ್ (8) ಹಾಗೂ ಅಬ್ದುಲ್ ಅವರ ಪುತ್ರ ಸೈಯದ್ ಫೈಜಾನ್ (9) ಮೃತಪಟ್ಟ ಬಾಲಕರು.

ರಾತ್ರಿಯಾದರೂ ಬಾಲಕರು ಮನೆಗೆ ಬಾರದಿರುವುದರಿಂದ ಪೋಷಕರು ಹುಡುಕಾಡಿದ್ದಾರೆ. ಸಮೀಪದ ಕೆರೆಯ ಬಳಿ ಹೋಗಿ ನೋಡಿದಾಗ ಬಾಲಕರು ಮುಳುಗಿ ಸಾವನ್ನಪ್ಪಿರುವುದು ಗೊತ್ತಾಗಿದೆ. ಬಳಿಕ ಅಗ್ನಿಶಾಮಕ ದಳದ ಸಿಬ್ಬಂದಿ ತಡರಾತ್ರಿಯವರೆಗೆ ಕಾರ್ಯಾಚರಣೆ ನಡೆಸಿ ಬಾಲಕರ ಮೃತದೇಹಗಳನ್ನು ಹೊರ ತೆಗೆದಿದ್ದಾರೆ.

ಕುರುಗೋಡು: ಅಕಾಲಿಕ ಮಳೆಯಿಂದ ಸಂಕಷ್ಟ

ಪ್ರಜಾವಾಣಿ ವಾರ್ತೆ

ಕುರುಗೋಡು (ಬಳ್ಳಾರಿ ಜಿಲ್ಲೆ): ಶನಿವಾರ ಮತ್ತು ಭಾನುವಾರ ಸುರಿದ ಅಕಾಲಿಕ ಮಳೆಗೆ ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ಭತ್ತ ಮತ್ತು ಮೆಣಸಿನಕಾಯಿ ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಸೆಪ್ಟೆಂಬರ್‌ನಲ್ಲಿ ಸುರಿದಿದ್ದ ಮಳೆಯಿಂದಾದ ಬೆಳೆನಷ್ಟದಿಂದ ಕಂಗೆಟ್ಟಿದ್ದ ರೈತರು ಉಳಿದ ಬೆಳೆ ರಕ್ಷಿಸಿಕೊಂಡಿದ್ದರು. ಈಗಿನ ಮಳೆಯಲ್ಲಿ ಅದು ಕೈಬಿಡುವ ಆತಂಕ ತಲೆದೋರಿದೆ.

‘ಮೂರು ಎಕರೆ ಸೋನಾ ಮಸೂರಿ ಭತ್ತ ಬೆಳೆದೀನಿ. ಬೆಳೆ ಕೈಸೇರೋ ಟೈಮಿನ್ಯಾಗ ಮಳೆಬಂದು ಹಾಳಾಯ್ತು’ ಎಂದು ಗೆಣಿಕೆಹಾಳು ಗ್ರಾಮದ ರೈತ ಬಸಪ್ಪ ‘ಪ್ರಜಾವಾಣಿ’ಗೆ ಅಳಲು ತೋಡಿಕೊಂಡರು.

ಮೆಣಸಿನಕಾಯಿ ಬೆಳೆಗಾರರ ಸ್ಥಿತಿಯೂ ಭಿನ್ನವಾಗಿಲ್ಲ. ಆರಂಭದಲ್ಲಿ ಮಳೆಯಿಂದ ತೇವಾಂಶ ಹೆಚ್ಚಾಗಿ ಬೇರುಕೊಳೆಯುವ ರೋಗ ಕಾಣಿಸಿತ್ತು. ಹೂ ಉದುರಿ, ಇಳುವರಿ ಕುಸಿಯುವ ಲಕ್ಷಣ ಕಂಡುಬಂದಿತ್ತು. ನಿರ್ವಹಣಾ ಮಾಡಿ ಬೆಳೆ ಉಳಿಸಿದ್ದ ರೈತರಿಗೆ ಈಗ ಅಕಾಲಿಕ ಮಳೆ ಕಂಗೆಡಿಸಿದೆ.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸ್ಥಾನದ ಚುನಾವಣೆ: ಪ್ರತಿಧ್ವನಿಸುತ್ತಿದೆ ಮಹಿಳಾ ಪ್ರಾತಿನಿಧ್ಯದ ಕೂಗು

ಶತಮಾನದ ಇತಿಹಾಸ: ಮಹಿಳೆಗಿಲ್ಲ ಅವಕಾಶ

• ವರುಣ ಹೆಗಡೆ

ಬೆಂಗಳೂರು: ಶತಮಾನದ ಇತಿಹಾಸವಿರುವ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಸ್ಥಾನವನ್ನು ಈವರೆಗೂ ಮಹಿಳೆಯರು ಅಲಂಕರಿಸಿಲ್ಲ. ಹೀಗಾಗಿ, ಕಸಾಪ ರಾಜ್ಯಘಟಕದ ವಿವಿಧ ಹುದ್ದೆಗಳಲ್ಲಿ ಅವರಿಗೂ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕು ಎಂಬ ಕೂಗು ಚುನಾವಣೆ ವೇಳೆ ಪ್ರತಿಧ್ವನಿಸುತ್ತಿದೆ.

ಪರಿಶಿಷ್ಟರು ಹಾಗೂ ಹಿಂದುಳಿದ ಸಮುದಾಯದವರಿಗೆ ಅವಕಾಶಗಳು ಸಿಗುತ್ತಿಲ್ಲ ಎಂಬ ಆರೋಪ ಕೂಡ ಸಾಂಸ್ಕೃತಿಕ ವಲಯದಲ್ಲಿವೆ. 107 ವರ್ಷಗಳ ಇತಿಹಾಸವಿರುವ ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಈ ಬಾರಿ 21 ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಅವರಲ್ಲಿ ಒಬ್ಬರು ಮಾತ್ರ ಮಹಿಳೆ.

1915ರಲ್ಲಿ ಸ್ಥಾಪನೆಯಾದ ಪರಿಷತ್ತಿಗೆ ಎಚ್.ವಿ. ನಂಜುಂಡಯ್ಯ ಪ್ರಥಮ ಅಧ್ಯಕ್ಷರಾಗಿದ್ದರು. ಈವರೆಗೆ ಪರಿಷತ್ತು 25 ಅಧ್ಯಕ್ಷರನ್ನು ಕಂಡಿದ್ದು, ಎಲ್ಲರೂ ಪುರುಷರೇ. ಪ್ರತಿ ಬಾರಿ ಚುನಾವಣೆ ಬಂದಾಗಲೂ ಮಹಿಳೆಯರಿಗೆ ಅವಕಾಶ ನೀಡಬೇಕೆಂಬ ಆಗ್ರಹ ಕೇಳಿಬರುತ್ತಿದೆ. ಈವರೆಗೆ ಪರಿಶಿಷ್ಟ ಸಮುದಾಯದ ಒಬ್ಬರೂ ಅಧ್ಯಕ್ಷರಾಗಿಲ್ಲ. ಹೀಗಾಗಿ, ಪರಿಷತ್ತಿನ ಚುನಾವಣೆಯಲ್ಲಿ ಅಭ್ಯರ್ಥಿಯ ಜಾತಿಯೂ ಮುಖ್ಯವಾಗುತ್ತದೆ ಎಂಬ ಆರೋಪವಿದೆ.

ಮೀಸಲಾತಿ ನೀಡಿ: ‘ಪರಿಷತ್ತಿನಲ್ಲಿ ಸಾಂಸ್ಕೃತಿಕ ರಾಜಕಾರಣವಿದೆ. ಮಹಿಳಾ ಸಮುದಾಯಕ್ಕೆ ಆದ್ಯತೆ ಸಿಗುತ್ತಿಲ್ಲ. ಇನ್ನೊಂದೆಡೆ ಚುನಾವಣೆಯಲ್ಲಿ ಸಮರ್ಥ ಮಹಿಳೆಯರು ಸ್ಪರ್ಧಿಸಿದ್ದಾರಾ ಎಂಬ ಪ್ರಶ್ನೆಗಳೂ ಹುಟ್ಟುತ್ತವೆ. ಪರಿಷತ್ತಿನ ಚುನಾವಣೆಯನ್ನು ಎದುರಿಸಬೇಕಾದರೆ ಸಾಂಸ್ಕೃತಿಕ ರಾಜಕಾರಣದಲ್ಲಿ ಪಳಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇಲ್ಲವಾದಲ್ಲಿ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಾಗುವುದಿಲ್ಲ. ಪರಿಷತ್ತಿನ ಬೈಲಾ ಬದಲಿಸಿ, ಮಹಿಳೆಗೆ ಮೀಸಲಾತಿ ನೀಡಬೇಕು’ ಎಂದು ಸಾಹಿತಿ ಡಾ. ಅರವಿಂದ ಮಾಲಗತ್ತಿ ತಿಳಿಸಿದರು.

ಬೈಲಾ ಬದಲಾಯಿಸಿ: ‘ಸಾಹಿತ್ಯ ಪರಿಷತ್ತು ತನ್ನ ಕಾರ್ಯಕ್ಷೇತ್ರ ವಿಸ್ತರಿಸಿಕೊಂಡಿದೆ. ಪರಿಷತ್ತಿನ ಸಂಸ್ಥಾಪಕರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಮೂಲ ಆಶಯ ಮರೆಯಾಗುತ್ತಿದೆ. ಜಾತಿ ಕೇಂದ್ರಿತ ಪರಿಷತ್ತಾಗಿ ಮಾರ್ಪಾಡು ಆಗುತ್ತಿದೆ. ಪರಿಷತ್ತಿನ ಬೈಲಾವನ್ನು ಬದಲಾಯಿಸಬೇಕಿದೆ. ಈಗಿರುವ ಚುನಾವಣೆ ವ್ಯವಸ್ಥೆಯಲ್ಲಿ ಪಾರದರ್ಶಕತೆ ನಿರೀಕ್ಷಿಸಲು ಸಾಧ್ಯವಿಲ್ಲ. ಇತ್ತೀಚಿನ ದಿನಗಳಲ್ಲಿ ರಾಜಕೀಯ ಪಕ್ಷಗಳೂ ಹಸ್ತಕ್ಷೇಪ ಮಾಡುತ್ತಿರುವುದು ವಿಪರ್ಯಾಸ. ಹಣ, ಜಾತಿಯ ಲೆಕ್ಕಾಚಾರಗಳು ನಡೆಯುತ್ತಿವೆ. ಹೀಗಾಗಿ, ಮಹಿಳೆಯರು ಸ್ಪರ್ಧಿಸಲು ಆಸಕ್ತಿ ತೋರುತ್ತಿಲ್ಲ’ ಎಂದು ಸಾಹಿತಿ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಿಕಟಪೂರ್ವ ಅಧ್ಯಕ್ಷ ಪ್ರೊ.ಎಸ್.ಜಿ. ಸಿದ್ಧರಾಮಯ್ಯ ತಿಳಿಸಿದರು.

ರಾಜಕೀಯ ಸ್ವರೂಪ: ‘ಸಾಹಿತ್ಯ ಪರಿಷತ್ತಿನ ಚುನಾವಣೆಯು ರಾಜಕೀಯ ಸ್ವರೂಪ ಪಡೆದುಕೊಂಡಿದೆ. ಮಹಿಳೆಯರಿಗೆ ಅವಕಾಶ ಸಿಗುತ್ತಿಲ್ಲ. ಈಗಿನ ವಾತಾವರಣದಲ್ಲಿ ಮಹಿಳೆಯರು ಪರಿಷತ್ತಿನ ಚುನಾವಣೆ ಎದುರಿಸುವುದು ಕಷ್ಟ. ಹೆಣ್ಣಿನ ಸಂವೇದನೆಯ ಸ್ಪರ್ಶ ಪರಿಷತ್ತಿಗೆ ಸಿಗಬೇಕಿದೆ. ಸಾಂಸ್ಕೃತಿಕ ಹಾಗೂ ಶಿಕ್ಷಣ ಕ್ಷೇತ್ರದ ವಿವಿಧ ಸಂಸ್ಥೆಗಳ ಅವಕಾಶ ಸಿಕ್ಕಾಗ ಮಹಿಳೆಯರು ಸಮರ್ಥವಾಗಿ ಮುನ್ನಡೆಸಿದ್ದಾರೆ. ಹಾಗಾಗಿ, ಮಹಿಳೆಯರಿಗೆ ಪರಿಷತ್ತಿನಲ್ಲಿ ಅವಕಾಶ ನೀಡಬೇಕು’ ಎಂದು ಲೇಖಕಿ ವಿನಯಾ ಒಕ್ಕುಂದ ಆಗ್ರಹಿಸಿದರು.

ಅಧಿಕ ಖರ್ಚು: ‘ಪರಿಷತ್ತಿನ ಚುನಾವಣೆಯಲ್ಲಿ ಅಭ್ಯರ್ಥಿಗಳು ಅಧಿಕ ಹಣ ಖರ್ಚು ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಮಹಿಳಾ ಅಭ್ಯರ್ಥಿಗಳಿಗೆ ಬೆಂಬಲವೂ ಸಿಗುತ್ತಿಲ್ಲ. ಹೀಗಾಗಿ, ಮಹಿಳೆಯರು ಸ್ಪರ್ಧಿಸಲು ಹಿಂದೇಟು ಹಾಕುತ್ತಾರೆ. ಸ್ಥಳೀಯ ಸಂಸ್ಥೆಗಳ ಚುನಾವಣೆಗಳಂತೆ ಕಸಾಪ ಚುನಾವಣೆಯಲ್ಲೂ ಕೆಲ ವರ್ಷಗಳು ಮೀಸಲಾತಿ ನೀಡಬೇಕು’ ಎಂದು ಲೇಖಕಿ ಕೆ. ಷರೀಫಾ ತಿಳಿಸಿದರು

‘ಅಧ್ಯಕ್ಷ ಸ್ಥಾನದ ಅವಧಿ ಇಳಿಕೆ’

ಪರಿಷತ್ತಿನ ಕಾರ್ಯಕಾರಿ ಸಮಿತಿಯ ಅಧಿಕಾರಾವಧಿಯನ್ನು 5 ವರ್ಷಗಳಿಗೆ ಏರಿಕೆ ಮಾಡಿರುವುದು ತಪ್ಪು. ಬೈಲಾಕ್ಕೆ ತಿದ್ದುಪಡಿ ತಂದು, ಅಧಿಕಾರವಧಿಯನ್ನು ಮೂರು ವರ್ಷಗಳಿಗೆ ಇಳಿಕೆ ಮಾಡಲಾಗುವುದು. ಮತದಾರರ ಪಟ್ಟಿಯನ್ನು ಪರಿಷ್ಕರಿಸಿ, ಮೃತರ ಹೆಸರನ್ನು ತೆಗೆದುಹಾಕಲಾಗುವುದು. ಚುನಾವಣೆ ವೆಚ್ಚಗಳಿಗೆ ಕಡಿವಾಣ ಹಾಕಲಾಗುವುದು. ಮಹಿಳೆಯರಿಗೂ ಆದ್ಯತೆ ನೀಡುತ್ತೇನೆ. ಪರಿಷತ್ತಿನ ಲೆಕ್ಕಪತ್ರವನ್ನು ಸ್ವತಂತ್ರ ಲೆಕ್ಕ ಪರಿಶೋಧಕರಿಂದ ಪರಿಶೀಲಿಸಿ, ತಪ್ಪು ಹಾಗೂ ಅವ್ಯವಹಾರ ಕಂಡುಬಂದಲ್ಲಿ ಶಿಕ್ಷೆಗೆ ಗುರಿಪಡಿಸಲಾಗುವುದು.

ಪ್ರಮೋದ್ ಹಳಕಟ್ಟಿ, ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಅಭ್ಯರ್ಥಿ

‘ಜಿಲ್ಲಾವಾರು ಪುಸ್ತಕ ಪ್ರಕಟಣೆ’

ಸಾಹಿತಿಗಳ ಪುಸ್ತಕಗಳನ್ನು ಜಿಲ್ಲಾವಾರು ಹಂತದಲ್ಲಿ ಪ್ರಕಟಿಸಲು ಯೋಜನೆ ಹಮ್ಮಿಕೊಳ್ಳಲಾಗುವುದು. ಸಾಹಿತಿಗಳಿಂದ ಸಾಹಿತ್ಯ ಪರಿಷತ್ತು ನಿರ್ಮಾಣವಾಗಿದೆ. ಅಲ್ಲಿ ಬೇರೆಯವರು ರಾಜಕೀಯ ಮಾಡುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಲು ಕ್ರಮವಹಿಸುತ್ತೇನೆ. ಕನ್ನಡ ಸಾಹಿತ್ಯವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ಶ್ರಮಿಸುತ್ತೇನೆ. ಸಾಹಿತಿಗಳನ್ನು ಪ್ರೋತ್ಸಾಹಿಸಿ, ಉತ್ತಮ ಕೃತಿಗಳನ್ನು ಪ್ರಕಟಿಸಲು ಆದ್ಯತೆ ನೀಡುತ್ತೇನೆ. ಜಗತ್ತಿನ ಸಾಹಿತ್ಯಕ್ಕೆ ಕನ್ನಡಿಗರ ಕೊಡುಗೆ ಏನು ಎಂಬುದನ್ನು ತೋರಿಸಿಕೊಡುತ್ತೇನೆ.

ಬಸವರಾಜ ಶಿ. ಹಳ್ಳೂರ, ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಅಭ್ಯರ್ಥಿ

‘ಎಲ್ಲ ಭಾಗದವರಿಗೂ ಅವಕಾಶ’



ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಕನ್ನಡ ಭವನಗಳನ್ನು ನಿರ್ಮಿಸಲಾಗುವುದು. ವರ್ಷಪೂರ್ತಿ ಕನ್ನಡದ ಕಾರ್ಯಕ್ರಮಗಳನ್ನು ಆಯೋಜಿಸುತ್ತೇನೆ. ಬ್ಯಾಂಕಿಂಗ್ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕನ್ನಡದಲ್ಲಿಯೂ ನಡೆಸಬೇಕಿದೆ. ಈ ಬಗ್ಗೆ ಧ್ವನಿಯೆತ್ತಿ, ಹೋರಾಟ ನಡೆಸಲಾಗುವುದು. ವೈದ್ಯಕೀಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಕನ್ನಡ ಅನುಷ್ಠಾನಗೊಳ್ಳಬೇಕಿದೆ. ಆ ಬಗ್ಗೆಯೂ ಕ್ರಮವಹಿಸಲಾಗುವುದು. ಸಾಹಿತ್ಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಬೆಂಗಳೂರು ಮತ್ತು ಮೈಸೂರು ಭಾಗದವರಿಗೆ ಮಾತ್ರ ಹೆಚ್ಚಿನ ಅವಕಾಶಗಳು ಸಿಗುತ್ತಿವೆ. ಎಲ್ಲರಿಗೂ ಅವಕಾಶಗಳು ಸಿಗುವಂತಾಗಲು ಕ್ರಮವಹಿಸುತ್ತೇನೆ.

ಕೆ. ರವಿ ಅಂಬೇಕೆರೆ, ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಅಭ್ಯರ್ಥಿ

‘ಕಸಾಪ ಸ್ಥಿತಿಗತಿ ಸುಧಾರಣೆ’

ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಿತಿಗತಿ ಕೆಟ್ಟುಹೋಗಿದೆ. ವ್ಯವಸ್ಥೆಯಲ್ಲಿ ಪಾರದರ್ಶಕತೆ ತಂದು, ಜನಪರ ಪರಿಷತ್ತಾಗಿ ಮಾರ್ಪಡಿಸುತ್ತೇನೆ. 5 ವರ್ಷಗಳಿಗೆ ಏರಿಸಿರುವ ಅಧ್ಯಕ್ಷ ಸ್ಥಾನದ ಅವಧಿಯನ್ನು 3 ವರ್ಷಗಳಿಗೆ ಇಳಿಕೆ ಮಾಡುತ್ತೇನೆ. ಬೆಳಗಾವಿಯಲ್ಲಿ ಪರಿಷತ್ತಿನ ಶಾಖೆ ಪ್ರಾರಂಭಿಸಿ, ಕನ್ನಡಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಈ ಮೂಲಕ ಮರಾಠಿಗರ ಪ್ರಾಬಲ್ಯವನ್ನು ಹತ್ತಿಕ್ಕುತ್ತೇನೆ. ಸದಸ್ಯತ್ವ ಶುಲ್ಕವನ್ನು ₹ 100ಕ್ಕೆ ಇಳಿಸಿ, ನನ್ನ ಅವಧಿಯಲ್ಲಿ ಸದಸ್ಯರ ಸಂಖ್ಯೆಯನ್ನು 10 ಲಕ್ಷಕ್ಕೆ ಏರಿಸುವ ಗುರಿ ಹಾಕಿಕೊಂಡಿದ್ದೇನೆ.

ಪ್ರೊ.ಶಿವರಾಜ ಪಾಟೀಲ್, ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಅಭ್ಯರ್ಥಿ

ಒಳನೋಟ

ಸಿನಿಮಾ ಸಂಕಷ್ಟ

ಬೆಂಗಳೂರು: ‘ಚೇತರಿಸೀತೇ ಚಿತ್ರರಂಗ?’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಭಾನುವಾರ (ನ.14) ಪ್ರಕಟವಾದ ‘ಒಳನೋಟ’ ವರದಿಗೆ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಚಿತ್ರೋದ್ಯಮಕ್ಕೆ ಬೆಂಬಲ ಅಗತ್ಯ

ಬಹುಮುಖ ತಾರಾಗಣ ಒಳಗೊಂಡು ಅದ್ಭುತ ಸಂದೇಶ ನೀಡುವ ಹಲವು ಸಿನಿಮಾಗಳು ಕೋವಿಡ್ ನಂತರ ನಿಟ್ಟುಸಿರು ಬಿಡಲಾರಂಭಿಸಿವೆ. ಚಿತ್ರಮಂದಿರದ ಪರದೆ ಹಾಗೂ ಕುರ್ಚಿಗಳ ಮೇಲೆ ಅವಿತಿದ್ದ ದೂಳು ಸ್ವಲ್ಪ ಹೋಗಿದೆ. ಇದು ನಿರಂತರತೆಯೋ ಅಥವಾ ನಿಂತಂತೆಯೋ ಎಂಬುದನ್ನು ಕಾದು ನೋಡಬೇಕು. ಸಿನಿಮಾ ಕ್ಷೇತ್ರವನ್ನು ನಂಬಿಕೊಂಡ ಕುಟುಂಬಗಳ ಬದುಕಿನ ಬವಣೆ ಸಾಗಿದ್ದು, ಇದು ನಿಂತ ನೀರಾಗಬಾರದು. ಕೋವಿಡ್ ಹೊಡೆತಕ್ಕೆ ಹಲವು ಚಿತ್ರಮಂದಿರಗಳು ಮುಚ್ಚಲ್ಪಟ್ಟಿವೆ. ಮನರಂಜನೆಯ ಭಾಗವಾಗಿರುವ ಚಿತ್ರೋದ್ಯಮಕ್ಕೆ ಸರ್ಕಾರ ವಿನಾಯಿತಿ ನೀಡಿ ಬಲ ಹೆಚ್ಚಿಸಬೇಕು.

ನಾಗರಾಜ್, ದಾವಣಗೆರೆ

ಚಿತ್ರನಗರಿ ನಿರ್ಮಾಣವಾಗಲಿ

ಕಲಾವಿದ ಉತ್ತಮ ಭವಿಷ್ಯ ಕಟ್ಟಿಕೊಳ್ಳಲು ಕಲೆಯೇ ಜೀವ ಮತ್ತು ಜೀವನವಾಗಿರುತ್ತದೆ. ಇಂತಹ ಅದೆಷ್ಟೋ ಕಲಾವಿದರ ಬದುಕನ್ನು ಕೋವಿಡ್ ಕಸಿಯಿತು. ಶೀಘ್ರದಲ್ಲೇ ರಾಜ್ಯದಲ್ಲಿ ಚಿತ್ರನಗರಿ ನಿರ್ಮಿಸಿಕೊಂಡರೆ, ಹಲವು ಕಲಾವಿದರ ಬದುಕಿಗೆ ದಾರಿದೀಪ ಆಗಲಿದೆ. ಇದರಿಂದ ಚಿತ್ರರಂಗದ ಬೆಳವಣಿಗೆಗೂ ಹೆಚ್ಚು ಅನುಕೂಲವಾಗಲಿದೆ.

ವಿಶಾಖ, ಮೈಸೂರು

ಹಣ ಮಾಡುವ ಜಾಲ

ಈಗಿನ ಸಿನಿಮಾಗಳು ಹಣ ಮಾಡುವ ಪೈಪೋಟಿಗೆ ಬಿದ್ದಿವೆ. ಸಮಾಜಕ್ಕೆ ಒಳ್ಳೆಯ ಸಂದೇಶಗಳು ನೀಡುವ ಸಿನಿಮಾಗಳು ಹೆಚ್ಚಾಗಿ ಮೂಡಿಬರುತ್ತಿಲ್ಲ. ಇದು ಹೀಗೆಯೇ ಮುಂದುವರಿದರೆ ಚಿತ್ರರಂಗ ಹಾಗೂ ಕಲಾವಿದರು ಅಧೋಗತಿ ತಲುಪುವ ದಿನಗಳು ದೂರವೇನಿಲ್ಲ. ಜನರಿಗೆ ಉತ್ತಮ ಸಂದೇಶ ನೀಡುವ ಸಿನಿಮಾಗಳು ತೆರೆಯ ಮೇಲೆ ಬಂದರೆ ಮಾತ್ರ ಅವರ ಮನಸ್ಸಿನಲ್ಲಿ ಉಳಿಯಬಹುದು.

ಕಾಂತರಾಜು, ಕಬಿನಿ

ಅಂಗೈಯಲ್ಲೇ ಸಿನಿಮಾ

ಸಿನಿಮಾ ವೀಕ್ಷಿಸುವ ಜನರ ಸಂಖ್ಯೆ ಇತ್ತೀಚೆಗೆ ಹೆಚ್ಚಾಗಿದೆ. ಆದರೆ, ಚಿತ್ರಮಂದಿರಗಳ ಬದಲಿಗೆ ಮೊಬೈಲ್‌ಗಳಲ್ಲೇ ಸಿನಿಮಾ ವೀಕ್ಷಣೆ ಹೆಚ್ಚಾಗುತ್ತಿರುವುದು ಸಿನಿಮಾ ಕ್ಷೇತ್ರಕ್ಕೆ ದೊಡ್ಡ ಹೊಡೆತ. ಹೊಸ ಸಿನಿಮಾಗಳು ಈಗ ಒಟಿಟಿಯಂತಹ ಪರ್ಯಾಯ ಮಾರ್ಗಗಳಿಂದಾಗಿ ಸುಲಭವಾಗಿ ಪ್ರೇಕ್ಷಕರನ್ನು ತಲುಪುತ್ತಿವೆ. ಇದರಿಂದ ಚಿತ್ರ ಮಂದಿರದತ್ತ ಮುಖ ಮಾಡುವವರ ಸಂಖ್ಯೆ ಗಣನೀಯವಾಗಿ ಕುಸಿಯುತ್ತಿದೆ. ಒಟ್ಟಾರೆ ಚಿತ್ರೋದ್ಯಮ ತೀವ್ರ ನಿಗಾ ಘಟಕದಲ್ಲಿದೆ ಎಂದು ಹೇಳಬಹುದು.

ಸಂತೋಷ್ ಹ.ರಾಯ್ಕರ್, ಬೆಂಗಳೂರು

ಚಿತ್ರಮಂದಿರಗಳ ಬೀಗ ತೆರೆಯಿರಿ

ಕಲ್ಯಾಣ ಕರ್ನಾಟಕ ಭಾಗದಲ್ಲಿ ಒಂದು ವರ್ಷದಲ್ಲಿ ಮೂರು ಪ್ರಸಿದ್ಧ ಚಿತ್ರಮಂದಿರಗಳಿಗೆ ಶಾಶ್ವತವಾಗಿ ಬೀಗ ಹಾಕಲಾಗಿದೆ. ತಾಲ್ಲೂಕು ಮಟ್ಟದಲ್ಲಿರುವ ಏಕಪರದೆಯ ಚಿತ್ರಮಂದಿರಗಳು ಹಾಗೂ ಅದರ ಮಾಲೀಕರ ಸ್ಥಿತಿ ಕೇಳುವಂತಿಲ್ಲ. ಕೋವಿಡ್ ಹಾವಳಿಯಿಂದ ನಲುಗಿದ್ದ ಚಿತ್ರಮಂದಿರಗಳು ನಿರಾತಂಕವಾಗಿ ಉಸಿರಾಡಲು ಬಹಳಷ್ಟು ಸಮಯ ಬೇಕಾಗಿದೆ.

ಬಾಬರ್ ಮುಸ್ತಫ, ಕಲಬುರಗಿ

ಕಾದ ಕಬ್ಬಿಣ; ಸುಡುವ ಸಿಮೆಂಟ್

ಒಂದನೇ ಪುಟದಿಂದ...

‘ಬ್ಯಾಂಕ್ ಸಾಲ ದೊರೆತು ಕೆಲಸ ಆರಂಭಿಸುವಷ್ಟರಲ್ಲಿ ಒಂದು ವರ್ಷ ಕಳೆದು ಹೋಯಿತು. ಕೆಲಸ ಆರಂಭಿಸುವಷ್ಟರಲ್ಲಿ ಕಬ್ಬಿಣ, ಸಿಮೆಂಟ್, ಇಟ್ಟಿಗೆ ದರಗಳು ಹೆಚ್ಚಾಗಿವೆ. ಎರಡು ಮಹಡಿ ಮನೆಗೆಂದು ಹೊಂದಿಸಿದ್ದ ಹಣ ಒಂದೇ ಅಂತಸ್ತಿಗೆ ಮುಗಿದು ಹೋಗಿದೆ. ಮನೆ ಪೂರ್ಣಗೊಳಿಸುವುದು ಹೇಗೆ ಎಂಬ ದಿಕ್ಕೇ ತೋಚದಾಗಿದೆ’ ಎಂದು ಚನ್ನರಾಯಪಟ್ಟಣದಲ್ಲಿ ಮನೆ ನಿರ್ಮಿಸುತ್ತಿರುವ ಸಂತೋಷ್ ಹೇಳುತ್ತಾರೆ.

‘ಕೂಡಿಟ್ಟಿದ್ದ ಹಣದ ಜೊತೆಗೆ ಬ್ಯಾಂಕ್ ಸಾಲದಲ್ಲಿ ಕೆಲಸ ಮುಗಿಯಲಿದೆ ಎಂಬ ಲೆಕ್ಕಾಚಾರ ತಲೆಕೆಳಗಾಗಿದೆ. ಅರ್ಧಕ್ಕೆ ನಿಂತಿರುವ ಮನೆ ಪೂರ್ಣಗೊಳಿಸಲು ಕಂಡ ಕಂಡವರ ಬಳಿ ಕೈ ಚಾಚುತ್ತಿದ್ದೇನೆ. ಕೋವಿಡ್ ಕಾರಣ ಯಾರ ಸ್ಥಿತಿಯೂ ಉತ್ತಮವಾಗಿಲ್ಲ. ಮನೆ ಕಟ್ಟುವ ದುಸ್ಸಾಹಸಕ್ಕೆ ಕೈ ಹಾಕಿ ನೆಮ್ಮದಿಯನ್ನೇ ಕಳೆದುಕೊಂಡಿದ್ದೇನೆ’ ಎನ್ನುತ್ತಾ ಅವರು ಗದ್ಗದಿತರಾದರು.

ನಿಧನ ವಾರ್ತೆ

ಶಾರದಾ ಕೇಶವ ಹೆಗ್ಡೆ

ಮೈಸೂರು: ಮೈಸೂರು ವಿಶ್ವವಿದ್ಯಾಲಯದ ಗಣಿತ ವಿಭಾಗದ ಮುಖ್ಯಸ್ಥರಾಗಿದ್ದ ದಿವಂಗತ ಕೇಶವ ಹೆಗ್ಡೆ ಅವರ ಪತ್ನಿ, ಒಂಟಿಕೊಪ್ಪಲಿನ ನಿವಾಸಿ ಶಾರದಾ ಕೇಶವ ಹೆಗ್ಡೆ (95) ಶನಿವಾರ ನಿಧನರಾದರು.

ಕುವೆಂಪು ಪತ್ನಿ ಹೇಮಾವತಿ ಅವರ ತಂಗಿಯಾದ ಶಾರದಾ ಅವರಿಗೆ ಪುತ್ರ, ಪರಿಸರ ಸಾಕ್ಷ್ಯಚಿತ್ರ ನಿರ್ಮಾಪಕ ಸೇನಾನಿ ಹಾಗೂ ಮೂವರು ಪುತ್ರಿಯರು ಇದ್ದಾರೆ.

ಅಂತ್ಯಕ್ರಿಯೆ ವಿಜಯನಗರದ ಮುಕ್ತಿಧಾಮದಲ್ಲಿ ಭಾನುವಾರ ಸಂಜೆ ನೆರವೇರಿತು.

ಗಜಾನನ ಹೆಗಡೆ

ಧಾರವಾಡ: ಇಲ್ಲಿನ ಕಲ್ಯಾಣನಗರದ ನಿವಾಸಿ, ತಬಲಾ ಶಿಕ್ಷಕ, ಕಲಾವಿದ ವಿದ್ವಾನ್ ಗಜಾನನ ಹೆಗಡೆ (58) ಭಾನುವಾರ ಹೃದಯಾಘಾತದಿಂದ ನಿಧನರಾದರು.

ಅವರಿಗೆ ಪತ್ನಿ, ಸಹೋದರ ಹಾಗೂ ಸಹೋದರಿಯರು ಇದ್ದಾರೆ.

ಅವರು ಮೂಲತಃ ಶಿರಸಿ ತಾಲ್ಲೂಕಿನ ಗಿಳಿಗುಂಡಿಯವರಾಗಿದ್ದು 25 ವರ್ಷಗಳಿಂದ ಧಾರವಾಡದಲ್ಲಿ ಸಂಗೀತ ಸೇವೆ ಸಲ್ಲಿಸುತ್ತಿದ್ದರು. ಬಾಲಬಳಗ ಶಾಲೆಯಲ್ಲಿ ತಬಲಾ ಶಿಕ್ಷಕರಾಗಿದ್ದ ಅವರು ವಿದ್ಯಾರ್ಥಿಗಳ ನೆಚ್ಚಿನ ‘ತಬಲಾ ಮಾಮಾ’ ಎಂದೇ ಹೆಸರುವಾಸಿಯಾಗಿದ್ದರು. ಅಂತ್ಯಕ್ರಿಯೆ ಅವರ ಸ್ವಗ್ರಾಮದ ರುದ್ರಭೂಮಿಯಲ್ಲಿ ಸೋಮವಾರ ನಡೆಯಲಿದೆ.

ವಿಧಾನ ಪರಿಷತ್ ಚುನಾವಣೆ: ಮೂರೂ ಪಕ್ಷಗಳಲ್ಲಿ ಆಕಾಂಕ್ಷಿಗಳ ದೊಡ್ಡ ದಂಡು

ಟಿಕೆಟ್‌ಗೆ ತೀವ್ರ ಲಾಬಿ: ಆಯ್ಕೆ ಕಗ್ಗಂಟು

● ಜೆ.ಆರ್.ಗಿರೀಶ್

ವಿ.ಆರ್.ಸುದರ್ಶನ್

ಕೆ.ಚಂದ್ರಾರೆಡ್ಡಿ

ಗೋವಿಂದಗೌಡ

ಆರ್.ಚೌಡರೆಡ್ಡಿ

ಅನಿಲ್ ಕುಮಾರ್

ವೇಣು ಗೋಪಾಲ್

ಕೋಲಾರ: ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ರಾಜ್ಯ ವಿಧಾನ ಪರಿಷತ್‌ಗೆ ನಡೆಯುವ ಚುನಾವಣೆಗೆ ಅಭ್ಯರ್ಥಿ ಆಯ್ಕೆ ಮಾಡಲು ಪ್ರಮುಖ ಮೂರೂ ಪಕ್ಷಗಳಲ್ಲಿ ಕಸರತ್ತು ಜೋರಾಗಿದ್ದು, ಟಿಕೆಟ್ ಆಕಾಂಕ್ಷಿಗಳು ತೀವ್ರ ಲಾಬಿ ನಡೆಸಿದ್ದಾರೆ.

ಕ್ಷೇತ್ರವು ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆ ವ್ಯಾಪ್ತಿಯನ್ನು ಒಳಗೊಂಡಿದೆ. ನಾಮಪತ್ರ ಸಲ್ಲಿಕೆಗೆ ದಿನಗಣನೆ ಆರಂಭವಾಗಿರುವಂತೆ ಸ್ಪರ್ಧಿಸಲು ತುದಿಗಾಲಲ್ಲಿ ನಿಂತಿರುವ ಆಕಾಂಕ್ಷಿಗಳು ಟಿಕೆಟ್‌ಗಾಗಿ ಮುಖಂಡರಿಗೆ ದುಂಬಾಲು ಬಿದ್ದಿದ್ದಾರೆ.

ಹೆಚ್ಚಿನ ಆಕಾಂಕ್ಷಿಗಳು ಕಾಂಗ್ರೆಸ್ ಹಾಗೂ ಜೆಡಿಎಸ್‌ನಿಂದ ಸ್ಪರ್ಧಿಸಲು ಆಸಕ್ತಿ ತೋರಿದ್ದು ಅಭ್ಯರ್ಥಿ ಆಯ್ಕೆ ವರಿಷ್ಠರಿಗೆ ಕಗ್ಗಂಟಾಗಿದೆ. ಕಮಲ ಪಾಳಯದಲ್ಲೂ ಟಿಕೆಟ್ ಆಕಾಂಕ್ಷಿಗಳ ದೊಡ್ಡ ದಂಡೇ ಇದ್ದು, ವರಿಷ್ಠರು ಕಾದು ನೋಡುವ ತಂತ್ರ ಅನುಸರಿಸುತ್ತಿದ್ದಾರೆ.

ಕಾಂಗ್ರೆಸ್ ಟಿಕೆಟ್‌ಗೆ ಪೈಪೋಟಿ: ಕಾಂಗ್ರೆಸ್ ಟಿಕೆಟ್‌ಗೆ ಭಾರಿ ಪೈಪೋಟಿ ನಡೆದಿದ್ದು, ಅಭ್ಯರ್ಥಿ ಆಯ್ಕೆಯು ವರಿಷ್ಠರಿಗೆ ತಲೆ ನೋವಾಗಿದೆ. ಕೋಲಾರ ಜಿಲ್ಲಾ ಕಾಂಗ್ರೆಸ್ ಘಟಕದ ಅಧ್ಯಕ್ಷ ಕೆ.ಚಂದ್ರಾರೆಡ್ಡಿ, ಚಿಕ್ಕಬಳ್ಳಾಪುರ ಜಿಲ್ಲಾ ಕಾಂಗ್ರೆಸ್ ಘಟಕದ ಅಧ್ಯಕ್ಷ ಕೇಶವರೆಡ್ಡಿ, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಬ್ಯಾಲಹಳ್ಳಿ ಎಂ.ಗೋವಿಂದಗೌಡ, ನಿರ್ದೇಶಕ ಎಂ.ಎಲ್.ಅನಿಲ್‌ಕುಮಾರ್, ವಿಧಾನ ಪರಿಷತ್ ಮಾಜಿ ಸಭಾಪತಿ ವಿ.ಆರ್.ಸುದರ್ಶನ್, ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಮುನೇಗೌಡ ಮುಂಚೂಣಿಯಲ್ಲಿದ್ದಾರೆ.

ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ಅಂತಿಮ ಕ್ಷಣದಲ್ಲಿ ಟಿಕೆಟ್ ವಂಚಿತರಾಗಿದ್ದ ಸುದರ್ಶನ್ ಅವರಿಗೆ ಈ ಬಾರಿ ಅವಕಾಶ ನೀಡಿ ಮೇಲ್ಮನೆಗೆ ಕಳುಹಿಸುವ ಬಗ್ಗೆ 'ಕೈ' ಪಾಳಯದಲ್ಲಿ ಚರ್ಚೆ ನಡೆದಿದೆ. ಮತ್ತೊಂದೆಡೆ ಜಿ.ಪಂ ಮಾಜಿ ಅಧ್ಯಕ್ಷೆ ಗೀತಾ ಅವರ ಪತಿ ಮತ್ತು ಮುಳಬಾಗಿಲು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಆನಂದ್‌ರೆಡ್ಡಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಮ್ಯಾಕಲ ನಾರಾಯಣಸ್ವಾಮಿ ಸಹ ಟಿಕೆಟ್‌ಗೆ ಕಸರತ್ತು ನಡೆಸಿದ್ದಾರೆ.

ಜೆಡಿಎಸ್‌ಗೆ ಸವಾಲು: ವಿಧಾನ ಪರಿಷತ್‌ನ ಹಿಂದಿನ ಅವಧಿಗೆ ನಡೆದಿದ್ದ ಚುನಾವಣೆಯಲ್ಲಿ ಗೆದ್ದು ಬೀಗಿದ್ದ ಜೆಡಿಎಸ್‌ಗೆ ಈಗ ಕ್ಷೇತ್ರ ಉಳಿಸಿಕೊಳ್ಳುವುದು ದೊಡ್ಡ ಸವಾಲಾಗಿದೆ. ಜೆಡಿಎಸ್‌ನಿಂದ ಗೆದ್ದಿದ್ದ ಚಿತ್ರ ನಿರ್ಮಾಪಕ ಸಿ.ಆರ್.ಮನೋಹರ್ ಮಾನಸಿಕವಾಗಿ ಜೆಡಿಎಸ್‌ನಿಂದ ದೂರವಾಗಿದ್ದು, ಪಕ್ಷದಲ್ಲಿ ಅಭ್ಯರ್ಥಿಗೆ ತೀವ್ರ ಶೋಧ ನಡೆದಿದೆ.

ಚಿಂತಾಮಣಿ, ಮುಳಬಾಗಿಲು, ಕೋಲಾರ ಹಾಗೂ ಶ್ರೀನಿವಾಸಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರಬಲವಾಗಿರುವ ಜೆಡಿಎಸ್, ಎದುರಾಳಿ ಪಕ್ಷಗಳಿಗೆ ಪೈಪೋಟಿ ನೀಡಬಲ್ಲ ಸಮರ್ಥ ಅಭ್ಯರ್ಥಿಯ ಹುಡುಕಾಟದಲ್ಲಿದೆ.

ವಿಧಾನ ಪರಿಷತ್ ಮಾಜಿ ಸದಸ್ಯರಾದ ತೂಪಲ್ಲಿ ಆರ್.ಚೌಡರೆಡ್ಡಿ, ಟಿ.ಎ.ಶರವಣ, ಜಿ.ಪಂ ಮಾಜಿ ಸದಸ್ಯ ಕೆ.ಎಸ್.ನಂಜುಂಡಪ್ಪ, ಸ್ಥಳೀಯ ಜೆಡಿಎಸ್ ಮುಖಂಡರಾದ ಸಿಎಂಆರ್ ಶ್ರೀನಾಥ್, ವಕ್ಕಲೇರಿ ರಾಮು, ಬೆಂಗಳೂರಿನ ರಮೇಶ್ ಪ್ರಮುಖ ಆಕಾಂಕ್ಷಿಗಳಾಗಿದ್ದಾರೆ.

ಸಿ.ಆರ್.ಮನೋಹರ್‌ಗೆ ಬಿಜೆಪಿ ಗಾಳ?

ಸಿ.ಆರ್. ಮನೋಹರ್

ಜೆಡಿಎಸ್ ಪಕ್ಷದಿಂದ ಒಂದು ಕಾಲು ಹೊರಗಿಟ್ಟಿರುವ ಮನೋಹರ್ 'ಕೈ' ಪಾಳಯದಿಂದ ಮುಂಬರುವ ವಿಧಾನಸಭಾ ಚುನಾವಣೆಗೆ ಕೋಲಾರ ಕ್ಷೇತ್ರದಿಂದ ಅಖಾಡಕ್ಕಿಳಿಯಲು ಉತ್ಸುಕರಾಗಿದ್ದು, ವಿಧಾನ ಪರಿಷತ್ ಚುನಾವಣೆಗೆ ಸ್ಪರ್ಧಿಸಲು ಆಸಕ್ತಿ ತೋರುತ್ತಿಲ್ಲ.

ಮತ್ತೊಂದೆಡೆ ಬಿಜೆಪಿಯು ಮನೋಹರ್ ಅವರನ್ನು ಪಕ್ಷಕ್ಕೆ ಸೆಳೆದು ವಿಧಾನ ಪರಿಷತ್ ಚುನಾವಣಾ ಅಖಾಡಕ್ಕೆ ಇಳಿಸಲು ತೆರೆಮರೆಯಲ್ಲೇ ಪ್ರಯತ್ನ ನಡೆಸಿದೆ. ಹಿಂದಿನ ಚುನಾವಣೆಯಲ್ಲಿ ಭಾರಿ ಅಂತರದಿಂದ ಜಯ ಗಳಿಸಿದ್ದ ಮನೋಹರ್ ಅವರಿಗೆ ಟಿಕೆಟ್ ಕೊಟ್ಟರೆ ಗೆಲುವಿನ ಹಾದಿ ಸುಗಮ ಎಂಬುದು ಬಿಜೆಪಿ ವರಿಷ್ಠರ ಲೆಕ್ಕಾಚಾರ. ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಡಾ.ವೇಣುಗೋಪಾಲ್ ಅವರ ಹೆಸರು ಆಕಾಂಕ್ಷಿಗಳ ಪಟ್ಟಿಯಲ್ಲಿ ಕೇಳಿಬರುತ್ತಿದೆ.

ಪಾಲಿಕೆ ಸದಸ್ಯರಿಗೆ ಮತದಾನ: ಇನ್ನೂ ಅಸ್ಪಷ್ಟ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ಗೆ ಡಿ.10ರಂದು ನಡೆಯಲಿರುವ ಚುನಾವಣೆಯಲ್ಲಿ ಇಲ್ಲಿನ ಮಹಾನಗರಪಾಲಿಕೆ ಸದಸ್ಯರಿಗೆ ಮತದಾನದ ಹಕ್ಕು ಇದೆಯೋ ಇಲ್ಲವೋ ಎನ್ನುವುದು ಸ್ಪಷ್ಟವಾಗದೆ ಅವರ ಮತದಾನದ ಹಕ್ಕಿನ ಕುರಿತು ಗೊಂದಲ ನಿರ್ಮಾಣವಾಗಿದೆ.

ಮಹಾನಗರ ಪಾಲಿಕೆ ಚುನಾವಣೆಯ ಫಲಿತಾಂಶ ಸೆ.6ರಂದು ಪ್ರಕಟವಾಗಿತ್ತು. 58 ಸದಸ್ಯ ಬಲದ ಈ ಸ್ಥಳೀಯ ಸಂಸ್ಥೆಯಲ್ಲಿ ಬಿಜೆಪಿ-35, ಕಾಂಗ್ರೆಸ್-10, ಎಐಎಂಐಎಂ-1 ಹಾಗೂ ಪಕ್ಷೇತರರು-12 ಸ್ಥಾನಗಳನ್ನು ಗಳಿಸಿದ್ದಾರೆ. ಮೇಯರ್–ಉಪಮೇಯರ್ ಚುನಾವಣೆ ನಡೆದು ಆಡಳಿತ ಮಂಡಳಿಯು ಅಧಿಕೃತವಾಗಿ ರಚನೆಯಾಗಿಲ್ಲ. ಜಿಲ್ಲಾ ಚುನಾವಣಾಧಿಕಾರಿ ಕಚೇರಿಯಿಂದ ಬಿಡುಗಡೆ ಮಾಡಿರುವ ಕರಡು ಮತದಾರರ ಪಟ್ಟಿಯಲ್ಲೂ ಪಾಲಿಕೆ ಸದಸ್ಯರ ಉಲ್ಲೇಖವಿಲ್ಲ.

'ಪಾಲಿಕೆಯ ಸದಸ್ಯರು ಇನ್ನೂ ಪ್ರಮಾಣವಚನ ಸ್ವೀಕರಿಸಿಲ್ಲ. ಆದ್ದರಿಂದ ಅವರಿಗೆ ಈ ಚುನಾವಣೆಯಲ್ಲಿ ಮತದಾನದ ಹಕ್ಕು ಇದೆಯೋ, ಇಲ್ಲವೋ ಎನ್ನುವುದನ್ನು ಸ್ಪಷ್ಟಪಡಿಸುವಂತೆ ಚುನಾವಣಾ ಆಯೋಗಕ್ಕೆ ಪತ್ರ ಬರೆಯಲಾಗಿದೆ. ಅಲ್ಲಿಂದ ಬರುವ ನಿರ್ದೇಶನ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಜಿಲ್ಲಾಧಿಕಾರಿ ಎಂ.ಜಿ. ಹಿರೇಮಠ ಪ್ರತಿಕ್ರಿಯಿಸಿದರು.

'ನಾವು ಚುನಾಯಿತ ಸದಸ್ಯರು ಎಂದು ಅಧಿಸೂಚನೆ ಹೊರಡಿಸಲಾಗಿದೆ. ಹೀಗಾಗಿ, ವಿಧಾನಪರಿಷತ್ ಚುನಾವಣೆಯಲ್ಲಿ ಹಕ್ಕು ಚಲಾಯಿಸಲು ನಮಗೆ ಅವಕಾಶ ಕೊಡಬೇಕು. ಆದರೆ, ಚುನಾವಣಾ ಆಯೋಗ ಸ್ಪಷ್ಟನೆ ಕೊಡುತ್ತಿಲ್ಲ. ನ.15ರೊಳಗೆ ತಿಳಿಸದಿದ್ದರೆ, ನ್ಯಾಯಾಲಯದ ಮೊರೆ ಹೋಗುವ ಕುರಿತು ಚರ್ಚಿಸಿದ್ದೇವೆ' ಎಂದು ಬಿಜೆಪಿ ಸದಸ್ಯ ಹನುಮಂತ ಕೊಂಗಾಲಿ ತಿಳಿಸಿದರು.

ಆಪರೇಷನ್ ಕಮಲ ರಾಷ್ಟ್ರೀಕರಣ ಮಾಡಿದ ಬಿಜೆಪಿ: ಜೆಡಿಎಸ್ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ಗುರಿ ಆಪರೇಷನ್ ಕಮಲ. ಆಪರೇಷನ್ ಕಮಲವನ್ನು ರಾಷ್ಟ್ರೀಕರಣ ಮಾಡಿ ರಾಷ್ಟ್ರಪ್ರೇಮ ಮೆರೆದ ಕುಖ್ಯಾತಿ ಅದರದ್ದು. ಆಪರೇಷನ್ ಕಮಲ ಅದರ ಅಧಿಕೃತ ರಾಜಧರ್ಮ. ಕುಟುಂಬ ರಾಜಕಾರಣ ಅದರ ಅಧಿಕಾರದ ಸೋಪಾನ' ಎಂದು ಜೆಡಿಎಸ್ ಟೀಕಿಸಿದೆ.

ಬಿಜೆಪಿ ವಿರುದ್ಧ ಸರಣಿ ಟ್ವೀಟ್ ಮಾಡಿರುವ ಜೆಡಿಎಸ್, 'ಕುಟುಂಬ ರಾಜಕಾರಣದ ವಿರಾಟ್ ದರ್ಶನ ಆಗುತ್ತಿರುವುದು ಎಲ್ಲಿ?. ಒಡಕು ರಾಜಕಾರಣದ ಈ ಪಕ್ಷಕ್ಕೆ ಹೊಲಸು ರಾಜಕಾರಣದಲ್ಲಿ ಹೆಚ್ಚು ನಂಬಿಕೆ ಎನ್ನುವುದು 'ಆಪರೇಷನ್ ಕಮಲ'ದ ಮೂಲಕ ರಚನೆ ಮಾಡಿದ ಸರ್ಕಾರಗಳೇ ಸಾಕ್ಷಿ' ಎಂದು ಹರಿಹಾಯ್ದಿದೆ.

'ಕುಟುಂಬ ರಾಜಕಾರಣದಲ್ಲಿ ಬಿಜೆಪಿ ಎಲ್ಲ ಪಕ್ಷಗಳ ದಾಖಲೆಗಳನ್ನು ಸರಿಗಟ್ಟಿದೆ. ಕರ್ನಾಟಕದ ಮಟ್ಟಿಗಂತೂ ಕೇಸರಿ ಕಲಿಗಳದ್ದು ದಾಖಲೆಯೇ ಸರಿ. ಪಟ್ಟಿ ಹನುಮಂತನ ಬಾಲದಂತೆ ಬೆಳೆಯುತ್ತಲೇ ಇದೆ' ಎಂದೂ ಟೀಕಿಸಿ, ಆ ಪಟ್ಟಿಯನ್ನು ನೀಡಿದೆ.

ಯಡಿಯೂರಪ್ಪ ಕುಟುಂಬದಲ್ಲಿ ಯಡಿಯೂರಪ್ಪ ಮಾಜಿ ಸಿಎಂ, ಹಿರಿಮಗ ಲೋಕಸಭೆ ಸದಸ್ಯ, ಕಿರಿಮಗ ಪಕ್ಷದ ಉಪಾಧ್ಯಕ್ಷ. ಜಗದೀಶ ಶೆಟ್ಟರ್ ಕುಟುಂಬದಲ್ಲಿ ಶೆಟ್ಟರ್ ಶಾಸಕ, ಮಾಜಿ ಸಚಿವ, ಮಾಜಿ ಸಿಎಂ, ಅವರ ತಮ್ಮ ಪರಿಷತ್ ಸದಸ್ಯ. ಅಣ್ಣಾ ಸಾಹೇಬ್ ಜೊಲ್ಲೆ ಕುಟುಂಬದಲ್ಲಿ ಪತಿ ಸಂಸದ, ಪತ್ನಿ ರಾಜ್ಯದಲ್ಲಿ ಸಚಿವೆ. ಬಳ್ಳಾರಿ ರೆಡ್ಡಿ ಕುಟುಂಬದಲ್ಲಿ ಕರುಣಾಕರ ರೆಡ್ಡಿ, ಅವರ ಸಹೋದರ ಸೋಮಶೇಖರ ರೆಡ್ಡಿ ಶಾಸಕರು. ಇನ್ನೊಬ್ಬ ಸಹೋದರ ಬಿಜೆಪಿ ನಾಯಕ. ಗೆಳೆಯ ಶ್ರೀರಾಮುಲು ಈಗ ಸಚಿವ. ಶ್ರೀರಾಮುಲು ತಂಗಿ ಶಾಂತಾ ಮಾಜಿ ಸಂಸದೆ, ಸಣ್ಣ ಫಕೀರಪ್ಪ ಕೂಡ ಅವರ ಪೈಕಿಯೇ. ಜಾರಕಿಹೊಳಿ ಕುಟುಂಬದಲ್ಲಿ ರಮೇಶ ಜಾರಕಿಹೊಳಿ ಶಾಸಕ, ಅವರ ಸಹೋದರ ಬಾಲಚಂದ್ರ ಜಾರಕಿಹೊಳಿ ಕೂಡಾ ಶಾಸಕ. ಲಿಂಬಾವಳಿ ಕುಟುಂಬದಲ್ಲಿ ಅರವಿಂದ ಲಿಂಬಾವಳಿ, ಅವರ ಭಾವಮೈದ ರಘು ಕೂಡ ಶಾಸಕರು. ಉದಾಸಿ ಕುಟುಂಬದಲ್ಲಿ ಉದಾಸಿ ಮಂತ್ರಿಯಾಗಿದ್ದರು. ಅವರ ಮಗ ಈಗ ಸಂಸತ್ ಸದಸ್ಯ.

ಶಾಸಕನ ತಮ್ಮನನ್ನು ಕಣಕ್ಕಿಳಿಸಲು ಚಿಂತನೆ

ಶಹಾಪುರ (ಯಾದಗಿರಿ ಜಿಲ್ಲೆ) : ಕಲಬುರಗಿ-ಯಾದಗಿರಿ ಸ್ಥಳೀಯ ಸಂಸ್ಥೆಗಳ ವಿಧಾನಪರಿಷತ್ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಯ ಶೋಧ ಮುಂದುವರಿದಿದೆ. ಶಹಾಪುರದ ಕಾಂಗ್ರೆಸ್ ಮುಖಂಡ ಹಾಗೂ ಶಾಸಕ ಶರಣಬಸಪ್ಪ ದರ್ಶನಾಪುರ ಅವರ ತಮ್ಮ ಅಮರೇಶಗೌಡ ದರ್ಶನಾಪುರ ಅವರ ಹೆಸರು ಕಾಂಗ್ರೆಸ್ ವಲಯದಲ್ಲಿ ಹೆಚ್ಚು ಕೇಳಿ ಬರುತ್ತಿದೆ.

ಯಾದಗಿರಿ ಜಿಲ್ಲೆಯಲ್ಲಿ ಪ್ರಭಾವಿ ನಾಯಕರು ಆಗಿರುವ ಅಮರೇಶಗೌಡ ಅವರು ತೆರೆಮರೆಯಲ್ಲಿ ತಮ್ಮದೇ ಆದ ಕಾರ್ಯಕರ್ತರ ಪಡೆ ರಚಿಸಿಕೊಂಡಿದ್ದಾರೆ. ಕಾಂಗ್ರೆಸ್‌ನ ಹಿರಿಯ ನಾಯಕರು ಸ್ಪರ್ಧಿಸಲು ಹಿಂದೇಟು ಹಾಕುತ್ತಿದ್ದು, ಬಿಜೆಪಿ ಅಭ್ಯರ್ಥಿಯ ಎದುರು ಪ್ರಬಲ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಕಾಂಗ್ರೆಸ್ ಚಿಂತನೆ ನಡೆಸಿದೆ.

ವಿಧಾನ ಪರಿಷತ್‌ಗೆ ವಾಟಾಳ್ ನಾಗರಾಜ್ ಸ್ಪರ್ಧೆ

ವಾಟಾಳ್ ನಾಗರಾಜ್

ರಾಮನಗರ: ಮೈಸೂರು-ಚಾಮರಾಜನಗರ ಕ್ಷೇತ್ರದಿಂದ ವಿಧಾನ ಪರಿಷತ್ ಚುನಾವಣೆಗೆ ಸ್ಪರ್ಧಿಸುತ್ತಿರುವುದಾಗಿ ವಾಟಾಳ್ ನಾಗರಾಜ್ ತಿಳಿಸಿದ್ದಾರೆ.

'ಗ್ರಾಮ ಪಂಚಾಯಿತಿಗಳಿಗೆ ಬಲ ತುಂಬಲು, ಪಂಚಾಯಿತಿ ಸದಸ್ಯರಿಗೆ ಗೌರವ ತಂದು ಕೊಡುವ ಸಲುವಾಗಿ ಈ ಸ್ಪರ್ಧೆ' ಎಂದು ಅವರು ಮೇಕೆದಾಟು ಯೋಜನೆಗೆ ಒತ್ತಾಯಿಸಿ ಭಾನುವಾರ ನಗರದಲ್ಲಿ ನಡೆದ ಪ್ರತಿಭಟನೆ ವೇಳೆ ಹೇಳಿದ್ದಾರೆ.

'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಗ್ರಾಮಪಂಚಾಯಿತಿಗಳೇ ಬುನಾದಿ. ಗ್ರಾಮ ಪಂಚಾಯಿತಿಗಳು ಕಲುಷಿತವಾಗಬಾರದು. ಗ್ರಾಮ ಪಂಚಾಯಿತಿಗಳಿಗೆ ಶಕ್ತಿ ತುಂಬಬೇಕಾಗಿದೆ. ಸದಸ್ಯರಿಗೆ ಗೌರವ ತಂದು ಕೊಡಬೇಕಾಗಿದೆ. ನನ್ನ ಗೆಲುವು ಗ್ರಾಮ ಪಂಚಾಯಿತಿಗಳ ಮತ್ತು ಅದರ ಸದಸ್ಯರ ಗೆಲುವಾಗಲಿದೆ' ಎಂದು ಸ್ಪರ್ಧೆಗೆ ಕಾರಣ ನೀಡಿದರು.

'ವಿಧಾನ ಪರಿಷತ್ತಿಗೆ ಚಿನ್ನ-ಬೆಳ್ಳಿ ವರ್ತಕರು, ರಿಯಲ್ ಎಸ್ಟೇಟ್ ವ್ಯಾಪಾರಿಗಳು ಬೇಕಾಗಿಲ್ಲ. ಸಮರ್ಥರು, ಹೋರಾಟಗಾರರು, ಶಕ್ತಿವಂತರು ಬೇಕಾಗಿದ್ದಾರೆ. ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು ಅವರಿಗೆ ಶಕ್ತಿ ತುಂಬುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು. ನಾನು ಗ್ರಾಮಪಂಚಾಯಿತಿಗಳ ಸದಸ್ಯರ ಪ್ರತಿನಿಧಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದೇನೆ' ಎಂದು ತಿಳಿಸಿದರು.

ಗ್ರಾಮ ಪಂಚಾಯಿತಿ ಸದಸ್ಯರಿಗೆ ಕನಿಷ್ಠ ₹5 ಸಾವಿರ ಮಾಸಿಕ ವೇತನ, ಉಪಾಧ್ಯಕ್ಷರಿಗೆ ₹7,500 ಮತ್ತು ಅಧ್ಯಕ್ಷರಿಗೆ ಕನಿಷ್ಠ ₹10 ಸಾವಿರ ಮಾಸಿಕ ವೇತನ ಕೊಡುವಂತೆ ಸರ್ಕಾರವನ್ನು ಒತ್ತಾಯಿಸುವುದಾಗಿ ತಿಳಿಸಿದರು.

'ರಾಜ್ಯಗಳ ಸಮಸ್ಯೆಗೆ ವಲಯ ಪರಿಷತ್ ಪರಿಹಾರ'

ದಕ್ಷಿಣ ವಲಯ ಪರಿಷತ್ತಿನ ಮಂಡಳಿಗಳ 29ನೇ ಸಭೆಯಲ್ಲಿ ಶಾ ಹೇಳಿಕೆ

ತಿರುಪತಿ (ಪಿಟಿಐ): ರಾಜ್ಯಗಳ ನಡುವಿನ ವಿವಾದಾತ್ಮಕ ವಿಷಯಗಳನ್ನು ಪರಿಹರಿಸಲು ವಲಯ ಪರಿಷತ್‌ಗಳಿಂದ ಸಾಧ್ಯವಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾನುವಾರ ಅಭಿಪ್ರಾಯಪಟ್ಟಿದ್ದಾರೆ. ಇಲ್ಲಿನ ತಾಜ್ ತಿರುಪತಿ ಹೋಟೆಲ್‌ನಲ್ಲಿ ನಡೆದ ದಕ್ಷಿಣ ವಲಯ ಪರಿಷತ್ತಿನ 29ನೇ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮೂರು ವರ್ಷಗಳ ಬಿಡುವಿನ ಬಳಿಕ ಈ ಸಭೆ ನಡೆಯಿತು.

'ರಾಜ್ಯಗಳ ನಡುವಿನ ವಿವಾದಾತ್ಮಕ ವಿಷಯಗಳ ಕುರಿತು ಪರಸ್ಪರ ಚರ್ಚೆ ನಡೆಸಲು ಸದಸ್ಯರಿಗೆ ಒಂದು ಉನ್ನತ ಮಟ್ಟದ ಅವಕಾಶವನ್ನು ವಲಯ ಮಂಡಳಿಗಳು ಕಲ್ಪಿಸಿಕೊಟ್ಟಿವೆ. ಕಳೆದ ಏಳು ವರ್ಷಗಳಲ್ಲಿ ಇಂತಹ 18 ಸಭೆಗಳನ್ನು ನಾವು ನಡೆಸಿದ್ದೇವೆ' ಎಂದು ಶಾ ಹೇಳಿದರು.

ಕೇಂದ್ರ ಗೃಸಚಿವ ಅಮಿತ್ ಶಾ ಅವರು ತಿರುಮಲದ ವೆಂಕಟೇಶ್ವರ ದೇವಸ್ಥಾನದಲ್ಲಿ ಭಾನುವಾರ ಪ್ರಾರ್ಥನೆ ಸಲ್ಲಿಸಿದರು —ಪಿಟಿಐ ಚಿತ್ರ

ಎಲ್ಲ ರಾಜ್ಯಗಳನ್ನು ಸಂಪೂರ್ಣ ಲಸಿಕಾ ಕಾರ್ಯಕ್ರಮಕ್ಕೆ ಒಳಪಡಿಸುವ ದಿಸೆಯಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ಅವರು ಭರವಸೆ ನೀಡಿದರು. ಕರ್ನಾಟಕದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ದಕ್ಷಿಣ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗವರ್ನರ್‌ಗಳು, ಅಧಿಕಾರಿಗಳು ಸಭೆಯಲ್ಲಿ ಭಾಗಿಯಾಗಿದ್ದರು. ತಮ್ಮ ತಮ್ಮ ರಾಜ್ಯಗಳ ಸಮಸ್ಯೆಗಳನ್ನು ಆಯಾ ಮುಖ್ಯಮಂತ್ರಿಗಳು ಸಭೆಯಲ್ಲಿ ಪ್ರಸ್ತಾಪಿಸಿದರು. ರಾಜ್ಯಕ್ಕೆ

> ಭಾರತದ ಪರಂಪರೆಯನ್ನು ದಕ್ಷಿಣದ ರಾಜ್ಯಗಳ ಪ್ರಾಚೀನ ಸಂಸ್ಕೃತಿ, ಸಂಪ್ರದಾಯ ಮತ್ತು ಭಾಷೆಗಳು ಶ್ರೀಮಂತಗೊಳಿಸಿವೆ
> **ಅಮಿತ್ ಶಾ,** ಕೇಂದ್ರ ಗೃಹಸಚಿವ

ವಿಶೇಷ ಸ್ಥಾನಮಾನ ನೀಡುವಂತೆ ಆಂಧ್ರಪ್ರದೇಶ ಮುಖ್ಯಮಂತ್ರಿ ವೈ.ಎಸ್. ಜಗನ್‌ಮೋಹನ್ ರೆಡ್ಡಿ ಆಗ್ರಹಿಸಿದರು. ಆದರೆ ಇದಕ್ಕೆ ಶಾ ಖಚಿತ ಉತ್ತರ ನೀಡಿಲ್ಲ ಎಂದು ಮೂಲಗಳು ತಿಳಿಸಿವೆ.

ಪೋಷಣ್ ಕಾರ್ಯಕ್ರಮ ಹಾಗೂ ನೇರ ನಗದು ವರ್ಗಾವಣೆ ಯೋಜನೆ ಅನುಷ್ಠಾನ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳ ತನಿಖೆಗೆ ವೇಗ ನೀಡುವುದು ಸೇರಿದಂತೆ ವಿವಿಧ ವಿಷಯಗಳು ಸಭೆಯಲ್ಲಿ ಚರ್ಚೆಗೆ ಬಂದವು. 30ನೇ ಸಭೆಯು ಕೇರಳದಲ್ಲಿ ನಿಗದಿಯಾಗಿದೆ.

'ಜೆಡಿಎಸ್‌ನಿಂದ ಒಂದಲ್ಲ, ಎರಡೂ ಕಾಲು ಹೊರಗಿಟ್ಟಿರುವೆ'

ಇಬ್ಬರಿಗೆ ಟಿಕೆಟ್ ಕೊಟ್ಟರೆ ಕಾಂಗ್ರೆಸ್‌ಗೆ: ಜಿಟಿಡಿ

ಪ್ರಜಾವಾಣಿ ವಾರ್ತೆ

ದೇವೇಗೌಡ

ಬೆಂಗಳೂರು: 'ಜೆಡಿಎಸ್‌ನಿಂದ ಒಂದಲ್ಲ, ಎರಡೂ ಕಾಲು ಹೊರಗಿಟ್ಟಿದ್ದೇನೆ. ಕಾಂಗ್ರೆಸ್ಸಿನಿಂದ ನನಗೆ ಮತ್ತು ಪುತ್ರ ಹರೀಶ್ ಗೌಡಗೆ ಟಿಕೆಟ್ ಕೇಳಿದ್ದೇನೆ. ಟಿಕೆಟ್ ನೀಡಿದರೆ ಕಾಂಗ್ರೆಸ್ ಸೇರುತ್ತೇನೆ. ಇಲ್ಲದೇ ಇದ್ದರೆ ಪಕ್ಷೇತರರಾಗಿ ಗೆದ್ದು ಸಾಮರ್ಥ್ಯ ತೋರಿಸುತ್ತೇವೆ' ಎಂದು ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡ ಹೇಳಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಪರಿಷತ್ ಚುನಾವಣೆಯಲ್ಲಿ ನಮಗೆ ಬೇಕಾದವರಿಗೆ ಯಾವ ಪಕ್ಷ ಟಿಕೆಟ್ ನೀಡುತ್ತೋ ಅವರ ಪರ ಕೆಲಸ ಮಾಡುತ್ತೇವೆ' ಎಂದರು.

'ನಾನು ಜೆಡಿಎಸ್ ಪಕ್ಷವನ್ನು ಗಟ್ಟಿಯಾಗಿ ಬೆಳೆಸಿದ್ದೇನೆಯೇ ಹೊರತು ತಿಂದು, ಉಂಡು ಹೋಗುವ ಕೆಲಸ ಮಾಡಿಲ್ಲ. ಆದರೆ, ಮುಖ್ಯಮಂತ್ರಿಯಾಗಿದ್ದ ಕುಮಾರಸ್ವಾಮಿ ಸಾಕಷ್ಟು ಅಪಮಾನ ಮಾಡಿದ್ದಾರೆ. ಯಡಿಯೂರಪ್ಪ ವಾಸವಿದ್ದ ದೊಡ್ಡ ಸರ್ಕಾರಿ ಬಂಗಲೆಯನ್ನು ಸಾ.ರಾ ಮಹೇಶ್‌ಗೆ ಕೊಟ್ಟು, ನನಗೆ ಸಣ್ಣ ನಿವಾಸ ಕೊಡುವುದಕ್ಕೂ ಹಿಂದುಮುಂದು ನೋಡಿದ್ದರು. ಡಿ.ಕೆ. ಶಿವಕುಮಾರ್ ಹೇಳಿದ ಬಳಿಕ ನನಗೆ ಆಪ್ತ ಕಾರ್ಯದರ್ಶಿಯನ್ನು ಕೊಟ್ಟಿದ್ದರು' ಎಂದರು.

'ನನಗಿಂತ 15 ವರ್ಷದ ಕಿರಿಯರಿಗೆ ಬೇಕಾದ ಖಾತೆಯನ್ನು ಕುಮಾರಸ್ವಾಮಿ ಕೊಟ್ಟರು. ನನಗೆ ಮಾತ್ರ ಬೇಡವಾದ ಖಾತೆ ಕೊಟ್ಟು ಅವಮಾನ ಮಾಡಿದರು. ಅದನ್ನೆಲ್ಲಾ ಸಹಿಸಿಕೊಂಡು ಬಂದಿದ್ದೇನೆ. ನಿರಂತರವಾಗಿ ಅಪಮಾನ ಮಾಡಿದರೆ ಪಕ್ಷದಲ್ಲಿ ಹೇಗೆ ಉಳಿಯಲು ಸಾಧ್ಯ' ಎಂದು ಪ್ರಶ್ನಿಸಿದರು.

ರಟ್ಟೀಹಳ್ಳಿ ತಾಲ್ಲೂಕಿನ ಯಡಗೋಡಿ ಗ್ರಾಮದಲ್ಲಿ ಭಾನುವಾರ ನಡೆದ 'ರೈತರೊಂದಿಗೆ ಒಂದು ದಿನ' ಕಾರ್ಯಕ್ರಮದಲ್ಲಿ ಚಿತ್ರನಟ ದರ್ಶನ್, ಕೃಷಿ ಸಚಿವ ಬಿ.ಸಿ.ಪಾಟೀಲ ಅವರು ಧಾನ್ಯವನ್ನು ತೂರಿದರು —ಪ್ರಜಾವಾಣಿ ಚಿತ್ರ

ದಕ್ಷಿಣ ವಲಯ ಪರಿಷತ್ತಿನ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿಪಾದನೆ

ಆಂಧ್ರ, ತಮಿಳುನಾಡಿನ ಹೊಸ ಯೋಜನೆಗಳಿಗೆ ಒಪ್ಪಿಗೆ ಬೇಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲ ನ್ಯಾಯ ಮಂಡಳಿಗಳ ತೀರ್ಪು ಉಲ್ಲಂಘಿಸಿ ನೆರೆಯ ರಾಜ್ಯಗಳು ನೀರಿನ ಬಳಕೆಗೆ ರೂಪಿಸಿರುವ ಬೃಹತ್ ಮಟ್ಟದ ಶಾಶ್ವತ ಯೋಜನೆಗಳಿಗೆ ಕೇಂದ್ರ ಸರ್ಕಾರ ಶಾಸನ ಬದ್ಧ ಅನುಮೋದನೆ ನೀಡಬಾರದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮನವಿ ಮಾಡಿದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅಧ್ಯಕ್ಷತೆಯಲ್ಲಿ ತಿರುಪತಿಯಲ್ಲಿ ಭಾನುವಾರ ನಡೆದ ದಕ್ಷಿಣ ವಲಯ ಪರಿಷತ್ತಿನ 29 ನೇ ಸಭೆಯಲ್ಲಿ ಮಾತನಾಡಿದ ಅವರು ಕರ್ನಾಟಕದ ಬೇಡಿಕೆಗಳನ್ನು ಮಂಡಿಸಿದರು.

ಸಹ ಜಲಾನಯನ ಪ್ರದೇಶಗಳನ್ನು ಹೊಂದಿರುವ ರಾಜ್ಯಗಳ ಪಾಲು ಎಷ್ಟು ಎಂಬುದು ಇನ್ನೂ ನಿರ್ಧಾರವಾಗಿಲ್ಲ. ಹಾಗಿದ್ದರೂ ಕಾವೇರಿ-ವೈಗೈ- ಗುಂಡಾರ್ ಸಂಪರ್ಕಿಸುವ ಕಾಮಗಾರಿಯನ್ನು ತಮಿಳುನಾಡು ಮುಂದುವರಿಸಿದೆ. ಇದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಹೀಗಾಗಿ, ಪ್ರಸ್ತಾವನೆಯನ್ನು ಅನುಮೋದಿಸಬಾರದು ಎಂದು ಮನವಿ ಮಾಡಿದರು.

ಶ್ರೀಶೈಲಂ ಜಲಾಶಯದಲ್ಲಿ ಹೆಚ್ಚುವರಿ ಪ್ರಮಾಣದ ಅಪಾರ ನೀರನ್ನು ಬಳಸಿಕೊಂಡು ಪಲಮುರು ರಂಗಾರೆಡ್ಡಿ ಮತ್ತು ನಕ್ಕಲಗಂಡಿಯಲ್ಲಿ ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳಲು ತೆಲಂಗಾಣ ಅಥವಾ ಅಪೆಕ್ಸ್ ಮಂಡಳಿಗೆ ಅಧಿಕಾರವಿಲ್ಲ ಎಂದು ಹೇಳಿದ ಬೊಮ್ಮಾಯಿ, ಕೃಷ್ಣಾ ಜಲ ವ್ಯಾಜ್ಯ ನ್ಯಾಯಮಂಡಳಿಯು ನೀರಿನ ಹಂಚಿಕೆಗೆ ಸಂಬಂಧಿಸಿದಂತೆ ಆಂಧ್ರ ಪ್ರದೇಶ ಮತ್ತು ತೆಲಂಗಾಣದ ಹೊಸ ಯೋಜನೆಗಳಿಗೆ ಅನುಮತಿ ನೀಡಿಲ್ಲ ಎಂಬುದನ್ನು ಗೃಹ ಸಚಿವರ ಗಮನಕ್ಕೆ ತಂದರು.

ಕಾವೇರಿ, ಕೃಷ್ಣಾ ಮತ್ತು ಪೆನ್ನಾರ್ ಜಲಾನಯನ ಪ್ರದೇಶದಲ್ಲಿ ರಾಜ್ಯಕ್ಕೆ ತನ್ನ ಪಾಲಿನ ನೀರು ಹಂಚಿಕೆಯಾಗಬೇಕಿದೆ. 2050 ರಲ್ಲಿ ಪರಿಶೀಲನೆಗೆ ಒಳಪಡುವ ನೆಪದಲ್ಲಿ ಉಳಿಕೆ ನೀರನ್ನು ಬಳಸಲು ಮುಂದಾಗಿರುವ ತೆಲಂಗಾಣ, ರಾಜೀವ್ ಗಾಂಧಿ ಸಂಗಮ ಬಂಡಾ ಬ್ಯಾರೇಜ್ ನಿರ್ಮಾಣಕ್ಕೆ ಮುಂದಾಗಿದೆ. ಇದಕ್ಕೆ ಕರ್ನಾಟಕದ ವಿರೋಧವಿದೆ. ಶಾಶ್ವತ ಯೋಜನೆಗಳಿಗಾಗಿ ಉಳಿಕೆ ನೀರನ್ನು ಬಳಸಲು ಅನುಮತಿ ನೀಡಿದರೆ ಕರ್ನಾಟಕ ತನಗೆ ದೊರೆಯಬೇಕಾದ ಸಮಪಾಲಿನಿಂದ ವಂಚಿತವಾಗಲಿದೆ ಎಂದರು.

ಕೇಂದ್ರ ಮತ್ತು ದಕ್ಷಿಣದ ರಾಜ್ಯಗಳು ಪರಸ್ಪರ ಸಹಕಾರದಿಂದ ಕೆಲಸ ಮಾಡಿದರೆ ಹಲವು ವರ್ಷಗಳಿಂದ ಬಾಕಿ ಉಳಿದಿರುವ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ಅವರು ಅಭಿಪ್ರಾಯ ಪಟ್ಟರು.

ಪರಸ್ಪರ ಸಾರಿಗೆ ಒಪ್ಪಂದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಹಾಗೂ ತೆಲಂಗಾಣ, ಪುದುಚೆರಿ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳ ರಾಜ್ಯಗಳ ಒಪ್ಪಿಗೆಯನ್ನು ನಿರೀಕ್ಷಿಸಲಾಗಿದ್ದು, ಈ ಬಗ್ಗೆ ತ್ವರಿತ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದರು.

'ಹೋಮ್ ಮಿನಿಸ್ಟರೊ, ಹೆಲ್ತ್ ಮಿನಿಸ್ಟರೊ'

ಪ್ರಜಾವಾಣಿ ವಾರ್ತೆ

ಪ್ರಿಯಾಂಕ್ ಖರ್ಗೆ

ಬೆಂಗಳೂರು: 'ಎಚ್‌ಎಂ ಅಂದರೆ ಹೋಮ್ ಮಿನಿಸ್ಟರ್ ಅನ್ನಬೇಕೋ, ಹೆಲ್ತ್ ಮಿನಿಸ್ಟರ್ ಅನ್ನಬೇಕೋ' ಎಂದು ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಅವರು, ಆರೋಗ್ಯ ಸಚಿವ ಡಾ. ಸುಧಾಕರ್ ಅವರನ್ನು ಪ್ರಶ್ನಿಸಿದ್ದಾರೆ.

ಬಿಟ್ ಕಾಯಿನ್ ವಿಚಾರವಾಗಿ ಸುದ್ದಿಗೋಷ್ಠಿ ನಡೆಸಿ ಸ್ಪಷ್ಟೀಕರಣ ನೀಡಿದ ಡಾ.ಕೆ. ಸುಧಾಕರ್ ನಡೆಯನ್ನು ವ್ಯಂಗ್ಯವಾಗಿ ಟೀಕಿಸಿರುವ ಪ್ರಿಯಾಂಕ್, 'ಗೃಹ ಸಚಿವಾಲಯಕ್ಕೆ ಸಂಬಂಧಿಸಿದ ಬಿಟ್ ಕಾಯಿನ್ ಹಗರಣದ ಬಗ್ಗೆ ಆರೋಗ್ಯ ಸಚಿವರು ಪತ್ರಿಕಾಗೋಷ್ಠಿ ನಡೆಸುತ್ತಿರುವುದೇಕೆ? ನಾಳೆ ಗೃಹ ಸಚಿವರು ಬಂದು ರಾಜ್ಯದ ಕೋವಿಡ್ ಲಸಿಕೆಯ ಮಾಹಿತಿ ನೀಡುತ್ತಾರಾ?' ಎಂದೂ ಕೇಳಿದ್ದಾರೆ.

'ಬಿಟ್ ಕಾಯಿನ್ ಪ್ರಕರಣ ಗಂಭೀರ ವಿಷಯವಲ್ಲ' ಎಂಬ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಹೇಳಿಕೆಗೆ ಟ್ವಿಟರ್‌ನಲ್ಲೇ ಪ್ರಶ್ನಿಸಿರುವ ಪ್ರಿಯಾಂಕ್, 'ಹಾಗಾದರೆ ಈ ವಿಷಯವನ್ನು ಪ್ರಧಾನಿ ಬಳಿ ಪ್ರಸ್ತಾಪಿಸಿದ್ದೇಕೆ? ಪೊಲೀಸರ ಪತ್ರಿಕಾ ಪ್ರಕಟಣೆ ಏಕೆ? ರಾತ್ರಿ 9ಕ್ಕೆ ಮಂತ್ರಿಗಳ ಪತ್ರಿಕಾಗೋಷ್ಠಿ ಏಕೆ? ಬಿಜೆಪಿಗರ ಸಿಡಿಮಿಡಿ ಏಕೆ? ನಮ್ಮ ಸರಳ ಪ್ರಶ್ನೆಗೆ ಉತ್ತರವಿಲ್ಲವೇಕೆ? ಇವರ ಕಳ್ಳಾಟದಿಂದಲೇ ಹಗರಣದ ಗಂಭೀರತೆ ಜನರಿಗೆ ತಿಳಿಯುತ್ತಿದೆ' ಎಂದು ಪ್ರತಿಪಾದಿಸಿದ್ದಾರೆ.

ಸದಾಶಿವನಗರದ ತಮ್ಮ ನಿವಾಸದಲ್ಲಿ ಶನಿವಾರ ರಾತ್ರಿ 9 ಗಂಟೆಗೆ ಸುದ್ದಿಗೋಷ್ಠಿ ನಡೆಸಿದ್ದ ಸುಧಾಕರ್, ಬಿಟ್ ಕಾಯಿನ್ ಹಗರಣ ಬಗ್ಗೆ ಕಾಂಗ್ರೆಸ್ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲಾ ಸೇರಿದಂತೆ ಆ ಪಕ್ಷದ ನಾಯಕರು ಮಾಡಿದ್ದ ಆರೋಪಗಳಿಗೆ ಸ್ಪಷ್ಟೀಕರಣ ನೀಡಿದ್ದರು.

'ಮಳೆ–ಚಳಿ ಅರಿಯದ ಪ್ರಿಯಾಂಕ್'

ಸುಧಾಕರ್

'ಪ್ರಿಯಾಂಕ್ ಖರ್ಗೆ ಅವರು ಯಾರನ್ನು ಮೆಚ್ಚಿಸಲು ಮಾತನಾಡುತ್ತಿದ್ದಾರೆ ಎನ್ನುವುದು ಜನರಿಗೆ ತಿಳಿದಿದೆ. ಮಳೆ, ಚಳಿ, ಗಾಳಿಯ ಕಷ್ಟ ಅರಿಯದ ಅವರು ಆನುವಂಶಿಕ ನೆರಳಿನಲ್ಲೇ ವಿಹರಿಸಲಿ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಕುಟುಕಿದ್ದಾರೆ.

ಪ್ರಿಯಾಂಕ್ ಅವರ ಟ್ವೀಟ್‌ಗೆ ಟ್ವಿಟರ್‌ನಲ್ಲೇ ಪ್ರತಿಕ್ರಿಯಿಸಿರುವ ಅವರು, ಅವರ ಸಾಂದರ್ಭಿಕ ಮರೆವು, ಜಾಣ ಕುರುಡು, ಕೀಳು ರಾಜಕೀಯದ ಆಲೋಚನೆಗಳು ಯಾಕಾಗಿ ಎಂಬುದು ಎಲ್ಲರಿಗೂ ಗೊತ್ತಿದೆ. ಆದರೆ ಸಂಪುಟದಲ್ಲಿ ಸಚಿವರಾಗಿರುವವರಿಗೆ ಸರ್ಕಾರದ ಪರವಾಗಿ ಮಾತನಾಡುವ ಸಾಮೂಹಿಕ ಹೊಣೆಗಾರಿಕೆ ಇದೆ ಎನ್ನುವುದನ್ನು ಅವರು ಮರೆತದ್ದೇಕೆ? ಎಂದು ಪ್ರಶ್ನಿಸಿದ್ದಾರೆ.

ಇದು ಕಾಂಗ್ರೆಸ್ ಮುಖಂಡರ ಹತಾಶೆ, ಜನರನ್ನು ಹೇಗಾದರೂ ದಾರಿ ತಪ್ಪಿಸಬೇಕೆನ್ನುವ ಆತುರದ ಪ್ರದರ್ಶನವಲ್ಲದೆ ಇನ್ನೇನೂ ಅಲ್ಲ. ಪ್ರಿಯಾಂಕ್ ಖರ್ಗೆ ಐಟಿ ಸಚಿವರಾಗಿದ್ದಾಗ, ನಂತರ ಸಮಾಜ ಕಲ್ಯಾಣ ಸಚಿವರಾಗಿದ್ದಾಗ ಕೇವಲ ಅವರ ಇಲಾಖೆ ಬಗ್ಗೆ ಮಾತ್ರ ಮಾತನಾಡಿದ್ದರೇ ಎಂದು ಒಮ್ಮೆ ನೆನಪು ಮಾಡಿಕೊಳ್ಳಲಿ ಎಂದು ಹೇಳಿದ್ದಾರೆ.

ಕಾಂಗ್ರೆಸ್ ಪಕ್ಷದ ಸುಳ್ಳಿನ ರಾಜಕಾರಣವನ್ನು ಬಿಜೆಪಿ ಸಹಿಸುವುದಿಲ್ಲ. ನಿಮ್ಮ ಹುಳುಕುಗಳನ್ನು ಮುಚ್ಚಿಕೊಳ್ಳಲು ಇನ್ನೊಬ್ಬರ ಮೇಲೆ ನೂರು ಸುಳ್ಳು ಹೇಳುವ ನಿಮ್ಮ ಕುತಂತ್ರಗಳನ್ನು ಜನರ ಮುಂದಿಡಲೇಬೇಕು. ಸಚಿವರು ಮಾತ್ರವಲ್ಲ, ಪ್ರತಿಯೊಬ್ಬ ಕಾರ್ಯಕರ್ತ ಕೂಡ ಕಾಂಗ್ರೆಸ್‌ನವರ ಪಕ್ಷದ ನಾಟಕವನ್ನು ಬಯಲಿಗೆಳೆಯಲು ಸಿದ್ಧರಾಗಿದ್ದಾರೆ ಎಂದು ಹೇಳಿದ್ದಾರೆ.

ಅಂತರರಾಷ್ಟ್ರೀಯ ತಂಡ ಶಾಮೀಲು: 'ಬ್ಲ್ಯಾಕ್‌ಹ್ಯಾಟ್' ತಂಡದಲ್ಲಿ 50 ಸಾವಿರ ಸದಸ್ಯರು

20 ಪಂಟರ್ 'ಚಾಟಿಂಗ್': ವಿಶ್ವವ್ಯಾಪಿ 'ಹ್ಯಾಕಿಂಗ್'

● ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಹಣ ವಿನಿಮಯ ಏಜೆನ್ಸಿಗಳ ಸರ್ವರ್ ಹಾಗೂ ಆನ್‌ಲೈನ್ ಗೇಮಿಂಗ್ ಜಾಲತಾಣಗಳನ್ನು ಹ್ಯಾಕ್ ಮಾಡಿ ಕೋಟ್ಯಂತರ ರೂಪಾಯಿ ಮೌಲ್ಯದ ಬಿಟ್ ಕಾಯಿನ್ ದೋಚಿರುವುದರ ಹಿಂದೆ, ಅಂತರರಾಷ್ಟ್ರೀಯ ಹ್ಯಾಕರ್‌ಗಳ ತಂಡ ಕೆಲಸ ಮಾಡಿರುವ ಸಂಗತಿ ಪತ್ತೆಯಾಗಿದೆ.

ರಾಜ್ಯದಲ್ಲಿ ಹೆಚ್ಚು ಚರ್ಚೆ ಆಗುತ್ತಿರುವ 'ಬಿಟ್‌ಕಾಯಿನ್' ಹಗರಣ ಅಗೆದಷ್ಟು ಆಳಕ್ಕೆ ಹೋಗುತ್ತಿದೆ. ದಿನಕ್ಕೊಂದು ಮಾಹಿತಿ ಹೊರಬೀಳುತ್ತಿದ್ದು, ಹಗರಣದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಅಧಿಕಾರಸ್ಥ ಪ್ರಭಾವಿಗಳು ಈ ಬಗ್ಗೆ ತಲೆ ಕೆಡಿಸಿಕೊಂಡು ಕೂರುವ ಸ್ಥಿತಿ ನಿರ್ಮಾಣವಾಗಿದೆ.

ಹಗರಣದ ಸೂತ್ರಧಾರ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ (26) ಜಾತಕ ಜಾಲಾಡುತ್ತಿರುವ ತನಿಖಾ ತಂಡಗಳು, ಆತನ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿವೆ. ಬಿಟ್ ಕಾಯಿನ್ ದರೋಡೆಯಲ್ಲಿ ಶ್ರೀಕಿ ಮಾತ್ರವಲ್ಲದೇ, ವಿದೇಶಗಳ ಹ್ಯಾಕರ್‌ಗಳು ಕೆಲಸ ಮಾಡಿರುವ ಅಂಶ ತನಿಖಾ ತಂಡಗಳ ನಿದ್ದೆಗೆಡಿಸಿದೆ.

ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ಕಾಟನ್‌ಪೇಟೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿರುವ ಸಿಸಿಬಿ ಪೊಲೀಸರು, ಬಾಲ್ಯದಲ್ಲಿ ಶ್ರೀಕಿ ಪ್ರವೇಶ ಪಡೆದಿದ್ದ 'ಬ್ಲ್ಯಾಕ್‌ಹ್ಯಾಟ್' ಹ್ಯಾಕರ್‌ಗಳ ತಂಡದ ಬಗ್ಗೆಯೂ ಪ್ರಸ್ತಾಪಿಸಿದ್ದರು.

ಇದೇ 'ಬ್ಲ್ಯಾಕ್‌ಹ್ಯಾಟ್' ತಂಡದ ಸದಸ್ಯರು, ಇಂದಿಗೂ ಸಕ್ರಿಯರಾಗಿದ್ದಾರೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಬೇರೂರಿರುವ ಅವರೆಲ್ಲ ಸಂಘಟಿತರಾಗಿ ತಾವಿದ್ದ ಸ್ಥಳದಿಂದಲೇ ತಂತ್ರಜ್ಞಾನವನ್ನು ಬಳಸಿಕೊಂಡು ಬಿಟ್ ಕಾಯಿನ್ ದರೋಡೆ ಮಾಡುತ್ತಿರುವ ಆತಂಕಕಾರಿ ಅಂಶವೂ ಪತ್ತೆಯಾಗಿದೆ.

ಜೋರು ಸಂಗೀತ, ನಿರಂತರ ಚಾಟಿಂಗ್: '20 ಜನರ ತಂಡ ಏಕಕಾಲದಲ್ಲಿ ಕೆಲಸ ಮಾಡಿ, ಸರ್ವರ್ ಹಾಗೂ ಜಾಲತಾಣಗಳನ್ನು ಹ್ಯಾಕ್ ಮಾಡುತ್ತಿತ್ತು. ವಿಚಾರಣೆ ವೇಳೆ ಶ್ರೀಕಿಯೇ ಈ ಬಗ್ಗೆ ಮಾಹಿತಿ ನೀಡಿದ್ದ' ಪೊಲೀಸ್ ಮೂಲಗಳು ಹೇಳಿವೆ.

'ಆ್ಯಪಲ್ ಕಂಪನಿ ಲ್ಯಾಪ್‌ಟಾಪ್ ತೆರೆದಿಟ್ಟುಕೊಳ್ಳುತ್ತಿದ್ದ ಶ್ರೀಕಿ, ತನ್ನ ಕೊಠಡಿಗೆ ಯಾರಾದರೂ ಬಂದು ಅಡಚಣೆ ಮಾಡಬಾರದು ಎಂಬ ಕಾರಣಕ್ಕೆ ಜೋರಾದ ಸಂಗೀತ ಹಾಕಿಕೊಳ್ಳುತ್ತಿದ್ದ. ಅದೇ ಸಂದರ್ಭದಲ್ಲೇ 20 ಜನ ಹ್ಯಾಕಿಂಗ್ ಪಂಟರ್ ಜೊತೆ ಏಕಕಾಲದಲ್ಲಿ ಚಾಟಿಂಗ್ ಮಾಡಲಾರಂಭಿಸುತ್ತಿದ್ದ. ಮೊದಲೇ ಗುರುತಿಸಿಟ್ಟುಕೊಳ್ಳುತ್ತಿದ್ದ ಸರ್ವರ್ ಹಾಗೂ ಜಾಲತಾಣಗಳನ್ನು ಹ್ಯಾಕ್ ಮಾಡಿ, ಇಡೀ ವ್ಯವಸ್ಥೆಯನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತಿದ್ದ' ಎಂದೂ ತಿಳಿಸಿವೆ.

'ಹ್ಯಾಕಿಂಗ್ ಬಗ್ಗೆ ಸಂಬಂಧಪಟ್ಟ ಕಂಪನಿಗಳಿಗೆ ಅನುಮಾನ ಬಾರದಂತೆ ಮತ್ತೊಬ್ಬ ಹ್ಯಾಕರ್, ವ್ಯವಸ್ಥೆಯನ್ನು ನಿರ್ವಹಿಸುತ್ತಿದ್ದ. ಇನ್ನೊಬ್ಬ ಹ್ಯಾಕರ್, ಕೋಡಿಂಗ್ ಸಹಾಯದಿಂದ ದತ್ತಾಂಶವನ್ನು ಕದಿಯುತ್ತಿದ್ದ. ಮಗದೊಬ್ಬ, ಬಿಟ್ ಕಾಯಿನ್‌ಗಳನ್ನು ವ್ಯಾಲೆಟ್‌ಗೆ ವರ್ಗಾಯಿಸುತ್ತಿದ್ದ. ಇತರೆ ತಾಂತ್ರಿಕ ಕೆಲಸಗಳನ್ನು ಉಳಿದೆಲ್ಲ ಹ್ಯಾಕರ್‌ಗಳು ಮಾಡುತ್ತಿದ್ದರು. ಈ ಎಲ್ಲ ಪ್ರಕ್ರಿಯೆ ಅಚ್ಚುಕಟ್ಟಾಗಿ ನಡೆಯುತ್ತಿತ್ತು. ಸಣ್ಣದೊಂದು ಸುಳಿವು ಸಹ ಯಾರಿಗೂ ಗೊತ್ತಾಗುತ್ತಿರಲಿಲ್ಲ' ಎಂದೂ ಹೇಳಿವೆ.

'ಹ್ಯಾಕಿಂಗ್ ಕೆಲಸ ಮುಗಿಯುತ್ತಿದ್ದಂತೆ ಎಲ್ಲರೂ ಚಾಟಿಂಗ್ ಬಂದ್ ಮಾಡುತ್ತಿದ್ದರು. ಮುಂದಿನ ಕೃತ್ಯಕ್ಕೆ ಸಂಚು ರೂಪಿಸಿ, ಪುನಃ ಸಂಘಟಿತರಾಗಿ ಯಥಾಪ್ರಕಾರ ಹ್ಯಾಕ್ ಮಾಡುತ್ತಿದ್ದರು' ಎಂದೂ ತಿಳಿಸಿವೆ.

ಬಿಟ್ ಕಾಯಿನ್ ಹಂಚಿಕೆ: 'ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ದೋಚಿರುವಷ್ಟು ಬಿಟ್ ಕಾಯಿನ್‌ಗಳನ್ನು, ಇತರೆ 20 ಹ್ಯಾಕರ್‌ಗಳು ದೋಚಿರುವ ಅನುಮಾನವಿದೆ. ಇದು ಅಂತರರಾಷ್ಟ್ರೀಯ ಹ್ಯಾಕರ್‌ಗಳ ತಂಡವಾಗಿರುವುದರಿಂದ ತನಿಖೆ ನಡೆಸಲು ಸಾಕಷ್ಟು ಅಡ್ಡಿಗಳಿವೆ' ಎಂದೂ ಮೂಲಗಳು ಹೇಳಿವೆ.

'ಟಾಪ್-10' ಪಟ್ಟಿಯಲ್ಲಿ ಶ್ರೀಕಿ: 'ಹ್ಯಾಕರ್ ಆಗಬೇಕೆಂದು ತೀರ್ಮಾನಿಸಿದ್ದ ಶ್ರೀಕಿ ಹೆಚ್ಚಿನ ತರಬೇತಿ ಪಡೆಯಲೆಂದು ಇಂಟರ್‌ನೆಟ್ ರಿಲೇ ಚಾಟ್ (ಐಆರ್‌ಎಸ್) ಪ್ರೋಗ್ರಾಮ್ ಮೂಲಕ 'ಬ್ಲ್ಯಾಕ್‌ಹ್ಯಾಟ್' ಸದಸ್ಯರನ್ನು ಸಂಪರ್ಕಿಸಿದ್ದ. ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ತಂಡ ಸೇರುವಲ್ಲಿ ಯಶಸ್ವಿಯಾಗಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'8ನೇ ತರಗತಿಯಲ್ಲಿರುವಾಗಲೇ, 'ಬ್ಲ್ಯಾಕ್‌ಹ್ಯಾಟ್' ತಂಡದ ಅಡ್ಮಿನಿಸ್ಟ್ರೇಟರ್ ಆಗಿ ನೇಮಕವಾಗಿದ್ದ. 'ರೋಸ್ / ಬಿಗ್ ಬಾಸ್' ನಿಗೂಢ ಹೆಸರಿನಲ್ಲಿ ಸೈಬರ್ ಅಪರಾಧ ಎಸಗಲಾರಂಭಿಸಿದ್ದ. ದಿನ ಕಳೆದಂತೆ ಆತನ ಹೆಸರು ಅಂತರರಾಷ್ಟ್ರೀಯ ಮಟ್ಟದ 'ಟಾಪ್-10 ಹ್ಯಾಕರ್' ಪಟ್ಟಿ ಸೇರಿತ್ತು' ಎಂದೂ ಮೂಲಗಳು ತಿಳಿಸಿವೆ.

50 ಸಾವಿರ ಜನರಿದ್ದ ತಂಡ: 'ಶ್ರೀಕಿ ನಾಯಕತ್ವ ವಹಿಸಿಕೊಂಡಿದ್ದ ಸಂದರ್ಭದಲ್ಲಿ 'ಬ್ಲ್ಯಾಕ್‌ಹ್ಯಾಟ್' ತಂಡದಲ್ಲಿ 50 ಸಾವಿರ ಸದಸ್ಯರಿದ್ದರು. ಅವರ ನಡುವೆ ವೈಮನಸ್ಸು ಉಂಟಾಗಿ ತಂಡ ಎರಡು ಭಾಗವಾಗಿತ್ತು. ಒಂದು ತಂಡದ ನಾಯಕತ್ವವನ್ನು ಶ್ರೀಕಿ ಮುಂದುವರಿಸಿದ್ದ' ಎಂಬ ಸಂಗತಿಯೂ ಆರೋಪ ಪಟ್ಟಿಯಲ್ಲಿದೆ.

'ಅಂತರರಾಷ್ಟ್ರೀಯ ಮಟ್ಟದ ತನಿಖೆ ಅಗತ್ಯ'

'ಅಂತರರಾಷ್ಟ್ರೀಯ ಮಟ್ಟದಲ್ಲಿ ಸಕ್ರಿಯವಾಗಿರುವ 'ಬ್ಲ್ಯಾಕ್‌ಹ್ಯಾಟ್' ತಂಡವನ್ನು ಬುಡ ಸಮೇತ ಕಿತ್ತೆಸೆಯಲು ದೊಡ್ಡ ಮಟ್ಟದ ತನಿಖೆ ಅಗತ್ಯವಿದೆ' ಎಂದು ಪೊಲೀಸ್ ಅಧಿಕಾರಿಗಳ ವಲಯದಲ್ಲಿ ಅಭಿಪ್ರಾಯ ವ್ಯಕ್ತವಾಗಿದೆ.

ಅಮೆರಿಕ, ಇಸ್ರೇಲ್, ಚೀನಾ, ಉಕ್ರೇನ್, ಬಾಂಗ್ಲಾದೇಶ, ಹಾಂಗ್‌ಕಾಂಗ್, ನೆದರ್ಲೆಂಡ್ಸ್, ಇಟಲಿ, ಸ್ವಿಟ್ಜರ್‌ಲೆಂಡ್, ಫ್ರಾನ್ಸ್ ಹಾಗೂ ಜರ್ಮನಿ ದೇಶದ ಹ್ಯಾಕರ್‌ಗಳು ತಂಡದಲ್ಲಿದ್ದಾರೆ. ಹೀಗಾಗಿ, ಪ್ರತಿಯೊಂದು ದೇಶದ ಪ್ರತಿನಿಧಿಗಳ ನೇತೃತ್ವದಲ್ಲಿ ಇಂಟರ್‌ಪೋಲ್ ಮೂಲಕ ವಿಶೇಷ ತಂಡವೊಂದನ್ನು ರಚಿಸಿ ಜಾಲ ಭೇದಿಸಬೇಕಿದೆ. ಶ್ರೀಕೃಷ್ಣನಿಂದ ಬಿಟ್ ಕಾಯಿನ್ ದೋಚಿದ್ದವರ ಬಂಡವಾಳವೂ ಬಯಲಾಗಲಿದೆ ಎಂಬ ಚರ್ಚೆ ಅಧಿಕಾರಿಗಳ ವಲಯದಲ್ಲಿ ನಡೆದಿದೆ.

ಸಂಸತ್ ಅಧಿವೇಶನದ ಹೊಸ್ತಿಲಲ್ಲಿ ಸುಗ್ರೀವಾಜ್ಞೆ ಮೊರೆ ಹೋದ ಕೇಂದ್ರ ಸರ್ಕಾರ

ಸಿಬಿಐ, ಇ.ಡಿ. ನಿರ್ದೇಶಕರ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಿಬಿಐ ಮತ್ತು ಜಾರಿ ನಿರ್ದೇಶನಾಲಯದ (ಇ.ಡಿ.) ನಿರ್ದೇಶಕರ ಅಧಿಕಾರದ ಅವಧಿಯನ್ನು ಎರಡು ವರ್ಷದಿಂದ ಐದು ವರ್ಷಕ್ಕೆ ವಿಸ್ತರಿಸಿ ಕೇಂದ್ರ ಸರ್ಕಾರವು ಭಾನುವಾರ ಸುಗ್ರೀವಾಜ್ಞೆ ಹೊರಡಿಸಿದೆ. ಮುಂದಿನ 15 ದಿನಗಳಲ್ಲಿ ಸಂಸತ್ತಿನ ಅಧಿವೇಶನ ಆರಂಭವಾಗಲಿದೆ. ಈ ಅವಧಿಯಲ್ಲಿ ಸುಗ್ರೀವಾಜ್ಞೆ ಹೊರಡಿಸಿರುವ ಸರ್ಕಾರದ ಈ ಕ್ರಮವನ್ನು ವಿರೋಧ ಪಕ್ಷಗಳು ಟೀಕಿಸಿವೆ.

ಸಿಬಿಐ ನಿರ್ದೇಶಕರ ಅಧಿಕಾರದ ಅವಧಿಯನ್ನು ವಿಸ್ತರಿಸಲು ದೆಹಲಿ ವಿಶೇಷ ಪೊಲೀಸ್ ವ್ಯವಸ್ಥೆ (ತಿದ್ದುಪಡಿ) ಸುಗ್ರೀವಾಜ್ಞೆ-2021 ಮತ್ತು ಇ.ಡಿ. ನಿರ್ದೇಶಕರ ಅಧಿಕಾರದ ಅವಧಿಯನ್ನು ಐದು ವರ್ಷಗಳಿಗೆ ವಿಸ್ತರಿಸಲು ಕೇಂದ್ರೀಯ ಜಾಗೃತ ಆಯೋಗ (ತಿದ್ದುಪಡಿ) ಸುಗ್ರೀವಾಜ್ಞೆ-2021 ಗಳನ್ನು ಕೇಂದ್ರ ಸರ್ಕಾರವು ಹೊರಡಿಸಿದೆ.

ಮುಖ್ಯಾಂಶಗಳು
- ಎರಡು ಹುದ್ದೆಗಳ ಅಧಿಕಾರದ ಅವಧಿ ಐದು ವರ್ಷಕ್ಕೆ ಏರಿಕೆ
- ಎರಡು ಸಂಸ್ಥೆಗಳಿಗೆ ಅನ್ವಯವಾಗುವಂತೆ ಎರಡು ಪ್ರತ್ಯೇಕ ಸುಗ್ರೀವಾಜ್ಞೆ
- ಇದೇ 17ಕ್ಕೆ ಹುದ್ದೆಯಿಂದ ತೆರವಾಗಬೇಕಿದ್ದ ಇ.ಡಿ. ನಿರ್ದೇಶಕ

ಉತ್ತರ ಪ್ರದೇಶ ಕೇಡರ್‌ನ 1984ರ ಬ್ಯಾಚ್‌ನ ಐಆರ್‌ಎಸ್ ಅಧಿಕಾರಿ ಸಂಜಯ್ ಮಿಶ್ರಾ ಅವರನ್ನು 2018ರ ನವೆಂಬರ್ 17ರಂದು ಇ.ಡಿ. ನಿರ್ದೇಶಕರನ್ನಾಗಿ ಸರ್ಕಾರವು ನೇಮಕ ಮಾಡಿತ್ತು. ಆ ಪ್ರಕಾರ, 2020ರ ನವೆಂಬರ್ 17ರಂದು ಅವರ ಅಧಿಕಾರದ ಅವಧಿ ಮುಕ್ತಾಯವಾಗಬೇಕಿತ್ತು. ಆಗ ಸರ್ಕಾರವು ಸಂಜಯ್ ಅವರ ನೇಮಕಾತಿ ಆದೇಶವನ್ನು ಮಾರ್ಪಡಿಸಿ, ಅಧಿಕಾರದ ಅವಧಿಯನ್ನು ಒಂದು ವರ್ಷ ವಿಸ್ತರಿಸಿತ್ತು. ಆ ವಿಸ್ತರಣೆ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಕೆಯಾಗಿತ್ತು.

ಅರ್ಜಿಯ ವಿಚಾರಣೆ ನಡೆಸಿದ್ದ ಪೀಠವು, ವಿಸ್ತರಣೆ ಆದೇಶವನ್ನು ಎತ್ತಿಹಿಡಿದಿತ್ತು. ಆದರೆ, 'ಅಧಿಕಾರದ ಅವಧಿಯನ್ನು ಮತ್ತೊಮ್ಮೆ ವಿಸ್ತರಿಸಬಾರದು' ಎಂದು ಆದೇಶಿಸಿತ್ತು.

ಸುಪ್ರೀಂ ಕೋರ್ಟ್‌ನ ಈ ಆದೇಶದ ಪ್ರಕಾರ ಇದೇ 17ರಂದು ಸಂಜಯ್ ಅವರು ಇ.ಡಿ. ನಿರ್ದೇಶಕನ ಹುದ್ದೆಯನ್ನು ತೊರೆಯಬೇಕಿತ್ತು. ಆದರೆ ಅವರ ಅವಧಿ ಮುಗಿಯುವುದಕ್ಕೆ ಮೂರು ದಿನ ಇರುವಾಗ ಸರ್ಕಾರವು, ಇ.ಡಿ. ನಿರ್ದೇಶಕರ ಅವಧಿಯನ್ನು ಐದು ವರ್ಷಗಳಿಗೆ ವಿಸ್ತರಿಸಿದೆ.

ವಿಪಕ್ಷಗಳ ಟೀಕೆ, ಕಳವಳ

ಮೋದಿ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಇ.ಡಿ. ಹಾಲಿ ನಿರ್ದೇಶಕ ಸಂಜಯ್ ಮಿಶ್ರಾ ಅವರನ್ನು ಹುದ್ದೆಯಲ್ಲಿ ಮುಂದುವರಿಸಲು ಸರ್ಕಾರವು ಈ ಕ್ರಮ ತೆಗೆದುಕೊಂಡಿದೆ. ಸುಪ್ರೀಂ ಕೋರ್ಟ್ ಹೇರಿದ್ದ ನಿರ್ಬಂಧವನ್ನು ತಪ್ಪಿಸಲು ಸರ್ಕಾರ ಸುಗ್ರೀವಾಜ್ಞೆ ಮೊರೆ ಹೋಗಿದೆ. ಈ ಮೂಲಕ ಸಂಸದೀಯ ಪ್ರಕ್ರಿಯೆಗಳನ್ನು ಬದಿಗೊತ್ತಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿವೆ.

'ಸಂಸತ್ತಿನ ಅಧಿವೇಶನ ಆರಂಭವಾಗಲು ಎರಡು ವಾರವಷ್ಟೇ ಇರುವಾಗ ಸುಗ್ರೀವಾಜ್ಞೆ ಮೊರೆ ಹೋಗಲಾಗಿದೆ. ಇದು ಅಸಾಧಾರಣ ಮತ್ತು ಏಕಪಕ್ಷೀಯ ಕ್ರಮ. ಮೋದಿ ಸರ್ಕಾರವು ಎಲ್ಲಾ ಸಾಂವಿಧಾನಿಕ ಸಂಸ್ಥೆಗಳನ್ನು ನಾಶ ಮಾಡುತ್ತಿದೆ. ಅವರು ಯಾವ ಸ್ವರೂಪದ ದೇಶವನ್ನು ಸೃಷ್ಟಿಸಲು ಹೊರಟಿದ್ದಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಅವರು ಪೊಲೀಸ್ ದೇಶವನ್ನೇ ಸೃಷ್ಟಿಸಿದ್ದಾರೆ' ಎಂದು ಆರ್‌ಜೆಡಿಯ ರಾಜ್ಯಸಭಾ ಸದಸ್ಯ ಮನೋಜ್ ಝಾ ಕಳವಳ ವ್ಯಕ್ತಪಡಿಸಿದ್ದಾರೆ.

'ಪ್ರಜಾಪ್ರಭುತ್ವ ಮತ್ತು ಅದರ ಕಾರ್ಯವಿಧಾನವನ್ನು ವಸ್ತುಸಂಗ್ರಹಾಲಯದ ಪರಿಕರವನ್ನಾಗಿ ಮಾಡುವ ಉದ್ದೇಶದಿಂದಲೇ ಅವರು ಹೊಸ ಸಂಸತ್ ಭವನ ನಿರ್ಮಿಸುತ್ತಿದ್ದಾರೆ' ಎಂದು ಅವರು ಕಿಡಿಕಾರಿದ್ದಾರೆ.

ಸಂಸತ್ತಿನ ಹಲ್ಲನ್ನು ಕಿತ್ತು, ಅದನ್ನು ಸಂಪೂರ್ಣವಾಗಿ ನಿಷ್ಕ್ರಿಯಗೊಳಿಸುವ ಉದ್ದೇಶದಿಂದ 'ಮೋಶಾ' (ಮೋದಿ-ಶಾ) ತಂಡವು ಹೂಡಿರುವ ಹೊಸ ಸಂಚು ಇದು

ಜೈರಾಮ್ ರಮೇಶ್, ರಾಜ್ಯಸಭೆಯಲ್ಲಿ ಕಾಂಗ್ರೆಸ್‌ನ ಮುಖ್ಯ ಸಚೇತಕ

ಈ 'ಸುಗ್ರೀವಾಜ್ಞೆ ರಾಜ್' ನಿಜಕ್ಕೂ ಪ್ರಜಾಸತ್ತಾತ್ಮಕವಾದುದಲ್ಲ. ಸಂಸತ್ತಿನ ಅಧಿವೇಶನವನ್ನು ತಪ್ಪಿಸಿ, ತರಾತುರಿಯಲ್ಲಿ ಅವಧಿ ವಿಸ್ತರಿಸಿದ್ದರ ಹಿಂದೆ ಏನೋ ಇದೆ

ಸೀತಾರಾಂ ಯೆಚೂರಿ, ಸಿಪಿಎಂ ಪ್ರಧಾನ ಕಾರ್ಯದರ್ಶಿ

ಮೋದಿ-ಶಾ ಅವರು ಸಂಸತ್ತನ್ನು ಲೆಕ್ಕಕ್ಕೆ ಇಟ್ಟುಕೊಂಡಿಲ್ಲ. ಅವರು ಗುಜರಾತ್ ಮಾದರಿಯ ಭರವಸೆ ನೀಡಿದ್ದರು, ನಾವು ಇನ್ನೇನು ಅಲ್ಲಿಗೆ ತಲುಪಲಿದ್ದೇವೆ

ಡೆರೆಕ್ ಒಬ್ರಿಯಾನ್, ಟಿಎಂಸಿ ಸಂಸದ

ಸುದ್ದಿ 2 ನಿಮಿಷ

ಸೇನಾ ಮುಖ್ಯಸ್ಥ ಜನರಲ್ ನರವಣೆ ಇಸ್ರೇಲ್ ಪ್ರವಾಸ

ನವದೆಹಲಿ: ಸೇನಾ ಮುಖ್ಯಸ್ಥ ಜನರಲ್ ಎಂ.ಎಂ.ನರವಣೆ ಅವರು ಐದು ದಿನಗಳ ಭೇಟಿಗಾಗಿ ಭಾನುವಾರ ಇಸ್ರೇಲ್‌ಗೆ ತೆರಳಿದರು.

ರಕ್ಷಣಾ ಕ್ಷೇತ್ರದಲ್ಲಿ ಸಹಕಾರ ಸೇರಿದಂತೆ ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧ ವೃದ್ಧಿಸುವ ಸಲುವಾಗಿ ಅವರು ಪ್ರವಾಸ ಕೈಗೊಂಡಿದ್ದಾರೆ. ವಿದೇಶಾಂಗ ಸಚಿವ ಎಸ್. ಜೈಶಂಕರ್ ಮತ್ತು ರಕ್ಷಣಾ ಕಾರ್ಯದರ್ಶಿ ಅಜಯ್ ಕುಮಾರ್ ಅವರು ಇಸ್ರೇಲ್‌ಗೆ ಭೇಟಿ ನೀಡಿದ ವಾರಗಳ ನಂತರ ಜನರಲ್ ಈ ಪ್ರವಾಸ ಕೈಗೊಂಡಿರುವುದು ಗಮನಾರ್ಹ. ವಾಯುಪಡೆ ಮುಖ್ಯಸ್ಥರಾಗಿದ್ದ ಏರ್ ಚೀಫ್ ಮಾರ್ಷಲ್ ಆರ್.ಕೆ.ಎಸ್.ಭದೌರಿಯಾ ಅವರು ಕಳೆದ ಆಗಸ್ಟ್‌ನಲ್ಲಿ ಇಸ್ರೇಲ್‌ಗೆ ಭೇಟಿ ನೀಡಿದ್ದರು.

'ಐದು ದಿನಗಳ ಪ್ರವಾಸದ ಸಂದರ್ಭದಲ್ಲಿ ಜನರಲ್ ಅವರು 'ಇಸ್ರೇಲ್ ಮಿಲಿಟರಿಯ ಹಿರಿಯ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸುವರು' ಎಂದು ಸೇನಾಪಡೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಡ್ರೋನ್‌ಗಳು, ರೊಬೊಟಿಕ್, ಕೃತಕ ಬುದ್ಧಿಮತ್ತೆ ಹಾಗೂ ಕ್ವಾಂಟಮ್ ಕಂಪ್ಯೂಟಿಂಗ್ ಸೇರಿದಂತೆ ಆಧುನಿಕ ತಂತ್ರಜ್ಞಾನಗಳ ಅಭಿವೃದ್ಧಿಗಾಗಿ ಉಭಯ ದೇಶಗಳು ಕಳೆದ ಮಂಗಳವಾರ ಒಪ್ಪಂದಕ್ಕೆ ಸಹಿ ಹಾಕಿವೆ.

ವಯಸ್ಕರಿಗೆ ಮಾತ್ರ ಝೈಡಸ್ ಕ್ಯಾಡಿಲ ಲಸಿಕೆ

ನವದೆಹಲಿ (ಪಿಟಿಐ): 12 ವರ್ಷ ಮತ್ತು ಅದಕ್ಕಿಂತ ದೊಡ್ಡವರಿಗೆ ಲಸಿಕೆ ನೀಡಲು ಭಾರತೀಯ ಔಷಧ ಪ್ರಾಧಿಕಾರದಿಂದ ಅನುಮೋದನೆ ಪಡೆದಿದ್ದ 'ಝೈಡಸ್ ಕ್ಯಾಡಿಲ'ದ ಕೋವಿಡ್-19 ಲಸಿಕೆ 'ಝೈಕೋವ್-ಡಿ'ಅನ್ನು ಸದ್ಯಕ್ಕೆ ವಯಸ್ಕರಿಗೆ ಮಾತ್ರ ನೀಡಲಾಗುವುದು ಎಂದು ಮೂಲಗಳು ಭಾನುವಾರ ತಿಳಿಸಿವೆ.

ದೇಶೀಯವಾಗಿ ಲಸಿಕೆ ತಯಾರಿಸಲು ಮತ್ತು ದೇಶದಾದ್ಯಂತ ಚುಚ್ಚುಮದ್ದು ರಹಿತ ಲಸಿಕೆ ನೀಡುವ ಅಭಿಯಾನಕ್ಕೆ ಅಗತ್ಯ ತಯಾರಿ ಮಾಡಕೊಳ್ಳಲು ಆರೋಗ್ಯ ಸಚಿವಾಲಯವು ಝೈಡಸ್ ಕ್ಯಾಡಿಲ ಸಂಸ್ಥೆಗೆ ಅನುಮತಿ ನೀಡಿದೆ. ಒಂದು ಕೋಟಿ ಡೋಸ್ ಲಸಿಕೆಗಳಿಗಾಗಿ ಸಚಿವಾಲಯ ಬೇಡಿಕೆಯನ್ನೂ ಇರಿಸಿದೆ.

ಝೈಕೋವ್-ಡಿ ಲಸಿಕೆಯನ್ನು ವಯಸ್ಕರಿಗೆ ನೀಡುವ ಕುರಿತು ಆರೋಗ್ಯ ಕಾರ್ಯಕರ್ತರು ಮತ್ತು ಲಸಿಕೆ ನೀಡುವವರಿಗೆ ತರಬೇತಿ ನೀಡಲಾಗುವುದು.

ಝೈಕೋವ್-ಡಿ ಲಸಿಕೆಯನ್ನು 28 ದಿನಗಳ ಅಂತರದಲ್ಲಿ ಮೂರು ಡೋಸ್ ನೀಡಬೇಕು. ಈ ಲಸಿಕೆ ಇದೇ ವರ್ಷ ಆ.20ರಂದು ಭಾರತೀಯ ಔಷಧ ಪ್ರಾಧಿಕಾರದಿಂದ ತುರ್ತು ಬಳಕೆ ಅನುಮತಿ (ಇಯುಎ) ಪಡೆದಿದೆ ಎಂದು ಝೈಡಸ್ ಕ್ಯಾಡಿಲ ಹೇಳಿದೆ.

'ಮಕ್ಕಳಿಗೆ ಲಸಿಕೆ ನೀಡುವುದಕ್ಕೆ ಅವಸರ ಮಾಡುವುದಿಲ್ಲ. ತಜ್ಞರ ಅಭಿಪ್ರಾಯ ಪಡೆಯಲಾಗುವುದು. ಯಾವ ದೇಶದಲ್ಲೂ ಮಕ್ಕಳಿಗೆ ದೊಡ್ಡ ಪ್ರಮಾಣದಲ್ಲಿ ಕೋವಿಡ್ ಲಸಿಕೆ ನೀಡಿಲ್ಲ. ಕೆಲ ದೇಶಗಳು ಈ ಕುರಿತು ಹೆಜ್ಜೆ ಇಟ್ಟಿವೆ' ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಗುರುವಾರ ಹೇಳಿದ್ದರು.

ಅಂತರ ಮರೆತ ಜನ

ಮುಂಬೈನ ಜುಹು ಬೀಚ್‌ನಲ್ಲಿ ಭಾನುವಾರ ಅಂತರ ಮರೆತು ಜನರು ಗುಂಪುಗೂಡಿದ್ದರು. –ಪಿಟಿಐ ಚಿತ್ರ

ಶಿಲ್ಪಾ ಶೆಟ್ಟಿ ದಂಪತಿ ವಿರುದ್ಧ ವಂಚನೆ ಪ್ರಕರಣ

ಮುಂಬೈ (ಪಿಟಿಐ): ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಮತ್ತು ಪತಿ ಉದ್ಯಮಿ ರಾಜ್ ಕುಂದ್ರಾ ವಿರುದ್ಧ ₹1.51 ಕೋಟಿ ವಂಚನೆ ಪ್ರಕರಣವನ್ನು ಮುಂಬೈ ಮೂಲದ ಉದ್ಯಮಿ ನಿತಿನ್ ಬಾರೈ ದಾಖಲಿಸಿದ್ದಾರೆ. ಬಾಂದ್ರಾ ಪೊಲೀಸ್ ಠಾಣೆಯಲ್ಲಿ ಶನಿವಾರ ಎಫ್‌ಐಆರ್ ದಾಖಲಾಗಿದೆ.

'2014ರ ಜುಲೈನಲ್ಲಿ ಎಸ್‌ಎಲ್‌ಎಫ್ ಫಿಟ್‌ನೆಸ್ ಕಂಪನಿ ನಿರ್ದೇಶಕ ಕಾಶಿಫ್ ಖಾನ್, ಶಿಲ್ಪಾ ಶೆಟ್ಟಿ, ರಾಜ್ ಕುಂದ್ರಾ ಮತ್ತು ಇತರರು ಉದ್ಯಮವೊಂದರಲ್ಲಿ ₹1.51 ಕೋಟಿ ಹೂಡಿಕೆ ಮಾಡಲು ನನಗೆ ಹೇಳಿದ್ದರು. ಎಸ್‌ಎಫ್‌ಎಲ್ ಫಿಟ್‌ನೆಸ್ ಕಂಪನಿ ಫ್ರಾಂಚೈಸಿ ನೀಡುತ್ತದೆ. ಅದರಂತೆ ಪುಣೆ ಬಳಿಯ ಹಡಪ್ಸರ್ ಮತ್ತು ಕೋರೆಗಾಂವ್‌ನಲ್ಲಿ ಜಿಮ್ ತೆರೆಯಬೇಕು ಎಂದು ಹೇಳಿದ್ದರು. ಆದರೆ ಫ್ರಾಂಚೈಸಿ ನೀಡಲಿಲ್ಲ. ಹಣವನ್ನು ವಾಪಸ್ಸು ಕೇಳಿದಾಗ ನನ್ನನ್ನು ಬೆದರಿಸಲಾಯಿತು' ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ನಿತಿನ್ ಹೇಳಿದ್ದಾರೆ.

28 ವರ್ಷ ಹಿಂದಿ ಸಿನಿಮಾ ಉದ್ಯಮದಲ್ಲಿ ಕಷ್ಟಪಟ್ಟು ಕೆಲಸ ಮಾಡಿದ್ದೇನೆ. ನನ್ನ ಹೆಸರನ್ನು ಹಾಳು ಮಾಡುತ್ತಿರುವುದನ್ನು ನೋಡಿ ನೋವಾಗುತ್ತಿದೆ

ಶಿಲ್ಪಾ ಶೆಟ್ಟಿ, ನಟಿ

ಈ ಪ್ರಕರಣ ಕುರಿತು ಶಿಲ್ಪಾ ಶೆಟ್ಟಿ ಪ್ರತಿಕ್ರಿಯೆ ನೀಡಿದ್ದಾರೆ. 'ನಮ್ಮ ಮಾನಹಾನಿ ಮಾಡಲೆಂದೇ ಈ ಮೊಕದ್ದಮೆ ದಾಖಲಿಸಲಾಗಿದೆ' ಎಂದು ಅವರು ತಮ್ಮ ವಿರುದ್ಧದ ಆರೋಪವನ್ನು ನಿರಾಕರಿಸಿದ್ದಾರೆ.

'ದಾಖಲೆಗಳು ಸರಿಯಾಗಿ ಇವೆ. ಎಸ್‌ಎಫ್‌ಎಲ್ ಫಿಟ್‌ನೆಸ್ ಎಂಬ ಸಂಸ್ಥೆಯನ್ನು ನಡೆಸುತ್ತಿರುವುದು ಕಾಶಿಫ್ ಖಾನ್. ದೇಶದಾದ್ಯಂತ ಜಿಮ್‌ಗಳನ್ನು ತೆರೆಯಲು ಅವರು ಬ್ರ್ಯಾಂಡ್ ಹೆಸರಿನ ಹಕ್ಕನ್ನೂ ಪಡೆದಿದ್ದರು. ಬ್ಯಾಂಕ್ ವ್ಯವಹಾರ ಸೇರಿ ಎಲ್ಲಾ ವ್ಯವಹಾರಗಳೂ ಅವರ ಬಳಿಯೇ ಇದ್ದವು. ನಮಗೆ ಕಾಶಿಫ್ ಖಾನ್‌ನ ಯಾವ ವ್ಯವಹಾರಗಳೂ ತಿಳಿದಿಲ್ಲ. ನಾವು ಅವರಿಂದ ಒಂದು ರೂಪಾಯಿಯನ್ನೂ ಪಡೆದಿಲ್ಲ. ಎಲ್ಲಾ ಫ್ರಾಂಚೈಸಿಗಳನ್ನು ಕಾಶಿಫ್ ಅವರೇ ಖುದ್ದಾಗಿ ನಿರ್ವಹಿಸುತ್ತಿದ್ದರು. 2014ರಲ್ಲಿ ಆ ಕಂಪನಿಯನ್ನು ಮುಚ್ಚಲಾಯಿತು' ಎಂದಿದ್ದಾರೆ.

ಮಂತ್ರಿ ಪರಿಷತ್‌ನ 8 ತಂಡಗಳಿಗೆ ಹೊಣೆ

ಆಡಳಿತ ಸುಧಾರಣೆ: ಹಳೆ ಬೇರು–ಹೊಸ ಚಿಗುರಿನ ತಂಡ ರಚನೆಗೆ ನಿರ್ಧಾರ

ನವದೆಹಲಿ (ಪಿಟಿಐ): ಕ್ರಿಯಾಶೀಲ ಆಡಳಿತಕ್ಕಾಗಿ, ಪ್ರಧಾನಿ ನರೇಂದ್ರ ಮೋದಿ ಅವರು, ಮಂತ್ರಿ ಪರಿಷತ್ ಅನ್ನು ಎಂಟು ಗುಂಪುಗಳಾಗಿ ವಿಂಗಡಿಸಿದ್ದಾರೆ.

ಯುವ ಸಿಬ್ಬಂದಿಗೆ ಉತ್ತೇಜನ ನೀಡುವುದರ ಜೊತೆಗೆ, ನಿವೃತ್ತಿಯಾಗುತ್ತಿರುವ ಅಧಿಕಾರಿಗಳಿಂದ ಸಲಹೆ ಪಡೆಯುವುದು ಹಾಗೂ ತಂತ್ರಜ್ಞಾನದ ಸಮರ್ಥ ಬಳಕೆ ಮಾಡಿಕೊಳ್ಳುವ ಮೂಲಕ ಆಡಳಿತ ಸುಧಾರಣೆಗೆ ಒತ್ತು ನೀಡಲು ಯೋಜಿಸಲಾಗಿದೆ. ಯುವ ವೃತ್ತಿಪರರ ನೇಮಕದ ಯೋಜನೆಯೂ ಇದೆ ಎಂದು ಮೂಲಗಳು ತಿಳಿಸಿವೆ.

77 ಸಚಿವರನ್ನು 8 ಗುಂಪುಗಳಾಗಿ ವಿಂಗಡಿಸಲಾಗಿದೆ. ಹಿರಿಯ ಸಚಿವರೊಬ್ಬರು ಆ ಗುಂಪಿನ ಸಂಯೋಜಕರಾಗಿರುತ್ತಾರೆ. ಎಲ್ಲ ಸಚಿವಾಲಯಗಳ ಕಚೇರಿಗಳಲ್ಲಿ ಹೆಚ್ಚಿನ ಪಾರದರ್ಶಕತೆ, ಸುಧಾರಣೆ ಹಾಗೂ ದಕ್ಷತೆ ತರುವುದಕ್ಕಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಈ ಗುಂಪುಗಳ ಹೊಣೆ. ಅದಕ್ಕಾಗಿ ತಂತ್ರಜ್ಞಾನ ಆಧಾರಿತ ಸಂಪನ್ಮೂಲ, ತಮ್ಮ ತಂಡಕ್ಕೆ ಅಗತ್ಯವಾದ ಸಿಬ್ಬಂದಿಯನ್ನು ನೇಮಿಸಿಕೊಳ್ಳುವ ವೃತ್ತಿಪರರ ತಂಡ ರಚನೆ ಸೇರಿದಂತೆ ಹಲವು ಕ್ರಮಗಳನ್ನು ಅಳವಡಿಸಿಕೊಳ್ಳಲು ಯೋಜಿಸಲಾಗಿದೆ ಎಂದು ಹೇಳಲಾಗಿದೆ.

ಪ್ರಧಾನಿ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಮಂತ್ರಿ ಪರಿಷತ್‌ನ ಚಿಂತನಾ ಶಿಬಿರಗಳ ಸರಣಿ ಸಭೆಗಳ ನಂತರದಲ್ಲಿ, ಈ ರೀತಿಯ ಗುಂಪುಗಳನ್ನು ಮಾಡಲಾಗಿದೆ.

ವೈಯಕ್ತಿಕ ದಕ್ಷತೆ, ಯೋಜನೆಗಳ ಅನುಷ್ಠಾನದ ಮೇಲೆ ನಿಗಾ, ಸಚಿವಾಲಯದ ಕಾರ್ಯನಿರ್ವಹಣೆ–ಅಧಿಕಾರಿಗಳ ಪಾಲ್ಗೊಳ್ಳುವಿಕೆ, ಪಕ್ಷದ ಸಹಕಾರ ಮತ್ತು ಪರಿಣಾಮಕಾರಿ ಸಂವಹನ ಹಾಗೂ ಸಂಸದೀಯ ನಡಾವಳಿಗೆ ಸಂಬಂಧಿಸಿದಂತೆ ಒಟ್ಟು ಐದು ಸಭೆಗಳು ನಡೆದಿವೆ.

ಕೊನೆಯ ಚಿಂತನಾ ಶಿಬಿರದಲ್ಲಿ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಹಾಗೂ ರಾಜ್ಯಸಭೆಯ ಸಭಾಪತಿ ಅಧ್ಯಕ್ಷ ಎಂ. ವೆಂಕಯ್ಯ ನಾಯ್ಡು ಕೂಡ ಭಾಗವಹಿಸಿದ್ದರು.

ಪ್ರಮುಖವಾಗಿ ಮೋದಿ ಸರ್ಕಾರದ ಯೋಜನೆಗಳ ಅನುಷ್ಠಾನ ಹಾಗೂ ದಕ್ಷತೆ ಹೆಚ್ಚಿಸುವ ಬಗ್ಗೆ, ಈ ಚಿಂತನಾ ಶಿಬಿರಗಳಲ್ಲಿನ ಚರ್ಚೆಗೆ ಆದ್ಯತೆ ನೀಡಲಾಗಿತ್ತು.

ಪ್ರತಿಯೊಂದು ಸಚಿವಾಲಯದ ಕಚೇರಿಯ ಪೋರ್ಟಲ್ ಅಭಿವೃದ್ಧಿಪಡಿಸಿ, ಆ ಮೂಲಕ ಕೇಂದ್ರ ಸರ್ಕಾರದ ಘೋಷಣೆಗಳು, ವಿವಿಧ ಯೋಜನೆಗಳ ಅನುಷ್ಠಾನದಲ್ಲಿನ ಪ್ರಗತಿ, ಹಾಗೂ ತಮ್ಮ ಗುಂಪಿಗೆ ನೀಡಲಾದ ಗುರಿ ಸಾಧಿಸುವುದಕ್ಕಾಗಿ ಕೈಗೊಂಡ ಕ್ರಮಗಳ ಬಗ್ಗೆ ಕಾಲಕಾಲಕ್ಕೆ ಮಾಹಿತಿಯನ್ನು ನೀಡುತ್ತ ಹೋಗುವುದು ಈ ಗುಂಪುಗಳ ಕೆಲಸ.

ಸಂಶೋಧನೆ–ಸಂವಹನ ಹಾಗೂ ಇತರ ಕ್ಷೇತ್ರದಲ್ಲಿ ನುರಿತಂತಹ, ಕನಿಷ್ಠ ಮೂವರು ಯುವ ವೃತ್ತಿಪರರು ಇರುವಂತಹ ತಂಡವೊಂದನ್ನು ರೂಪಿಸುವ ಹೊಣೆಯನ್ನು ಒಂದು ಗುಂಪಿಗೆ ನೀಡಲಾಗಿದೆ. ನಿವೃತ್ತರಾಗುತ್ತಿರುವ ಉದ್ಯೋಗಿಗಳ ಅನುಭವ, ಪ್ರತಿಕ್ರಿಯೆಗಳನ್ನು ನಿರ್ವಹಿಸುವ ಪೋರ್ಟಲ್ ಸಿದ್ಧಪಡಿಸುವಂತೆ ಮತ್ತೊಂದು ಗುಂಪಿಗೆ ಸೂಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಸಚಿವರಾದ ಹರದೀಪ್ ಸಿಂಗ್ ಪುರಿ, ನರೇಂದ್ರ ಸಿಂಗ್ ತೋಮರ್, ಪೀಯೂಷ್ ಗೋಯಲ್, ಧರ್ಮೇಂದ್ರ ಪ್ರಧಾನ್, ಸ್ಮೃತಿ ಇರಾನಿ, ಅನುರಾಗ್ ಠಾಕೂರ್ ಅವರೂ ಇಂತಹ ತಂಡಗಳ ಸಂಯೋಜಕರಾಗಿದ್ದಾರೆ.

ಈ ಹೊಣೆಯು ಅವರಿಗೆ, ತಮ್ಮ ಸಂಪುಟ ಸಹೋದ್ಯೋಗಿಗಳೊಂದಿಗೆ ಹಾಗೂ ತಮ್ಮ ತಮ್ಮ ಸಚಿವಾಲಯಗಳ ಕಚೇರಿಗಳಲ್ಲಿ ಉತ್ತಮ ಕಾರ್ಯಶೈಲಿಯನ್ನು ರೂಢಿಸಿಕೊಳ್ಳಲು ನೆರವಾಗಲಿದೆ ಎನ್ನಲಾಗಿದೆ.

ಬುಡಕಟ್ಟು ರ‍್ಯಾಲಿ: ಮೋದಿ ಭಾಷಣ ಇಂದು

ಭೋಪಾಲ್: ಪ್ರಧಾನಿ ನರೇಂದ್ರ ಮೋದಿಯವರು ಸೋಮವಾರ ಬುಡಕಟ್ಟು ಜನಾಂಗದವರ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡುವರು. ಅಲ್ಲದೆ ರಾಣಿ ಕಮಲಾಪತಿ ರೈಲು ನಿಲ್ದಾಣವನ್ನು ಉದ್ಘಾಟಿಸುವರು.

ಬುಡಕಟ್ಟು ಜನರ ಹೋರಾಟಗಾರ ಬಿರ್ಸಾ ಮುಂಡಾ ಅವರ ಜನ್ಮದಿನ ನಿಮಿತ್ತ ನವೆಂಬರ್ 15 ರಂದು 'ಜನ್‌ಜಾತೀಯ ಗೌರವ್ ದಿವಸ್' (ಬುಡಕಟ್ಟು ಗೌರವ ದಿನ) ಎಂದು ಆಚರಿಸಲಾಗುವುದು ಎಂದು ಬಿಜೆಪಿ ಇತ್ತೀಚೆಗಷ್ಟೇ ಘೋಷಿಸಿತ್ತು.

ಹಬೀಬ್‌ಗಂಜ್ ರೈಲು ನಿಲ್ದಾಣದ ಹೆಸರನ್ನು ಬದಲಾಯಿಸಿ, ಇದೀಗ ರಾಣಿ ಕಮಲಾಪತಿ ಅವರ ಹೆಸರನ್ನು ಮರುನಾಮಕರಣ ಮಾಡಲಾಗಿದೆ. ಈ ರೈಲು ನಿಲ್ದಾಣವನ್ನು ಮೋದಿಯವರು ಉದ್ಘಾಟಿಸಲಿದ್ದಾರೆ.

ಭೋಪಾಲ್‌ನ ಬಿಎಚ್‌ಇಎಲ್ ಜಾಂಬೋರಿ ಮೈದಾನದಲ್ಲಿ ಮಧ್ಯಾಹ್ನ 1ಗಂಟೆ ಸುಮಾರಿಗೆ ಬುಡಕಟ್ಟು ರ‍್ಯಾಲಿ ಉದ್ದೇಶಿಸಿ ಮಾತನಾಡುವ ಮೋದಿ ಅವರು, ಈ ಸಂದರ್ಭದಲ್ಲಿ ಬುಡಕಟ್ಟು ಸಮುದಾಯಗಳ ಕಲ್ಯಾಣಕ್ಕಾಗಿ ವಿವಿಧ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಿಡಿಎಸ್) ಅಡಿಯಲ್ಲಿ ಬುಡಕಟ್ಟು ಫಲಾನುಭವಿಗಳಿಗೆ ಮಾಸಿಕ ಪಡಿತರವನ್ನು ಮನೆ ಬಾಗಿಲಿಗೆ ತಲುಪಿಸುವ ಗುರಿಯನ್ನು ಹೊಂದಿರುವ 'ರೇಷನ್ ಆಪ್ಕೆ ಗ್ರಾಮ್' ಯೋಜನೆಯನ್ನು ಮಧ್ಯಪ್ರದೇಶದಲ್ಲಿ ಪ್ರಧಾನ ಮಂತ್ರಿಗಳು ಪ್ರಾರಂಭಿಸಲಿದ್ದಾರೆ. ಇದರಿಂದ ಬುಡಕಟ್ಟು ನಿವಾಸಿಗಳು ನ್ಯಾಯಬೆಲೆ ಅಂಗಡಿಗೆ ಅಲೆದಾಡುವುದು ತಪ್ಪುತ್ತದೆ' ಎಂದಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಪ್ರಜಾವಾಣಿ ಕನ್ನಡ ಧ್ವನಿ

ಪಾಡ್‌ಕಾಸ್ಟ್: ಪ್ರತೀ ದಿನ: ಬೆಳಿಗ್ಗೆ 7 **ವಚನವಾಣಿ**, ಬೆಳಿಗ್ಗೆ 7.30 **ದಿನದ ಸೂಕ್ತಿ**, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 **ಪ್ರಜಾವಾಣಿ ವಾರ್ತೆ ಬುಲೆಟಿನ್**, ಬೆಳಿಗ್ಗೆ 9 **ಪ್ರಚಲಿತ**, ಬೆಳಿಗ್ಗೆ 9.30 **ಸಂಪಾದಕೀಯ**

ನಾಳೆ

ಮುಖಾಮುಖಿ ಸೆಲೆಬ್ರಿಟಿ LIVE

ಸಾಹಿತಿ, ವಾಗ್ಮಿ, ಸಿನಿಮಾ ನಿರ್ದೇಶಕ, ಶಿಕ್ಷಣ ತಜ್ಞ, ಹೋರಾಟಗಾರ ಬರಗೂರು ರಾಮಚಂದ್ರಪ್ಪ ಅವರ ಜೊತೆಗೆ

16 ನವೆಂಬರ್ 2021, ಬೆಳಿಗ್ಗೆ 11ರಿಂದ 12

'ಎಸ್–400' ಕ್ಷಿಪಣಿ ವ್ಯವಸ್ಥೆ ಪೂರೈಕೆ ಆರಂಭ

ಮಾಸ್ಕೊ (ಪಿಟಿಐ): ಭಾರತಕ್ಕೆ 'ಎಸ್-400' ವಾಯುರಕ್ಷಣಾ ಕ್ಷಿಪಣಿ ವ್ಯವಸ್ಥೆಗಳನ್ನು ಪೂರೈಸುವ ಪ್ರಕ್ರಿಯೆಗೆ ರಷ್ಯಾ ಚಾಲನೆ ನೀಡಿದೆ.

ರಕ್ಷಣಾ ವ್ಯವಸ್ಥೆಗಳನ್ನು ಸರಬರಾಜು ಮಾಡುವ ಸಂಸ್ಥೆಯ ಮುಖ್ಯಸ್ಥರೊಬ್ಬರ ಹೇಳಿಕೆಯನ್ನು ಉಲ್ಲೇಖಿಸಿ ರಷ್ಯಾ ಸುದ್ದಿಸಂಸ್ಥೆಗಳು ಈ ಕುರಿತು ಭಾನುವಾರ ವರದಿ ಮಾಡಿವೆ.

ಈ ಬೆಳವಣಿಗೆ ಹಿನ್ನೆಲೆಯಲ್ಲಿ ಅಮೆರಿಕ ಸರ್ಕಾರ ಭಾರತದ ಮೇಲೆ ನಿರ್ಬಂಧ ಹೇರುವ ಅಪಾಯವೂ ಇದೆ. ಇಂಥ ಬೆದರಿಕೆ ನಡುವೆಯೂ ರಷ್ಯಾ ನಿರ್ಮಿತ ಅತ್ಯಾಧುನಿಕ ಕ್ಷಿಪಣಿ ವ್ಯವಸ್ಥೆ ಖರೀದಿಗೆ ಭಾರತ ಮುಂದಾಗಿದೆ. 2017ರಲ್ಲಿ ಅಮೆರಿಕ ಕಾನೂನು ಜಾರಿಗೆ ತಂದಿದೆ. ಇತರ ರಾಷ್ಟ್ರಗಳು ರಷ್ಯಾದಿಂದ ಮಿಲಿಟರಿ ಹಾರ್ಡ್‌ವೇರ್ ಖರೀದಿ ಮಾಡುವುದರ ಮೇಲೆ ಈ ಕಾನೂನು ನಿಷೇಧ ಹೇರುತ್ತದೆ.

ಫೆಡರಲ್ ಸರ್ವೀಸ್ ಫಾರ್ ಮಿಲಿಟರಿ–ಟೆಕ್ನಿಕಲ್ ಕೋ–ಆಪರೇಷನ್ (ಎಫ್‌ಎಸ್‌ಎಂಟಿಸಿ) ಸಂಸ್ಥೆಯ ನಿರ್ದೇಶಕ ಡಿಮಿಟ್ರಿ ಶುಗಯೇವ್ ಅವರು 'ಸ್ಪುಟ್ನಿಕ್' ಸುದ್ದಿಸಂಸ್ಥೆಯೊಂದಿಗೆ ಮಾತನಾಡಿ, 'ಯೋಜನೆಯಂತೆಯೇ ಕ್ಷಿಪಣಿ ವ್ಯವಸ್ಥೆಗಳ ಪೂರೈಕೆ ಆರಂಭವಾಗಿದೆ' ಎಂದು ತಿಳಿಸಿದ್ದಾರೆ.

'ಎಸ್–400' ವಾಯು ರಕ್ಷಣಾ ಕ್ಷಿಪಣಿ ವ್ಯವಸ್ಥೆಯ 5 ಘಟಕಗಳ ಖರೀದಿಗೆ ಭಾರತ 2018ರ ಅಕ್ಟೋಬರ್‌ನಲ್ಲಿ ಒಪ್ಪಂದಕ್ಕೆ ಸಹಿ ಹಾಕಿತ್ತು. ಖರೀದಿಯ ಅಂದಾಜು ವೆಚ್ಚ ₹ 37 ಸಾವಿರ ಕೋಟಿ ಆಗಲಿದೆ. ಎಸ್–400' ಅಥವಾ ಟ್ರಯಂಫ್ ಎಂದು ಕರೆಯಲಾಗುವ ಇದು ಜಗತ್ತಿನಲ್ಲಿಯೇ ಅಗಾಧ ಸಾಮರ್ಥ್ಯ ಹೊಂದಿದ ದೂರಗಾಮಿ ವಾಯುಪ್ರದೇಶ ರಕ್ಷಣಾ ವ್ಯವಸ್ಥೆಯಾಗಿದೆ.

ರಷ್ಯಾದಿಂದ ಈ ಕ್ಷಿಪಣಿ ವ್ಯವಸ್ಥೆಯನ್ನು ಖರೀದಿಸಲು ಮುಂದಾದ ಭಾರತದ ಕ್ರಮಕ್ಕೆ ಆಗ ಅಮೆರಿಕ ಬಹಿರಂಗವಾಗಿಯೇ ತನ್ನ ಅಸಮಾಧಾನ ಹೊರಹಾಕಿತ್ತು. ರಷ್ಯಾದಿಂದ ಟರ್ಕಿ ಸಹ ಎಸ್–400 ಕ್ಷಿಪಣಿ ವ್ಯವಸ್ಥೆಗಳನ್ನು ಖರೀದಿಸಿದೆ. ಈ ಕಾರಣಕ್ಕೆ ಟರ್ಕಿ ಮೇಲೆ ಅಮೆರಿಕ ನಿರ್ಬಂಧ ಹೇರಿದೆ. ಈಗ ಭಾರತದ ವಿರುದ್ಧವೂ ಅಮೆರಿಕ ಇದೇ ರೀತಿಯ ದಂಡನಾತ್ಮಕ ಕ್ರಮಗಳನ್ನು ಕೈಗೊಳ್ಳುವ ಆತಂಕ ಇದೆ.

ಮಕ್ಕಳ ವಿರುದ್ಧದ ಸೈಬರ್ ಪ್ರಕರಣಗಳು: ರಾಜ್ಯದಲ್ಲೂ ಅಧಿಕ

ನವದೆಹಲಿ (ಪಿಟಿಐ): 2019ಕ್ಕೆ ಹೋಲಿಸಿದಲ್ಲಿ 2020ರಲ್ಲಿ ಮಕ್ಕಳ ವಿರುದ್ಧದ ಸೈಬರ್ ಅಪರಾಧ ಪ್ರಕರಣಗಳು ಶೇ 400 ರಷ್ಟು ಹೆಚ್ಚಳವಾಗಿದೆ. ಈ ಅವಧಿಯಲ್ಲಿ ಕರ್ನಾಟಕದಲ್ಲಿ 144 ಪ್ರಕರಣಗಳು ವರದಿಯಾಗಿವೆ ಎಂದು ರಾಷ್ಟ್ರೀಯ ಅಪರಾಧಗಳ ದಾಖಲೆಯ ದಳದ (ಎನ್‌ಸಿಆರ್‌ಬಿ) ಇತ್ತೀಚಿನ ವರದಿ ಬಹಿರಂಗಪಡಿಸಿದೆ.

ಈ ಅಪರಾಧಗಳೆಲ್ಲ ಮಕ್ಕಳನ್ನು ಲೈಂಗಿಕವಾಗಿ ಬಳಸಿಕೊಂಡು ಅಶ್ಲೀಲವಾಗಿ ಚಿತ್ರಿಸಿ ಪ್ರಕಟಿಸುವ ಅಥವಾ ಇನ್ನೊಂದೆಡೆ ಅವುಗಳನ್ನು ರವಾನಿಸುವುದಕ್ಕೆ ಸಂಬಂಧಿಸಿವೆ ಎಂದೂ ವರದಿ ಹೇಳಿದೆ.

ಉತ್ತರ ಪ್ರದೇಶ (170), ಮಹಾರಾಷ್ಟ್ರ (137), ಕೇರಳ (107) ಮತ್ತು ಒಡಿಶಾ (71) ರಾಜ್ಯಗಳು ಕೂಡ ಈ ಅಪರಾಧ ಪ್ರಕರಣಗಳಲ್ಲಿ ಮುಂಚೂಣಿಯಲ್ಲಿವೆ.

ವರದಿಯಾದ 842 ಸೈಬರ್ ಅಪರಾಧಗಳಲ್ಲಿ 738 ಪ್ರಕರಣಗಳು ಮಕ್ಕಳನ್ನು ಲೈಂಗಿಕವಾಗಿ ಬಳಸಿಕೊಂಡ ಅಪರಾಧಗಳಿಗೆ ಸಂಬಂಧಿಸಿವೆ ಎಂದು ವರದಿ ಮಾಹಿತಿ ನೀಡಿದೆ. 2019ರಲ್ಲಿ 164 ಪ್ರಕರಣಗಳು ದಾಖಲಾಗಿದ್ದವು. 2018ರಲ್ಲಿ 117 ಮತ್ತು 2017ರಲ್ಲಿ 79 ಪ್ರಕರಣಗಳು ದಾಖಲಾಗಿದ್ದವು.

'ಕೋವಿಡ್ ಪಿಡುಗನ್ನು ತಡೆಯಲು ಹೇರಿದ ಕ್ರಮಗಳಿಂದ ಶಾಲೆಗಳು ಮುಚ್ಚಿದ್ದವು. ಇದರಿಂದ ಮಕ್ಕಳು ಓದಿನಿಂದ ವಿಮುಖರಾಗಿ ಅಂತರ್ಜಾಲದಲ್ಲಿ ಹೆಚ್ಚು ತೊಡಗಿಸಿಕೊಳ್ಳುವಂತೆ ಮಾಡಿತು. ಮಕ್ಕಳ ಮೇಲೆ ಸೈಬರ್ ಅಪರಾಧ ಹೆಚ್ಚಲು ಇದು ಕಾರಣವಿರಬಹುದು ಎಂದು ಮಕ್ಕಳ ಹಕ್ಕುಗಳು ಮತ್ತು ನೀವು ಸಂಸ್ಥೆಯಾದ 'ಕ್ರೈ'ನ ಸಿಇಒ ಪೂಜಾ ಮಾರ್ವಾಹಾ ಅಭಿಪ್ರಾಯಪಟ್ಟಿದ್ದಾರೆ.

ಪಂಜಾಬ್ ವಿಧಾನಸಭಾ ಚುನಾವಣೆ: ಸೋನು ಸೂದ್ ತಂಗಿ ಸ್ಪರ್ಧೆ

ಚಂಡೀಗಡ (ಪಿಟಿಐ): ಪಂಜಾಬ್‌ನಲ್ಲಿ ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವಂತೆ ಹಲವು ರಾಜಕೀಯ ಬೆಳವಣಿಗೆಗಳು ನಡೆಯುತ್ತಿದ್ದು, ಬಾಲಿವುಡ್ ನಟ ಸೋನು ಸೂದ್ ಅವರ ತಂಗಿ ಮಾಳವಿಕಾ ಸೂದ್ ಅವರು ಮೊಗಾ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಲಿದ್ದಾರೆ.

'2022ರ ಪಂಜಾಬ್ ವಿಧಾನಸಭೆ ಚುನಾವಣೆಯಲ್ಲಿ ಮೊಗಾ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. 'ನಮಗೆ ಇದುವರೆಗೆ ಯಾವುದೇ ರಾಜಕೀಯ ಪಕ್ಷಗಳಿಂದ ಕರೆ ಬಂದಿಲ್ಲ. ಸಮಯ ಬಂದಾಗ ಈ ಬಗ್ಗೆ ಖಂಡಿತ ತಿಳಿಸುತ್ತೇವೆ. ಸದ್ಯಕ್ಕೆ ನಾನು ರಾಜಕೀಯ ಸೇರುವ ಕುರಿತು ಯಾವ ನಿರ್ಧಾರವನ್ನೂ ತೆಗೆದುಕೊಂಡಿಲ್ಲ' ಎಂದು ಸೋನು ಸೂದ್ ಅವರು ತಮ್ಮ ನಿವಾಸದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ನೆಹರೂ ಜನ್ಮದಿನಾಚರಣೆ: ಸ್ಪೀಕರ್, ರಾಜ್ಯಸಭಾಧ್ಯಕ್ಷ ಗೈರು, ಪ್ರತಿಪಕ್ಷಗಳ ತರಾಟೆ

ನವದೆಹಲಿ: ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಜನ್ಮದಿನಾಚರಣೆ ಕಾರ್ಯಕ್ರಮಕ್ಕೆ ರಾಜ್ಯಸಭಾಧ್ಯಕ್ಷ ಹಾಗೂ ಲೋಕಸಭೆಯ ಸ್ಪೀಕರ್ ಗೈರು ಹಾಜರಾದ ಕುರಿತು ವಿರೋಧ ಪಕ್ಷಗಳು ಟೀಕೆ ವ್ಯಕ್ತಪಡಿಸಿವೆ. ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ಭಾನುವಾರ ಕಾರ್ಯಕ್ರಮ ನಡೆಯಿತು.

ನೆಹರೂ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಸೇರಿದಂತೆ ಪಕ್ಷದ ಇನ್ನಿತರ ನಾಯಕರು ಪಾಲ್ಗೊಂಡಿದ್ದರು.

'ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ಭಾವಚಿತ್ರವನ್ನಿರಿಸಿರುವವರ ಜನ್ಮದಿನಾಚರಣೆಯ ಸಾಂಪ್ರದಾಯಿಕ ಸಮಾರಂಭದಲ್ಲಿ ಇಂದು ಅಸಾಧಾರಣ ದೃಶ್ಯವನ್ನು ಕಂಡೆ. ಲೋಕಸಭೆಯ ಸ್ಪೀಕರ್, ರಾಜ್ಯಸಭಾಧ್ಯಕ್ಷರು ಗೈರು ಹಾಜರಾಗಿದ್ದರು. ಒಬ್ಬ ಸಚಿವರೂ ಉಪಸ್ಥಿತರಿರಲಿಲ್ಲ. ಇದಕ್ಕಿಂತ ನೀಚ ನಡೆ ಇನ್ನೇನಿದೆ?' ಎಂದು ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯ ಜೈರಾಮ್ ರಮೇಶ್ ಅವರು ಟ್ವೀಟ್ ಮಾಡಿದ್ದಾರೆ.

ಜೈರಾಮ್ ರಮೇಶ್ ಅವರ ಟ್ವೀಟ್ ಅನ್ನು ಟ್ಯಾಗ್ ಮಾಡಿರುವ ತೃಣಮೂಲ ಕಾಂಗ್ರೆಸ್‌ನ ನಾಯಕ ಡೆರೆಕ್ ಒಬ್ರಿಯಾನ್ ಅವರು ಕೂಡಾ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

'ಇನ್ನು ಮುಂದೆ ಆಶ್ಚರ್ಯಪಡುವಂಥದ್ದು ನನಗೆ ಏನೂ ಇಲ್ಲ. ಭಾರತದ ಸಂಸತ್ತು ಸೇರಿದಂತೆ ಇನ್ನಿತರ ಶ್ರೇಷ್ಠ ಸಂಸ್ಥೆಗಳನ್ನು ಒಂದು ದಿನ ನಾಶಪಡಿಸಲಾಗುತ್ತದೆ' ಎಂದೂ ಡೆರೆಕ್ ಟ್ವೀಟ್ ಮಾಡಿದ್ದಾರೆ.



ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ನಡೆದ ಜವಾಹರಲಾಲ್ ನೆಹರೂ ಅವರ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಸೋನಿಯಾ ಗಾಂಧಿ ಜತೆ ಕಾಂಗ್ರೆಸ್ ಮುಖಂಡರು ಪಾಲ್ಗೊಂಡಿದ್ದರು – ಪಿಟಿಐ ಚಿತ್ರ

ಮೋದಿ ನಮನ: ನೆಹರೂ ಅವರ ಜನ್ಮದಿನದ ಪ್ರಯುಕ್ತ ಪ್ರಧಾನಿ ನರೇಂದ್ರ ಮೋದಿ ಭಾನುವಾರ ಗೌರವ ಸಮರ್ಪಿಸಿದರು.

ಬೆಂಗಳೂರಿನಲ್ಲಿ ಓದಿದ ಧರ್ಮಗುರು ಇನ್ನು ಇಂಗ್ಲೆಂಡ್‌ನಲ್ಲಿ ಬಿಷಪ್

ಲಂಡನ್ (ಪಿಟಿಐ): ದಕ್ಷಿಣ ಭಾರತದ ಸಿರಿಯನ್ ಆರ್ಥೊಡಾಕ್ಸ್ ಚರ್ಚ್‌ನಲ್ಲಿ ಅಧ್ಯಯನ ನಡೆಸಿದ ರೆವರೆಂಡ್ ಲುಕೋಸ್ ವರ್ಗೀಸ್ ಮುಥಲಾಳಿ (ಸಾಜು ಎಂದೇ ಖ್ಯಾತರು) ಅವರನ್ನು ಮಧ್ಯ ಇಂಗ್ಲೆಂಡ್‌ನ ಲೌಗ್‌ಬೊರೌಗ್‌ನ ನೂತನ ಬಿಷಪ್ ಆಗಿ ನೇಮಿಸಲಾಗಿದೆ.

ಇವರು ಇಂಗ್ಲೆಂಡ್‌ನ ರೋಚೆಸ್ಟರ್ ಡಯಾಸಿಸ್‌ನಲ್ಲಿರುವ ಸೇಂಟ್ ಮಾರ್ಕ್ಸ್ ಗಿಲ್ಲಿಂಗ್‌ಹ್ಯಾಮ್ ಚರ್ಚ್‌ನಲ್ಲಿ ವಿಕಾರ್ ಆಗಿದ್ದು, ಮುಂದಿನ ವರ್ಷ ಬಿಷಪ್ ಆಗಿ ಅಧಿಕಾರ ವಹಿಸಲಿದ್ದಾರೆ. 42 ವರ್ಷದ ಸಾಜು ಅವರು ಈ ಹುದ್ದೆ ಅಲಂಕರಿಸಲಿರುವ ಅತಿ ಕಿರಿಯ ಬಿಷಪ್ ಎಂದು ಹೇಳಲಾಗಿದೆ.

ಸಾಜು ಅವರು ಬೆಂಗಳೂರಿನ ಸದರ್ನ್ ಏಷ್ಯಾ ಬೈಬಲ್ ಕಾಲೇಜ್‌ನಲ್ಲಿ ವ್ಯಾಸಂಗ ಮಾಡಿದ್ದರು.2009ರಲ್ಲಿ ಇಂಗ್ಲೆಂಡ್‌ನಲ್ಲಿ ಧರ್ಮಗುರುವಾಗಿ ಸೇವೆ ಆರಂಭಿಸಿದ್ದರು.

ನಿಧನ ವಾರ್ತೆ

ಕಾದಂಬರಿಕಾರ ವಿಲ್‌ಬರ್ ಸ್ಮಿತ್

ಜೋಹಾನ್ಸ್‌ಬರ್ಗ್ (ಎಎಫ್‌ಪಿ): ಸಾಹಸ ಕಥಾವಸ್ತುಗಳನ್ನು ಹೊಂದಿದ ಕಾದಂಬರಿಗಳ ಮೂಲಕ ಪ್ರಸಿದ್ಧರಾಗಿದ್ದ ಜಾಂಬಿಯಾ ಮೂಲದ ಲೇಖಕ ವಿಲ್‌ಬರ್ ಸ್ಮಿತ್ (88) ಕೇಪ್‌ಟೌನ್ ನಗರದಲ್ಲಿರುವ ತಮ್ಮ ನಿವಾಸದಲ್ಲಿ ನಿಧನರಾಗಿದ್ದಾರೆ.

ಅವರು ಕ್ಯಾನ್ಸರ್‌ನಿಂದ ಬಳಲುತ್ತಿದ್ದರು.

'ತಮ್ಮ ನಿವಾಸದಲ್ಲಿ ಪತ್ನಿ ನಿಸೊ ಅವರೊಂದಿಗೆ ಸ್ಮಿತ್ ಅವರು ಬೆಳಿಗ್ಗೆ ಅಧ್ಯಯನ ಹಾಗೂ ಬರವಣಿಗೆಯಲ್ಲಿ ತೊಡಗಿದ್ದರು. ಈ ವೇಳೆ ಅವರು ಹಠಾತ್ತಾಗಿ ಸಾವನ್ನಪ್ಪಿದರು' ಎಂದು 'ವಿಲ್‌ಬರ್ ಸ್ಮಿತ್ ಬುಕ್ಸ್' ವೆಬ್‌ಸೈಟ್‌ನಲ್ಲಿ ಶನಿವಾರ ಪ್ರಕಟಿಸಲಾಗಿದೆ.

'ಕರ್ಟ್ನಿ ಸಿರೀಜ್' ,'ಈಜಿಪ್ಷಿಯನ್ ಸಿರೀಜ್', 'ರಿವರ್ ಗಾಡ್' ಇವು ಅವರ ಜನಪ್ರಿಯ ಕೃತಿಗಳು.

ಭಾರತ ಮುಂದಿಟ್ಟ ಪ್ರಸ್ತಾವಕ್ಕೆ ಮಣೆ- ಹಲವು ದೇಶಗಳಿಂದ ಟೀಕೆ

ಕಲ್ಲಿದ್ದಲು ಬಳಕೆ ನಿಗ್ರಹ ಪ್ರಸ್ತಾವ ಕೈಬಿಟ್ಟ ಸಭೆ

ಲಂಡನ್ (ಪಿಟಿಐ): ಸ್ಕಾಟ್ಲೆಂಡ್‌ನ ಗ್ಲಾಸ್ಗೊದಲ್ಲಿ ನಡೆಯುತ್ತಿದ್ದ ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಶೃಂಗಸಭೆಗೆ (ಸಿಒಪಿ26) ತೆರೆ ಬಿದ್ದಿದ್ದು, ಕಲ್ಲಿದ್ದಲಿನಂತಹ ದಹನ ಇಂಧನ ಬಳಕೆ ಪ್ರಮಾಣವನ್ನು ಸಂಪೂರ್ಣವಾಗಿ ತೊಡೆದು ಹಾಕುವ ಬದಲಿಗೆ ಅದರ ಬಳಕೆಯನ್ನು ಹಂತ ಹಂತವಾಗಿ ಕಡಿಮೆಗೊಳಿಸುವ ಪ್ರಸ್ತಾವಕ್ಕೆ ಅನುಮೋದನೆ ನೀಡಿದೆ.

ಶೃಂಗಸಭೆಯ ಕೊನೆಯಲ್ಲಿ ಕೈಗೊಂಡ ನಿರ್ಣಯದಲ್ಲಿ ಭಾರತ ಪ್ರಸ್ತಾಪಿಸಿದ ಈ ಅಂಶಕ್ಕೆ ಒತ್ತು ನೀಡಲಾಯಿತು. ಈ ಮೂಲಕ ಇದೇ ಪ್ರಥಮ ಬಾರಿಗೆ ಪರಿಸರಕ್ಕೆ ತೀವ್ರ ಹಾನಿ ಉಂಟುಮಾಡುವ ಇಂಗಾಲದ ಪ್ರಮಾಣವನ್ನು ತಗ್ಗಿಸುವ ನಿಟ್ಟಿನಲ್ಲಿ ವಿಶ್ವಸಂಸ್ಥೆಯು ಯೋಜನೆಯೊಂದನ್ನು ರೂಪಿಸಿ ಅನುಮೋದಿಸಿದಂತಾಗಿದೆ.

200ಕ್ಕೂ ಅಧಿಕ ದೇಶಗಳು ಪಾಲ್ಗೊಂಡ ಈ ಶೃಂಗಸಭೆ ಮುಂದಿನ ವರ್ಷ ಮತ್ತೆ ಸಭೆ ಸೇರಲು ಒಪ್ಪಿಕೊಂಡಿತು ಹಾಗೂ ಇಂಗಾಲದ ಹೊರಸೂಸುವ ಪ್ರಮಾಣವನ್ನು ತಗ್ಗಿಸಿ, ಜಾಗತಿಕ ತಾಪಮಾನವನ್ನು 1.5 ಡಿಗ್ರಿ ಸೆಲ್ಸಿಯಸ್‌ಗೇ ಸೀಮಿತಗೊಳಿಸುವ ಗುರಿ ಈಡೇರಿಕೆಗೆ ಪ್ರಯತ್ನ ಮುಂದುವರಿಸಲು ವಾಗ್ದಾನ ಮಾಡಿತು.

'ಇದೀಗ ನಾವೊಂದು ನಿರ್ಧಾರಕ್ಕೆ ಬಂದಿದ್ದೇವೆ. ಭೂಮಿಗಾಗಿ ನಾವೆಲ್ಲ ಒಂದಾಗಿ ಕೆಲವು ಮಹತ್ವದ ನಿರ್ಧಾರ ಕೈಗೊಂಡಿದ್ದೇವೆ' ಎಂದು ಸಿಒಪಿ26 ಶೃಂಗಸಭೆಯ ಅಧ್ಯಕ್ಷ ಅಲೋಕ್ ಶರ್ಮಾ ಹೇಳಿದರು.



ಗ್ಲಾಸ್ಗೊದಲ್ಲಿ ನಡೆದ ಪ್ರತಿಭಟನೆ

ಭೂಪೇಂದರ್ ಯಾದವ್ ಪ್ರಭಾವ: ಶೃಂಗಸಭೆಯಲ್ಲಿ ಭಾರತದ ನಿಲುವನ್ನು ಸ್ಪಷ್ಟವಾಗಿ ತಿಳಿಸಿದ್ದ ಪರಿಸರ ಸಚಿವ ಭೂಪೇಂದರ್ ಯಾದವ್, ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ದಹನ ಇಂಧನವನ್ನು ಜವಾಬ್ದಾರಿಯಿಂದ ಹೇಗೆ ಬಳಸಬೇಕು ಎಂಬುದು ತಿಳಿದಿದೆ, ಬಡಜನರ ಜೀವನ ಮಟ್ಟ ಸುಧಾರಣೆಗಾಗಿ ಕಲ್ಲಿದ್ದಲನ್ನು ಮುಂದೆಯೂ ಬಳಸುವುದು ಅಗತ್ಯವಾಗಿದೆ. ಆದರೆ ಅದರ ಬಳಕೆಯನ್ನು ಹಂತ ಹಂತವಾಗಿ ಮಿತಗೊಳಿಸಬೇಕಾಗಿದೆ' ಎಂದು ಹೇಳಿದ್ದರು.

ಶ್ರೀಮಂತ ರಾಷ್ಟ್ರಗಳ ಜನರ ಸುಸ್ಥಿರವಲ್ಲದ ಜೀವನ ಕ್ರಮ ಮತ್ತು ವ್ಯರ್ಥ ಮಾಡುವ ಮನೋಭಾವದಿಂದಾಗಿಯೇ ಜಾಗತಿಕ ತಾಪಮಾನದಲ್ಲಿ ಏರಿಕೆ ಉಂಟಾಗಿದೆ ಎಂದು ಅವರು ಪ್ರಬಲವಾಗಿ ಪ್ರತಿಪಾದಿಸಿದ್ದರು. ಭಾರತದ ಈ ನಿಲುವನ್ನು ಇರಾನ್ ಪ್ರಬಲವಾಗಿ ಬೆಂಬಲಿಸಿತ್ತು.

ಟೀಕೆ: ಕಲ್ಲಿದ್ದಲು ಬಳಕೆಯನ್ನು ಸಂಪೂರ್ಣವಾಗಿ ನಿರ್ಬಂಧಿಸದೆ, ಹಂತ ಹಂತವಾಗಿ ಬಳಕೆ ಕಡಿಮೆ ಮಾಡುವ ನಿಟ್ಟಿನಲ್ಲಿ ಭಾರತ ಮುಂದಿಟ್ಟ ಪ್ರಸ್ತಾವವನ್ನು ಶೃಂಗಸಭೆಯಲ್ಲಿ ಅನುಮೋದಿಸಿದ್ದಕ್ಕೆ ವ್ಯಾಪಕ ಟೀಕೆಯೂ ವ್ಯಕ್ತವಾಗಿದೆ.

ಕಲ್ಲಿದ್ದಲಿನ ವಿಚಾರದಲ್ಲಿ ಶೃಂಗಸಭೆಯ ಭಾಷೆಯೇ ಕೊನೆಯ ಕ್ಷಣದಲ್ಲಿ ಬದಲಾಗಿದ್ದಕ್ಕೆ ಹಲವು ದೇಶಗಳು ಅದರಲ್ಲೂ ಮುಖ್ಯವಾಗಿ ಸಣ್ಣ ದೇಶಗಳು ಹಾಗೂ ದ್ವೀಪರಾಷ್ಟ್ರಗಳು ಅಸಮಾಧಾನ ವ್ಯಕ್ತಪಡಿಸಿವೆ. ಆಕ್ಷೇಪಿಸಿದ ರಾಷ್ಟ್ರಗಳಲ್ಲಿ ಆಸ್ಟ್ರೇಲಿಯಾ, ಸ್ವಿಟ್ಜರ್ಲೆಂಡ್ ಪ್ರಮುಖವಾಗಿವೆ. ಚೀನಾವು ಶೃಂಗಸಭೆಯ ನಿರ್ಧಾರವನ್ನು ಸ್ವಾಗತಿಸಿದೆ.

'ಹವಾಮಾನ ಬದಲಾವಣೆ ಶೃಂಗಸಭೆ ಯಶಸ್ವಿ'

ಗ್ಲಾಸ್ಗೊ: 'ಹವಾಮಾನ ಬದಲಾವಣೆ ಕುರಿತು ನಡೆದ ಶೃಂಗಸಭೆ (ಸಿಒಪಿ 26 ಶೃಂಗಸಭೆ) ಯಶಸ್ವಿಯಾಗಿದೆ. ಜಾಗತಿಕ ಸಮುದಾದ ಎದುರು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ತಮ್ಮ ಕಳವಳ ಹಾಗೂ ಚಿಂತನೆಗಳನ್ನು ಒಕ್ಕೊರಲಿನಿಂದ ಮಂಡಿಸುವಲ್ಲಿ ಸಫಲವಾದವು' ಎಂದು ಭಾರತ ಭಾನುವಾರ ಹೇಳಿದೆ.

ಭಾರತ ನಿಯೋಗದ ನೇತೃತ್ವ ವಹಿಸಿದ್ದ ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್ ಮಾತನಾಡಿ, 'ಹವಾಮಾನ ಬದಲಾವಣೆಯಿಂದ ಆಗುತ್ತಿರುವ ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವುದು ಅಗತ್ಯ.' ಎಂದರು.

'ಹವಾಮಾನ ಬದಲಾವಣೆ ತಡೆಗೆ ಸಂಬಂಧಿಸಿ ಭಾರತದ ನಿಲುವನ್ನು ಶೃಂಗಸಭೆಯು ಪ್ರತಿಧ್ವನಿಸಿದೆ. ಶೃಂಗಸಭೆಯಲ್ಲಿ ಭಾರತ ರಚನಾತ್ಮಕ ಚರ್ಚೆಯ ಜೊತೆಗೆ ಪರಿಹಾರಾತ್ಮಕ ಕ್ರಮಗಳನ್ನು ಪ್ರಸ್ತುತಪಡಿಸಿತು' ಎಂದು ಹೇಳಿದ್ದಾರೆ.

ಅನುಭವ ಮತ್ತು ಪ್ರವಾಸದಲ್ಲೇ ಅಡಗಿದೆ ಕಲಿಕೆ

ಪ್ರಾಜೆಕ್ಟ್ ಆಧಾರಿತ ಕಲಿಕೆ

ವಿದ್ಯಾರ್ಥಿಗಳ ಬೆಳವಣಿಗೆಗೆ ಪೂರಕ

ಕೋಕಿಲ ಎಂ.ಎಸ್.

ಮಗನ ಜೊತೆ ಮಾತನಾಡಿ ಫೋನ್ ಬದಿಗಿಟ್ಟ ಸಹೋದ್ಯೋಗಿ ಸುಮ ಸಿಡಿಮಿಡಿ ಎನ್ನುತ್ತಿದ್ದರು. ನಾನು ಏನಾಯಿತೆಂದು ಕೇಳುವ ಮುನ್ನವೇ 'ನೋಡಿ ಮೇಡಮ್, ಕಳೆದ ವಾರವಷ್ಟೆ ರವಿ ಎರಡು ಪ್ರಾಜೆಕ್ಟ್ ಮಾಡಿದ್ದ, ಈಗಾಗಲೆ ಮತ್ತೊಂದು ಪ್ರಾಜೆಕ್ಟ್ ಅಂತೆ, ಬರಿ ಇದನ್ನೆ ಮಾಡುತ್ತಾ ಕೂತರೆ ಅವನು ಓದುವುದು ಬರೆಯುವುದು ಯಾವಾಗ? ಪರೀಕ್ಷೆಯಲ್ಲಿ ಪ್ರಾಜೆಕ್ಟ್ ಏನಾದ್ರು ಕೊಡ್ತಾರಾ ಬರೆಯೋಕೆ?' ಎಂದು ಒಂದೇ ಸಮನೆ ತನ್ನ ಅಸಮಾಧಾನವನ್ನೆಲ್ಲ ತೋಡಿಕೊಂಡರು. ಅದಕ್ಕೆ ನಾನು 'ಶಾಲಾ ಪ್ರಾಜೆಕ್ಟ್ ಮಾಡುವುದರಿಂದ ಆಗುವ ತೊಂದರೆಯಾದರೂ ಏನು? ಅದರಿಂದ ಮಗನಿಗೆ ಅನುಕೂಲವೇ ಅಲ್ಲವೆ' ಎಂದೆ. 'ಓಹ್, ಸರಿಯಾಗಿ ಹೇಳಿದಿರಿ. ಬರಿ ಅದೇ ಕಥೆ ಆದರೆ ಓದುವುದು ಯಾವಾಗ, ನೋಟ್ಸ್ ಬರೆಯುವುದು ಯಾವಾಗ, ಟೆಸ್ಟ್‌ಗಳಿಗೆ ತಯಾರಿ ನಡೆಸುವುದು ಯಾವಾಗ? ಪ್ರಾಜೆಕ್ಟ್ ಹೆಸರೇಳಿ ಫ್ರೆಂಡ್ಸ್ ಜೊತೆ ಕಾಲ ಕಳೀತಾನೆ. ಮೇಲಿಂದ ಒಂದಿಷ್ಟು ದುಡ್ಡೂ ವೇಸ್ಟು. ನಾವೇನು ಹೀಗೆ ಕಲಿತಿದ್ದಾ? ನಿಮಗೆ ನನ್ನ ಕಳವಳ ಅರ್ಥವಾಗುವುದಿಲ್ಲ ಬಿಡಿ. ಎಷ್ಟಾದರೂ ನೀವೂ ಸ್ಕೂಲಲ್ಲಿ ಕೆಲಸ ಮಾಡಿದವರಲ್ಲವೇ' ಎನ್ನುತ್ತ ವಿಷಯ ಬದಲಿಸಿದರು.

> ತರಗತಿ ಕಲಿಕೆಗಿಂತ ಚೂರು ಭಿನ್ನವಾಗಿರುವ ಪ್ರಾಜೆಕ್ಟ್ ಆಧಾರಿತ ಕಲಿಕೆಯು ವಿದ್ಯಾರ್ಥಿಗಳಿಗೆ ವಿಮರ್ಶಾತ್ಮಕ ಚಿಂತನೆ, ಯೋಜನಾ ನಿರ್ವಹಣೆ ಹಾಗೂ ಆತ್ಮವಿಶ್ವಾಸವನ್ನು ಹೊಂದುವಲ್ಲಿ ಸಹಾಯಕವಾಗಿದೆ.

ಶಾಲೆ, ಕಾಲೇಜು ಮಟ್ಟದಲ್ಲಿ ವಿದ್ಯಾರ್ಥಿಗಳು ಮಾಡುವ ಪ್ರಾಯೋಗಿಕ ಕಾರ್ಯಗಳಿಂದ ಸಾಕಷ್ಟು ಅನುಕೂಲಗಳಿವೆ. ಇದೇ ವಿಚಾರವಾಗಿ 'ದಿ ಆಟೋಡೆಸ್ಕ್ ಫೌಂಡೇಷನ್' ಸತತ ಹತ್ತು ವರ್ಷಗಳ ಸಂಶೋಧನೆಯನ್ನು ನಡೆಸಿ ಪ್ರಾಜೆಕ್ಟ್ ಆಧಾರಿತ ಕಲಿಕೆಯು ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಸಹಕಾರಿಯಷ್ಟೇ ಅಲ್ಲ, ಪರೀಕ್ಷಾ ಅಂಕಗಳು, ಹಾಜರಾತಿ ಹಾಗೂ ತರಗತಿ ಚಟುವಟಿಕೆಯಲ್ಲಿನ ಪಾಲ್ಗೊಳ್ಳುವಿಕೆಯಲ್ಲಿ ಗಣನೀಯವಾದ ಸುಧಾರಣೆಯನ್ನೂ ಕಾಣಬಹುದು ಎಂದಿದೆ.

ಪ್ರಯೋಜನಗಳು

1 ಏಕಮುಖ ಸಂವಹನಕ್ಕಿಂತ ದ್ವಿಮುಖ ಸಂವಹನ ಅತ್ಯಂತ ಪರಿಣಾಮಕಾರಿ. ಹಾಗೆಯೇ ಪ್ರಾಜೆಕ್ಟ್ ಆಧಾರಿತ ಕಲಿಕೆಯಲ್ಲಿ ಶಿಕ್ಷಕರೊಟ್ಟಿಗೆ ವಿದ್ಯಾರ್ಥಿಗಳು ಧೃಢವಾದ ಸಂಬಂಧವನ್ನು ಏರ್ಪಡಿಸಲು ಅವಕಾಶ ನೀಡುತ್ತದೆ. ಶಿಕ್ಷಕರೊಟ್ಟಿಗೆ ಬೆರೆಯಲು ಹಿಂಜರಿಯುವ ಮಕ್ಕಳಿಗೆ ಇದೊಂದು ವರದಾನ. ಆತಂಕಗಳಿಂದ ಮುಕ್ತವಾಗಿರುವ ಪರಿಸರ ಕಲಿಕೆಗೆ ಉತ್ತಮವಾಗಿರುತ್ತದೆ.

2 ಸಾಮಾನ್ಯವಾಗಿ ಪ್ರಾಜೆಕ್ಟ್‌ಗಳಲ್ಲಿ ವಿದ್ಯಾರ್ಥಿಗಳು ಗುಂಪಿನಲ್ಲಿ ಕೆಲಸ ಮಾಡಬೇಕಾಗುತ್ತದೆ. ಸಹಪಾಠಿಗಳೊಟ್ಟಿಗೆ ಬೆರೆಯುವುದು, ವಿಭಿನ್ನ ಮನಸ್ಥಿತಿ ಹೊಂದಿರುವವರ ಜೊತೆ ವ್ಯವಹರಿಸುವ ಕಲೆ, ಅನಿಸಿಕೆ ವಿನಿಮಯ, ಅಭಿಪ್ರಾಯ ಸಂಗ್ರಹ, ಸಣ್ಣಪುಟ್ಟ ಜಗಳಗಳನ್ನು ಬಗೆಹರಿಸುವುದು... ಹೀಗೆ ಹತ್ತಾರು ವಿಷಯಗಳನ್ನು ಕಲಿಯುತ್ತಾರೆ. ಇದೆಲ್ಲವೂ ಮುಂದೆ ದೊಡ್ಡವರಾದಾಗ ಸಮುದಾಯದ ಇತರೆ ಸದಸ್ಯರೊಂದಿಗೆ ಒಳ್ಳೆಯ ಸಂಬಂಧ ರೂಪಿಸಲು ಅನುಕೂಲವಾಗುತ್ತದೆ.

3 ಒಂದೇ ಪ್ರಯತ್ನದಲ್ಲೇ ಪ್ರಾಜೆಕ್ಟ್‌ಗಳು ಸಂಪೂರ್ಣವಾಗುವುದು ಅಪರೂಪ. ಸಾಕಷ್ಟು ಎಡರು-ತೊಡರುಗಳು ಎದುರಾಗುತ್ತವೆ. ಮಾನವನ ಜೀರ್ಣಾಂಗ ವ್ಯವಸ್ಥೆಯನ್ನೇ ಉದಾಹರಣೆಗೆ ತೆಗೆದುಕೊಂಡರೆ, ಒಮ್ಮೆ ಸಣ್ಣ ಕರುಳಿನ ಚಿತ್ರ ಸರಿಯಾಗಿ ಬಂದರೆ, ಮತ್ತೊಮ್ಮೆ ದೊಡ್ಡ ಕರುಳಿನ ಆಕಾರದಲ್ಲಿ ವ್ಯತ್ಯಾಸವಾಗಬಹುದು. ಕಾಲೇಜು ವಿದ್ಯಾರ್ಥಿಗಳ ಪ್ರಾಜೆಕ್ಟ್‌ಗಳಾದರೆ ದಾರಿ ಇನ್ನೂ ಸುಗಮವಾಗಿರದು. ಈ ಸಮಸ್ಯೆಗಳೇ ಅವರಲ್ಲಿ ಸ್ವಂತವಾಗಿ ಬಗೆಹರಿಸುವ ಗುಣವನ್ನೂ ಕಲಿಸುತ್ತವೆ.

4 ವಿದ್ಯಾರ್ಥಿಗಳಲ್ಲಿ ಅಡಗಿರುವ ಸೃಜನಶೀಲತೆಯನ್ನು ಹೊರತರುವಲ್ಲಿ ಸಹಕಾರಿ ಈ ಪ್ರಾಜೆಕ್ಟ್ ವರ್ಕ್. ಹೊಸ ವಿಧಾನದಲ್ಲಿ, ಹೊಸ ಮಾದರಿಯಲ್ಲಿ ಹಾಗೂ ಇತರರಿಗಿಂತ ವಿಭಿನ್ನವಾಗಿ ಮಾಡುವ ಆಸೆಯೇ ಅವರನ್ನು ಯೋಚನೆಯಲ್ಲಿ ಮುಳುಗಿಸುತ್ತದೆ.

5 ಪ್ರತಿಯೊಂದು ವಿಷಯವನ್ನು ಕಂಠಪಾಠ ಮಾಡಿ ಅರ್ಥೈಸಿಕೊಳ್ಳಲು ಸಾಧ್ಯವಿಲ್ಲ. ಹಾಗೆ ಕಲಿತರೂ ಅದರ ಆಯುಷ್ಯ ಅಲ್ಪಾವಧಿ. ಕಂಠಪಾಠಕ್ಕೆ ಅದರದೆ ಆದ ಮಿತಿಗಳಿವೆ. ನಾಲಗೆಯಲ್ಲಿ ನಲಿದಾಡುವ ಪದಗಳೆಲ್ಲವೂ ಮೆದುಳಿಗೆ ಮುಟ್ಟಿರುವುದಿಲ್ಲ. ಅಂತಹ ಸಂದರ್ಭಗಳಲ್ಲಿ ವಿಷಯವನ್ನು ಆಳವಾಗಿ ತಿಳಿಯಲು ಅನುಕೂಲವಾಗುವುದೇ ಪ್ರಾಜೆಕ್ಟ್‌ಗಳು. ಅನ್ವಯಿಕ ವಿಷಯದ ಕಲಿಕೆಯನ್ನು ಇದು ಗಾಢವಾಗಿ ಬೇರೂರಿಸುತ್ತದೆ.

6 ವಿದ್ಯಾರ್ಥಿಗಳಲ್ಲಿ ಆಸಕ್ತಿಯನ್ನು ಕೆರಳಿಸಿ ಅವರಲ್ಲಿ ಆತ್ಮವಿಶ್ವಾಸವನ್ನು ಮೂಡಿಸುತ್ತದೆ. ಕಲಿಕೆಯಲ್ಲಿ ಹಿಂದುಳಿದವರಿಗೂ ಆತ್ಮವಿಶ್ವಾಸವನ್ನು ತುಂಬುತ್ತದೆ. ಪ್ರಶ್ನೆಗಳಿಗೆ ಉತ್ತರಿಸಲು ಕಷ್ಟಪಡುವ ವಿದ್ಯಾರ್ಥಿಗಳು ತಾವು ಮಾಡಿದ ಪ್ರಾಜೆಕ್ಟ್ ಅನ್ನು ನಿರರ್ಗಳವಾಗಿ ವಿವರಿಸುತ್ತಾರೆ.

7 ಪ್ರಾಜೆಕ್ಟ್ ಮಾಡುವ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಸಾಕಷ್ಟು ಪ್ರಶ್ನೆಗಳು ಉದ್ಭವಿಸುವುದು ಸಹಜ. ವಿಷಯದ ಆಳಕ್ಕೆ ಹೋಗುತ್ತಾ ಕಲಿಯುವ ಕುತೂಹಲವೂ ಹೆಚ್ಚಾಗುತ್ತದೆ. ಇದು ನೇರವಾಗಿ ಕಲಿಕೆಗೆ ಪೂರಕವಾಗುತ್ತದೆ.

8 ಪ್ರಾಜೆಕ್ಟ್ ಆಧಾರಿತ ಕಲಿಕೆಯು ಮಕ್ಕಳಲ್ಲಿ ಜವಾಬ್ದಾರಿ, ಒತ್ತಡದಲ್ಲಿ ಕೆಲಸ ಮಾಡುವುದನ್ನು ಮತ್ತು ಸಮಯದ ಮಹತ್ವವನ್ನು ಕಲಿಸಿಕೊಡುತ್ತದೆ. ಡೆಡ್‌ಲೈನ್‌ನ ಒಳಗೆ ಕೆಲಸವನ್ನು ಮುಗಿಸಬೇಕೆನ್ನುವ ವಿಚಾರ ಅರ್ಥವಾಗುವುದೇ ಆಗ. ಮುಗಿಸದಿದ್ದರೆ ಆಗುವ ಸಮಸ್ಯೆಗಳ ಅನುಭವವೂ ಅವರಿಗೆ ಆಗುತ್ತದೆ. ಇದು ಭವಿಷ್ಯದಲ್ಲಿ ಸಹಾಯಕ್ಕೆ ಬರುತ್ತದೆ.

9 ಕಾಲೇಜು ವಿದ್ಯಾರ್ಥಿಗಳಾದರೆ ಓದುವಾಗ ಮಾಡಿದ ಪ್ರಾಜೆಕ್ಟ್ ಅಥವಾ ಇಂಟರ್ನ್‌ಶಿಪ್ ಸಮಯದಲ್ಲಿ ಮಾಡಿದ ಪ್ರಾಜೆಕ್ಟ್‌ಗಳನ್ನು ಮುಂದೆ ಸಂದರ್ಶನಕ್ಕೆಂದು ತಯಾರಿಸಿದ ರೆಸ್ಯೂಮೆಗಳಲ್ಲಿ ಸೇರಿಸಿಕೊಳ್ಳಬಹುದು. ವಿಷಯದ ಬಗ್ಗೆ ನಿಮಗಿರುವ ಪ್ರಾಯೋಗಿಕ ಅನುಭವವನ್ನು ತಿಳಿಸುತ್ತದೆ.

ಕಾಲ ಬದಲಾದಂತೆ ಎಲ್ಲವೂ ಮಾರ್ಪಾಡಾಗಿವೆ. ಉರಿಸುವ ಒಲೆಯಿಂದ ಹಿಡಿದು ಬಳಸುವ ಮೊಬೈಲ್ ಫೋನ್‌ವರೆಗೆ ಎಲ್ಲವೂ ಅಪ್‌ಗ್ರೇಡ್ ಆಗಿವೆ. ಹಾಗೆಯೇ ವಿದ್ಯಾಭ್ಯಾಸ ಕೂಡ. ಬದಲಾಗುತ್ತಿರುವ ಕಾಲಮಾನಕ್ಕೆ ತಕ್ಕಂತೆ ಕಲಿಕಾ ವಿಧಾನದಲ್ಲೂ ಅಪ್‌ಗ್ರೇಡ್ ಆಗುವುದು ಅವಶ್ಯಕ. ಮಕ್ಕಳ ಪ್ರಾಜೆಕ್ಟ್‌ಗಳಿಗೆ ಸಹಕಾರ ಮತ್ತು ಸಹಾಯ ಇರಲಿ. ಪ್ರಾಜೆಕ್ಟ್ ಹೆಸರಲ್ಲಿ ಹಣದ ಅಪವ್ಯಯವಾಗದಂತೆ ಜಾಗರೂಕತೆ ವಹಿಸಿ. ಅದನ್ನು ಮಕ್ಕಳಿಗೂ ಕಲಿಸಿ. ಸಾಧ್ಯವಾದಷ್ಟು ರೆಡಿಮೇಡ್ ಸ್ಕೂಲ್ ಪ್ರಾಜೆಕ್ಟ್‌ಗಳನ್ನು ಕೊಂಡುಕೊಳ್ಳುವ ಬದಲು ನೈಸರ್ಗಿಕವಾಗಿ ಸಿಗುವ ಸಂಪನ್ಮೂಲಗಳನ್ನೇ ಬಳಸಿ ಸ್ವತಃ ತಯಾರಿಸಲು ಪ್ರೇರೇಪಿಸಿ.

ಎಂಬಿಎ ನಂತರ ಮುಂದೇನು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್ ಕುಮಾರ್

1. ಬಿಕಾಂ ಮಾಡಿ, ಎಂಬಿಎ ಮಾಡಿದ್ದೇನೆ. ಮುಂದೇನು ಮಾಡಬೇಕೆನ್ನುವ ಗೊಂದಲದಲ್ಲಿದ್ದೇನೆ. ನಿಮ್ಮ ಸಲಹೆ ನೀಡಿ.

ನಿಖಿಲ್, ಊರು ತಿಳಿಸಿಲ್ಲ.

ಒಂದು ಉದ್ಯಮದ ಅಭಿವೃದ್ಧಿಗಾಗಿ, ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಉಪಯೋಗಿಸುವ ಯೋಜನೆಗಳನ್ನು ರಚಿಸಿ, ಎಲ್ಲಾ ಪ್ರಯತ್ನಗಳನ್ನು ಕೇಂದ್ರೀಕರಿಸಿ, ಯೋಜನೆಗಳನ್ನು ನಿಷ್ಠೆಯಿಂದ ಕಾರ್ಯಗತಗೊಳಿಸುವುದೇ ಮ್ಯಾನೇಜ್‌ಮೆಂಟ್‌ನ ಮೂಲ ಉದ್ದೇಶ. ಈ ಜವಾಬ್ದಾರಿಗಳನ್ನು ನಿರ್ವಹಿಸಲು ಸಮಗ್ರವಾದ ತಿಳಿವಳಿಕೆಯನ್ನು- ಮಾರುಕಟ್ಟೆಯ ನಿರ್ವಹಣೆ, ಹಣಕಾಸಿನ ಆಡಳಿತ, ಆಯವ್ಯಯ ಶಾಸ್ತ್ರ, ಬಂಡವಾಳ ಪೂರೈಕೆ, ಉತ್ಪಾದನೆ ಮತ್ತು ಮಾನವ ಸಂಪನ್ಮೂಲಗಳ ನಿರ್ವಹಣೆ-ಎಂಬಿಎ ಕೋರ್ಸ್‌ನಲ್ಲಿ ನೀಡಲಾಗುತ್ತದೆ. ಎಂಬಿಎ ಕೋರ್ಸ್‌ನಲ್ಲಿ ಕಲಿಸುವ ತತ್ವಗಳು, ಸೂತ್ರಗಳು ವೈಯಕ್ತಿಕ ಜೀವನದಲ್ಲೂ ಉಪಯುಕ್ತ.

ಎಂಬಿಎ ಕೋರ್ಸ್ ನಂತರ ಆಕರ್ಷಕ ಅವಕಾಶಗಳಿವೆ. ಬ್ಯಾಂಕಿಂಗ್, ಫೈನಾನ್ಸ್, ಇನ್‌ವೆಸ್ಟ್‌ಮೆಂಟ್, ಇನ್ಶೂರೆನ್ಸ್, ರಿಟೇಲ್, ಮಾರ್ಕೆಟಿಂಗ್, ಎಫ್‌ಎಂಸಿಜಿ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ನೀವು ವೃತ್ತಿಯನ್ನು ಅರಸಬಹುದು ಅಥವಾ ಸ್ವಂತ ಉದ್ಯಮವನ್ನು ಆರಂಭಿಸಬಹುದು. ಇನ್ನೂ ಹೆಚ್ಚಿನ ತಜ್ಞತೆಯ ಅಗತ್ಯವಿದ್ದರೆ, ಪಿಎಚ್‌ಡಿ ಕೂಡಾ ಮಾಡಬಹುದು.

2. ನಾನು ಬಿಕಾಂ ಅಂತಿಮ ವರ್ಷದ ವಿದ್ಯಾರ್ಥಿ. ಭಾರತೀಯ ಸೇನೆಗೆ ಸೇರಬೇಕು ಎಂಬ ಆಸೆ ಇದೆ. ಹೇಗೆ ಸೇರಬೇಕೆಂದು ತಿಳಿಸಿ.

ಸಂತೋಷ ಟಿ, ಊರು ತಿಳಿಸಿಲ್ಲ.

ನೀವು ಪದವಿಯ ಅಂತಿಮ ವರ್ಷದಲ್ಲಿರುವುದರಿಂದ ಕಂಬೈನ್ಡ್ ಡಿಫೆನ್ಸ್ ಸರ್ವೀಸಸ್ (ಸಿಡಿಎಸ್) ಪರೀಕ್ಷೆಯ ಮುಖಾಂತರ ಇಂಡಿಯನ್ ಮಿಲಿಟರಿ ಅಕಾಡೆಮಿ (ಐಎಂಎ) ಸೇರಿ ನಾನ್-ಟೆಕ್ನಿಕಲ್ ಹುದ್ದೆಗಳನ್ನು ಅರಸಬಹುದು. ಹೆಚ್ಚಿನ ವಿವರಗಳಿಗೆ ಗಮನಿಸಿ: https://indianarmy.nic.in/home

3. ನಾನು ಬಿಫಾರ್ಮಾ ಮೊದಲ ವರ್ಷದಲ್ಲಿ ಓದುತ್ತಿದ್ದೇನೆ. ಓದಿದ ನಂತರ ನೌಕರಿಯ ಅವಕಾಶಗಳೇನು? ನನಗೆ ಫಾರ್ಮ್ ಡಿ ಮಾಡುವ ಬಯಕೆಯಿದೆ. ಇದನ್ನು ನಾನು ಮಾಡಬಹುದೇ? ಅಥವಾ ಎಂಫಾರ್ಮಾ ಮಾಡಲೇಬೇಕೇ? ಒಂದು ವೇಳೆ ಎಂಫಾರ್ಮಾ ಮಾಡಿದರೆ ನೌಕರಿಯ ಅವಕಾಶಗಳು ಹೇಗೆ?

ತೇಜು ತಾಪನ್, ಬೆಂಗಳೂರು.

ಬಿಫಾರ್ಮಾ ಪದವಿಯ ನಂತರ ನೇರವಾಗಿ ಮೂರು ವರ್ಷದ ಡಾಕ್ಟರ್ ಆಫ್ ಫಾರ್ಮಸಿ ಕೋರ್ಸ್ (ಫಾರ್ಮ್ ಡಿ) ಅಥವಾ ಎರಡು ವರ್ಷದ ಎಂಫಾರ್ಮಾ ಕೋರ್ಸ್ ಮಾಡಬಹುದು. ಈ ಎರಡೂ ಕೋರ್ಸ್‌ಗಳಿಗೂ ವೃತ್ತಿಯ ಅನೇಕ ಅವಕಾಶಗಳಿವೆ. ಹೆಚ್ಚಿನ ವಿವರಗಳಿಗೆ ಗಮನಿಸಿ: **https://www.pharmdinfo.com/pharm-d-course-f124/topic1704.html**

4. ನಾನು 2015ರಲ್ಲಿ ಆರ್ಟ್ಸ್ ಪದವಿ ಮುಗಿಸಿದ್ದೇನೆ. ಮನೆಯಲ್ಲಿ ಆರ್ಥಿಕ ಪರಿಸ್ಥಿತಿ ಸರಿಯಿಲ್ಲದ ಕಾರಣ ಓದು ಮೊಟಕುಗೊಳಿಸಿದೆ. ನನಗೀಗ 28 ವರ್ಷ. ನನ್ನ ಗುರಿ ಪೊಲೀಸ್ ಅಧಿಕಾರಿ ಆಗಬೇಕು ಎನ್ನುವುದು. ನಿಮ್ಮ ಸಲಹೆ ಏನು?

ದುರುಗೇಶ್ ಪಿ. ಪಾಟೀಲ್, ಊರು ತಿಳಿಸಿಲ್ಲ.

ನಮಗಿರುವ ಮಾಹಿತಿಯಂತೆ ಪಿಎಸ್‌ಐ ಹುದ್ದೆಗೆ ಸಾಮಾನ್ಯ ವರ್ಗಕ್ಕೆ 25 ವರ್ಷದ ಹಾಗೂ ಇನ್ನಿತರ ವರ್ಗಗಳಾದರೆ 27 ವರ್ಷದ ಗರಿಷ್ಠ ಮಿತಿಯಿದೆ. ಆದರೆ, ಪೊಲೀಸ್ ಅಧಿಕಾರಿಯಾಗುವುದೇ ನಿಮ್ಮ ಗುರಿ ಎನ್ನುವುದಾದರೆ ಯುಪಿಎಸ್‌ಸಿ ಮುಖಾಂತರ ಐಪಿಎಸ್ ಅಧಿಕಾರಿಯಾಗಲು ಪ್ರಯತ್ನಿಸಬಹುದು.

5. ನಾನು ಬಿಎಸ್‌ಸಿ ಪದವಿ ಮುಗಿಸಿದ್ದೇನೆ. ಮುಂದೆ ಎಂಎಸ್‌ಸಿ ಮಾಡಬೇಕು ಎಂದುಕೊಂಡಿದ್ದೇನೆ. ಆದರೆ ನಾನು ಪಿಜಿಸಿಇಟಿಗೆ ಅರ್ಜಿ ಸಲ್ಲಿಸಿಲ್ಲ. ಮುಂದೇನು ಮಾಡಬೇಕೆಂದು ತಿಳಿಯುತ್ತಿಲ್ಲ.

ಶೈಲಜಾ, ಬೆಂಗಳೂರು.

ಬಿಎಸ್‌ಸಿ ಪದವಿಯ ಆಧಾರದ ಮೇಲೆ ನೇರವಾಗಿ ಅಥವಾ ಕೆಲವೊಮ್ಮೆ ಪರೀಕ್ಷೆಗಳ ಮೂಲಕ ಎಂಎಸ್‌ಸಿ ಕೋರ್ಸ್‌ಗೆ ಸರ್ಕಾರಿ ಮತ್ತು ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶದ ಅವಕಾಶವಿದೆ. ಈ ವರ್ಷದ ಪ್ರಕ್ರಿಯೆ ಇದೀಗ ಶುರುವಾಗುತ್ತಿದೆ. ಹಾಗಾಗಿ, ಈಗಲೂ ನೀವು ಎಂಎಸ್‌ಸಿಗೆ ಪ್ರಯತ್ನಿಸಬಹುದು.

6. ನಾನು ಪಿಯುಸಿ (ಪಿಸಿಎಂಬಿ) ಮುಗಿಸಿ ನೀಟ್ ಪರೀಕ್ಷೆ ಬರೆದಿದ್ದೇನೆ. ಎಂಬಿಬಿಎಸ್ ಓದಲು ಸರ್ಕಾರಿ ಸೀಟು ಸಿಗಲು ಕೆಲವು ಅಂಕಗಳು ಕಡಿಮೆಯಿವೆ. ಬಿಎಎಂಎಸ್ ಮಾಡಿದರೆ ಒಳ್ಳೆಯದೋ ಅಥವಾ ಬಿಡಿಎಸ್ ಮಾಡಿದರೆ ಒಳ್ಳೆಯದೋ? ಮುಂದೆ ಯಾವ ಕೋರ್ಸ್ ಮಾಡಿದರೆ ಒಳ್ಳೆಯದು?

ಹೆಸರು, ಊರು ತಿಳಿಸಿಲ್ಲ.

ಈ ವರ್ಷ ಎಂಬಿಬಿಎಸ್ ಅಥವಾ ಬಿಡಿಎಸ್ ಕೋರ್ಸ್ ಸೇರಲು ಪ್ರಯತ್ನಿಸಿ. ಅದು ಸಾಧ್ಯವಾಗದಿದ್ದರೆ ಮತ್ತು ಎಂಬಿಬಿಎಸ್ ಕೋರ್ಸನ್ನೇ ಮಾಡುವ ಗುರಿಯಿದ್ದರೆ, ಅಲ್ಪ ವಿರಾಮವನ್ನು ತೆಗೆದುಕೊಂಡು ಪರಿಪೂರ್ಣ ತಯಾರಿಯಿಂದ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಪ್ರಯತ್ನಿಸಬಹುದು. ಪ್ರಮುಖವಾಗಿ, ನಿಮ್ಮ ವೃತ್ತಿ ಯೋಜನೆಯಂತೆ ಕೋರ್ಸ್ ನಿರ್ಧಾರ ಮಾಡುವುದು ಸೂಕ್ತ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಕೀಪ್ ಇಂಡಿಯಾ ಸ್ಮೈಲಿಂಗ್ ಫೌಂಡೇಷನ್ ಸ್ಕಾಲರ್‌ಶಿಪ್ ಪ್ರೋಗ್ರಾಮ್ 2021–22

- **ವಿವರ:** ಹತ್ತನೇ ತರಗತಿಯ ನಂತರದ ಓದಿಗೆ ಸಹಾಯವಾಗಲು ಕೋಲ್ಗೇಟ್-ಪಾಮೋಲೀವ್ (ಇಂಡಿಯಾ) ಲಿಮಿಟೆಡ್ ಕಂಪನಿಯು ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಜೊತೆಗೆ ಪದವಿ ಓದುತ್ತಿರುವವರೂ ಅರ್ಜಿ ಸಲ್ಲಿಸಬಹುದಾಗಿದೆ.
- **ಅರ್ಹತೆ:** ಹತ್ತನೇ ತರಗತಿಯ ಪರೀಕ್ಷೆಯಲ್ಲಿ ಕನಿಷ್ಠ ಶೇ 75ರಷ್ಟು ಅಂಕಗಳನ್ನು ಪಡೆದಿರಬೇಕು. 12ನೇ ತರಗತಿಯಲ್ಲಿ ಶೇ 60ರಷ್ಟು ಅಂಕ ಪಡೆದಿರಬೇಕು. 3 ವರ್ಷದ ಪದವಿ, 4 ವರ್ಷದ ಎಂಜಿನಿಯರಿಂಗ್ ಮತ್ತು ಡಿಪ್ಲೊಮಾ ಓದಿಗೆ ವಿದ್ಯಾರ್ಥಿ ವೇತನ ಸಹಾಯವಾಗಲಿದೆ. ಕುಟುಂಬದ ವಾರ್ಷಿಕ ಆದಾಯವು ₹5 ಲಕ್ಷಕ್ಕಿಂತ ಕಡಿಮೆ ಇರಬೇಕು.
- **ಆರ್ಥಿಕ ಸಹಾಯ:** ವರ್ಷಕ್ಕೆ ₹30 ಸಾವಿರ
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** 30 ನವೆಂಬರ್, 2021
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್ ಅರ್ಜಿಗಳು ಮಾತ್ರ
- **ಹೆಚ್ಚಿನ ಮಾಹಿತಿಗೆ:** www.b4s.in/praja/KISF1

ಕೋವಿಡ್ ಸಂಕಷ್ಟ (ಜ್ಯೋತಿ ಪ್ರಕಾಶ) ಪರಿಹಾರ ಸ್ಕಾಲರ್‌ಶಿಪ್ ಪ್ರೋಗ್ರಾಮ್ 2021

- **ವಿವರ:** ಕೋವಿಡ್‌ನಿಂದ ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿರುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
- **ಅರ್ಹತೆ:** 1ನೇ ತರಗತಿಯಿಂದ ಪದವಿವರೆಗೆ ಅಭ್ಯಾಸ ಮಾಡುತ್ತಿರುವ ಭಾರತೀಯ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಕೋವಿಡ್‌ನಿಂದ ಪೋಷಕರನ್ನು ಕಳೆದುಕೊಂಡಿದ್ದರೆ ಅಥವಾ ಕೋವಿಡ್ ಕಾರಣದಿಂದ ಕೆಲಸ ಕಳೆದುಕೊಂಡಿದ್ದರೆ, ಅರ್ಜಿ ಸಲ್ಲಿಸಬಹುದು.
- **ಆರ್ಥಿಕ ಸಹಾಯ:** ವರ್ಷಕ್ಕೆ ₹30 ಸಾವಿರ
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** 30 ನವೆಂಬರ್, 2021
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್ ಅರ್ಜಿಗಳು ಮಾತ್ರ
- **ಹೆಚ್ಚಿನ ಮಾಹಿತಿಗೆ:** www.b4s.in/praja/CCSP1

ಕೃಪೆ:buddy4study.com

ಓದಿದ ವಿಷಯ ನೆನಪಿನಲ್ಲಿಡುವುದು ಹೇಗೆ?

ಸಿಬಿಎಸ್‌ಇ ಪರೀಕ್ಷೆ

ವೆಂಕಟ ಸುಬ್ಬರಾವ್. ವಿ

ಭಾಗ-4

ಹಿಂದಿನ ಸಂಚಿಕೆಯಲ್ಲಿ ನಾವು 'ಪ್ರಾಸಬದ್ಧ ಪದಗಳ' ವಿಧಾನದಿಂದ ಪಾಠದ ಮುಖ್ಯ ಅಂಶಗಳನ್ನು ಸುಲಭವಾಗಿ ಹೇಗೆ ನೆನಪಿಡಬಹುದು ಎಂದು ತಿಳಿದೆವು. ಈ ಲೇಖನದಲ್ಲಿ ಮತ್ತಷ್ಟು ವಿಧಾನಗಳ ಬಗ್ಗೆ ತಿಳಿಯೋಣ.

ಅ. ಪದಗಳ ಜೋಡಣೆ ವಿಧಾನ

ಈ ವಿಧಾನದಲ್ಲಿ, ನಾವು ನೆನಪಿಡಬೇಕಾದ ವಿಷಯಗಳನ್ನು ಅಥವಾ ಪಾಠದ ಮುಖ್ಯ ಅಂಶಗಳನ್ನು ಒಂದು ಸಣ್ಣ ವಾಕ್ಯವಾಗಿಯೋ, ಪದ ಪುಂಜವಾಗಿಯೋ ಅಥವಾ ಒಂದು ಸರಳವಾದ ಹಾಗೂ ಸುಲಭವಾಗಿ ನೆನಪಿಡಬಹುದಾದ ಅರ್ಥಪೂರ್ಣ ಪದವಾಗಿಯೋ ಸಂಕುಚಿತಗೊಳಿಸಿಕೊಂಡು ನೆನಪಿನಲ್ಲಿಡಬಹುದು.

ಉದಾಹರಣೆಗೆ ನಾವು ಶಾಲೆಯಲ್ಲಿ ಓದುವಾಗ ನಮ್ಮ ಗುರುಗಳು ಹೀಗೆ ಹೇಳಿಕೊಟ್ಟಿದ್ದರು. 'ಶಹಜಹಾನನ ನಾಲ್ಕು ಜನ ಮಕ್ಕಳ ಹೆಸರು ಏನು?'

ಈ ಪ್ರಶ್ನೆಗೆ ಉತ್ತರವನ್ನು ನೆನಪಿನಲ್ಲಿಡಲು ಅವರು ನಮಗೆ ಹೇಳಿಕೊಟ್ಟ ವಾಕ್ಯ ಹೀಗಿತ್ತು! 'ಅವರಂಗೀ ಜೇಬು ಮುರಿದು ಹೋಯ್ತು ಸೂಜಿ ದಾರ ತೆಗೆದುಕೊಂಡು ಹೊಲಿ'.

ಇಲ್ಲಿ, ಅವರಂಗೀ ಜೇಬು– ಔರಂಗಜೇಬ್

- ಮುರಿದು – ಮುರಾದ್
- ಸೂಜಿ – ಸೂಜ
- ದಾರ – ದಾರ

ಶಹಜಹಾನನ ನಾಲ್ಕು ಜನ ಮಕ್ಕಳ ಹೆಸರು – ಔರಂಗಜೇಬ್, ಮುರಾದ್, ಸೂಜ ಮತ್ತು ದಾರ. ಎಷ್ಟು ಸುಲಭವಾಗಿ ನೆನಪಿನಲ್ಲಿಡಬಹುದು ಅಲ್ಲವೇ? !

ಹಾಗೆಯೇ, ಹಿಂದಿಯಲ್ಲಿ, का, के,कि,मे,पर, को, से, ने ಗಳನ್ನು ನೆನಪಿನಲ್ಲಿಡಲು ಹೀಗೆ ಹೇಳುತ್ತಿದ್ದರು. 'ಕಾ, ಕೆ, ಕಿ ,ಮೇಜ್ ಪರ್ ದೋಸೇ ನೇ'

ಎಷ್ಟು ತಮಾಷೆಯ ವಿಧಾನ ಅನಿಸುತ್ತದೆಯಲ್ಲವೇ? ಆದರೆ ಬಹಳ ಸರಳ ಹಾಗೂ ಉಪಯುಕ್ತ ವಿಧಾನ.

ಈ ವಿಧಾನವು ಭಾಷೆಗಳು, ಸಮಾಜ ವಿಜ್ಞಾನ ಹಾಗೂ ವಿಜ್ಞಾನ ವಿಷಯಗಳ ಮುಖ್ಯ ಅಂಶಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದಕ್ಕೆ ಬಹಳ ಉಪಯುಕ್ತ.

ಇ. ಮೈಂಡ್ ಮ್ಯಾಪ್ ವಿಧಾನ

ನಿಮಗೆ ಈಗಾಗಲೇ ತಿಳಿದಿರುವಂತೆ ಮೈಂಡ್ ಮ್ಯಾಪ್ ವಿಧಾನವು ಬಹಳ ಉಪಯುಕ್ತವಾದ ವಿಧಾನಗಳಲ್ಲಿ ಒಂದು. ಈ ವಿಧಾನವು, ಪಾಠವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಹಕರಿಸುವುದರ ಜೊತೆಗೆ, ವಿಷಯಗಳನ್ನು ಸರಳವಾಗಿ ನೆನಪಿನಲ್ಲಿಡಲು ಹಾಗೂ ವೇಗವಾಗಿ ಪಾಠಗಳನ್ನು ಪುನರಾವರ್ತನೆ ಮಾಡಲು ಸಹಕಾರಿಯಾಗಿದೆ. ಬಹುಆಯ್ಕೆ ಉತ್ತರಗಳಿರುವ ಪ್ರಶ್ನೆಗಳಿಗೆ ಉತ್ತರಿಸಲು, ಪಾಠದ ಹಲವಾರು ಅಂಶಗಳನ್ನು ನೆನಪಿನಲ್ಲಿಡಲೂ ಮೈಂಡ್ ಮ್ಯಾಪ್‌ಗಳು ಸಹಾಯಕವಾಗುತ್ತವೆ. ಅದಕ್ಕಾಗಿ, ಇಡೀ ಪಾಠವನ್ನು ಮೈಂಡ್ ಮ್ಯಾಪ್‌ನಲ್ಲಿ ಅಳವಡಿಸುವ ಬದಲು, ಪಾಠದ ಮುಖ್ಯ ಅಂಶದ ಮೈಂಡ್ ಮ್ಯಾಪ್‌ಗಳನ್ನು ಮಾಡಿಕೊಳ್ಳುವುದು ಉಪಯುಕ್ತ.



ಚಿತ್ರದಲ್ಲಿ ತೋರಿಸಿರುವಂತೆ, ಒಂದು ಪಾಠದ ಮುಖ್ಯ ಅಂಶಗಳನ್ನು ಮಾತ್ರ ಮೈಂಡ್ ಮ್ಯಾಪ್ ಆಗಿ ಪರಿವರ್ತಿಸಲಾಗಿದೆ. ಈ ಮೈಂಡ್ ಮ್ಯಾಪ್ ಅನ್ನು ಗಮನಿಸಿದರೆ, ಇಲ್ಲಿರುವ ಎಲ್ಲಾ ಅಂಶಗಳನ್ನೂ ಹೇಗೆ ಸರಳವಾಗಿ ನೆನಪಿಡಬಹುದು ಎಂದು ತಿಳಿಯುತ್ತದೆ ಅಲ್ಲವೇ?

ಕೆಲವು ಬಾರಿ, ನೀವು, ಅಭ್ಯಾಸಕ್ಕಾಗಿ ಮೈಂಡ್ ಮ್ಯಾಪ್‌ನ ಕೆಲವು ಅಂಶಗಳನ್ನು ಖಾಲಿ ಬಿಟ್ಟಿರಿ (ಕೆಳಗಿನ ಚಿತ್ರದಲ್ಲಿ ತೋರಿಸಿರುವಂತೆ). ನಂತರ ಪುನರಾವರ್ತನೆ ಮಾಡುವಾಗ ಈ ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ.

ಹೀಗೆ ಪಾಠದ ಅಭ್ಯಾಸವೂ ಆಗುತ್ತದೆ ಹಾಗೂ ನಿಮ್ಮ ಆತ್ಮವಿಶ್ವಾಸವೂ ಹೆಚ್ಚುತ್ತದೆ!

ಹಲವಾರು ಬಾರಿ ಪರೀಕ್ಷೆಯಲ್ಲಿ ಈ ಪಾಠದ ಕುರಿತಾಗಿ ಪ್ರಶ್ನೆಗಳು ಬಂದಾಗ ಈ ಮೈಂಡ್ ಮ್ಯಾಪ್ ನಿಮ್ಮ ಕಣ್ಣಮುಂದೆ ಬರುತ್ತದೆ ಹಾಗೂ ಕೊಟ್ಟಿರುವ ಪ್ರಶ್ನೆಗೆ ಉತ್ತರಿಸಲು ಸುಲಭವಾಗುತ್ತದೆ.



ಈ ಮೈಂಡ್ ಮ್ಯಾಪ್ ವಿಧಾನವೂ ಸಹ ಭಾಷೆಗಳು, ಸಮಾಜ ವಿಜ್ಞಾನ ಹಾಗೂ ವಿಜ್ಞಾನ ವಿಷಯಗಳ ಅಂಶಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದಕ್ಕೆ ಬಹಳ ಉಪಯುಕ್ತ.

ಈ. ಪಾಠದ ಮುಖ್ಯ ಅಂಶವನ್ನು ನೆನಪಿನಲ್ಲಿಟ್ಟುಕೊಂಡು ಅದರ ಆಧಾರದ ಮೇಲೆ ಪಾಠದ ಮಿಕ್ಕೆಲ್ಲಾ ಅಂಶಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದೂ ಒಂದು ಉಪಯುಕ್ತ ವಿಧಾನ.

ಹೀಗೆ ಮಾಡಿ,

1. ಪಾಠದ ಎಲ್ಲ ಮುಖ್ಯ ಅಂಶಗಳನ್ನೂ ಪಟ್ಟಿಮಾಡಿ.
2. ನಂತರ ಮುಖ್ಯ ಅಂಶಗಳಲ್ಲಿ ಒಂದನ್ನು ಕೆಳಗಿನ ಚಿತ್ರದಲ್ಲಿ ತೋರಿಸಿದಂತೆ ಮಧ್ಯದ ವೃತ್ತದಲ್ಲಿ ಬರೆಯಿರಿ.
3. ಈ ಮುಖ್ಯ ಅಂಶವನ್ನು ಆಧರಿಸಿದ ಎಲ್ಲ ಸಹ-ಅಂಶಗಳನ್ನೂ ಚಿತ್ರದಲ್ಲಿ ತೋರಿಸಿದಂತೆ ಬರೆಯಿರಿ.

ಹೀಗೆ ಮಾಡುವುದರಿಂದ, ಮುಖ್ಯ ಅಂಶ ಹಾಗೂ ಅದರ ಆಧರಿತ ಎಲ್ಲ ಅಂಶಗಳನ್ನೂ ಸುಲಭವಾಗಿ ನೆನಪಿಡಬಹುದು.

ಉದಾಹರಣೆಗೆ:



ಉ. ಒಂದು ಪಾಠದ ಮುಖ್ಯ ಹಂತಗಳನ್ನು ಬರೆದುಕೊಂಡು ಆ ಮುಖ್ಯ ಹಂತಗಳ ಸಹಾಯದಿಂದ ಇಡೀ ಪಾಠವನ್ನು ನೆನಪಿನಲ್ಲಿಟ್ಟುಕೊಳ್ಳಲು ಪ್ರಯತ್ನಿಸಬಹುದು.

ಹೀಗೆ ಮಾಡಿ,

1. ಪಾಠದ ಮುಖ್ಯ ಹಂತಗಳನ್ನು ಕ್ರಮವಾಗಿ ಪಟ್ಟಿಮಾಡಿ.
2. ಪದಗಳ ಜೋಡಣೆ ವಿಧಾನದ ಸಹಾಯದಿಂದ ಪಾಠದ ಮುಖ್ಯ ಹಂತಗಳನ್ನು ನೆನಪಿಟ್ಟುಕೊಳ್ಳಿ.

ಹೀಗೆ ಮಾಡುವುದರಿಂದ, ಪಾಠದ ಮುಖ್ಯಹಂತಗಳ ಜೊತೆಯಿರುವ ಅಂಶಗಳನ್ನೆಲ್ಲ ನೆನಪಿನಲ್ಲಿಟ್ಟುಕೊಳ್ಳಲು ಸುಲಭವಾಗುತ್ತದೆ.

(ಮುಂದಿನ ಸಂಚಿಕೆಯಲ್ಲಿ: ಸಿ.ಬಿ.ಎಸ್.ಇ. ಮೊದಲನೆಯ ಅವಧಿಯ ಪರೀಕ್ಷೆಯಲ್ಲಿ ಒ.ಎಮ್.ಆರ್. ಹಾಳೆಯಲ್ಲಿ ಉತ್ತರಿಸುವುದು ಹೇಗೆ?)

(ಲೇಖಕರು: ನಿರ್ದೇಶಕರು, ಸ್ಮಾರ್ಟ್ ಸೆರೆಬ್ರಮ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು)

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ತಾಯಿಯ ತೋಳು ಬೇರೆಲ್ಲಕ್ಕಿಂತಲೂ ಹೆಚ್ಚು ನೆಮ್ಮದಿಯನ್ನು ನೀಡುತ್ತದೆ.

–ರಾಜಕುಮಾರಿ ಡಯಾನಾ

ಸರ್ಕಾರಿ ಬಾಂಡ್‌ಗಳಲ್ಲಿ ನೇರ ಹೂಡಿಕೆ ಉಳಿತಾಯದ ಹಣಕ್ಕೆ ಹೊಸ ವೇದಿಕೆ

ಸರ್ಕಾರವು ಹೊರಡಿಸುವ ಸಾಲಪತ್ರಗಳಲ್ಲಿ ನೇರವಾಗಿ ಹೂಡಿಕೆ ಮಾಡಲು ಸಣ್ಣ ಹೂಡಿಕೆದಾರರಿಗೆ ಅವಕಾಶ ಕಲ್ಪಿಸುವ ಆರ್‌ಬಿಐ ರಿಟೇಲ್ ಡೈರೆಕ್ಟ್ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ವಾರ ಚಾಲನೆ ನೀಡಿದ್ದಾರೆ. ಈ ಮೂಲಕ, ಇಂತಹ ಅವಕಾಶವನ್ನು ಸಣ್ಣ ಹೂಡಿಕೆದಾರರಿಗೆ ಕಲ್ಪಿಸಿರುವ ಕೆಲವೇ ದೇಶಗಳ ಸಾಲಿಗೆ ಭಾರತ ಕೂಡ ಸೇರಿಕೊಂಡಿದೆ. ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಆರಂಭಿಸಿರುವ ವೆಬ್ ಪೋರ್ಟಲ್ ಮೂಲಕ, ಕೆಲವು ಅಗತ್ಯ ವಿವರಗಳನ್ನು ಹಾಗೂ ದಾಖಲೆಗಳನ್ನು ಸಲ್ಲಿಸಿ ಸಣ್ಣ ಹೂಡಿಕೆದಾರರು ಆರ್‌ಡಿಜಿ ಖಾತೆ ತೆರೆಯಬಹುದು. ಈ ಖಾತೆಯ ಮೂಲಕ ಸರ್ಕಾರಿ ಸಾಲಪತ್ರಗಳನ್ನು ಸಣ್ಣ ಹೂಡಿಕೆದಾರರು ಖರೀದಿಸಬಹುದು. ಈ ಪ್ರಕ್ರಿಯೆಗೆ ಯಾವುದೇ ಶುಲ್ಕ ನೀಡಬೇಕಾಗಿಲ್ಲ ಎಂದು ಆರ್‌ಬಿಐ ಹೇಳಿದೆ. ರಾಜ್ಯ ಸರ್ಕಾರಗಳು ಹೊರಡಿಸುವ 'ರಾಜ್ಯ ಅಭಿವೃದ್ಧಿ ಸಾಲ' (ಎಸ್‌ಡಿಎಲ್) ಹೆಸರಿನ ಬಾಂಡ್‌ಗಳಲ್ಲಿಯೂ ಹಣ ತೊಡಗಿಸಲು ಹೊಸ ವ್ಯವಸ್ಥೆಯು ಅವಕಾಶ ಕಲ್ಪಿಸಿದೆ. ಬ್ಯಾಂಕ್ ಖಾತೆಗಳಿಗೆ ಆಧಾರ್ ಸಂಖ್ಯೆ ಮತ್ತು ಮೊಬೈಲ್ ದೂರವಾಣಿ ಸಂಖ್ಯೆಯ ಜೋಡಣೆ, ಜನಧನ ಖಾತೆಗಳ ಆರಂಭ, ಸ್ಮಾರ್ಟ್‌ಫೋನ್ ಮೂಲಕ ಹಣದ ವರ್ಗಾವಣೆಯನ್ನು ಸುಲಭವಾಗಿ ನಡೆಸುವ ಅವಕಾಶ ಕಲ್ಪಿಸಿರುವ ಯುಪಿಐ ವ್ಯವಸ್ಥೆಗೆ ಚಾಲನೆ, ಹಣ ಠೇವಣಿ ಇರಿಸುವ ಅವಕಾಶ ಕಲ್ಪಿಸುವ ಪೇಮೆಂಟ್ಸ್ ಬ್ಯಾಂಕ್‌ಗಳ ಆರಂಭದ ನಂತರದಲ್ಲಿ ಆಗಿರುವ ಮಹತ್ವದ ಬೆಳವಣಿಗೆ ಆರ್‌ಬಿಐ ರಿಟೇಲ್ ಡೈರೆಕ್ಟ್ ಯೋಜನೆ. ಸರ್ಕಾರದ ಸಾಲಪತ್ರಗಳಲ್ಲಿ ಸಣ್ಣ ಹೂಡಿಕೆದಾರರ ಹಣವು ಇದುವರೆಗೆ ಹೂಡಿಕೆ ಆಗಿರಲೇ ಇಲ್ಲ ಎಂದಲ್ಲ; ಸಣ್ಣ ಹೂಡಿಕೆದಾರರು ಮ್ಯೂಚುವಲ್ ಫಂಡ್ ಕಂಪನಿಗಳ ಮೂಲಕ ಅಲ್ಲಿ ಹಣ ತೊಡಗಿಸಲು ಅವಕಾಶ ಈಗಾಗಲೇ ಇತ್ತು. ಸಾಲಪತ್ರ ಆಧಾರಿತ ಮ್ಯೂಚುವಲ್ ಫಂಡ್‌ಗಳು ಅಲ್ಲಿ ಹಣ ತೊಡಗಿಸಿ, ಹೂಡಿಕೆದಾರರಿಗೆ ಸ್ಥಿರವಾದ ಲಾಭಾಂಶವನ್ನು ತಂದುಕೊಟ್ಟಿವೆ. ಆದರೆ ಇಂತಹ ಫಂಡ್‌ಗಳ ಪ್ರಮಾಣ ಹೆಚ್ಚೇನೂ ಇರಲಿಲ್ಲ. ಇನ್ನು ಮುಂದೆ ಸಣ್ಣ ಹೂಡಿಕೆದಾರರು ಆನ್‌ಲೈನ್ ಮೂಲಕ ತಾವೇ ಆರ್‌ಡಿಜಿ ಖಾತೆ ತೆರೆದು, ಬಾಂಡ್‌ಗಳಲ್ಲಿ ಹೂಡಿಕೆ ಮಾಡಬಹುದು.

ಇಲ್ಲಿ ಹೂಡಿಕೆ ಮಾಡುವುದರಲ್ಲಿ ಇರುವ ಪ್ರಯೋಜನಗಳ ಬಗ್ಗೆ ಆರ್‌ಬಿಐ ಹಾಗೂ ಕೇಂದ್ರ ಸರ್ಕಾರವು ವ್ಯಾಪಕ ಪ್ರಚಾರ ಆಂದೋಲನವನ್ನು ಬೇರೆ ಬೇರೆ ಭಾಷೆಗಳಲ್ಲಿ ಹಮ್ಮಿಕೊಳ್ಳಬೇಕು

ಈ ಕ್ರಮವು ಸರ್ಕಾರಕ್ಕೂ, ಸಣ್ಣ ಹೂಡಿಕೆದಾರರಿಗೂ ಪ್ರಯೋಜನಕರ ಎಂದು ತಜ್ಞರು ವಿಶ್ಲೇಷಿಸಿದ್ದಾರೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಕೇಂದ್ರ ಸರ್ಕಾರವು ಹಣಕಾಸು ಮಾರುಕಟ್ಟೆಯಿಂದ ಒಟ್ಟು ₹ 12 ಲಕ್ಷ ಕೋಟಿ ಸಾಲ ಸಂಗ್ರಹಿಸುವ ಗುರಿ ಹೊಂದಿದೆ. ಈಗ ಆರಂಭ ಆಗಿರುವ ಈ ಯೋಜನೆಯು ಸರ್ಕಾರಕ್ಕೆ ನೇರವಾಗಿ ಸಣ್ಣ ಹೂಡಿಕೆದಾರರಿಂದ ಸಂಪನ್ಮೂಲ ಸಂಗ್ರಹಿಸಲು ಅವಕಾಶ ಮಾಡಿಕೊಡಲಿದೆ. ಸರ್ಕಾರದ ಬಾಂಡ್‌ಗಳಲ್ಲಿನ ಹೂಡಿಕೆಯು ಅತ್ಯಂತ ಸುರಕ್ಷಿತ ಎಂದು ಪರಿಗಣಿಸಲು ಅಡ್ಡಿಯಿಲ್ಲ. ಬ್ಯಾಂಕ್‌ಗಳಲ್ಲಿ ನಿಶ್ಚಿತ ಠೇವಣಿ ರೂಪದಲ್ಲಿ ಇರಿಸುವ ಹಣಕ್ಕೆ 'ಠೇವಣಿ ವಿಮೆ ಮತ್ತು ಸಾಲ ಖಾತರಿ ನಿಗಮ'ದ ಮೂಲಕ ₹ 5 ಲಕ್ಷದವರೆಗೆ ಭದ್ರತೆ ಇದೆ. ಠೇವಣಿ ಹಣವನ್ನು ಹಿಂದಿರುಗಿಸಲು ಬ್ಯಾಂಕ್ ಯಾವುದಾದರೂ ಕಾರಣದಿಂದ ವಿಫಲವಾದಲ್ಲಿ, ₹ 5 ಲಕ್ಷದವರೆಗಿನ ಮೊತ್ತಕ್ಕೆ ಠೇವಣಿದಾರರು ಆತಂಕಪಡಬೇಕಾಗಿಲ್ಲ. ಅದಕ್ಕಿಂತ ಹೆಚ್ಚಿನ ಮೊತ್ತಕ್ಕೆ ಪೂರ್ಣ ಪ್ರಮಾಣದ ಖಾತರಿ ಇಲ್ಲ. ಆದರೆ, ಸರ್ಕಾರಿ ಬಾಂಡ್‌ಗಳಲ್ಲಿನ ಹೂಡಿಕೆಯ ಬಗ್ಗೆ ಸಣ್ಣ ಹೂಡಿಕೆದಾರರಿಗೆ ಆತಂಕ ಇರಬೇಕಾಗಿಲ್ಲ. ಬಾಂಡ್‌ಗಳಲ್ಲಿನ ಹೂಡಿಕೆಗೆ ಸರ್ಕಾರದ ಸಾರ್ವಭೌಮ ಖಾತರಿ ಇದ್ದೇ ಇರುತ್ತದೆ. ನಿಶ್ಚಿತ ಠೇವಣಿಗಿಂತ ತುಸು ಹೆಚ್ಚಿನ ಲಾಭವನ್ನು ತಂದುಕೊಡುವ ಶಕ್ತಿ ಇರುವ ಬಾಂಡ್‌ಗಳು, ಭದ್ರತೆಯ ವಿಚಾರದಲ್ಲಿ ಮೊದಲ ಸ್ಥಾನದಲ್ಲಿ ನಿಲ್ಲುತ್ತವೆ. ಹೀಗಾಗಿ, ಹಣಕಾಸಿನ ವಿಚಾರದಲ್ಲಿ ರಿಸ್ಕ್ ಬೇಡವೇ ಬೇಡ ಎನ್ನುವ ಸಣ್ಣ ಹೂಡಿಕೆದಾರರಿಗೆ ಇವು ಬಹಳ ಹತ್ತಿರವಾಗಬಹುದು. ಷೇರುಗಳ ಮೇಲಿನ ಹೂಡಿಕೆಯ ಮೂಲಕ ಅತಿಹೆಚ್ಚಿನ ಲಾಭ ಪಡೆದುಕೊಳ್ಳುವ ಅವಕಾಶ ಇದ್ದರೂ, ಷೇರು ಮಾರುಕಟ್ಟೆಯ ಏರುಗತಿ ಎಷ್ಟು ದಿನ ಎಂಬುದನ್ನು ಖಚಿತವಾಗಿ ಹೇಳಲು ಯಾರಿಂದಲೂ ಆಗದು. ನಕಾರಾತ್ಮಕವಾದ ತೀರಾ ಸಣ್ಣ ಸುದ್ದಿ ಕೂಡ ಷೇರು ಸೂಚ್ಯಂಕಗಳನ್ನು ಇಳಿಕೆಯ ಹಾದಿಗೆ ಹೊರಳಿಸಬಲ್ಲದು. ಭಾರತದಲ್ಲಿ ಈಗ ಹಣಕಾಸು ತಂತ್ರಜ್ಞಾನ ವಲಯದ ಹತ್ತುಹಲವು ಕಂಪನಿಗಳು ಷೇರುಗಳಲ್ಲಿನ ಹೂಡಿಕೆಯನ್ನು ತೀರಾ ಸುಲಭಗೊಳಿಸಿದ್ದರೂ, ಅಲ್ಲಿನ ಹೂಡಿಕೆಯು 'ಭದ್ರ' ಎಂದು ಹೇಳಲಾಗದು. ಹಾಗಾಗಿ, ಸಣ್ಣ ಹೂಡಿಕೆದಾರರಿಗೆ ಈಗ ಹೊಸದಾಗಿ ಸಿಕ್ಕಿರುವ, ಗರಿಷ್ಠ ಮಟ್ಟದ ಭದ್ರತೆ ಇರುವ ಈ ಅವಕಾಶವು ಅವರ ಉಳಿತಾಯದ ಒಂದು ಪಾಲನ್ನು ತನ್ನತ್ತ ಆಕರ್ಷಿಸುವ ಶಕ್ತಿಯನ್ನು ಹೊಂದಿದೆ.

ದೇಶದಲ್ಲಿ ನಲವತ್ತಕ್ಕೂ ಹೆಚ್ಚು ಮ್ಯೂಚುವಲ್ ಫಂಡ್ ಕಂಪನಿಗಳು ಇವೆ. ಅವುಗಳ ಮೂಲಕ ಷೇರುಗಳಲ್ಲಿ ಹೂಡಿಕೆ ಮಾಡಿದವರು ಹಾಗೂ ನೇರವಾಗಿ ಷೇರುಗಳಲ್ಲಿ ಹೂಡಿಕೆ ಮಾಡಿದವರ ಪ್ರಮಾಣವು ಈಗಲೂ ಕಡಿಮೆ ಮಟ್ಟದಲ್ಲಿಯೇ ಇದೆ. ಇದಕ್ಕೆ ಒಂದು ಕಾರಣ ಈ ಹೂಡಿಕೆಗಳ ಬಗ್ಗೆ ಇರುವ ಅರಿವಿನ ಕೊರತೆ. ಇದೇ ಮಾತು ಸರ್ಕಾರದ ಬಾಂಡ್‌ಗಳ ವಿಚಾರದಲ್ಲಿಯೂ ಅನ್ವಯ ಆಗುತ್ತದೆ. ಬಾಂಡ್‌ನಲ್ಲಿನ ಹೂಡಿಕೆ ಬಗ್ಗೆ ತಿಳಿದಿರುವವರ ಪ್ರಮಾಣ ಕಡಿಮೆ ಎಂದು ಹಿಂದೆ ನಡೆದ ಸಮೀಕ್ಷೆಯೊಂದು ಕಂಡುಕೊಂಡಿತ್ತು. ಈಗ ಇಲ್ಲಿ ಹೂಡಿಕೆ ಮಾಡುವುದರಲ್ಲಿ ಇರುವ ಪ್ರಯೋಜನಗಳ ಬಗ್ಗೆ ಆರ್‌ಬಿಐ ಹಾಗೂ ಕೇಂದ್ರ ಸರ್ಕಾರವು ವ್ಯಾಪಕ ಪ್ರಚಾರ ಆಂದೋಲನವನ್ನು ಬೇರೆ ಬೇರೆ ಭಾಷೆಗಳಲ್ಲಿ ಹಮ್ಮಿಕೊಂಡರೆ, ಜನರಿಗೂ ಸರ್ಕಾರಕ್ಕೂ ಹೆಚ್ಚು ಪ್ರಯೋಜನ ಆದೀತು. ಸಣ್ಣ ಹೂಡಿಕೆದಾರರು ಬಾಂಡ್‌ಗಳ ಕಡೆ ಮುಖ ಮಾಡಿದರೆ, ಬ್ಯಾಂಕ್‌ಗಳಲ್ಲಿನ ನಿಶ್ಚಿತ ಠೇವಣಿ ಪ್ರಮಾಣ ಕಡಿಮೆ ಆಗುವುದೇ, ಆಗ ಬ್ಯಾಂಕ್‌ಗಳ ಸಾಲ ನೀಡಿಕೆ ಸಾಮರ್ಥ್ಯ ಕುಂದುವುದೇ ಎಂಬ ಬಗ್ಗೆಯೂ ಗಮನ ಇರಿಸುವುದು ಸೂಕ್ತ.

ದಿನದ ಟ್ವೀಟ್

ನಾವು ಗೆಲ್ಲಲೇಬೇಕಿದೆ

ಹವಾಮಾನ ಬದಲಾವಣೆ ನಿಗ್ರಹಕ್ಕೆ ಸಂಬಂಧಿಸಿದ ಹೋರಾಟವನ್ನು ಮುನ್ನಡೆಸುತ್ತಿರುವ ಯುವಜನ, ಸ್ಥಳೀಯ ಸಮುದಾಯಗಳು, ಮಹಿಳೆಯರು ಸೇರಿದಂತೆ ಎಲ್ಲರಿಗೂ ನನ್ನದೊಂದು ಸಂದೇಶ ಏನೆಂದರೆ: ನೀವು ನಿರಾಸೆಗೊಳ್ಳಬಹುದೆಂದು ನನಗೆ ತಿಳಿದಿದೆ. ಆದರೆ, ನಾವೆಲ್ಲರೂ ನಮ್ಮ ಬದುಕಿಗಾಗಿ ಹೋರಾಟ ನಡೆಸುತ್ತಿದ್ದೇವೆ ಮತ್ತು ಈ ಹೋರಾಟದಲ್ಲಿ ನಾವು ಗೆಲ್ಲಲೇಬೇಕಿದೆ. ಎಂದಿಗೂ ಬಿಟ್ಟುಕೊಡದಿರಿ. ಹಿಂದಕ್ಕೆ ಸರಿಯದಿರಿ. ಮುನ್ನಡೆಯುತ್ತಲೇ ಇರಿ. ನಾನು ನಿಮ್ಮೊಂದಿಗೆ ಇದ್ದೇನೆ.

ಆ್ಯಂಟೊನಿಯೊ ಗುಟೆರಸ್, ವಿಶ್ವಸಂಸ್ಥೆ ಮಹಾಪ್ರಧಾನ ಕಾರ್ಯದರ್ಶಿ

ಕಿಡಿನುಡಿ

ಬುದ್ಧ ಯಾವಾಗಲೂ ಅಹಿಂಸೆಯನ್ನು ಪ್ರತಿಪಾದಿಸುತ್ತಿದ್ದರು. ಅವರ ಸಂದೇಶವೆಂದರೆ ಶಾಂತಿ ಮತ್ತು ಸಹೋದರತ್ವ. ಅಂಥವರ ಪ್ರತಿಮೆಯನ್ನು ಅಫ್ಗಾನಿಸ್ತಾನದಲ್ಲಿ ತಾಲಿಬಾನೀಯರು ನಾಶ ಪಡಿಸಿರುವುದು, ಅವರ ಸಂದೇಶವು ದೂರದವರೆಗೆ ಹರಡುವುದನ್ನು ತಡೆಯುವ ಪಿತೂರಿಯ ಭಾಗವೇ ಆಗಿದೆ.



ಯೋಗಿ ಆದಿತ್ಯನಾಥ, ಉತ್ತರಪ್ರದೇಶ ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶುಕ್ರವಾರ, 15-11-1996

• ವೈದ್ಯಕೀಯ ಶಿಕ್ಷಣ: ಷರತ್ತಿನ ಮೇಲೆ ಪ್ರವೇಶಕ್ಕೆ ಕೋರ್ಟ್ ಅನುಮತಿ

ಬೆಂಗಳೂರು, ನ. 14– ರಾಜ್ಯದ ವೈದ್ಯಕೀಯ ಮತ್ತು ದಂತವೈದ್ಯ ಕಾಲೇಜುಗಳಿಗೆ, ಅಭ್ಯರ್ಥಿಗಳಿಂದ ಅವಶ್ಯ ಬಿದ್ದಲ್ಲಿ ತಮ್ಮನ್ನು ಹೊರಕಳುಹಿಸಬಹುದೆಂಬ ಪ್ರಮಾಣ ಅಥವಾ ಒಪ್ಪಿಗೆ ಪತ್ರ ಪಡೆದು ಷರತ್ತಿನ ಮೇಲೆ ಪ್ರವೇಶ ನೀಡಬಹುದು ಎಂದು ಹೈಕೋರ್ಟ್ ಇಂದು ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ವಿಭಾಗಕ್ಕೆ ಅನುಮತಿ ನೀಡಿತು.

ಪ್ರವೇಶ ಸಂಖ್ಯೆ ನಿಗದಿಗಿಂತ ಹೆಚ್ಚು ಇದ್ದಲ್ಲಿ ಅಷ್ಟು ಮಂದಿಯನ್ನು ಹೊರಕಳುಹಿಸಬೇಕು, ಅದಕ್ಕೆ ಪ್ರವೇಶ ಪಡೆದಿರುವವರ ಒಪ್ಪಿಗೆ ಇರಬೇಕು ಎಂದು ಸ್ಪಷ್ಟಪಡಿಸಿತು.

• ಸೌಂದರ್ಯ ಸ್ಪರ್ಧೆ ವಿರೋಧಿಗಳಿಗೆ ಕಾರಂತ ತರಾಟೆ

ಬೆಂಗಳೂರು, ನ. 14– 'ವಿಶ್ವ ಸುಂದರಿ ಸ್ಪರ್ಧೆ ದೊಡ್ಡ ವಿಷಯವೇನಲ್ಲ. ಚಿಂತೆ ಮಾಡಬೇಕಾದ ಪ್ರಮುಖ ವಿಚಾರಗಳು ಬಹಳಷ್ಟಿವೆ' ಎಂದು ಡಾ. ಶಿವರಾಮ ಕಾರಂತ ಹೇಳಿದರು.

'ನಗರದಲ್ಲಿ ವಿಶ್ವ ಸುಂದರಿ ಸ್ಪರ್ಧೆ ನಡೆಸುತ್ತಿರುವುದು ಘೋರ ಕೆಲಸ ಅನ್ನಿಸುವುದಿಲ್ಲ. ನಮ್ಮ ಊರಲ್ಲಿ ಕ್ಯಾಬರೆ ನಡೆಯುತ್ತಿಲ್ಲವೆ? ಯಾರು ಏನು ಮಾಡಿದ್ದಾರೆ?' ಎಂದರು.

50 ವರ್ಷಗಳ ಹಿಂದೆ

ಸೋಮವಾರ, 15-11-1971

• ಭಾರತ– ಚೀನಾ ಮೈತ್ರಿ ವೃದ್ಧಿ ಹಾರೈಸಿ ಇಂದಿರಾಗೆ ಚೌ ಸಂದೇಶ

ನವದೆಹಲಿ, ನ. 14– ಭಾರತ ಮತ್ತು ಚೀನಾ ಜನರ ನಡುವೆ ಮೈತ್ರಿ 'ನಿತ್ಯವೂ ಬೆಳೆದು ಅಭಿವೃದ್ಧಿ'ಯಾಗುವುದು ಎಂಬ ಆಶಯವನ್ನು ವ್ಯಕ್ತಪಡಿಸಿ ಚೀನೀ ಪ್ರಧಾನಿ ಚೌ ಎನ್–ಲೈ ಅವರು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರಿಗೆ ಸಂದೇಶವೊಂದನ್ನು ಕಳುಹಿಸಿದ್ದಾರೆ.

ನವೆಂಬರ್ 13ನೇ ತಾರೀಖಿನ ಈ ಸಂದೇಶ ಇಂದು ಇಲ್ಲಿಗೆ ತಲುಪಿದೆ. ವಿಶ್ವ ಸಂಸ್ಥೆಗೆ ಚೀನಾ ಪ್ರವೇಶಿಸಿದ್ದಕ್ಕಾಗಿ ಭಾರತದ ಅಭಿನಂದನೆಗಳನ್ನು ತಿಳಿಸುವ ಶ್ರೀಮತಿ ಗಾಂಧಿ ಅವರ ತಂತಿ ಸಂದೇಶಕ್ಕೆ ಈ ಸಂದೇಶ ಉತ್ತರವಾಗಿದೆ.

ಚೌ ಎನ್–ಲೈ ಅವರಿಗೆ ಶ್ರೀಮತಿ ಗಾಂಧಿ ಅವರು ವಿಯನ್ನಾದಿಂದ ಈ ತಂತಿ ಸಂದೇಶವನ್ನು ಕಳುಹಿಸಿದ್ದರು.

ಸಮಾಜದಲ್ಲಿ ಆದರ್ಶಗಳು ಇಲ್ಲದೆ ಇದ್ದಾಗ ನೈತಿಕತೆಯ ಮಾನದಂಡವೂ ಇರುವುದಿಲ್ಲ

ಆದರ್ಶರಹಿತ ಸಮಾಜ: ನಾಯಕತ್ವದ ಸವಾಲು

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ತಾನು ಈ ರೀತಿ ಇದ್ದರೆ ಜನ ತನ್ನನ್ನು ಸ್ವೀಕರಿಸುತ್ತಾರೆ ಎಂಬ ಕಲ್ಪನೆ ಒಬ್ಬ ರಾಜಕೀಯ ನಾಯಕನಿಗಿದ್ದರೆ, ತನ್ನ ವ್ಯಕ್ತಿತ್ವವನ್ನು ಆತ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಇದಾಗಬೇಕಾದರೆ, 'ನೀವು ಈ ರೀತಿ ಇರಬೇಕೆಂದು ನಾವು ಭಾವಿಸುತ್ತೇವೆ' ಎಂಬ ಸಂದೇಶ ಸಾಮಾಜಿಕ ವ್ಯವಸ್ಥೆಯಿಂದ ರಾಜಕೀಯ ವ್ಯವಸ್ಥೆಗೆ ಹೋಗುತ್ತಿರಬೇಕಾಗುತ್ತದೆ. ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಆಗುತ್ತಿರುವುದು ಇದಲ್ಲ. 'ನೀವು ಹೇಗಿದ್ದರೂ ಸರಿಯೇ; ನಮಗೆ ಇಷ್ಟವಾದರೆ ನಿಮ್ಮನ್ನು ನಾವು ಸಮರ್ಥಿಸಿಕೊಳ್ಳುತ್ತೇವೆ' ಎಂಬ ಸಂದೇಶ ಹೋಗುತ್ತಿದೆ.

ಒಬ್ಬ ವ್ಯಕ್ತಿ ಸಂಪೂರ್ಣ ಭ್ರಷ್ಟಾಚಾರಮುಕ್ತ ಎಂದೊ, ನೀತಿವಂತನೆಂದೊ, ಪರಿಣಾಮಕಾರಿ ಆಡಳಿತಗಾರ ಎಂದೊ, ಜನರ ಸಹಾಯಕ್ಕೆ ತುರ್ತಾಗಿ ಬರುವವನೆಂದೊ ಜನರಿಗೆ ಮೆಚ್ಚುಗೆಯಾಗುವುದಿಲ್ಲ. ವಿಮರ್ಶೆ ಏನೇ ಇರಬಹುದು; ನೈತಿಕತೆ ಮತ್ತು ಭ್ರಷ್ಟಾಚಾರ ರಹಿತತೆಯಲ್ಲಿ ಗಾಂಧೀಜಿಗೆ ಸರಿಸಮಾನರು ಇಲ್ಲ. ಆದರೆ ಅತಿ ಹೆಚ್ಚು ತೆಗಳಿಕೆ ಗಾಂಧಿಯ ವಿರುದ್ಧವೇ ಇದೆ. ಸಂಪತ್ತನ್ನು ದೋಚಿದ ಪ್ರಕರಣದಲ್ಲಿ ನ್ಯಾಯಾಲಯದಿಂದ ಶಿಕ್ಷೆ ಆದವರ ಬಗ್ಗೆಯೂ ಗಾಂಧೀಜಿಯ ಬಗೆಗಿರುವಷ್ಟು ತೆಗಳಿಕೆ ಇಲ್ಲ. ಬೇಕಾದರೆ, 'ಅದು ಅವನ ತಾಕತ್ತು' ಎಂಬ ಸಮರ್ಥನೆಗಳೂ ಬರುತ್ತವೆ. ಸಮಾಜ ಯೋಗ್ಯತೆಯನ್ನೇ ಅನರ್ಹತೆಯಾಗಿ ಪರಿಗಣಿಸುತ್ತಾ ಹೋದರೆ ಯೋಗ್ಯ ನಾಯಕರು ಬರುವುದು ಹೇಗೆ? ಒಳ್ಳೆಯ ನಾಯಕತ್ವ ಕೊಡಲು ಬಯಸಿದರೂ ಒಳ್ಳೆಯ ನಾಯಕನಾಗಿ ಉಳಿಯಲು ಸಾಧ್ಯವಿಲ್ಲ.

ಸಮಾಜಸೇವಕರು ರಾಜಕಾರಣಕ್ಕಿಂತ ಹೆಚ್ಚು ಪ್ರಭಾವ ಬೀರುವವರಾಗಿರುತ್ತಾರೆ. ಏಕೆಂದರೆ ಅವರ ಸಾಧನೆ ಅಧಿಕಾರವಿಲ್ಲದೆಯೇ ಮಾಡಿದುದಾಗಿರುತ್ತದೆ. ಗಳಿಸಿದ ಆದಾಯವನ್ನು ಇನ್ನೊಬ್ಬರಿಗಾಗಿ ವಿನಿಯೋಗಿಸುವುದು ಸಮಾಜಸೇವೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ, ಈ ಹಣವನ್ನು ಯಾವ ಮೂಲದಿಂದ ಹೇಗೆ ಗಳಿಸಿದರು ಎಂಬುದನ್ನು ಪರಿಗಣನೆಗೇ ತೆಗೆದುಕೊಳ್ಳದೆ ಹಣ ವಿನಿಯೋಗಿಸಿದವನನ್ನು ಸಮಾಜಸೇವಕ ಎಂದು ಗುರುತಿಸುವ ವ್ಯವಸ್ಥೆಯು, 'ಯಾವ ವಿಧಾನದಲ್ಲಿ ಬೇಕಾದರೂ' ಹಣ ಗಳಿಸಲು ಉತ್ತೇಜಕವಾಗಿದೆ ಮತ್ತು ಅನೀತಿವಂತನು ಎಲ್ಲರಿಂದಲೂ ಆದರಣೀಯನಾಗಲು 'ದಾನಿ'ಯಾದರೆ ಸಾಕು ಎಂಬ ಚಿಂತನೆಯನ್ನು ಹುಟ್ಟಿಸುತ್ತದೆ.

ಕಷ್ಟದಲ್ಲಿರುವವರಿಗೆ ಹಣ ಅಥವಾ ಹಣದಿಂದ ಲಭ್ಯವಾಗುವ ಸಹಾಯ ಒದಗಿಸುವುದು ಮಾತ್ರವೇ ಸಮಾಜಸೇವೆಯಲ್ಲ. ಸಮಾಜಕ್ಕೆ ವೈಚಾರಿಕ ಮಾರ್ಗದರ್ಶನ ನೀಡುವುದು, ಸಮಸ್ಯೆ ಬಗೆಹರಿಸಲು ಮಾರ್ಗದರ್ಶನ ಮಾಡುವುದು, ತಾನು ಭ್ರಷ್ಟನಾಗದೆ ಉಳಿಯುವುದು ಇವೆಲ್ಲವೂ ಸಮಾಜಸೇವೆಯೇ. ಆದರೆ ಹಾಗೆಂದು ಪರಿಗಣಿಸಲು ಜನ ತಯಾರಿಲ್ಲ, ಹಣದ ರೂಪದ ಲಾಭದ ಒದಗಣೆ ಮಾತ್ರ ಸಮಾಜಸೇವೆ.

ಇದಲ್ಲದೆ ಸಮಾಜಸೇವೆಗೆ ಇನ್ನೊಂದು ಒರಟಾದ ಮುಖವೂ ಇದೆ. 'ಅವನು ಜನರಿಗಾಗಿ ಏನು ಮಾಡಿದ್ದಾನೆ?' ಎಂದು ಕೇಳುವ ಪ್ರಶ್ನೆಯಲ್ಲಿ ಅವನ ಹಣವನ್ನು ಕೊಡಬೇಕಾದದ್ದು ಅವನ ಕರ್ತವ್ಯ, ಪಡೆಯುವುದು ಜನರ ಹಕ್ಕು ಎನ್ನುವ ಭಾವವೂ ಇದೆ. ಒಬ್ಬ ರಾಜಕಾರಣಿಯ ವಿಚಾರದಲ್ಲಿ ಈ ಪ್ರಶ್ನೆ ಬಂದರೆ, ಸಾರ್ವಜನಿಕ ಉತ್ತರದಾಯಿತ್ವದ ಹಿನ್ನೆಲೆಯಲ್ಲಿ ಸಮರ್ಥನೆ ಇದೆ. ಕೋಟ್ಯಂತರ ಆದಾಯ ಗಳಿಸುವ ಉದ್ಯಮಿಯ ಬಗ್ಗೆ ಈ ಪ್ರಶ್ನೆ ಬಂದರೆ, ಸಾರ್ವಜನಿಕ ನೈತಿಕತೆಯ ಹಿನ್ನೆಲೆಯಲ್ಲಿ ಸರಿ ಇದೆ. ಇದು ಹಾಗಲ್ಲ. ವರ್ಷಕ್ಕೆ ಎರಡು ಲಕ್ಷ ಆದಾಯ ಇರುವವನ ಬಗ್ಗೆ ವರ್ಷಕ್ಕೆ ಹತ್ತು ಲಕ್ಷ ಆದಾಯ ಇರುವವನೂ ಈ ಪ್ರಶ್ನೆಯನ್ನು ಕೇಳಬಲ್ಲ. ಅಂದರೆ ತನ್ನ ಸಂಪಾದನೆಯನ್ನು ಇತರರಿಗಾಗಿ ಕೊಡದೆ ಇರುವವನ ನಿರಾಕರಣೆ ಮತ್ತು ಅವಹೇಳನದ ಪ್ರವೃತ್ತಿ ಇಲ್ಲಿರುವುದು.

ಆದಾಯ ಗಳಿಸಿದವನು ನ್ಯಾಯಬದ್ಧವಾದ ತೆರಿಗೆಯನ್ನು ನೀಡಿದ ಮೇಲೆ ಇಲ್ಲದವರ ಅಭ್ಯುದಯ ಸರ್ಕಾರದ ಜವಾಬ್ದಾರಿ. ತೆರಿಗೆಯನ್ನೂ ಕೊಡಬೇಕು, ನಂತರ ಉಳಿಸಿಕೊಂಡ ಆದಾಯವನ್ನೂ ಕೊಡಬೇಕು, ಕೊಡದವನು ಒಳ್ಳೆಯವನಲ್ಲ ಎನ್ನುವ ರೀತಿಯ ಜನಾಭಿಪ್ರಾಯಗಳು ಸಾಮಾಜಿಕ ನೈತಿಕತೆಯಲ್ಲ. ಸಾಮಾಜಿಕ ನೈತಿಕತೆ ಕಳೆದುಹೋದಾಗ ದಾನಿಯು ಕೊಟ್ಟದ್ದನ್ನು ಸಮರ್ಪಕವಾಗಿ ಬಳಸಿಕೊಂಡು ಮತ್ತೊಮ್ಮೆ ಕೇಳಬೇಕಾಗಿಲ್ಲದ ಸ್ಥಿತಿಯನ್ನು ತಲುಪಬೇಕಾದ್ದು ತನ್ನ ಜವಾಬ್ದಾರಿ ಎಂಬ ಎಚ್ಚರ ಇರುವುದಿಲ್ಲ.

ಇಂದು ಜನಾಭಿಪ್ರಾಯಕ್ಕೆ ಬಹುಮಟ್ಟಿಗೆ ಇರುವ ಆಧಾರವು ಕ್ರಿಯೆಯನ್ನು ಮಾಡಿದವನು ತನ್ನವನೊ, ತನಗಾಗದವನೊ ಎಂಬುದು ಮಾತ್ರ. ತನಗೆ ಬೇಕಾದವನು ಎಂತಹ ತಪ್ಪನ್ನೇ ಮಾಡಲಿ ಅದು ತಪ್ಪು ಎಂದು ಗೊತ್ತಾದ ಮೇಲೂ ಅದೇ ಸರಿ ಎಂದು ಸಮರ್ಥಿಸಿಕೊಳ್ಳುವುದು. ತನಗೆ ಆಗದವನಾದರೆ ಏನು ಮಾಡಿದರೂ ಅದನ್ನು ತಪ್ಪೆಂದೇ ವ್ಯಾಖ್ಯಾನಿಸುವುದು. ವಿದ್ಯಾವಂತರ ಸಂಖ್ಯೆ ಹೆಚ್ಚಿದಷ್ಟೂ ಈ ಪ್ರವೃತ್ತಿ ಹೆಚ್ಚುತ್ತಾ ಹೋಗುವುದು ಸಮಾಜದ ಸಮಸ್ಯೆಯಾಗಿದೆ. ನಿಜವಾಗಿ ಸಮಸ್ಯೆ ಇರುವುದು ರಾಜಕೀಯದಲ್ಲೂ ಅಲ್ಲ, ಆರ್ಥಿಕತೆಯಲ್ಲೂ ಅಲ್ಲ, ಸಾಂಸ್ಕೃತಿಕ ಕ್ಷೇತ್ರದಲ್ಲೂ ಅಲ್ಲ. ಸಮಸ್ಯೆ ಇರುವುದು ಜನರಲ್ಲೇ. ಹೀಗಾದಾಗ ಅದು ಎಲ್ಲ ಕ್ಷೇತ್ರಗಳಲ್ಲೂ ಬೇರೆ ಬೇರೆ ರೂಪದಲ್ಲಿ ಪ್ರಕಟವಾಗುತ್ತಾ ಹೋಗುತ್ತದೆ.

ಸಮಾಜದಲ್ಲಿ ಆದರ್ಶಗಳು ಇಲ್ಲದೆ ಇದ್ದಾಗ ನೈತಿಕತೆಯ ಮಾನದಂಡವೂ ಇರುವುದಿಲ್ಲ. ಆಗ ಅನೈತಿಕತೆಯನ್ನು ಸ್ವೀಕರಿಸುವ ಮನಃಸ್ಥಿತಿ ಬೆಳೆಯುತ್ತದೆ. ಅಂತಹ ಸಮಾಜದಲ್ಲಿ ಏರು ದನಿಯೊಂದನ್ನು ಬಿಟ್ಟರೆ ಬೇರೆ ಯಾವುದೇ ಮೌಲ್ಯಗಳು ಇರುವುದಿಲ್ಲ. ತನಗೆ ಇಂತಹ ರಾಜಕೀಯ ಬೇಕು, ತನಗೆ ಇಂತಹ ಪತ್ರಿಕೆ ಬೇಕು, ತನಗೆ ಇಂತಹ ಆರ್ಥಿಕತೆ ಬೇಕು ಎಂಬ ಸ್ಪಷ್ಟತೆ ಇಲ್ಲದ ಸಮಾಜದಲ್ಲಿ ರಾಜಕೀಯ ಮಾಡಲಿಕ್ಕೇ ಸಾಧ್ಯವಿಲ್ಲ. ಒಳ್ಳೆಯ ಪತ್ರಿಕೆಯನ್ನು ನಡೆಸಲು ಸಾಧ್ಯವಿಲ್ಲ. ಸಮರ್ಥ ಆರ್ಥಿಕತೆಯನ್ನು ರೂಪಿಸಲು ಸಾಧ್ಯವಿಲ್ಲ.



ಆತ್ಮಸಾಕ್ಷಿ, ಯೋಚನಾ ಕ್ರಮ ಇಲ್ಲದ ಈ ರೀತಿಯ ವರ್ತನೆಗಳು ಒಂದು ವಿಫಲ ತಲೆಮಾರಿನ ಸಹಜ ಲಕ್ಷಣಗಳಾಗಿರುತ್ತವೆ. ಇವತ್ತು ಅತಿ ಹೆಚ್ಚು ಟೀಕೆಗೆ ಒಳಗಾಗುತ್ತಿರುವುದು ಸ್ವಾತಂತ್ರ್ಯ ಹೋರಾಟದ ಕೊನೆಯ ಹಂತ ಮತ್ತು ಸ್ವಾತಂತ್ರ್ಯೋತ್ತರದ ಮೊದಲ ಹಂತದ ನಡೆಗಳು. ಆದರೆ ಅದು ಅತ್ಯಂತ ಯಶಸ್ವೀ ತಲೆಮಾರು. ಅಪೇಕ್ಷಿತ ರೀತಿಯಲ್ಲೆ ಅಲ್ಲದಿದ್ದರೂ ಸ್ವಾತಂತ್ರ್ಯವನ್ನು ಸಾಧಿಸಿದ ಮತ್ತು ಏನೂ ಇಲ್ಲದ ದೇಶವನ್ನು ವ್ಯವಸ್ಥಿತ ದೇಶವಾಗಿ ರೂಪಿಸಿದ ತಲೆಮಾರಿನ ಮೇಲೆ ವ್ಯವಸ್ಥಿತವಾಗಿ ಸಂಘಟಿಸಲ್ಪಟ್ಟ ದೇಶವನ್ನು ನೆಟ್ಟಗೆ ನಡೆಸಲು ಗೊತ್ತಿಲ್ಲದ ವಿಫಲ ತಲೆಮಾರು ಟೀಕೆ ಮಾಡುವುದೇ ಟೀಕಿಸುವ ತಲೆಮಾರಿನ ಅನೈತಿಕತೆಯ ಸಾಕ್ಷಿಯೂ ಆಗಿದೆ.

ಈ ಟೀಕೆಗಳ ಇನ್ನೊಂದು ಸ್ವರೂಪ ಸಮುದಾಯ-ಕೇಂದ್ರಿತ ವಾಗ್ದಾಳಿಗಳು. ಇಂಥಾದ್ದು ತಪ್ಪು ಎನ್ನುವವನಿಗೆ ಇಂಥಾದ್ದು ಸರಿ ಎಂದು ಹೇಳುವ ಬದ್ಧತೆ ಇರಬೇಕು ಎನ್ನುವುದು ಕನಿಷ್ಠ ಪ್ರಾಮಾಣಿಕತೆಯ ನಿರೀಕ್ಷೆಯಾಗಿದೆ. ಸಮುದಾಯಕೇಂದ್ರಿತ ನಿಂದನೆಗಳಿವೆಯೇ ಹೊರತು ನಿಂದನೆಗೊಳಗಾಗುತ್ತಿರುವ ಸಮುದಾಯ ಏನನ್ನು ಮಾಡಬೇಕು ಎನ್ನುವುದು ಇಲ್ಲ. ಅಂದರೆ ಟೀಕೆ ಮತ್ತು ನಿರಾಕರಣೆಯ ಧಾವಂತ ಇರುವುದೇ ಹೊರತು ಸುಧಾರಣೆಯ ಹಂಬಲವಿಲ್ಲ.

ಇಂತಹ ಸಮಾಜದಲ್ಲಿ ಯಾವುದನ್ನೇ ಕಟ್ಟಬೇಕಾದರೂ ಮೊದಲು ಸಮಾಜದಲ್ಲಿ ಆದರ್ಶಗಳನ್ನು ಹುಟ್ಟು ಹಾಕಬೇಕು. ಆಗ ಸರಿ-ತಪ್ಪುಗಳ ಮಾನದಂಡ ರೂಪುಗೊಂಡು ನೈತಿಕತೆಯ ಎಚ್ಚರವನ್ನು ತರುತ್ತದೆ. ಇದನ್ನು ಸಾಧಿಸುವುದು ಹೇಗೆ? ಸಂಯಮದಿಂದ ಯೋಚಿಸಬಲ್ಲವರು ಮುಂದಡಿ ಇಡಬೇಕು. ಯಾವುದೇ ಕಾಲದಲ್ಲೂ ವ್ಯಕ್ತಿತ್ವದ ನೈತಿಕತೆಗೆ ಇನ್ನೊಬ್ಬರನ್ನು ಪ್ರಭಾವಿಸುವ ಶಕ್ತಿ ಇರುತ್ತದೆ. ನೈತಿಕತೆಯ ಎಚ್ಚರವಿಲ್ಲದ ಸಮಾಜಕ್ಕೆ ಹಣದ ಮದವಿರುತ್ತದೆ. ಹಣದಿಂದ ಏನನ್ನು, ಯಾರನ್ನು ಬೇಕಾದರೂ ಮಣಿಸಬಲ್ಲೆ ಎಂಬ ದುರಹಂಕಾರವಿರುತ್ತದೆ. ಹಣದ ಶಕ್ತಿಗೆ ಮಣಿಯದವರು ಮುಂದಕ್ಕೆ ಬಂದಾಗ ಈ ದುರಹಂಕಾರದ ಬಲೂನು ಒಡೆಯುತ್ತದೆ. ಆ ರೀತಿಯ ವ್ಯಕ್ತಿಗಳು ನಿಧಾನವಾಗಿ ತಂಡಗಳಾಗಿ ರೂಪುಗೊಂಡಾಗ ಅದೊಂದು ಚಳವಳಿಯ ರೂಪವನ್ನು ಪಡೆಯುತ್ತದೆ. ರಾಜಕಾರಣವು ಜನರ 'ಮತ'ದ ಅವಲಂಬಿಯಾಗಿರುತ್ತದೆ. ಆದರೆ ಚಳವಳಿಯು ಯಾರ ಅವಲಂಬಿಯೂ ಅಲ್ಲ.

ಚಳವಳಿ ಎಂದರೆ ಬೀದಿಯಲ್ಲಿ ನಿಂತು ಮಾಡುವ ಹೋರಾಟವೇ ಆಗಬೇಕಾಗಿಲ್ಲ. ದುರಾಗ್ರಹಗಳಿಗೆ ಮಣಿಯುವುದಿಲ್ಲ ಎನ್ನುವ ದೃಢವಾದ ಧ್ವನಿಯ ಸಂದೇಶವನ್ನು ರವಾನಿಸುವುದೂ ಚಳವಳಿಯೇ. ದೃಢವಾದ ಧ್ವನಿಯು ಏರುದನಿಯ ಆಕ್ರಮಣಕಾರತ್ವವನ್ನು ಎದುರಿಸಬಲ್ಲುದು. ಆಗ ಸಮಾಜಕ್ಕೆ ಒಂದು ಆದರ್ಶವನ್ನು ಒದಗಿಸಲು ಸಾಧ್ಯವಾಗುತ್ತದೆ. ಆದರ್ಶವು ತನಗೆ ಏನು ಬೇಕು ಎಂಬ ಅರಿವನ್ನು ಹುಟ್ಟಿಸಲು ಸಾಧ್ಯವಾಗುತ್ತದೆ. ಅದರಿಂದ ಉಂಟಾಗುವ ಪರಿಣಾಮವು ಎಲ್ಲ ಕ್ಷೇತ್ರಗಳನ್ನೂ ಹಳಿಗೆ ತರುತ್ತದೆ.

ಚುರುಮುರಿ

ಕಂಗನಾ ಅಲ್ಲ...!

• ಸುಮಂಗಲಾ

'ಯೋಗಿರಾಜ್ಯ ಅಂದ್ರ ರಾಮರಾಜ್ಯ' ಅಂತ ಕಂಗನಕ್ಕ ಹಾಡಿ ಹೊಗಳಿದಾಗೇ 'ಆ ತಲೈವಿಗೆ ಪದ್ಮ ಪ್ರಶಸ್ತಿ ಸಿಗದಿದ್ರೂ, ತಲೈವಿ ಪಾರ್ಟು ಮಾಡಿದ ಈಕಿಗಿ ಪದ್ಮ ಒಲೀತೈತೆ' ಅಂತ ಬೆಕ್ಕಣ್ಣ ಕಣಿ ಹೇಳಿತ್ತು. ಪದ್ಮ ಪ್ರಶಸ್ತಿಗಳು ಪ್ರಕಟವಾದೊಡನೆ, 'ನಾ ಹೇಳಿದಂಗೇ ಕಂಗನಕ್ಕಂಗೆ ಪದ್ಮಶ್ರೀ ಬಂದೈತಿ' ಎಂದು ಎರಡು ದಿನ ಖುಷಿಯಿಂದ ಹಾರಾಡಿತು.

ನಿನ್ನೆ ಇದ್ದಕ್ಕಿದ್ದಂತೆ 'ನೀ ನನಗ ಇತಿಹಾಸದ ಪಾಠ ಹೇಳಿಕೊಡಬ್ಯಾಡ, ಏನರ ಸುಳ್ಳು ಹೇಳಿಕೊಡ್ತಿ' ಮುಖ ಊದಿಸಿಕೊಂಡಿತು.

'ಪುಸ್ತಕದಾಗೆ ಏನೈತಿ ಅದನ್ನೇ ಹೇಳಿಕೊಟ್ಟೀನಿ, ನಾ ಏನು ಸುಳ್ಳು ಹೇಳಿಕೊಡತೀನಿ?'

'ನಮ್ಮ ದೇಶಕ್ಕೆ 1947ರಾಗೆ ಸ್ವಾತಂತ್ರ್ಯ ಬಂತು ಅಂತ ಒಂದಂಕದ ಪ್ರಶ್ನೆಗೆ ಉತ್ತರ ಹೇಳಿಕೊಟ್ಟಿದ್ದೆಯಲ್ಲ, ಅದು ತಪ್ಪು. ಕಂಗನಕ್ಕ ಹೇಳ್ಯಾಳ, ಅವಾಗ ನಮಗೆ ಸಿಕ್ಕಿದ್ದು ಅದೆಂಥದೋ ಭಿಕ್ಷೆ, ಖರೇಖರೆ 100% ಸ್ವಾತಂತ್ರ್ಯ ಸಿಕ್ಕಿದ್ದು 2014ರಾಗೆ ಅಂತ. 1947ರಾಗೆ ಯಾವ ಯುದ್ಧ ನಡೆದಿತ್ತು ಅಂತ ಕೇಳ್ಯಾಳ... ಎಷ್ಟರ ಶಾಣೇ ಹೆಣ್ಮಗಳು' ಬೆಕ್ಕಣ್ಣ ಉಲಿಯಿತು.

'2014ರಾಗೆ ಯಾವ ಯುದ್ಧ ನಡೀತಂತೆ, ಯಾರು ಸ್ವಾತಂತ್ರ್ಯ ಹೋರಾಟ ಮಾಡಿದರಂತೆ? ಆಕಿಗೇನು ಇತಿಹಾಸ ಗೊತ್ತೈತಿ...' ನಾನು ತಡೆಯಲಾಗದೇ ಬೈದೆ.

'ಕಾಂಗೈಮುಕ್ತಭಾರತ ಯುದ್ಧ, ವಿರೋಧಿ ದನಿ ಹತ್ತಿಕ್ಕು ಯುದ್ಧ, ಸ್ವದೇಸೀ ತಯಾರಿಕೆ ಯುದ್ಧ, ಹಿಂಗ ಸುಮಾರು ಯುದ್ಧ ನಡೆದು, ಮೋದಿಮಾಮಾ ಗೆದ್ದು 2014ರಾಗೆ ಪ್ರಧಾನಿ ಆದಕೂಡಲೇ ಸ್ವಾತಂತ್ರ್ಯ ಸಿಕ್ಕಿತು ಅಂದಾಳ. ಎಷ್ಟರ ಇತಿಹಾಸ ಪ್ರಜ್ಞೆ ಐತಿ ಈಕಿಗಿ... ಹೊಸ ಶಿಕ್ಷಣ ನೀತಿವಳಗ ಇತಿಹಾಸ ಪಠ್ಯಪುಸ್ತಕ ಸಮಿತಿಗೆ ಈಕಿನ್ನ ಅಧ್ಯಕ್ಷೆ ಮಾಡಬಕು' ಹೊಗಳುತ್ತಲೇ ಇದ್ದ ಬೆಕ್ಕಣ್ಣ 'ಮುಂದಿನ ವರ್ಸ ಈಕಿಗಿ ಪದ್ಮವಿಭೂಷಣ ಪ್ರಶಸ್ತಿ ಬರತೈತಿ' ಎಂದು ಕಣಿ ನುಡಿಯಿತು.

'ಪದ್ಮವಿಭೂಷಣ ಅಲ್ಲಲೇ...ಏನರ ಒಂದ್ ವದರತಾನೆ ಇರೂ ಆಕಿಗಿ 'ವೀರನಾಲಿಗೆ ಚಕ್ರ' ಪ್ರಶಸ್ತಿ ಕೊಡಬಕು...'

'ಹಂಗೇ ಆಕಿಗಿ ಕಂಗನಾ ಬದ್ಲಿಗೆ ಕೆನ್ನಾಲಗೆ ಅಂತ ಹೊಸ ಹೆಸರು ಇಡಬಕು' ಬೆಕ್ಕಣ್ಣ ಕೊಂಕುನಗು ಬೀರಿತು!

ಸಂಗತ

ಬೇಕಿದೆ ಎಲ್ಲರ ಗ್ರಂಥಾಲಯ

ಸಾರ್ವಜನಿಕ ಗ್ರಂಥಾಲಯವನ್ನು 'ಸರ್ಕಾರಿ' ಎಂಬ ಗ್ರಹಿಕೆಯಿಂದ ದೂರ ಮಾಡಬೇಕಾಗಿದೆ

• ಡಾ. ಕೆ.ಎಸ್.ಪವಿತ್ರ

ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಇದೇ 14ರಿಂದ 20ರವರೆಗೆ ನಡೆಯುತ್ತಿದೆ. ಕೋವಿಡ್ ನಂತರದ ದಿನಗಳಲ್ಲಿ, ಮಕ್ಕಳು ಮತ್ತು ಹಿರಿಯರಲ್ಲಿ 'ಓದುವ ಅಭ್ಯಾಸ'ಕ್ಕಾಗಿ ಗ್ರಂಥಾಲಯಗಳನ್ನು ಬಳಸುವುದರ ಕುರಿತು ಅಧ್ಯಯನಗಳು ಆರಂಭವಾಗುತ್ತಿವೆ.

ಚಿಂತಕ ಡಾ. ಹಾ.ಮಾ.ನಾಯಕ ಅವರು ಒಂದೆಡೆ ಹೇಳಿದ ಮಾತುಗಳು ಹೀಗಿವೆ: 'ದುಃಖ, ನೋವುಗಳನ್ನು ಮಾಯಿಸಲು ಪುಸ್ತಕ ಒಂದು ದಿವ್ಯೌಷಧ. ದಿಗಂತದ ಆಚೆಯ ಬೆಳಕಿಗೆ ಕೈಮರಗಳು ಪುಸ್ತಕಗಳು. ಸುತ್ತಲೂ ಬಗೆಬಗೆಯ ಪುಸ್ತಕಗಳ ರಾಶಿ, ನಡುವೆ ಪುಸ್ತಕ ಹಿಡಿದ ನಾನು, ಇದು ನಾನು ಸತತವಾಗಿ ಇಷ್ಟಪಡುವ ಸನ್ನಿವೇಶ. ಇಂಥ ಸನ್ನಿವೇಶದಲ್ಲಿ ನನ್ನಂಥ ಸುಖಿ ಲೋಕದಲ್ಲಿ ಬೇರೊಬ್ಬರಿಲ್ಲವೇನೋ ಎನಿಸುತ್ತದೆ'. ಆದರೆ ಇಂದಿನ ಯುವಜನರಿಗೆ ಈ ಸುಖವಿಂದು ದೊರೆಯುತ್ತಿರುವುದು ಅಂಗೈನ 'ತೆರೆ'ಯಲ್ಲಿಯೇ. ಪುಸ್ತಕಗಳ ರಾಶಿ, 'ಇ-ಬುಕ್'ಗಳು-ಕಿಂಡಲ್ ಬುಕ್‌ಗಳು ಈ ಸಣ್ಣ ತೆರೆಯಲ್ಲಿಯೇ ಲಭ್ಯವಿವೆ. ಆದರೆ ಅವುಗಳನ್ನು ಪೂರ್ತಿಯಾಗಿ ಓದುವವರೆಷ್ಟು ಮಂದಿ? ಹೇಳಲು ಸಾಧ್ಯವಿಲ್ಲ.

ಭಾರತದಲ್ಲಿ ಸಾರ್ವಜನಿಕ ಗ್ರಂಥಾಲಯಗಳಿಗೆ ಜನ ಮುಗಿಬಿದ್ದು ಹೋಗುವ ಪ್ರವೃತ್ತಿ ಮೊದಲಿನಿಂದ ಕಡಿಮೆಯೇ. ಖಾಸಗಿ ಗ್ರಂಥಾಲಯಗಳಿಗೆ ದುಡ್ಡು ಕೊಟ್ಟು, ಮಧ್ಯಮ-ಮೇಲ್ವರ್ಗದ ಜನ ಓದಲು ಮುಂದಾಗುವಷ್ಟು, 'ಉಚಿತ' ಎಂದರೂ ಸಾರ್ವಜನಿಕ ಗ್ರಂಥಾಲಯಗಳಿಗೆ 'ಜನಸಂದಣಿ' ಉಂಟಾಗುವಂತೆ ಜನ ಹೋಗುವುದು ನಾನು ಕಾಣದ ಸಂಗತಿ. ದಿನಪತ್ರಿಕೆ ಓದಲು, ಉದ್ಯೋಗ ಪ್ರಕಟಣೆ ಹುಡುಕಲು, ಅಧ್ಯಯನದ ಯಾವುದೋ ಒಂದು ಪುಸ್ತಕ ಹುಡುಕಲು ಜನರು ಸಾರ್ವಜನಿಕ ಗ್ರಂಥಾಲಯಗಳಿಗೆ ಹೋಗುತ್ತಾರೆಯೇ ಹೊರತು, ಪುಸ್ತಕಗಳನ್ನು ಜ್ಞಾನಾರ್ಜನೆಗೆ, ವ್ಯಕ್ತಿತ್ವ ಬೆಳವಣಿಗೆಗೆ, ಮನರಂಜನೆಗೆ ಓದುವವರ ಸಂಖ್ಯೆ ಗೌಣ.

ಹಾಗೆಂದು ಭಾರತದ ಸಾರ್ವಜನಿಕ ಗ್ರಂಥಾಲಯಗಳ ಇತಿಹಾಸ ಸಾಕಷ್ಟು ದೀರ್ಘವಾದದ್ದೇ. 1948ರಲ್ಲಿಯೇ ಮೊದಲ ಸಾರ್ವಜನಿಕ ಗ್ರಂಥಾಲಯಗಳ ಕಾನೂನು- ಮದ್ರಾಸ್ ಪಬ್ಲಿಕ್ ಲೈಬ್ರರಿ ಆ್ಯಕ್ಟ್ ಜಾರಿಗೆ ಬಂತು. ಭಾರತದ ಸಾರ್ವಜನಿಕ ಗ್ರಂಥಾಲಯ ಚಳವಳಿ 19ನೇ ಶತಮಾನದಲ್ಲಿಯೇ ಮಹಾರಾಜ ಸಯ್ಯಾಜಿರಾವ್ ಗಾಯಕ್‌ವಾಡ್, ಅಮೆರಿಕೆಯ ಗ್ರಂಥಾಲಯ ಅಧಿಕಾರಿ ವಿಲಿಯಮ್ ಬಾರ್ಡೆನ್, ಗಣಿತಜ್ಞ ಎಸ್.ಆರ್.ರಂಗನಾಥನ್ ಮೊದಲಾದವರಿಂದ ಆರಂಭವಾಯಿತು. ಸಾಕ್ಷರತೆಯ ಪ್ರಗತಿಗಾಗಿ, ಸ್ವಾತಂತ್ರ್ಯ ಹೋರಾಟದ ಸಾಮಾಜಿಕ ಚಳವಳಿಗಳ ಭಾಗವಾಗಿ ಇದು ಕೆಲಸ ಮಾಡಿತು. ಆಂಧ್ರ-ಕೇರಳ-ಮದ್ರಾಸ್ ಪ್ರಾಂತಗಳಲ್ಲಿ ದೋಣಿಗಳ ಮೇಲೆ, ಎತ್ತಿನ ಗಾಡಿಗಳ ಮೇಲೆ ಪುಸ್ತಕಗಳು ಸಾರ್ವಜನಿಕರನ್ನು ಆಕರ್ಷಿಸಿದವು. ಸ್ವಾತಂತ್ರ್ಯಾನಂತರ 'ಸಾರ್ವಜನಿಕ ಗ್ರಂಥಾಲಯಗಳ ರಾಷ್ಟ್ರೀಯ ಆಯೋಗ' ಶಾಲಾ ಗ್ರಂಥಾಲಯಗಳ ಸೌಲಭ್ಯಗಳನ್ನು ವೃದ್ಧಿಪಡಿಸುವ, ಹಳ್ಳಿಗಳಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸುವ 5 ವರ್ಷಗಳ ಯೋಜನೆಯೊಂದಿಗೆ ಕಾರ್ಯಾರಂಭ ಮಾಡಿತು.

ಅದಾದ ನಂತರ ಗ್ರಂಥಾಲಯಗಳ ಬೆಳವಣಿಗೆ-ಯಾಗಲೀ ಆಡಳಿತ ಪದ್ಧತಿಯಾಗಲೀ ದೇಶದ ಎಲ್ಲೆಡೆ, ಒಂದೇ ಸಮನಾಗಿ ನಡೆದೇ ಇಲ್ಲ. ಪ್ರತೀ ರಾಜ್ಯದಲ್ಲಿ ಯಾವ ಇಲಾಖೆ ಸಾರ್ವಜನಿಕ ಗ್ರಂಥಾಲಯದ ಆಡಳಿತ ವ್ಯವಹಾರಗಳನ್ನು ನೋಡಿಕೊಳ್ಳುತ್ತದೆ ಎಂಬುದನ್ನು ನೋಡಿದರೆ ಗೊಂದಲವಾಗುತ್ತದೆ. ಕೆಲವೆಡೆ ಸಂಸ್ಕೃತಿ ಇಲಾಖೆ, ಕೆಲವೆಡೆ ಶಿಕ್ಷಣ ಇಲಾಖೆ ಮತ್ತೆ ಬೇರೆಡೆ ಗ್ರಂಥಾಲಯ ಇಲಾಖೆ ಹೀಗೆ ವಿವಿಧ ಇಲಾಖೆಗಳಡಿ ಗ್ರಂಥಾಲಯಗಳು ನಿಲ್ಲುತ್ತವೆ. ಇವುಗಳ ಬಗ್ಗೆ ನಾವು ತಲೆಕೆಡಿಸಿಕೊಳ್ಳಬೇಕಾದ್ದು ಏಕೆ?



'ಸಾಕ್ಷರತೆ' ಎನ್ನುವ ಕೌಶಲಕ್ಕೂ ಒಂದು ಸಮಾಜವು ಕಲೆ-ಸಂಸ್ಕೃತಿ-ಗ್ರಂಥಾಲಯಗಳಿಗೆ ಎಷ್ಟು ತನು-ಮನ ಧನಗಳ ಬಂಡವಾಳ ಹೂಡುತ್ತದೆ ಎನ್ನುವುದಕ್ಕೂ ನಿಕಟ ಸಂಬಂಧವಿದೆ. ಅದರಲ್ಲಿಯೂ ಇಂದಿನ ನಮ್ಮ ಸಾಕ್ಷರತೆ ಕೇವಲ 'ಪಠ್ಯಪುಸ್ತಕ ಸಾಕ್ಷರತೆ'ಯಾಗುವ ಅಪಾಯ ಕಾಡುತ್ತಿದೆ. ಕೇರಳ-ದೆಹಲಿಯಂತಹ ಒಂದೆರಡು ರಾಜ್ಯ ಮತ್ತು ಕೆಲವು ಮಹಾನಗರಗಳ ಸಾರ್ವಜನಿಕ ಗ್ರಂಥಾಲಯಗಳನ್ನು ಹೊರತುಪಡಿಸಿ, ಉಳಿದೆಡೆ ಸಾರ್ವಜನಿಕ ಗ್ರಂಥಾಲಯಗಳು ಮಂದ ಬೆಳಕು, ಹರಿದು ಹೋದ ಹಾಳೆಗಳು- ದೂಳು ತಿಂದು ಮಸುಕಾದ ಪುಸ್ತಕಗಳು, ಜೊತೆಗೊಬ್ಬ ಹತಾಶೆಯ ಗ್ರಂಥಾಲಯಾಧಿಕಾರಿ ಇವಿಷ್ಟೇ ನಮ್ಮ 'ಲೈಬ್ರರಿ ಚಿತ್ರಣ'ವಾಗಿ ನಿಲ್ಲುತ್ತವೆ. ಯುವಜನರು, ಮಕ್ಕಳನ್ನು ಗ್ರಂಥಾಲಯದತ್ತ ಸೆಳೆಯುವ ಸೃಜನಶೀಲ ಪ್ರಯತ್ನಗಳು ಅತ್ಯವಶ್ಯ. ನಮಗಿಂತ ಜನಸಂಖ್ಯೆ ಹೆಚ್ಚಿರುವ ಚೀನಾದೆಲ್ಲೆಡೆ 'ಇಟ್ಟಿಗೆ- ಗಾರೆ'ಯ ಪುಸ್ತಕದಂಗಡಿಗಳನ್ನು ಅತ್ಯಂತ ಕಡಿಮೆ ಬೆಲೆಗೆ ಗುತ್ತಿಗೆಗೆ ನೀಡಲಾಗಿದೆ. ಇಲ್ಲಿ ಉಚಿತ ಓದುವಿಕೆ, ರಸಪ್ರಶ್ನೆಗಳು, ಮಾತುಕತೆ, ಉಪನ್ಯಾಸಗಳು ನಡೆಯುತ್ತವೆ.

ಭಾರತದಲ್ಲಿ ಬ್ರಿಟಿಷ್ ಕೌನ್ಸಿಲ್ ಮಾಡುತ್ತಿರುವ ವಿವಿಧ ಕಾರ್ಯಕ್ರಮಗಳು, 'Read for life'-'ಜೀವಮಾನಪೂರ್ತಿ ಓದು' ಮೊದಲಾದ ಕಾರ್ಯಕ್ರಮಗಳನ್ನು ಆಯೋಜಿಸುವುದು ಭಾರತದ- ಕರ್ನಾಟಕದ ಆಡಳಿತ ವ್ಯವಸ್ಥೆಗಳು ಮನಸ್ಸು ಮಾಡಿದರೆ ಕಷ್ಟವೇನಲ್ಲ. 'ತೆರೆಯೇ ಹೊಸ ಕಾಗದ' ಎಂಬ ಅರಿವು ಸಾರ್ವಜನಿಕ ಗ್ರಂಥಾಲಯಗಳಿಗೂ ಅನ್ವಯಿಸುತ್ತದೆ. ಇಂದಿನ ಮಕ್ಕಳು ಗ್ರಂಥಾಲಯಗಳಿಗೆ ಮುಗಿಬೀಳುವಂತೆ ಮಾಡಬೇಕೆಂದರೆ, ಪೋಷಕರು ಮಕ್ಕಳಲ್ಲಿ 'ಪುಸ್ತಕದೊಳಕ್ಕೆ ಹುದುಗುವ' ಸಂಸ್ಕೃತಿ ಬೆಳೆಸಬೇಕು. ಮಕ್ಕಳಿಗಾಗಿ ಗ್ರಂಥಾಲಯಗಳನ್ನು ಮನರಂಜನೆಯ ತಾಣಗಳೊಂದಿಗೆ ಬೆಸೆಯುವುದೂ ಬಹು ಉಪಯುಕ್ತ. 'ಸಾರ್ವಜನಿಕ ಗ್ರಂಥಾಲಯ'ವನ್ನು 'ಸರ್ಕಾರಿ' ಎಂಬ ಗ್ರಹಿಕೆಯಿಂದ ದೂರ ಮಾಡೋಣ. 'ಎಲ್ಲ ಜನರ' ಗ್ರಂಥಾಲಯ ಎಂಬ ಗ್ರಹಿಕೆಯನ್ನು ಬೆಳೆಸೋಣ.

ವಾಚಕರ ವಾಣಿ

ಸಹಕಾರಿ ರತ್ನ ಪ್ರಶಸ್ತಿ: ಇರಲಿ ಪಾರದರ್ಶಕತೆ

ಪ್ರತಿವರ್ಷ ಸಹಕಾರಿ ಸಪ್ತಾಹ ಆಚರಿಸುವ ಸಂದರ್ಭದಲ್ಲಿ ಸಹಕಾರ ಇಲಾಖೆ ಕೊಡಮಾಡುವ 'ಸಹಕಾರಿ ರತ್ನ ಪ್ರಶಸ್ತಿ'ಗೆ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಸರಿಯಾದ ಮಾನದಂಡವನ್ನು ಬಳಸುತ್ತಿಲ್ಲ. ಫಲಾನುಭವಿಗಳ ಆಯ್ಕೆ ಸಂಪೂರ್ಣವಾಗಿ ರಾಜಕೀಯ ನಾಯಕರ ಶಿಫಾರಸಿನಂತೆ ನಡೆಯುತ್ತಿದೆ. ಈ ಆಯ್ಕೆಯು ವಶೀಲಿಬಾಜಿ ಮೂಲಕ ನಡೆಯಬಾರದು. ಇದು ಪಕ್ಷಾತೀತ ಹಾಗೂ ರಾಜಕೀಯರಹಿತ ಕಾರ್ಯಕ್ರಮವಾಗಬೇಕು. ಅಂದಾಗ ಮಾತ್ರ ಪ್ರಶಸ್ತಿಗೆ ಒಂದು ಗೌರವ. ಇಲ್ಲದಿದ್ದರೆ ಅದು ಕಾಟಾಚಾರದ ಪ್ರಶಸ್ತಿ ಆಗುತ್ತದೆ.

ರಾಜ್ಯದಲ್ಲಿ ಬಹಳಷ್ಟು ಜನರು ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಎಲೆಮರೆ ಕಾಯಿಯಂತೆ ದುಡಿಯುತ್ತಿದ್ದಾರೆ. ಅಂತಹವರನ್ನು ಗುರುತಿಸಿ ಗೌರವಿಸುವ ಕೆಲಸವನ್ನು ಇಲಾಖೆ ಮಾಡಬೇಕು.

ವಿ.ಜಿ.ಇನಾಮದಾರ, ಸಾರವಾಡ, ವಿಜಯಪುರ

ಕೃಷಿ ಮೇಳ: ಚಲನಶೀಲವಾಗಲಿ

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕೃಷಿ ಮೇಳವನ್ನು ಹೆಚ್ಚಾಗಿ ವಾರ್ಷಿಕ ಹಬ್ಬ ಅಥವಾ ಗೆಟ್ ಟುಗೆದರ್‌ನಂತೆ ನೋಡಲಾಗುತ್ತಿದೆ. ನೀಡಿದ ಅಂಕಿಅಂಶಗಳ ಪ್ರಕಾರ, ಮೂರು ಲಕ್ಷ ಜನ ಭೇಟಿ ಕೊಟ್ಟಿದ್ದರೆ, ಏಳು ನೂರು ರೈತರು ಸಲಹಾ ಕೇಂದ್ರಕ್ಕೆ ಹೋಗಿದ್ದಾರೆ. ತೈಲ ದುಬಾರಿಯ ಈ ದಿನಗಳಲ್ಲಿ ಕಾರಿನಲ್ಲಿ ಬರುವ ಸ್ಥಿತಿಯಲ್ಲಿ ಎಷ್ಟು ಜನ ರೈತರಿದ್ದಾರೆ? ಹೊಸ ತಳಿ, ತಂತ್ರಜ್ಞಾನ ನೋಡುತ್ತಾರೆ ನಿಜ, ಆದರೆ ಆನಂತರವೂ ಸಂಪರ್ಕಿಸಿ ಅದನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸುವವರ ಸಂಖ್ಯೆ ಕಡಿಮೆ. ವಿಶ್ವವಿದ್ಯಾಲಯ ತಾನಾಗಿ ಅಂಥವರನ್ನು ಫಾಲೋಅಪ್ ಮಾಡುವ ವ್ಯವಸ್ಥೆ ಇದೆಯೇ?

ಒಣ ಬೇಸಾಯವು ಈ ವರ್ಷ ಅಧಿಕ ಮಳೆಯಾದರೂ ಸಮಸ್ಯೆಗಳನ್ನು ಎದುರಿಸುತ್ತಿದೆ. ತಜ್ಞರು ಈ ವಿಷಯದ ಬಗ್ಗೆ ನಿರ್ದಿಷ್ಟವಾಗಿ ಏನನ್ನೂ ಹೇಳಿಲ್ಲ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಕೂಡ ವರ್ಷದಲ್ಲೊಂದು ದಿನ ಮುಕ್ತ ಭೇಟಿಗೆ ಅವಕಾಶ ಕಲ್ಪಿಸುತ್ತದೆ. ಅದನ್ನೇ ಔಟ್‌ರೀಚ್ ಕಾರ್ಯಕ್ರಮ ಎನ್ನುವುದುಂಟು. ಸಂಸ್ಥೆಗಳು ತಮ್ಮ ಕಾರ್ಯವನ್ನು ವಿಸ್ತಾರಗೊಳಿಸುತ್ತ ಹೆಚ್ಚು ಜನರನ್ನು ಮುಟ್ಟಲು ನಿರಂತರವಾಗಿ ಪ್ರಯತ್ನಿಸುತ್ತಿರಬೇಕು. ಆಗಲೇ ಅವು ಚಲನಶೀಲವಾಗಿ ಉಳಿಯಬಲ್ಲವು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಬೇಕಾ?

'ಝೀಕಾ: ಕಾನ್ಪುರದಲ್ಲಿ 10 ಪ್ರಕರಣ ಪತ್ತೆ' (ಪ್ರ.ವಾ., ನ. 8).
ಕೊರೊನಾ, ಡೆಲ್ಟಾ ಇತ್ಯಾದಿ ವ್ಯಾಧಿ
ಜಗಜ್ಜೀವನವನ್ನು
ಸಾಕಷ್ಟು ಕೊರೆದ ಬಳಿಕ,
ಹೊಸ (ಹಳೆಯ?) ಉಪಾಧಿ
ಝೀಕಾ
ಬೇರೆ ಬೇಕಾ?

ಸಿ.ಪಿ.ಕೆ., ಮೈಸೂರು

'ಮಾದರಿ ಚುನಾವಣೆ' ಮಾಡೋಣ

ಸಾಹಿತ್ಯ ಪರಿಷತ್ತಿನ ಚುನಾವಣಾ ಅಭ್ಯರ್ಥಿಗಳು ಈಗ ಮತಕ್ಕಾಗಿ ಸದಸ್ಯರನ್ನು ಸಂಪರ್ಕಿಸುತ್ತಿದ್ದಾರೆ. ಆದರೆ, ಒಂದು ಅಪಸವ್ಯ ಒಡೆದುಕಾಣುತ್ತಿದೆ. ಹೆಚ್ಚಿನ ಅಭ್ಯರ್ಥಿಗಳು ಒಂದಲ್ಲ ಒಂದು ರಾಜಕೀಯ ಪಕ್ಷದ 'ಚುಂಗು' ಹಿಡಿದುಕೊಂಡೊ, ಇಲ್ಲವೆ ಅಪರೋಕ್ಷವಾಗಿ ಪ್ರಭಾವಳಿ ಬೀರುತ್ತಲೊ ಸಮೀಪಿಸುತ್ತಿದ್ದಾರೆ. ಇಲ್ಲಿ ಮತದಾರ ಸದಸ್ಯರುಗಳಿಗೊಂದು ಕಳಕಳಿಯ ಮನವಿ: ಇತರ ಎಲ್ಲ ಚುನಾವಣೆಗಳಿಗೆ ನಮ್ಮೀ ಚುನಾವಣೆ ಮಾದರಿಯಾಗಲಿ. ಪಕ್ಷಾತೀತ, ಜಾತ್ಯತೀತ, ಧರ್ಮಾತೀತ ಅಭ್ಯರ್ಥಿಗಳನ್ನು ಮಾತ್ರವೇ ಪುರಸ್ಕರಿಸೋಣ. ಯಾಕೆಂದರೆ, ಪರಿಷತ್ತು ಯಾವುದೇ ಮುಲಾಜಿಗೆ ಒಳಗಾಗದಿರಲು ಹಾಗೂ ನೈತಿಕ ಸ್ಥೈರ್ಯ ಹೊಂದಲು ಈ ಕ್ರಮವೇ ಸರಿಯಾದದ್ದು. ಈ ಸದಸ್ಯರು ತೀಕ್ಷ್ಣ ಪ್ರಜ್ಞಾವಂತರು ಎಂದು ಸಾರಲು ಕೂಡ ಈ ಕ್ರಮವೇ ಸರಿ.

ರಾಮಚಂದ್ರ ಎಸ್. ಕುಲಕರ್ಣಿ, ಧಾರವಾಡ

ಶಬ್ದ ಬಳಕೆಯಲ್ಲಿ ಸೌಜನ್ಯವಿರಲಿ

ಬೆಳಗಾವಿಯಲ್ಲಿ ಕಳೆದ ವಾರ ಹಲಗಾ ಬೈಪಾಸ್ ರಸ್ತೆಯ ನಿರ್ಮಾಣ ಸಂಬಂಧದಲ್ಲಿ ಅಲ್ಲಿನ ಜಿಲ್ಲಾಧಿಕಾರಿ ಬಲವಂತವಾಗಿ ರಸ್ತೆ ಕಾಮಗಾರಿಯನ್ನು ಕೈಗೊಂಡರೆಂದು, ಅದನ್ನು ಹಲವಾರು ರೈತರು ಪ್ರತಿಭಟಿಸಿ, ತಮ್ಮ ಆಕ್ರೋಶವನ್ನು ಹೊರಹಾಕಿದ್ದನ್ನು ಮಾಧ್ಯಮಗಳು ವರದಿ ಮಾಡಿದವು. ಭೂಮಿ ಕಳೆದುಕೊಂಡ ರೈತರು ಸ್ವಾಭಾವಿಕವಾಗಿ, ದುಃಖ-ರೋಷ-ಆತಂಕವನ್ನು ವ್ಯಕ್ತಪಡಿಸಿ ತಮ್ಮ ನೋವನ್ನು ಪ್ರದರ್ಶಿಸಿದರು. ಕೆಲವು ದೃಶ್ಯ ಮಾಧ್ಯಮಗಳಲ್ಲಿ ಈ ಘಟನೆಯನ್ನು 'ರೈತರಿಂದ ಹೈ ಡ್ರಾಮಾ' ಎಂಬ ಶೀರ್ಷಿಕೆಯಡಿ ವಾರ್ತೆಯನ್ನು ಬಿತ್ತರಿಸಲಾಯಿತು!

ತಮ್ಮ ಜೀವನಾಧಾರವಾದ, ತಲೆತಲಾಂತರಗಳಿಂದ ಸಾಗುವಳಿ ಮಾಡಿಕೊಂಡು ಬಂದ ಭೂಮಿಯನ್ನು ಕಳೆದುಕೊಂಡಾಗ ಉಂಟಾಗುವ ಕಳವಳ-ಕಷ್ಟವು ಅನ್ಯರಿಗೆ ಹೇಗೆ ಅರ್ಥವಾದೀತು? ರೈತರು ತಮ್ಮ ಮನೋವೇದನೆಯನ್ನು ಹೊರಹಾಕಿದ ಪರಿಯು ಯಾರ ಮನಸ್ಸಿಗಾದರೂ ನೋವೆನಿಸುವಂತಿತ್ತು. ಇದರಲ್ಲಿ 'ಹೈ ಡ್ರಾಮಾ' ಏನಿದೆ ಎಂಬುದು ಅರ್ಥವಾಗುತ್ತಿಲ್ಲ. ಶಬ್ದ ಬಳಕೆಯಲ್ಲಿ ಕನಿಷ್ಠ ಸೌಜನ್ಯವಾದರೂ ಇರಬೇಕೆಂಬುದು ನಾಗರಿಕ ಸಮಾಜದ ನಿರೀಕ್ಷೆ.

ಡಾ. ಚನ್ನು ಅ. ಹಿರೇಮಠ, ರಾಣೆಬೆನ್ನೂರು

ಮೊಬೈಲ್ ಕಿರಿಕಿರಿಗೆ ಕಡಿವಾಣ ಶ್ಲಾಘನೀಯ

ಬಸ್ಸಿನಲ್ಲಿ ಪ್ರಯಾಣಿಸುವಾಗ ಮೊಬೈಲ್‌ನಲ್ಲಿ ಜೋರಾಗಿ ಶಬ್ದ ಬರುವಂತೆ ಮಾಡುವ ಕಾರಣದಿಂದ ಸಹ ಪ್ರಯಾಣಿಕರಿಗೆ ಒಳಗೊಳಗೇ ಹೇಳಿಕೊಳ್ಳದಂತಹ ಕಿರಿಕಿರಿಯಾಗುತ್ತಿದ್ದ ಬಗ್ಗೆ ದೂರುಗಳು ಕೇಳಿ ಬರುತ್ತಿದ್ದವು. ಇದನ್ನು ಮನಗಂಡ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರು, ಮೊಬೈಲ್‌ಗಳ ಜೋರು ಶಬ್ದಮಾಲಿನ್ಯದಿಂದ ಸಹಪ್ರಯಾಣಿಕರಿಗೆ ತೊಂದರೆ ಉಂಟು ಮಾಡುವವರನ್ನು ಬಸ್ಸಿನಿಂದ ಕೆಳಕ್ಕೆ ಇಳಿಸುವ ಕಟ್ಟುನಿಟ್ಟಿನ ಆದೇಶವನ್ನು ಚಾಲಕ ಹಾಗೂ ನಿರ್ವಾಹಕರಿಗೆ ನೀಡಿರುವುದು ಒಳ್ಳೆಯ ಬೆಳವಣಿಗೆ. ಈ ಕ್ರಮಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.

ಇನ್ನಾದರೂ ಬಸ್ಸಿನಲ್ಲಿ ಮೊಬೈಲ್ ಬಳಸುವವರು ಜೋರಾಗಿ ಹಾಡು, ಸಿನಿಮಾ ಇನ್ನಿತರ ಮನರಂಜನಾ ಕಾರ್ಯಕ್ರಮಗಳ ಜೋರು ಶಬ್ದವು ಮಾರ್ದನಿಸದಂತೆ ನೋಡಿಕೊಳ್ಳಬೇಕು. ಶಬ್ದಮಾಲಿನ್ಯ ಉಂಟುಮಾಡದೇ ಎಲ್ಲ ಪ್ರಯಾಣಿಕರ ಸುಖಕರ, ಸುರಕ್ಷಿತ ಪ್ರಯಾಣಕ್ಕೆ ಸಹಕರಿಸಬೇಕು. ಸಹಪ್ರಯಾಣಿಕರಿಗೆ ತೊಂದರೆ ಆಗದಂತೆ ಎಚ್ಚರ ವಹಿಸಬೇಕು.

ಆರ್.ಬಿ.ಜಿ.ಘಂಟಿ, ಬಾಗಲಕೋಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಹಾರಾಷ್ಟ್ರದ ಧನೋರ ಎಂಬಲ್ಲಿ ರಸ್ತೆ ಕಾಮಗಾರಿಗೆ ಬಳಸುತ್ತಿದ್ದ 12 ವಾಹನಗಳಿಗೆ ನಕ್ಸಲರು ಇದೇ ಮಾರ್ಚ್ 25ರಂದು ಬೆಂಕಿ ಹಚ್ಚಿದ್ದರು ಪಿಟಿಐ ಚಿತ್ರ

ಹೋರಾಟದ ಆರಂಭ

ಪಶ್ಚಿಮ ಬಂಗಾಳದ 'ನಕ್ಸಲ್‌ಬಾರಿ' ಎಂಬ ಪಟ್ಟಣದಲ್ಲಿ ಬುಡಕಟ್ಟು ಜನಾಂಗದ ಕೃಷಿ ಕಾರ್ಮಿಕರು 1967ರಲ್ಲಿ ಭೂಮಾಲೀಕರ ವಿರುದ್ಧ ಬಂಡಾಯವೆದ್ದರು. ಈ ಬಂಡಾಯವನ್ನು ಹತ್ತಿಕ್ಕಲಾಯಿತು. ಈ ಬೆಳವಣಿಗೆಯು ಕಮ್ಯುನಿಸ್ಟರ ಹಲವು ಗುಂಪುಗಳ ಗಮನ ಸೆಳೆಯಿತು.

'ಕಮ್ಯುನಿಸ್ಟ್ ಪಕ್ಷ'ದ ನಾಯಕ ಚಾರು ಮಜುಂದಾರ್ ನೇತೃತ್ವದ ಗುಂಪು ನಕ್ಸಲ್‌ಬಾರಿಗೆ ಬಂದು ಹಿಂಸಾತ್ಮಕ ಹೋರಾಟ ನಡೆಸಿತು. ಬಳಿಕ ಚಾರು ಮಜುಂದಾರ್‌ನನ್ನು ಪೊಲೀಸರು ಬಂಧಿಸಿ ಹತ್ಯೆಗೈದರು.

'ನಕ್ಸಲ್‌ಬಾರಿ'ಯಲ್ಲಿ ನಡೆದ ಈ ಹೋರಾಟದ ಮಾದರಿಯಲ್ಲೇ ಹಲವು ಕಮ್ಯುನಿಸ್ಟ್ ಗುಂಪುಗಳು ಹೋರಾಟ ನಡೆಸಲು ಆರಂಭಿಸಿದವು. ಈ ಹೋರಾಟದ ಮಾದರಿಗೆ 'ನಕ್ಸಲ್ ಹೋರಾಟ' ಮತ್ತು ಹೋರಾಟಗಾರನ್ನು 'ನಕ್ಸಲರು' ಎಂದು ಕರೆಯಲಾಯಿತು.

1969ರಲ್ಲಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯ–ಮಾರ್ಕ್ಸಿಸ್ಟ್–ಲೆನಿನಿಸ್ಟ್ (ಸಿಪಿಐ–ಎಂಎಲ್) ಪಕ್ಷದ ಉದಯಕ್ಕೆ ಈ ಹೋರಾಟವು ಕಾರಣವಾಯಿತು.

ಅಲ್ಲಿಂದ ಮುಂದಕ್ಕೆ ನಕ್ಸಲ್ ಹೋರಾಟ ಗೆರಿಲ್ಲಾ ಮಾದರಿ ಹೋರಾಟವನ್ನು ಅಳವಡಿಸಿಕೊಂಡು ಭೂಮಾಲೀಕರು, ಉದ್ಯಮಿಗಳು, ರಾಜಕಾರಣಿಗಳನ್ನು ಗುರಿಯಾಗಿಸಿಕೊಂಡು ಹಿಂಸಾತ್ಮಕ ಹೋರಾಟದಲ್ಲಿ ತೊಡಗಿತು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಕ್ಸಲ್ ಗುಂಪುಗಳಿಗೆ 'ಉಗ್ರ ಸಂಘಟನೆ'ಗಳು ಎಂದು ಹಣೆಪಟ್ಟಿ ನೀಡಿದವು.

ನಕ್ಸಲರ ಮೇಲೆ ಪ್ರಹಾರ

ಪ್ರಜಾವಾಣಿ ವಾರ್ತೆ

ಮಹಾರಾಷ್ಟ್ರದ ಗಡ್‌ಚಿರೋಲಿಯಲ್ಲಿ ಶನಿವಾರ ನಡೆದ ನಕ್ಸಲ್ ಎನ್‌ಕೌಂಟರ್, ಕಳೆದ ಐದು ವರ್ಷಗಳಲ್ಲಿ ನಡೆದ ಯಶಸ್ವಿ ಕಾರ್ಯಾಚರಣೆಗಳಲ್ಲಿ ಒಂದು ಎಂದು ಕರೆಯಲಾಗಿದೆ. ಪ್ರಮುಖ ಕಮಾಂಡರ್ ಮಿಲಿಂದ್ ತೇಲ್ತುಂಬ್ಡೆ ಸೇರಿದಂತೆ 26 ನಕ್ಸಲರು ಒಂದೇ ಕಾರ್ಯಾಚರಣೆಯಲ್ಲಿ ಹತ್ಯೆಗೀಡಾಗಿರುವುದು ನಕ್ಸಲ್ ನಿಗ್ರಹ ಕಾರ್ಯಾಚರಣೆಗೆ ಬಲ ತುಂಬಿದೆ ಎಂದು ವಿಶ್ಲೇಷಿಸಲಾಗಿದೆ. 2009ರಿಂದ ನಕ್ಸಲ್ ನಿಗ್ರಹ ಕಾರ್ಯಾಚರಣೆ ಚುರುಕುಗೊಂಡಿದ್ದು, ವಿವಿಧ ರಾಜ್ಯಗಳಲ್ಲಿ ನಕ್ಸಲರ ಚಟುವಟಿಗಳಿಗೆ ಮೂಗುದಾರ ಹಾಕಲಾಗುತ್ತಿದೆ.

ಛತ್ತೀಸಗಡ ಹಾಗೂ ತೆಲಂಗಾಣ ರಾಜ್ಯಗಳ ಜೊತೆ ಗಡಿ ಹಂಚಿಕೊಂಡಿರುವ ಗಡ್‌ಚಿರೋಲಿ ಜಿಲ್ಲೆಯಲ್ಲಿ ನಕ್ಸಲೀಯರು ಸಕ್ರಿಯರಾಗಿದ್ದಾರೆ. ಇಲ್ಲಿನ ದಟ್ಟ ಕಾನನವು ಛತ್ತೀಸಗಡದ ಬಸ್ತಾರ್ ವಲಯ ಹಾಗೂ ತೆಲಂಗಾಣದ ನಡುವೆ ಬಂಡುಕೋರರು ಓಡಾಡುವ ಮಾರ್ಗ ಎನಿಸಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಇಲ್ಲಿನ ಶುಷ್ಕ ವಾತಾವರಣವು ನಕ್ಸಲ್ ಚಟುವಟಿಕೆಗೆ ಅಡ್ಡಿಯಾಗಿದೆ. ಹೀಗಾಗಿ 2018–21ರ ಅವಧಿಯಲ್ಲಿ 100ಕ್ಕೂ ಹೆಚ್ಚು ನಕ್ಸಲರು ಹತ್ಯೆಗೀಡಾಗಿದ್ದಾರೆ.

'ಹಲವು ವರ್ಷಗಳಿಂದ ಹರಿಸಿದ ಬೆವರು, ರಕ್ತ ಹಾಗೂ ಕಣ್ಣೀರಿನ ಫಲವಾಗಿ ನಾವೀಗ ಯಶಸ್ಸು ಕಾಣುತ್ತಿದ್ದೇವೆ' ಎಂಬುದು ಮಹಾರಾಷ್ಟ್ರ ಗುಪ್ತಚರ ಇಲಾಖೆ ಅಧಿಕಾರಿಯೊಬ್ಬರ ಮಾತು. ಆದರೆ ನಕ್ಸಲರು ಮತ್ತೆ ಗುಂಪುಗೂಡಿ, ಪ್ರಬಲ ಯೋಜನೆಯೊಂದಿಗೆ ದಾಳಿಗೆ ಇಳಿಯುವ ಛಾತಿ ಹೊಂದಿದ್ದಾರೆ ಎಂಬ ಎಚ್ಚರಿಕೆಯನ್ನೂ ಅವರು ನೀಡಿದ್ದಾರೆ.

ಗಡ್‌ಚಿರೋಲಿಯಲ್ಲಿ 2018ರ ಏಪ್ರಿಲ್‌ನಲ್ಲಿ ನಡೆದ ಅವಳಿ ಎನ್‌ಕೌಂಟರ್‌ಗಳಲ್ಲಿ ನಾಲ್ವರು ಕಮಾಂಡರ್‌ಗಳು ಸೇರಿದಂತೆ 40 ನಕ್ಸಲರನ್ನು ಹತ್ಯೆ ಮಾಡಲಾಗಿತ್ತು. ಸಂಖ್ಯೆಯ ಲೆಕ್ಕದಲ್ಲಿ ಇದು ಅತಿದೊಡ್ಡ ಕಾರ್ಯಾಚರಣೆ ಎನಿಸಿತ್ತು. 2020ರ ಮಾರ್ಚ್‌ನಲ್ಲಿ ಗಡ್‌ಚಿರೋಲಿ ಗಡಿಯಲ್ಲಿ ಶಸ್ತ್ರಾಸ್ತ್ರ ತಯಾರಿಕಾ ಕೇಂದ್ರವನ್ನು ನಾಶಪಡಿಸಲಾಗಿತ್ತು. 2021ರ ಮೇನಲ್ಲಿ ಕೊಸ್ಮಿ–ಕಿಸ್ನೇಲಿ ಅರಣ್ಯದಲ್ಲಿ 13 ನಕ್ಸಲರು ಹತರಾಗಿದ್ದರು.

2018ರಲ್ಲಿ 833, 2019ರಲ್ಲಿ 670 ಹಾಗೂ 2020ರಲ್ಲಿ 665 ಮಾವೋವಾದಿಗಳನ್ನು ಹತ್ಯೆ ಮಾಡಲಾಗಿದೆ ಎಂದು ಕೇಂದ್ರ ಗೃಹಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಅವರು ಲೋಕಸಭೆಗೆ ಲಿಖಿತ ಉತ್ತರ ನೀಡಿದ್ದರು. 2009ರಿಂದ 2014ರ ಅವಧಿಯಲ್ಲಿ ನಡೆದ ನಕ್ಸಲ್ ಚಟುವಟಿಕೆಗಳಿಗೆ ಹೋಲಿಸಿದರೆ, 2015ರಿಂದ 2020ರ ಅವಧಿಯಲ್ಲಿ ನಡೆದ ಚಟುವಟಿಕೆಗಳಲ್ಲಿ ಶೇ 47ರಷ್ಟು ಇಳಿಕೆಯಾಗಿದೆ ಎಂದು ಕಳೆದ ಅಧಿವೇಶನದಲ್ಲಿ ರಾಜ್ಯಸಭೆಗೆ ಕೇಂದ್ರ ಮಾಹಿತಿ ನೀಡಿತ್ತು.



ಪಶ್ಚಿಮ ಬಂಗಾಳದ ಪೂರ್ವ ಸಿಂಘ್‌ಭೂಮ್‌ನ ಅರಣ್ಯ ಪ್ರದೇಶದಲ್ಲಿ ನಕ್ಸಲ್ ನಿಗ್ರಹಕ್ಕಾಗಿ ಶೋಧ ಕಾರ್ಯಾಚರಣೆ ಸಂಗ್ರಹ ಚಿತ್ರ

2013ರಲ್ಲಿ 10 ರಾಜ್ಯಗಳ 76 ಜಿಲ್ಲೆಗಳಲ್ಲಿ ವ್ಯಾಪಿಸಿದ್ದ ನಕ್ಸಲ್ ಚಟುವಟಿಕೆಯು 2020ರ ವೇಳೆಗೆ 9 ರಾಜ್ಯಗಳ 53 ಜಿಲ್ಲೆಗಳಿಗೆ ಸೀಮಿತಗೊಂಡಿದೆ. ನಕ್ಸಲ್ ನಿಗ್ರಹಕ್ಕೆ ಹಾಕಿಕೊಂಡ ಕಠಿಣ ಕಾರ್ಯಕ್ರಮಗಳಿಂದಾಗಿ 'ಕೆಂಪು ಪ್ರದೇಶ'ದ ವ್ಯಾಪ್ತಿ ಕುಗ್ಗಿದೆ ಎಂದು ಗೃಹಖಾತೆ ರಾಜ್ಯ ಸಚಿವ ಜಿ. ಕೃಷ್ಣರೆಡ್ಡಿ ಅವರು ತಿಳಿಸಿದ್ದರು. '2009ರಲ್ಲಿ 2,258 ನಕ್ಸಲ್ ಹಿಂಸಾಚಾರ ಪ್ರಕರಣಗಳ ಜೊತೆ ಹೋಲಿಸಿದರೆ, 2020ರಲ್ಲಿ 665 ಪ್ರಕರಣಗಳು ವರದಿಯಾಗಿದ್ದು, ಹಿಂಸಾಚಾರದ ಪ್ರಮಾಣ ಶೇ 70ರಷ್ಟು ಕಡಿಮೆಯಾಗಿದೆ' ಎಂದು ಅವರು ಮಾಹಿತಿ ನೀಡಿದ್ದರು. 2003ರಿಂದ 2018ರ ಅವಧಿಯಲ್ಲಿ 6,279 ನಾಗರಿಕರು ಹಾಗೂ 1,959 ಭದ್ರತಾ ಸಿಬ್ಬಂದಿ ಸಹ ಪ್ರಾಣ ಕಳೆದುಕೊಂಡಿದ್ದಾರೆ.

ನಕ್ಸಲ್ ಚಟುವಟಿಕೆ ಅಧಿಕವಾಗಿರುವ ಆಂಧ್ರ ಪ್ರದೇಶದಲ್ಲಿ ಗ್ರೇಹೌಂಡ್ಸ್, ಮಹಾರಾಷ್ಟ್ರದಲ್ಲಿ ಸಿ–60 ಹಾಗೂ ಛತ್ತೀಸಗಡದಲ್ಲಿ ಸಿಆರ್‌ಪಿಎಫ್, ಜಿಲ್ಲಾ ಮೀಸಲು ಪಡೆ ಹಾಗೂ ವಿಶೇಷ ಕಾರ್ಯಪಡೆಗಳಿಗೆ ನಕ್ಸಲ್ ನಿಗ್ರಹ ಜವಾಬ್ದಾರಿ ವಹಿಸಲಾಗಿದೆ. ಇದೇ ವರ್ಷದ ಜೂನ್‌ನಲ್ಲಿ ಬಿಹಾರದ 6 ಜಿಲ್ಲೆಗಳನ್ನು ನಕ್ಸಲ್‌ಮುಕ್ತ ಎಂಬುದಾಗಿ ಕೇಂದ್ರ ಗೃಹಸಚಿವಾಲಯ ಘೋಷಿಸಿತ್ತು.

ಕೇರಳದ ವಯನಾಡಿನಲ್ಲಿ ಕರ್ನಾಟಕ ಮೂಲದ ನಕ್ಸಲರಾದ ಬಿ.ಜಿ ಕೃಷ್ಣಮೂರ್ತಿ ಮತ್ತು ಸಾವಿತ್ರಿ ಅವರನ್ನು ಇತ್ತೀಚೆಗೆ ಬಂಧಿಸಲಾಗಿದೆ. ಆರ್.ರಾಘವೇಂದ್ರನ್ ಅಲಿಯಾಸ್ ವಿನೋದ್ ಕುಮಾರ್ ಎಂಬ ನಕ್ಸಲೀಯನನ್ನು ಕೇರಳದಲ್ಲಿ ಎನ್‌ಐಎ ಇತ್ತೀಚೆಗೆ ಬಂಧಿಸಿತ್ತು. ಭೀಮಾ–ಕೋರೆಗಾಂವ್ ಪ್ರಕರಣದ ಪ್ರಮುಖ ಆರೋಪಿ ಪ್ರಶಾಂತ್ ಬೋಸ್ ಅವರನ್ನು ಜಾರ್ಖಂಡ್‌ನಲ್ಲಿ ಭಾನುವಾರ ಬಂಧಿಸಲಾಗಿದೆ.

ನಕ್ಸಲರ ಎನ್‌ಕೌಂಟರ್ ಬಗ್ಗೆ ಪ್ರಶ್ನೆಗಳೂ ಇವೆ. 2018ರಲ್ಲಿ 40 ನಕ್ಸಲರ ಹತ್ಯೆಯಾದ ಗಡ್‌ಚಿರೋಲಿಯಲ್ಲಿ ಒಬ್ಬ ಭದ್ರತಾ ಸಿಬ್ಬಂದಿಗೂ ಗಾಯವಾಗಿಲ್ಲ ಏಕೆ ಎಂದು ಸ್ಥಳೀಯ ಮಾನವಹಕ್ಕು ಸಂಘಟನೆಗಳು ಪ್ರಶ್ನೆ ಎತ್ತಿದ್ದವು. 'ಇದು ಸಂಘಟಿತ ಹಾಗೂ ಉದ್ದೇಶಪೂರ್ವಕ ಸಾಮೂಹಿಕ ಹತ್ಯಾಕಾಂಡ' ಎಂದು ಆರೋಪಿಸಲಾಗಿತ್ತು.

ಶಸ್ತ್ರ, ಪುನರ್ವಸತಿ ಮತ್ತು ಅಭಿವೃದ್ಧಿ



ದೇಶದಲ್ಲಿ ನಕ್ಸಲರ ಚಟುವಟಿಕೆಗಳನ್ನು ಹತ್ತಿಕ್ಕಲು ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರವು ಸಶಸ್ತ್ರ ಹೋರಾಟದ ಮೊರೆ ಹೋಗಿದ್ದರೂ, ನಕ್ಸಲರ ಪುನರ್ವಸತಿಗೂ ಒತ್ತು ನೀಡಿವೆ. 2009ರಲ್ಲಿ ಅಧಿಕಾರದಲ್ಲಿದ್ದ ಯುಪಿಎ–2 ಸರ್ಕಾರವು ನಕ್ಸಲರಿಗೆ ಪುನರ್ವಸತಿ ಕಲ್ಪಿಸಲು ರಾಜ್ಯ ಸರ್ಕಾರಗಳನ್ನು ಉತ್ತೇಜಿಸಿತು. ನಕ್ಸಲ್ ಪ್ರಭಾವ ಹೆಚ್ಚಾಗಿರುವ ಪ್ರದೇಶಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳನ್ನು ಆರಂಭಿಸಿತು. 2014ರಲ್ಲಿ ಅಧಿಕಾರಕ್ಕೆ ಬಂದ ಎನ್‌ಡಿಎ ಸರ್ಕಾರವೂ ಇದನ್ನು ಮುಂದುವರಿಸಿತು.

- ಮುಖ್ಯವಾಹಿನಿಗೆ ಮರಳಲು ಬಯಸುವ ನಕ್ಸಲರಿಗೆ ವಿಶೇಷ ಆರ್ಥಿಕ ಪ್ಯಾಕೇಜ್ ನೀಡುವುದು ಮತ್ತು ಕೆಲವು ಪ್ರಕರಣಗಳನ್ನು ರದ್ದುಪಡಿಸುವ ಭರವಸೆ ನೀಡಲಾಯಿತು. ಈ ಮೂಲಕ ಶಸ್ತ್ರತ್ಯಾಗ ಮಾಡಲು ನಕ್ಸಲರ ಮನವೊಲಿಸಲಾಯಿತು
- ಶರಣಾಗತಿ ವೇಳೆ ಶಸ್ತ್ರಾಸ್ತ್ರಗಳನ್ನೂ ಒಪ್ಪಿಸುವ ನಕ್ಸಲರಿಗೆ ಹೆಚ್ಚುವರಿ ಭತ್ಯೆ ಘೋಷಿಸಲಾಯಿತು. ವಿವಿಧ ಶಸ್ತ್ರಗಳು ಮತ್ತು ಸಲಕರಣೆಗಳಿಗೆ ಭತ್ಯೆಯನ್ನು ನಿಗದಿ ಮಾಡಲಾಗಿತ್ತು. ವಿವಿಧ ಶಸ್ತ್ರಾಸ್ತ್ರಗಳಿಗೆ ₹10ರಿಂದ ₹30,000ರದವರೆಗೂ ಭತ್ಯೆ ಪ್ರಕಟಿಸಲಾಗಿತ್ತು
- ನಕ್ಸಲ್‌ಪೀಡಿತ ಪ್ರದೇಶಗಳಿಗೆ ರಸ್ತೆ ಸಂಪರ್ಕ ಕಲ್ಪಿಸಲು, ವಿದ್ಯುತ್ ಸಂಪರ್ಕ ಕಲ್ಪಿಸಲು ಆದ್ಯತೆ ನೀಡಲಾಯಿತು. ನಕ್ಸಲ್ ಪೀಡಿತ ಪ್ರದೇಶದಲ್ಲಿರುವ ಜನರು, ನಕ್ಸಲರ ಬೆಂಬಲಿಗರು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡಲಾಯಿತು. ಇದು ನಕ್ಸಲರಿಗಿದ್ದ ಬೆಂಬಲವನ್ನು ಕಡಿಮೆ ಮಾಡಿತು

ಬಿಹಾರ–ಉತ್ತರ ಪ್ರದೇಶ–ಪಶ್ಚಿಮ ಬಂಗಾಳ: ಈ ಮೂರೂ ರಾಜ್ಯಗಳ ಕೆಲವು ಜಿಲ್ಲೆಗಳಲ್ಲಿ ನಕ್ಸಲರ ಚಟುವಟಿಕೆ ಹರಡಿತ್ತು. ಆದರೆ ಈ ಪ್ರದೇಶಗಳಲ್ಲಿ ನಕ್ಸಲರ ಚಟುವಟಿಕೆಗಳು ತೀವ್ರ ಸ್ವರೂಪವನ್ನು ಪಡೆದಿರಲಿಲ್ಲ. ಕೇಂದ್ರದ ಭದ್ರತಾ ಪಡೆಗಳು ಈ ಜಿಲ್ಲೆಗಳಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದವು.

ಜಾರ್ಖಂಡ್: ಜಾರ್ಖಂಡ್‌ನ 20 ಜಿಲ್ಲೆಗಳಲ್ಲಿ ನಕ್ಸಲರ ಚಟುವಟಿಕೆ ಇತ್ತು. 2010ರಲ್ಲಿ ಅಂದಿನ ಮುಖ್ಯಮಂತ್ರಿ ಶಿಬು ಸೊರೇನ್ ನಕ್ಸಲರನ್ನು ಮುಖ್ಯವಾಹಿನಿಗೆ ಕರೆತರುವ ಪುನರ್ವಸತಿ ಕಾರ್ಯಕ್ರಮವನ್ನು ಆರಂಭಿಸಿದರು. ಆದರೆ ಈ ಕಾರ್ಯಕ್ರಮವು ರಾಜ್ಯದಲ್ಲಿ ಸಂಪೂರ್ಣವಾಗಿ ವಿಫಲವಾಯಿತು. ಹೀಗಾಗಿ ಕೇಂದ್ರ ಸರ್ಕಾರದ ಆಣತಿಯಂತೆ 2011ರಲ್ಲಿ ನಕ್ಸಲರ ವಿರುದ್ಧ ಸಶಸ್ತ್ರ ಕಾರ್ಯಾಚರಣೆಯನ್ನು ಚುರುಕುಗೊಳಿಸಿದರು. ಇದು ಹೆಚ್ಚು ಹಿಂಸಾಚಾರಕ್ಕೆ ದಾರಿ ಮಾಡಿಕೊಟ್ಟಿತು. ಆನಂತರ ಅಧಿಕಾರಕ್ಕೆ ಬಂದ ಬಿಜೆಪಿ ಸಶಸ್ತ್ರ ಕಾರ್ಯಾಚರಣೆ ಮತ್ತು ಪುನರ್ವಸತಿ ಕಾರ್ಯಕ್ರಮಕ್ಕೂ ಆದ್ಯತೆ ನೀಡಿತು.

ಛತ್ತೀಸಗಡ: ಛತ್ತೀಸಗಡದ ಬಸ್ತಾರ್ ಪ್ರಾಂತ್ಯದ ಅಂದಾಜು 18 ಜಿಲ್ಲೆಗಳಲ್ಲಿ ನಕ್ಸಲರ ಪ್ರಭಾವವಿದೆ. ಈಗ ಅವರ ಪ್ರಭಾವ ಕುಗ್ಗಿದೆಯಾದರೂ, ಈಗಲೂ ದೇಶದಲ್ಲಿ ನಕ್ಸಲರ ಕೇಂದ್ರಸ್ಥಾನವಾಗಿ ಬಸ್ತಾರ್ ಪ್ರಾಂತ್ಯವೇ ಉಳಿದುಕೊಂಡಿದೆ. ಈ ಪ್ರಾಂತ್ಯದ ದಂತೇವಾಡಾ, ಸುಕ್ಮಾ, ಬಿಜಾಪುರ ಜಿಲ್ಲೆಗಳಲ್ಲಿ ಈಗಲೂ ನಕ್ಸಲರ ಪ್ರಾಬಲ್ಯ ಇದೆ. ಛತ್ತೀಸಗಡದಲ್ಲಿ ನಕ್ಸಲರ ವಿರುದ್ಧ ಶಸಸ್ತ್ರ ಕಾರ್ಯಾಚರಣೆಗೆ ಆದ್ಯತೆ ನೀಡಲಾಗಿದೆ.

ಬಸ್ತಾರ್ ಪ್ರಾಂತ್ಯದ ಈ ಜಿಲ್ಲೆಗಳನ್ನು ರಾಜ್ಯದ ಇತರ ಜಿಲ್ಲೆಗಳಿಗೆ ಸಂಪರ್ಕ ಕಲ್ಪಿಸುವ 11 ಪ್ರಮುಖ ಹೆದ್ದಾರಿ ಮತ್ತು ರಸ್ತೆಗಳನ್ನು ಸರ್ಕಾರ ನಿರ್ಮಿಸಿದೆ. ಇದರಿಂದ ನಕ್ಸಲರ ವಿರುದ್ಧ ಕಾರ್ಯಾಚರಣೆ ನಡೆಸಲು ಭದ್ರತಾ ಪಡೆಗಳಿಗೆ ನೆರವಾಗುತ್ತಿದೆ. ಅದಕ್ಕಿಂತಲೂ ಮುಖ್ಯವಾಗಿ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ ಸುಧಾರಣೆಗೆ ಈ ರಸ್ತೆಗಳು ಕಾರಣವಾಗಿವೆ

ಮಹಾರಾಷ್ಟ್ರ: ಮಹಾರಾಷ್ಟ್ರದ ಗಡ್‌ಚಿರೋಲಿ ಮತ್ತು ಗೊಂಡಿಯಾ ಜಿಲ್ಲೆಗಳಲ್ಲಿ ರಾಜ್ಯದ ನಕ್ಸಲ್ ಚಟುವಟಿಕೆಗಳು ಕೇಂದ್ರೀಕೃತವಾಗಿದ್ದವು. ನಕ್ಸಲರ ಪ್ರಭಾವವನ್ನು ತಗ್ಗಿಸಲು ರಾಜ್ಯ ಸರ್ಕಾರವು ವಿಶೇಷ ಪಡೆಗಳ ಮೂಲಕ ಸಶಸ್ತ್ರ ಕಾರ್ಯಾಚರಣೆಯನ್ನೂ ನಡೆಸಿತು.

ಆಂಧ್ರ ಪ್ರದೇಶ–ತೆಲಂಗಾಣ: ಅವಿಭಜಿತ ಆಂಧ್ರ ಪ್ರದೇಶದ 20 ಜಿಲ್ಲೆಗಳಲ್ಲಿ (ಹೆಚ್ಚಿನ ಜಿಲ್ಲೆಗಳು ಈಗ ತೆಲಂಗಾಣದಲ್ಲಿವೆ) ನಕ್ಸಲರ ಪ್ರಭಾವವಿತ್ತು. 1990ರ ದಶಕದಿಂದಲೇ ಇಲ್ಲಿ ನಕ್ಸಲರ ಪ್ರಭಾವ ಹೆಚ್ಚುತ್ತಾ ಬಂದರೂ, 2003ರ ನಂತರ ನಕ್ಸಲರ ಪ್ರಾಬಲ್ಯ ಹೆಚ್ಚಾಯಿತು. ನಕ್ಸಲರ ಸಮಸ್ಯೆಯನ್ನು ಪರಿಹರಿಸಲು ಆಂಧ್ರಪ್ರದೇಶ ಸರ್ಕಾರವು ಒಂದೆಡೆ ಪೊಲೀಸ್ ಬಲವನ್ನು ಪ್ರಯೋಗಿಸಿತು. ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಮತ್ತು ಸಲಕರಣೆಗಳನ್ನು ಹೊಂದಿರುವ ವಿಶೇಷ ಪಡೆಯು ನಕ್ಸಲರ ವಿರುದ್ಧ ಕಾರ್ಯಾಚರಣೆಗೆ ಇಳಿಯಿತು. ಮತ್ತೊಂದೆಡೆ ರಾಜ್ಯ ಸರ್ಕಾರವು ನಕ್ಸಲ್ ಪ್ರಭಾವವಿರುವ ಜಿಲ್ಲೆಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಿತು.

ಕರ್ನಾಟಕ: ಕರ್ನಾಟಕದಲ್ಲಿಯೂ ನಕ್ಸಲರ ಚಟುವಟಿಕೆ 2000ದ ನಂತರದ ವರ್ಷಗಳಲ್ಲಿ ತೀವ್ರ ಸ್ವರೂಪ ಪಡೆದಿತ್ತು. ಕುದುರೆಮುಖ ಅರಣ್ಯವಾಸಿಗಳನ್ನು ಒಕ್ಕಲೆ ಬ್ಬಿಸುವುದರ ವಿರುದ್ಧ ಹೋರಾಟಕ್ಕೆ ಇಳಿದ ಕಾರಣ, ನಕ್ಸಲರಿಗೆ ಬೆಂಬಲ ಹೆಚ್ಚಾಗಿತ್ತು. ಚಿಕ್ಕಮಗಳೂರು, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಮತ್ತು ಮೈಸೂರು ಜಿಲ್ಲೆಗಳಲ್ಲಿ ನಕ್ಸಲರ ಚಟುವಟಿಕೆ ವಿಸ್ತರಿಸಿತ್ತು. 2005ರಲ್ಲಿ ಭದ್ರತಾ ಪಡೆಗಳ ಕಾರ್ಯಾಚರಣೆಯಲ್ಲಿ ನಕ್ಸಲ್ ನಾಯಕ ಸಾಕೇತ್ ರಾಜನ್ ಹತ್ಯೆಯ ನಂತರ ರಾಜ್ಯದಲ್ಲಿ ನಕ್ಸಲರ ಚಟುವಟಿಕೆ ಕಡಿಮೆಯಾಯಿತು

ಕೇರಳ: ವಯನಾಡಿನ ಕೆಲವೆಡೆ ನಕ್ಸಲರ ಚಟುವಟಿಕೆಗಳು ಇವೆ

ಆಧಾರ: ಕೇಂದ್ರ ಗೃಹ ಸಚಿವಾಲಯದ ವರದಿಗಳು ಮತ್ತು ಅಧಿಸೂಚನೆಗಳು, ಪಿಟಿಐ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 6

ಬಲಿಪಶುವನ್ನು ರಕ್ಷಿಸಿದ ಗುಹ

ತ್ವಷ್ಟ ಎಂಬ ದೇವಶಿಲ್ಪಿಯಿಂದ ಸುಂದರವಾದ ನಗರ ನಿರ್ಮಿಸಿಕೊಂಡು ಶಿವನ ಅನುಗ್ರಹದಿಂದ ಬ್ರಹ್ಮಾಂಡವನ್ನು ಆಳುತ್ತಿದ್ದ ಗುಹ ಅರ್ಥಾತ್ ಸುಬ್ರಹ್ಮಣ್ಯ, ಸಜ್ಜನರ ರಕ್ಷಣೆಯ ಸಂಪೂರ್ಣ ಭಾರ ಹೊತ್ತಿದ್ದ. ಯಾರದೇ ಸಮಸ್ಯೆಯನ್ನು ಕ್ಷಣಾರ್ಧದಲ್ಲಿ ಬಗೆಹರಿಸುವ ಕರುಣಾಮಯಿ ಆಗಿದ್ದ. ಹೀಗಿರುವಾಗ ಒಮ್ಮೆ ನಾರದನೆಂಬ ಬ್ರಾಹ್ಮಣ ಗುಹನ ಬಳಿ ಬಂದು 'ಮಹಾಪ್ರಭು, ನಾನು ಮಾಡುತ್ತಿದ್ದ ಅಜಮೇಧಯಜ್ಞದ ಬಲಿಪಶುವಾದ ಆಡು ಓಡಿ ಹೋಗಿದೆ. ಅಜಮೇಧಯಜ್ಞ ಪೂರ್ಣಗೊಳಿಸದಿದ್ದರೆ ಪಾಪಕ್ಕೆ ಸಿಲುಕುತ್ತೇನೆ. ಹೇಗಾದರೂ ಬಲಿಪಶುವನ್ನು ಹುಡುಕಿಕೊಡು' ಅಂತ ಕೋರಿದ. ಸರ್ವ ಜೀವಸಂಕುಲಗಳ ರಕ್ಷಕನಾದ ಸುಬ್ರಹ್ಮಣ್ಯ ಮೌನವಾಗಿ ಆ ಬ್ರಾಹ್ಮಣನ ಮೊರೆ ಕೇಳಿದ.ಸುಬ್ರಹ್ಮಣ್ಯ ತನ್ನ ಕೋರಿಕೆ ಬಗ್ಗೆ ಅನ್ಯಮನಸ್ಕನಾಗಿದ್ದಾನೆಂದು ನಾರದನೆಂಬ ಹೆಸರಿನ ಬ್ರಾಹ್ಮಣ ಪರಿಪರಿಯಾಗಿ ಬೇಡುತ್ತಾ, ಸುಬ್ರಹ್ಮಣ್ಯನ ಗುಣಗಾನ ಮಾಡಿದ.

ಪ್ರಸನ್ನನಾದ ಶಿವಪುತ್ರ ಸ್ಕಂದ ತನ್ನ ಗಣವಾದ ವೀರಬಾಹುವನ್ನು ಕರೆದು, 'ಈ ಬ್ರಾಹ್ಮಣನೊಂದಿಗೆ ಹೋಗಿ, ಯಜ್ಞಸ್ಥಳದಿಂದ ಓಡಿ ಹೋಗಿರುವ ಇವರ ಆಡನ್ನು ಹುಡುಕಿ ಇಲ್ಲಿಗೆ ಕರೆತರಬೇಕು' ಎಂದು ಆದೇಶಿಸಿದ. ತನ್ನ ಒಡೆಯ ಸುಬ್ರಹ್ಮಣ್ಯನು ಮಾಡಿದ ಆಜ್ಞೆಯನ್ನು ಶಿರಸಾ ವಹಿಸಿ ಪಾಲಿಸುವುದಾಗಿ ಹೇಳಿದ ವೀರಬಾಹು ಎಂಬ ಶಿವಗಣ ಬ್ರಾಹ್ಮಣ ನಾರದನೊಂದಿಗೆ ಹೋದ. ಆದರೆ ಇಡೀ ಬ್ರಹ್ಮಾಂಡವನ್ನೆಲ್ಲಾ ಹುಡುಕಿದರೂ ಯಜ್ಞಪಶುವಾದ ಆಡು ಸಿಕ್ಕಲಿಲ್ಲ. ಕೊನೆಗೆ ವಿಷ್ಣುವಿನ ವೈಕುಂಠಲೋಕದಲ್ಲಿ ಆಡೊಂದು ಸೇರಿಕೊಂಡು ಉಪಟಳ ಕೊಡುತ್ತಿದೆ ಎಂಬ ಮಾಹಿತಿ ಸಿಕ್ಕಿತು. ತಕ್ಷಣವೇ ವೀರಬಾಹು ವೈಕುಂಠಕ್ಕೆ ಹೋದ. ಅಲ್ಲಿ ಉಪದ್ರವ ಕೊಡುತ್ತಿದ್ದ ಆಡು ತಾನು ಹುಡುಕುತ್ತಿದ್ದ ಯಜ್ಞದ ಬಲಿಪಶು ಎಂಬುದನ್ನು ಖಾತರಿಪಡಿಸಿಕೊಂಡ. ನಂತರ ಆಡನ್ನು ಬೆನ್ನತ್ತಿ ಹಿಡಿದ. ವೀರಬಾಹು ಹಿಡಿತದಿಂದ ಬಿಡಿಸಿಕೊಳ್ಳಲು ಆಡು ಶತಪ್ರಯತ್ನ ಪಟ್ಟಿತು. ಆಡಿನ ಕೊಂಬನ್ನು ಬಲವಾಗಿ ಹಿಡಿದುಕೊಂಡೇ ಅದನ್ನು ಸುಬ್ರಹ್ಮಣ್ಯನ ಮುಂದೆ ಎಳೆದು ತಂದ.

ವೀರಬಾಹುವಿನ ಬಿಗಿ ಹಿಡಿತದಿಂದ ಪಾರಾಗಲು ಕೊಸರಾಡುತ್ತಲೇ ಬಂದ ಆಡು ಸುಬ್ರಹ್ಮಣ್ಯನ ಬಳಿ ಬಂದ ನಂತರವೂ ತಪ್ಪಿಸಿಕೊಳ್ಳಲು ಹರ ಸಾಹಸ ಪಡುತ್ತಿತ್ತು. ಪ್ರಾಣಭಯದಿಂದ ಓಡಿ ಹೋಗಲು ರೋಷಾವೇಶ ಪ್ರದರ್ಶಿಸುತ್ತಿದ್ದ ಆಡಿನ ಮೇಲೆ ಸುಬ್ರಹ್ಮಣ್ಯ ಕುಳಿತ. ತಕ್ಷಣವೇ ಆಡು ಸ್ಕಂದನನ್ನು ಕೂರಿಸಿಕೊಂಡು ಓಡತೊಡಗಿತು. ಇಡೀ ಬ್ರಹ್ಮಾಂಡವನ್ನೆಲ್ಲಾ ಸುತ್ತಿಕೊಂಡು ಮತ್ತೆ ಸುಬ್ರಹ್ಮಣ್ಯನಿದ್ದ ಸ್ಥಳಕ್ಕೇ ಬಂದು ನಿಂತಿತು. ಆಡಿನ ಮೇಲೆ ಕುಳಿತಿದ್ದ ಗುಹ ಕೆಳಗಿಳಿದು ತನ್ನ ಸಿಂಹಾಸನದಲ್ಲಿ ಕುಳಿತ. ಆದರೆ ಆಡು ಹಿಂದಿನಂತೆ ರೋಷಾವೇಶ ಪ್ರದರ್ಶಿಸದೆ ವಿನೀತ ಭಾವದಿಂದ ಸುಬ್ರಹ್ಮಣ್ಯ ಸ್ವಾಮಿಯತ್ತ ನೋಡುತ್ತಾ ನಿಂತಿತು. ಆಗ ಅಲ್ಲಿಗೆ ಬಂದ ನಾರದ ಎಂಬ ಹೆಸರಿನ ಬ್ರಾಹ್ಮಣ, ತನ್ನ ಅಜಮೇಧ ಯಜ್ಞಕ್ಕೆ ಬಲಿಕೊಡಲು ಆಡನ್ನು ಕರೆದೊಯ್ಯುವುದಾಗಿ ಹೇಳಿದ. ಈ ಸಂದರ್ಭದಲ್ಲಿ ಆಡು ಭಯದಿಂದ ದೈನ್ಯತಾಭಾವದಲ್ಲಿ ಸ್ವಾಮಿ ಸುಬ್ರಹ್ಮಣ್ಯನನ್ನು ನೋಡಿತು. ಆಡಿನ ಸ್ಥಿತಿಗೆ ಮರುಕಪಟ್ಟ ಶಿವಕುಮಾರ ಭಯಪಡದಿರುವಂತೆ ಹೇಳಿದ.

ನಂತರ ನಾರದನೆಂಬ ಆ ಬ್ರಾಹ್ಮಣನಿಗೆ 'ಇದು ಯಜ್ಞಕ್ಕೆ ಬಲಿಕೊಡುವ ಅಜವಲ್ಲ. ಇದರ ಪ್ರಭಾವ ನಿನಗೆ ತಿಳಿಯದು. ನೀನು ಮನೆಗೆ ಹೋಗು, ನಾನು ನೀಡುವ ಪ್ರಸಾದದಿಂದ ನಿನ್ನ ಯಜ್ಞ ಪೂರ್ಣಗೊಳ್ಳುವುದು. ನಿನಗೆ ಯಾವ ಪಾಪಭೀತಿಯೂ ಕಾಡುವುದಿಲ್ಲ' ಅಂತ ಹೇಳಿ ಸಮಾಧಾನಿಸಿದ. ಸುಬ್ರಹ್ಮಣ್ಯಸ್ವಾಮಿಯ ಮಾತಿನಿಂದ ಸಂತೃಪ್ತನಾದ ಆ ಬ್ರಾಹ್ಮಣ ಮತ್ತಷ್ಟು ಸ್ವಾಮಿಯ ಗುಣಗಾನ ಮಾಡಿ ನಮಸ್ಕರಿಸಿ ಹೊರಟು ಹೋದ. ತನ್ನ ಪ್ರಾಣ ರಕ್ಷಿಸಿದ ಸ್ವಾಮಿಗೆ ಆಡು ಕೃತಜ್ಞತಾಭಾವದಿಂದ ವಂದಿಸಿತು.

ಕರ್ನಾಟಕ ಚಟುವಟಿಕೆ ಸ್ತಬ್ಧ

ನಕ್ಸಲರು ನಡೆದಾಡಿದ ಪಶ್ಚಿಮಘಟ್ಟದ ಹಳ್ಳಿಗಳಲ್ಲಿ ಈಗ ಗುಂಡಿನ ಸದ್ದು ಮೊರೆಯುತ್ತಿಲ್ಲ, ಪೊಲೀಸರ ಬೂಟಿನ ಸಪ್ಪಳವೂ ಕೇಳುತ್ತಿಲ್ಲ. 'ನಕ್ಸಲ್ ಪೀಡಿತ' ಎಂಬ ಹಣೆಪಟ್ಟಿ ಕಟ್ಟಿಕೊಂಡ ಕುಗ್ರಾಮಗಳಲ್ಲಿ ನಕ್ಸಲರ ಭಯದ ಬದಲಾಗಿ ಅಲ್ಲಿನ ಗ್ರಾಮಸ್ತರು ಅಭಿವೃದ್ಧಿಗೆ ಹಾತೊರೆಯುತ್ತಿದ್ದಾರೆ. ಆದರೆ, ಗ್ರಾಮಸ್ತರ ಗೋಳು ಅರಣ್ಯರೋದನವಾಗಿದೆ.

'ವನ್ಯಜೀವಿ ಹಾಗೂ ಅರಣ್ಯ ಕಾನೂನುಗಳು ಅಭಿವೃದ್ಧಿಗೆ ತೊಡಕಾಗಿವೆ. ಬೆರಳೆಣಿಕೆ ಮತದಾರರು ಎಂಬ ಕಾರಣಕ್ಕೆ ರಾಜಕೀಯ ನಾಯಕರಿಗೂ ನಕ್ಸಲ್ ಪೀಡಿತ ಗ್ರಾಮಗಳ ಅಭಿವೃದ್ಧಿ ಆದ್ಯತೆಯ ವಿಷಯವಾಗಿ ಕಾಣುತ್ತಿಲ್ಲ' ಎಂದು ಗ್ರಾಮಸ್ತರು ಹೇಳುತ್ತಿದ್ದಾರೆ.

ಉಡುಪಿ ಜಿಲ್ಲೆಯ ಹೆಬ್ರಿ, ಕಾರ್ಕಳ, ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ, ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ, ಶೃಂಗೇರಿ, ಕಳಸದ ಸುತ್ತಮುತ್ತಲಿನ ಹಲವು ಗ್ರಾಮಗಳು ಕನಿಷ್ಠ ಮೂಲಸೌಕರ್ಯಗಳಿಲ್ಲದೆ ನರಳುತ್ತಿವೆ.

ಕೇರಳದತ್ತ ನಕ್ಸಲರು: ದಶಕಗಳ ಹಿಂದೆ, ಕರಪತ್ರ ಹಾಗೂ ಬ್ಯಾನರ್‌ಗಳನ್ನು ಕಟ್ಟಿ ಇರುವಿಕೆಯನ್ನು ಗುರುತಿಸಿಕೊಳ್ಳುತ್ತಿದ್ದ, ಆತಂಕ ಸೃಷ್ಟಿಸುತ್ತಿದ್ದ ನಕ್ಸಲರ ಸದ್ದು ಈಗ ಕೇಳುತ್ತಿಲ್ಲ. ಕರ್ನಾಟಕ ಸುರಕ್ಷಿತವಲ್ಲ ಎಂಬ ಕಾರಣಕ್ಕೆ ನಕ್ಸಲರು ಕೇರಳಕ್ಕೆ ಸ್ಥಳಾಂತರಗೊಂಡಿದ್ದಾರೆ ಎನ್ನಲಾಗುತ್ತಿದೆ. ಇದಕ್ಕೆ ಪೂರಕ ಎಂಬಂತೆ, ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ನಕ್ಸಲ್ ಚಟುವಟಿಕೆಗಳು ಪತ್ತೆಯಾಗಿಲ್ಲ. ನಕ್ಸಲ್ ನಿಗ್ರಹದಳದ 14 ಕ್ಯಾಂಪ್‌ಗಳು ಪ್ರತಿದಿನ ಅರಣ್ಯ ಪ್ರದೇಶಗಳಲ್ಲಿ ಶೋಧ ನಡೆಸುತ್ತಿವೆ ಎಂದು ನಕ್ಸಲ್ ನಿಗ್ರಹಪಡೆಯ ಎಸ್‌ಪಿ ಪ್ರಕಾಶ್ ನಿಕ್ಕಂ ಮಾಹಿತಿ ನೀಡುತ್ತಾರೆ.

ಗುಂಡಣ್ಣ



ದಿನ ಭವಿಷ್ಯ

ಸೋಮವಾರ ನವೆಂಬರ್ 15, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತೀಕ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ವಿಶಾಖಾ ಏಕಾದಶೀ ಗಂ. 4-43 (ಬೆ. 8-18) ಸೋಮವಾರ ನಿತ್ಯ ನಕ್ಷತ್ರ ಉತ್ತರಾಭಾದ್ರ ಗಂ. 34-32 (ರಾ. 8-13) ವಜ್ರ ನಾಮ ಯೋಗ ಗಂ. 54-9 ಭದ್ರೆ ಕರಣ ಗಂ. 4-46 ವಿಷ ಶೇಷ ಗಂ. 1-29 ಅಮೃತ ಗಂ 22-52: ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 : ಸೂರ್ಯೋದಯ: 6-21 ಸೂರ್ಯಾಸ್ತ: 5-47 ಅದೃಷ್ಟ ಸಂಖ್ಯೆ 3 6

ಮೇಷ: ವೈವಾಹಿಕ ಜೀವನದಲ್ಲಿ ಭಾಗ್ಯೋದಯವನ್ನು ಕಾಣಲಿದ್ದೀರಿ. ರಾಜಕೀಯದಲ್ಲಿರುವವರಿಗೆ ಭರಸಿಡಿಲಿನ ಸುದ್ದಿಯೊಂದು ಬಂದೆರಗಲಿದೆ. ಸ್ಥಿರಾಸ್ತಿಯ ಖರೀದಿಯತ್ತ ನಿಮ್ಮ ಮನಸ್ಸು ಮುಂದಾಗಲಿದೆ.

ವೃಷಭ: ಅನಿವಾರ್ಯ ಬದಲಾವಣೆಗಳಿಗೆ ಒಳಗಾಗಿ ಇದ್ದುದನ್ನು ಕಳೆದುಕೊಳ್ಳಬೇಡಿ. ಹೊಸ ಕಾರ್ಯಯೋಜನೆಯಿಂದ ದೂರವಿರುವುದು ಉತ್ತಮ. ವಿದ್ಯಾರ್ಥಿಗಳಿಗೆ ಭವಿಷ್ಯದ ನೆಲೆ ದೊರೆಯಲಿದೆ.

ಮಿಥುನ: ಮಿತ್ರರ ಸಹಕಾರದಿಂದಾಗಿ ರಾಜಕೀಯ ವ್ಯವಹಾರ ಸುಗಮ. ಆರ್ಥಿಕ ದೃಢೀಕರಣದಿಂದಾಗಿ ಕಾರ್ಯಾನುಕೂಲ. ಮನೆಯಲ್ಲಿ ಹಬ್ಬದ ವಾತಾವರಣ ಮುಂದುವರಿಯಲಿದೆ. ಮನೆಯವರ ಅಹವಾಲನ್ನು ಗಮನಿಸಿ.

ಕರ್ಕಾಟಕ: ಕುಶಲ ಕಾರ್ಮಿಕರಿಗೆ ಮನ್ನಣೆ ಸಿಗಲಿದ್ದು, ಸರ್ಕಾರದಿಂದ ಹೆಚ್ಚಿನ ಸಹಾಯ ಸಹಕಾರಗಳನ್ನು ನಿರೀಕ್ಷಿಸಬಹುದು. ಎಲ್ಲ ಕಾರ್ಯಗಳಲ್ಲಿಯೂ ತಲ್ಲೀನತೆಯಿಂದ ಸರಿಹೊಂದುವ ಸಾಧ್ಯತೆ.

ಸಿಂಹ: ಸಾಂಸಾರಿಕ ಸೌಖ್ಯಕ್ಕಾಗಿ ಹೊಸ ಪ್ರಯತ್ನ ನಡೆಸಲಿದ್ದೀರಿ. ಆರ್ಥಿಕ ಸಂಕಷ್ಟ ಬಂದೆರಗುವ ಸಾಧ್ಯತೆ. ಹೊಸ ಆದಾಯಮೂಲದ ಅನ್ವೇಷಣೆ ಮಾಡಲಿದ್ದೀರಿ. ಮನಸ್ಸಿನ ದುಗಡದ ನಿವಾರಣೆಯಾಗಲಿದೆ.

ಕನ್ಯಾ: ಆಲಸ್ಯ ಉದಾಸೀನತೆ ತೊಡೆದುಹಾಕಿ ಕಾರ್ಯದಲ್ಲಿ ಮಗ್ನರಾಗಿರಿ. ಅನಗತ್ಯ ಕೋಪದಿಂದ ನಷ್ಟದ ಸಾಧ್ಯತೆ. ಬಂಧುಗಳಿಗೆ ಆದರಾತಿಥ್ಯ ನೀಡಲಿದ್ದೀರಿ. ದೈಹಿಕವಾಗಿ ಸಣ್ಣಪುಟ್ಟ ನೋವುಗಳು ಕಾಣಿಸಿಕೊಳ್ಳುವ ಸಾಧ್ಯತೆ.

ತುಲಾ: ಆರ್ಥಿಕ ಕ್ರೋಢೀಕರಣದ ಜೊತೆಗೆ ಮಂಗಲ ಕಾರ್ಯಗಳು ನಿಶ್ಚಯವಾಗುವ ಸಾಧ್ಯತೆ. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಯೋಜನೆ ನಿರೂಪಿಸಲಿದ್ದೀರಿ. ವಾಹನ ಚಲಾವಣೆಯಲ್ಲಿ ಜಾಗೃತೆ ವಹಿಸಿ.

ವೃಶ್ಚಿಕ: ಹೊಸ ಉದ್ಯಮವೊಂದರಿಂದ ಆದಾಯದ ಸಾಧ್ಯತೆ. ವೈದ್ಯರ ನೆರವಿನಿಂದಾಗಿ ಆರೋಗ್ಯದಲ್ಲಿ ಸ್ಥಿರತೆ. ಆರ್ಥಿಕ ಅಭಿವೃದ್ಧಿ. ಕುಟುಂಬದಲ್ಲಿ ಸಾಮರಸ್ಯ ಕಾಪಾಡುವಿರಿ.

ಧನು: ನಿಮ್ಮ ಪಾಲಿನ ಶ್ರದ್ಧೆಯು ಅನುಕೂಲಕರವಾಗಿ ಪರಿಣಮಿಸಲಿದೆ. ಸಮಾಜಕ್ಕೆ ಉತ್ತಮ ಸಂದೇಶ ಕೊಡುವತ್ತ ಕಾರ್ಯಪ್ರವೃತ್ತರಾಗುವಿರಿ. ರಾಜಕೀಯದಲ್ಲಿರುವ ಯುವತಿಯರಿಗೆ ಯಶಸ್ಸು.

ಮಕರ: ಮಾಡಿದ ಕೆಲಸಕಾರ್ಯಗಳಲ್ಲಿ ಮನ್ನಣೆ ದೊರೆಯುತ್ತದೆ. ಹೊಸ ಕಾರ್ಯ ರೂಪಿಸುವಲ್ಲಿ ಮುಂಚಿತ ಯೋಚನೆ ಸಫಲವಾಗಲಿದ್ದು ಯಶಸ್ಸಿನತ್ತ ನಿಮ್ಮ ಪಯಣ. ಬೇರೆಯವರ ವ್ಯವಹಾರದಲ್ಲಿ ಮಧ್ಯಸ್ತಿಕೆ ಬೇಡ.

ಕುಂಭ: ವಿದ್ಯಾರ್ಥಿಗಳಿಗೆ ಪ್ರಗತಿಪರ ಚಿಂತನೆಯಿಂದ ಉತ್ತಮ ಯಶಸ್ಸು. ವೈದ್ಯರಿಗೆ ಪ್ರಶಂಸೆ. ಬಂಧುಗಳ ಕಿರಿಕಿರಿಯಿಂದಾಗಿ ಬೇಸರವಾದರೂ ದೇವರ ಕೃಪೆ ನಿಮ್ಮ ಪಾಲಿಗೆ ಒದಗಿಬರಲಿದೆ.

ಮೀನ: ಸ್ಫೂರ್ತಿತುಂಬಿದ ಜೀವನದೊಂದಿಗೆ ಉತ್ತಮ ನೆಲೆ ಕಾಣಲಿದ್ದೀರಿ. ಧಾರಾಳವಾಗಿ ಹಣದ ಹರಿವು ನಿಮ್ಮೆಡೆಗೆ ಹರಿದುಬರಲಿದೆ. ಉತ್ತಮವಾದ ಕುಟುಂಬ ಬಾಂಧವ್ಯದಲ್ಲಿ ವೃದ್ಧಿ.

ನಿಮ್ಮ ಜನ್ಮದಿನ 15-ನವೆಂಬರ್ ಈದಿನ ಅತ್ಯಂತ ಶುಭ ದಿನವಾಗಿದೆ. ಆರ್ಥಿಕ ಕ್ರೋಢಿಕರಣವು ಸುಗಮವಾಗಿ ನಡೆದರೂ ಪಾಲುದಾರಿಕೆ ವ್ಯವಹಾರಗಳಲ್ಲಿ ಕೈ ಹಾಕುವುದು ಬೇಡ. ಕೈಗಾರಿಕೋದ್ಯಮಿಗಳಿಗೆ ನಷ್ಟದ ಭೀತಿ. ರಾಜಕಾರಣಿಗಳಿಗೆ ಸೋಲಿನ ಸಾಧ್ಯತೆ. ಕೃಷಿಕರಿಗೆ ಉತ್ತಮ ಲಾಭ ಬಂದೊದಗುವ ಸಾಧ್ಯತೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಹಿತವಾದ ಮನಸ್ಸಿನ ಪಾಕ

ಸುತೆಯ ಪೋಷಿಸಿ ಬೆಳಸಿ,
ಧನಕನಕದೊಡನವಳನ್|
ಇತರಗೃಹಕಿತ್ತು ನೀಂ ಕೇಳ್ವ ಮುಯ್ಯೇನು?||
ಪ್ರತಿಫಲವು ಬೇರೇಕೆ? ಸುಕೃತಕದು ತಾನೆ ಫಲ|
ಹಿತಮನದ ಪಾಕಕದು – ಮಂಕುತಿಮ್ಮ ||497||

ಪದ-ಅರ್ಥ: ಧನಕನಕದೊಡನವಳನ್ = ಧನ + ಕನಕದೊಡನೆ + ಅವಳನ್ (ಅವಳನ್ನು), ಮುಯ್ಯಿ = ಪ್ರತಿಫಲ, ಕಾಣಿಕೆ, ಪಾಕಕದು = ಪಾಕಕ್ಕೆ (ಹದಕ್ಕೆ) + ಅದು

ವಾಚ್ಯಾರ್ಥ: ಮಗಳನ್ನು ಸಲಹಿ, ಬೆಳಸಿ ಮದುವೆಯಲ್ಲಿ ಹಣ, ಚಿನ್ನಗಳೊಡನೆ ಅವಳನ್ನು ಮತ್ತೊಂದು ಮನೆಗೆ ಕಳುಹಿಸಿ ನೀನು ಕೇಳುವ ಪ್ರತಿಫಲವೇನು? ಮಾಡಿದ ಒಳ್ಳೆಯ ಕೆಲಸವೆ ಫಲ. ಇದು ಹಿತವಾದ ಮನಸ್ಸಿನ ಪಾಕಕ್ಕೆ ಬೇಕಾದದ್ದು.

ವಿವರಣೆ: ಅವನೊಬ್ಬ ಝೆನ್ ಸಂತ. ಆತ ಊರೂರು ಅಲೆದು ಹಣ ಸಂಗ್ರಹ ಮಾಡಿ ಝೆನ್ ಸೂತ್ರಗಳನ್ನು ಮುದ್ರಿಸಲು ಶ್ರಮಿಸಿದ. ಸಾಕಷ್ಟು ದುಡ್ಡು ಸೇರಿ ಪ್ರಕಟಣೆಯ ಕಾರ್ಯ ಪ್ರಾರಂಭವಾಗುವಾಗ ಹತ್ತಿರದ ನದಿಯಲ್ಲಿ ಪ್ರವಾಹ ಬಂದು, ನೀರು ಉಕ್ಕಿ ಸಾವಿರಾರು ಜನ ಮನೆ-ಮಠ ಕಳೆದುಕೊಂಡರು. ಸಂತ ತಾನು ಕೂಡಿಟ್ಟಿದ್ದ ಹಣವನ್ನೆಲ್ಲ ಅವರಲ್ಲಿ ಹಂಚಿ ನೆರವಾದ. ಮತ್ತೆ ಹತ್ತು ವರ್ಷ ಅಲೆದು ಹಣ ಕೂಡಿಸಿದ. ಮುದ್ರಿಸುವ ಕಾರ್ಯ ಶುರುವಾಗುವ ಮುನ್ನ ಹಳದಿ ಜ್ವರ ದೇಶದಲ್ಲಿ ಹರಡಿ ಹಾಹಾಕಾರವಾಯಿತು. ಎಲ್ಲಿ ನೋಡಿದರಲ್ಲಿ ಸಾಲುಸಾಲು ಹೆಣಗಳು. ಸಂತ ಶಿಷ್ಯರನ್ನು ಸೇರಿಸಿಕೊಂಡು, ತನ್ನ ಬಳಿಯಿದ್ದ ಹಣದಿಂದ ಜನರಿಗೆ ವಸತಿ, ಊಟದ ವ್ಯವಸ್ಥೆ ಮಾಡಿದ. ನಂತರ ತನ್ನ ವಯಸ್ಸನ್ನು ಗಮನಿಸದೆ ಮತ್ತೆ ಹನ್ನೆರಡು ವರ್ಷ ಊರೂರು ತಿರುಗಿ ಹಣ ಸೇರಿಸಿ, ಝೆನ್ ಸೂತ್ರಗಳನ್ನು ಮುದ್ರಿಸಿದ. ಅವು ಇನ್ನೂ ಜಪಾನಿನ ಕ್ಯೋಟೋ ಸಂಗ್ರಹಾಲಯದಲ್ಲಿವೆ. ಮುದ್ರಣ ಮುಗಿದ ಮೇಲೆ ಆತ ಎಲ್ಲರನ್ನು ತೊರೆದು ಪರ್ವತಗಳ ಕಡೆಗೆ ಹೊರಟ. ಯಾರೋ ಕೇಳಿದರು, 'ನೀನು ಇಷ್ಟು ಕಷ್ಟಪಟ್ಟೆಯಲ್ಲ, ಸೂತ್ರಗಳನ್ನು ಮುದ್ರಿಸಲು, ನಿನಗೆ ಏನು ದೊರಕಿತು?' ಆತ ನಿರಾಳವಾಗಿ ನಕ್ಕು ಹೇಳಿದ, 'ನನಗೋ, ಆತ್ಮ ಸಂತೋಷ'. ನಂತರ ಯಾರೂ ಆ ಸಂತನನ್ನು ಮರಳಿ ಕಾಣಲಿಲ್ಲ. ತನಗೆ ಸಾರ್ಥಕತೆಯನ್ನು ಕೊಟ್ಟ ಕಾರ್ಯವನ್ನು ಸಂತೋಷದಿಂದ ಮುಗಿಸಿ ಆತ ನಿರ್ಗಮಿಸಿದ್ದ. ಅವನ ಕಾರ್ಯಕ್ಕೆ ದೊರೆತ ಪ್ರತಿಫಲ - ಧನ್ಯತೆ ಮತ್ತು ಸಂತೋಷ.

ಹೀಗೆಯೇ ಜನರು ತಮ್ಮ ಮನಕೊಪ್ಪಿದ ಕಾರ್ಯವನ್ನು ಶ್ರದ್ಧೆಯಿಂದ ಮಾಡಿ ಧನ್ಯತೆಯನ್ನು ಪಡೆದಿದ್ದಾರೆ. ಕೆಲವರು ಸಮಾಜಸೇವೆಯಲ್ಲಿ, ರಾಷ್ಟ್ರ ರಕ್ಷಣೆಯಲ್ಲಿ, ಕೃಷಿಯಲ್ಲಿ, ವಿಜ್ಞಾನದ ಆವಿಷ್ಕಾರಗಳಲ್ಲಿ, ಆಟದಲ್ಲಿ, ಕಲೆಯಲ್ಲಿ ಸಾರ್ಥಕತೆಯನ್ನು ಅನುಭವಿಸಿದ್ದಾರೆ. ಸಾಮಾನ್ಯ ಜನರು ತಮ್ಮ ಪುಟ್ಟ ಮಗಳನ್ನು ಲಾಲಿಸಿ, ಪೋಷಿಸಿ, ಸರಿಯಾದ ಸಂಸ್ಕಾರಗಳನ್ನು ನೀಡಿ, ಪ್ರಾಪ್ತವಯಸ್ಕಳಾದಾಗ, ಅನುರೂಪನಾದ ವರನನ್ನು ನೋಡಿ, ಯೋಗ್ಯತಾನುಸಾರ ಮದುವೆಯನ್ನು ಮಾಡಿ, ಬೇರೆ ಮನೆಗೆ ಕಳುಹಿಸಿದಾಗ ಅವರಿಗೆ ಯಾವ ಪ್ರತಿಫಲದ ಅಪೇಕ್ಷೆ ಇರುತ್ತದೆ? ಸುಸಂಸ್ಕೃತಳಾದ ಮಗಳು ಮತ್ತೊಂದು ಮನೆಯಲ್ಲೂ ಆ ಸಂಸ್ಕೃತಿಯ ಬೆಳಕನ್ನು ಪಸರಿಸುತ್ತಾಳೆಂಬ ಸಂತೃಪ್ತಿ ಸಾಲದೆ? ತಾನು ಮಾಡಿದ ಆ ಸುಕೃತಕೆ ಸಂತೋಷ, ತೃಪ್ತಿಯೇ ಫಲ. ಒಳ್ಳೆಯ ಕಾರ್ಯಕ್ಕೆ ಒಳ್ಳೆಯ ಫಲವೇ ದೊರೆಯುತ್ತದೆ. ಹಿತವಾದ ಮನಸ್ಸಿನ ಪಾಕಕ್ಕೆ ಆ ಸಂತೃಪ್ತಿಯೇ ಸಾಕು. ❖

ಪದಬಂಧ 4778

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಚರವಲ್ಲುದುದು ಇದು (3)
4.ಮನ ಕೊನೆಗಿಟ್ಟಾಗಿನ ನಿಗ್ರಹ (3)
5.ತಪ್ಪು ಮಾಡಿರುವವನು (4)
6.ಉತ್ತರ ದಿಕ್ಕಿದು (4)
8.ತೆಪರ ಪಾವತಿಸಿದ ಸುಂಕ (2)
10.ತರತಮ ತೋರಿದಾತನ ಅಜ್ಞಾನ! (2)
13.ದಾರದಲ್ಲಿ ಗೋಚರಿಸಿದ ಶ್ರೀಕೃಷ್ಣ (4)
14.ಸುಮಾರು ಮೂರು ಮೈಲುಗಳ ಒಂದು ಅಳತೆ (4)
15.ದಿಟ್ಟತನ ಇಲ್ಲಿ ಕಾಣುತ್ತಿದೆ (3)
16.ಅವನಿರುವ ಭೂಮಿ! (3)

ಮೇಲಿಂದ ಕೆಳಕ್ಕೆ
1.ಹೊಟ್ಟೆ ಹೊರೆಯುವುದು (6)
2.ಬೇರೆಡೆಗೆ ಹೋಗದಂತೆ ತಡೆಹಿಡಿಯುವಿಕೆ (5)
3.ಆಳವನ್ನು ಅಳೆಯಲಾಗದದ್ದು! (3)
5.ಒಳ್ಳೆಯ ಗುಣಗಳಿಂದ ಕೂಡಿರುವವ (4)
7.ಹಿಂದಾದುದನ್ನು ಮತ್ತೊಮ್ಮೆ ವಿವರವಾಗಿ ನೋಡುವುದು (6)
9.ದಾರಿಯಲ್ಲಿ ಪಡೆದಿರುವ ಅಪ್ಪಣೆ ಚೀಟಿ (4)
11.ಉತ್ತರದವನ ಸೊಳ್ಳೆಪರದೆ (5)
12.ರಂಧ್ರ ಕೊರೆಯುವ ಸಾಧನ (3)



4777ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಶೈಶವ 4.ಪಿಂಗಳ 6.ರವಾನಿಸು 8.ಖಲಿಂದರ 10.ನಸುಕು 13.ಕಸೂತಿ 15.ಹಸುಗೂಸು 19.ಮದಗಜ 21.ಒನಕೆ 22.ಲಿಲಾವು

ಮೇಲಿಂದ ಕೆಳಕ್ಕೆ: 1.ಶೈಥಿಲ್ಯ 2.ವರಮಾನ 3.ಮೌನಿನಿ 5.ಗದ್ಗದ 7.ಸುಖ 9.ರಜನಿ 11.ಕುಹಕ 12.ಸಂದೇಹ 14.ತಿಲಾಂಜಲಿ 16.ಸುದಿನ 17.ಸುಮ 18.ಚಡಾವು 20.ದತ್ತಿ

ಸುಡೊಕು 5164

3	9		2		5		6	
			4			8		5
	4	5			9		3	
4	6		9		7			
				4		1		6
8		7	5		6		4	
		4			2			7
7	2			5		6		3
	8		7				5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5163 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹465

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ	₹128-533
ದ್ವಿತಳಿ	₹269-700

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಅಮೆಜಾನ್ ವಿರುದ್ಧ ದೂರು

ನವದೆಹಲಿ (ರಾಯಿಟರ್ಸ್): ಫ್ಯೂಚರ್ ರಿಟೇಲ್ ಲಿಮಿಟೆಡ್ ಜೊತೆಗಿನ ವಹಿವಾಟಿಗೆ ಸಂಬಂಧಿಸಿದಂತೆ ಅಮೆಜಾನ್ ಕಂಪನಿಯು ಭಾರತೀಯ ಸ್ಪರ್ಧಾ ಆಯೋಗಕ್ಕೆ (ಸಿಸಿಐ) ನೀಡಿರುವ ಮಾಹಿತಿಗೂ, ಕಂಪನಿಯ ಆಂತರಿಕ ಸಂವಹನದ ಸಂದರ್ಭದಲ್ಲಿ ಉಲ್ಲೇಖವಾಗಿರುವ ಮಾಹಿತಿಗೂ ತಾಳೆ ಆಗುತ್ತಿಲ್ಲ ಎಂದು ಫ್ಯೂಚರ್ ರಿಟೇಲ್ ಕಂಪನಿಯ ಸ್ವತಂತ್ರ ನಿರ್ದೇಶಕರು ಆರೋಪಿಸಿದ್ದಾರೆ.

ಈ ವಿಚಾರವಾಗಿ ಅಮೆಜಾನ್ ಹಾಗೂ ಸಿಸಿಐ ಪ್ರತಿಕ್ರಿಯೆ ನೀಡಿಲ್ಲ. ಅಮೆಜಾನ್ ಕಂಪನಿಯ ಉದ್ದೇಶವು ಫ್ಯೂಚರ್ ಕೂಪನ್ಸ್ ಕಂಪನಿಯಲ್ಲಿ ಹೂಡಿಕೆ ಮಾಡುವುದಲ್ಲ. ಬದಲಿಗೆ, ಫ್ಯೂಚರ್ ರಿಟೇಲ್‌ನಲ್ಲಿ ಹೂಡಿಕೆ ಮಾಡುವ ಉದ್ದೇಶವನ್ನು ಅಮೆಜಾನ್ ಹೊಂದಿದೆ ಎಂದು ಅವರು ನವೆಂಬರ್ 10ರಂದು ಬರೆದಿರುವ ಪತ್ರದಲ್ಲಿ ಹೇಳಿದ್ದಾರೆ. 'ಅಮೆಜಾನ್‌ಗೆ ಹೂಡಿಕೆಗೆ ನೀಡಿರುವ ಅನುಮತಿಯನ್ನು ಸಿಸಿಐ ರದ್ದುಪಡಿಸಬೇಕು' ಎಂದು ಫ್ಯೂಚರ್ ಕಂಪನಿಯ ಸ್ವತಂತ್ರ ನಿರ್ದೇಶಕರು ಒತ್ತಾಯಿಸಿದ್ದಾರೆ.

ನಿರ್ಮಲಾ ಸಭೆ

ನವದೆಹಲಿ (ಪಿಟಿಐ): ಸುಧಾರಣೆಗಳತ್ತ ಗಮನ ನೀಡುವ ವಾಣಿಜ್ಯ ವಾತಾವರಣ ನಿರ್ಮಿಸುವ ಬಗ್ಗೆ ಚರ್ಚಿಸಲು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ರಾಜ್ಯಗಳ ಮುಖ್ಯಮಂತ್ರಿಗಳು, ಹಣಕಾಸು ಸಚಿವರ ಜೊತೆ ಸೋಮವಾರ ಸಭೆ ನಡೆಸಲಿದ್ದಾರೆ.

ಸಭೆಯು ವರ್ಚುವಲ್ ಆಗಿ ನಡೆಯಲಿದೆ. ಖಾಸಗಿ ವಲಯದಲ್ಲಿ ಆಶಾದಾಯಕ ವಾತಾವರಣ ಇದೆ. ಈ ಪರಿಸ್ಥಿತಿಯನ್ನು ಬಳಸಿಕೊಂಡು ಇನ್ನಷ್ಟು ಬೆಳವಣಿಗೆ ಸಾಧಿಸುವ ಅವಕಾಶ ಇದೆ ಎಂಬುದು ಕೇಂದ್ರದ ಲೆಕ್ಕಾಚಾರ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

9ನೇ ವರ್ಷದ ಚಿರಸ್ಮರಣೆ
ಶ್ರೀಮತಿ ಕೆ.ಎಸ್. ಕಮಲಮ್ಮನವರು
(ದಿ|| ಯಜಮಾನ್ ಎಂ. ನಂಜಪ್ಪನವರ ಧರ್ಮಪತ್ನಿ)
ಕೆ. ನಾರಾಯಣಪುರ, ಬೆಂಗಳೂರು.
ನಿಮ್ಮ ಪ್ರೀತಿ, ಆದರ್ಶಗಳೇ ನಮಗೆ ದಾರಿದೀಪ ನೀವು ನಮ್ಮನ್ನಗಲಿ ಇಂದಿಗೆ ಒಂಬತ್ತು ವರ್ಷಗಳು. ಪ್ರತಿದಿನವೂ ನಿಮ್ಮನ್ನು ಹೆಮ್ಮೆಯಿಂದ ಸ್ಮರಿಸುವ..
ಯಜಮಾನ್ ಶ್ರೀ ಎಂ.ನಂಜಪ್ಪನವರ ಕುಟುಂಬವರ್ಗದವರು

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ಎ.ಕೌಶಾಲ್‌ರಾಮ್ ರೆಡ್ಡಿ
ಸದಸ್ಯರು, ಜನತಾ ಶಿಕ್ಷಣ ಸಂಸ್ಥೆ
05.10.1950 - 04.11.2021
ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುವ ಆಡಳಿತ ಮಂಡಳಿ, ಜನತಾ ಶಿಕ್ಷಣ ಸಂಸ್ಥೆ ಪ್ರಾಂಶುಪಾಲರು,ಮುಖ್ಯೋಪಾಧ್ಯಾಯರು ಮತ್ತು ಸಿಬ್ಬಂದಿ ವರ್ಗ ವಿವೇಕಾನಂದ ಶಾಲಾ ಕಾಲೇಜುಗಳು ಬೆಂಗಳೂರು–೫೬೦೦೫೫

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

For Online Classified Booking
Name Change / Education / Property / Job / Services & many more Log on to : dhclassifieds.com

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ
Business to Business
Business
★ಮನೆಯಿಂದಲೇ ಮೇಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ.ತರಬೇತಿಗಾಗಿ: ಬೆಂಗಳೂರು.8792252077, ಶಿವಮೊಗ್ಗ.9008013895

Business Offers
Distributors
PARTNER TO manage the teamat Rajajinagar with zero investment. Call 7019246661

ಭವಿಷ್ಯ
Astrology
★ವಶೀಕರಣ ಮೋಡಿಮಾಂತ್ರಿಕರು★ 500ವರ್ಷಗಳ ಇತಿಹಾಸ 35000ಜನರಿಗೆ ಸಮಾಧಾನ ಸ್ತ್ರೀ ವಶೀಕರಣ, ಪ್ರೇಮವಿಚಾರ, ಗಂಡ ಹೆಂಡತಿ ಕಲಹ,ಇನ್ನಾವುದೇ ಸಮಸ್ಯೆಗಳಿಗೆ ಶೀಘ್ರದಲ್ಲೇ ಪರಿಹಾರ. 7829724990

★||ಕೆಲಸ ಆದ ನಂತರ ಕಾಣಿಕೆ||* ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ, ತಿನ್ನಿಸುವುದಾಗಲಿ, ಬಟ್ಟೆ, ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, 7ಗಂಟೆಗಳಲ್ಲಿ ಪರಿಹಾರ. 9482529984

★||ಶ್ರೀಶಿರಿಡಿಸಾಯಿಬಾಬಾ||★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ,ಕಂಕಣಬಾಗ್ಯ, ಸಾಲದಬಾದೆ ಇನ್ನೂಯಾವುದೇ ಕಠಿಣ ಗುಪ್ತ ಸಮಸ್ಯೆಗಳಿಗೆ 11ಗಂಟೆಗಳಲ್ಲಿ ಪರಿಹಾರ. ಪಂಡಿತ್.ವಿಕ್ರಮ್‌ಭಟ್ 9972654095

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★||ವಶೀಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ ಮಾತನಾಡುವ ಮೂಲಕ ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಪರಿಹಾರ. 9900511008

ಸಾಯಿಅಂಜನ್ ಜ್ಯೋತಿಷ್ಯರು ಸ್ತ್ರೀ-ಪುರುಷ ವಶೀಕರಣ ಸ್ಪೆಷಲಿಸ್ಟ್ ನಿಮ್ಮ ಸಮಸ್ಯೆಗಳು ಏನೇಇರಲಿ 11 ಗಂಟೆಯಲ್ಲಿ ಪರಿಹಾರ ಶತಸಿದ್ಧ.ಪರಿಹಾರ ಆಗದಿದ್ದಲ್ಲಿ ನಿಮ್ಮ ಹಣ ವಾಪಸ್. 9535852216

★||ಶ್ರೀಕಬ್ಬಾಳಮ್ಮ ದೇವಿ||★ ಜ್ಯೋತಿಷ್ಯಾಲಯ ಪ್ರೀತಿಪ್ರೇಮ,ದಾಂಪತ್ಯಕಿರಿಕಿರಿ, ಸಾಲದಬಾದೆ,ವ್ಯಾಪಾರ, ಶತ್ರುಕಾಟ,ಇನ್ನಾವುದೇ_ಕಠಿಣ ಸಮಸ್ಯೆಗಳಿಗೆ_ಕೇವಲ 30_ನಿಮಿಷದಲ್ಲಿ ಶಾಶ್ವತಪರಿಹಾರ. ''ಸ್ತ್ರೀಯರಿಗೆ ಕಡಿಮೆ_ಖರ್ಚಿನಲ್ಲಿ ವಿಶೇಷ_ಪರಿಹಾರ'' ನಂ.1.ವಶೀಕರಣ ಸ್ಪೆಷಲಿಸ್ಟ್ ಸಹದೇವ್‌ಭಟ್. 9900222591

ಉದ್ಯೋಗಾವಕಾಶ
General
WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000 -15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ವಿಡಿಯೋಕಾನ್, TVS, TOYOTA, ಬ್ರಿಟಾನಿಯಾ MNCಗಳಿಗೆ SSLC, PUC, Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) 17,800-56,000/- ವಸತಿಯೂಟವಿದೆ. 7899778278, 9611715755

ಕರ್ನಾಟಕದಾದ್ಯಂತ ಕಂಪನಿ/ ಆಫೀಸ್ ಕೆಲಸಗಳಿಗೆ ಯುವಕ/ ಯುವತಿಯರು ಬೇಕಾಗಿದ್ದಾರೆ. Any education. ವಸತಿಯೂಟದೊಂದಿಗೆ Salary+OT. 17,800-48,000/-. 9538811211, 9538811200.

ಕರ್ನಾಟಕದಾದ್ಯಂತ ಕಂಪನಿ/ ಆಫೀಸ್ ಕೆಲಸಗಳಿಗೆ ಯುವಕ/ ಯುವತಿಯರು ಬೇಕಾಗಿದ್ದಾರೆ. Any education. ವಸತಿಯೂಟದೊಂದಿಗೆ Salary+OT. 17,800-48,000/-. 8884666597, 8884666594.

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ puc degree ಸಂಬಳ 15000 to 28000 ಸಂಪರ್ಕಿಸಿರಿ:8904879948/ 8904879491

TOYOTA, ಟಾಟಾಮೋಟರ್ಸ್, ಬಿಗ್ ಬಜಾರ್ಸ್ ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000-60,000 /- ವಸತಿಯೂಟವಿದೆ. 7795837319, 9901312461

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್ ಗಳು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002

Part-Time Jobs
ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಸುವರ್ಣ ಅವಕಾಶ:ಫಾರಂನಲ್ಲಿ ಅಂಕಿಗಳು ತುಂಬುವ ಮತ್ತು ಬುಕ್ ಬರೆಯುವ ಮೂಲಕ ಗಳಿಸಿ ವಾರಕ್ಕೆ 4,000-6,000/- ಕೊರಿಯರ್ ಸೌಲಭ್ಯವಿದೆ.9108059956, 9901929956.

Wanted
ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10,000 ರಿಂದ 15,000/-ESI & PF ಸೌಲಭ್ಯವಿರುತ್ತದೆ. ಬೆಂಗಳೂರು.ಸಂಪರ್ಕಿಸಿ: 9606385001, 9606384001,

ಬೆಂಗಳೂರಿನಲ್ಲಿರುವ ಕಂಪನಿಯಲ್ಲಿ ಕೆಲಸ ಮಾಡುವುದಕ್ಕೆ ಯುವತಿಯರು ಯುವಕರು ಬೇಕಾಗಿದ್ದಾರೆ ವಯಸ್ಸು 25ರೊಳಗೆ ವಸತಿಯೂಟವಿರುತ್ತದೆ. ಸಂಬಳ 15,000/ 25,000/ 7899931996/ 8050060001

ಪ್ರವಾಸ
Travel
ವಿಜಯವಾಡ, ಭದ್ರಾಚಲಂ, ಅನ್ನಾವರಂ, ವಿಶಾಖಪಟ್ಟಣಂ, ಬುರ್ರಾಗುಹೆಗಳು, ಶ್ರೀಕಾಕುಳಂ ಶ್ರೀವಾಸವಿಪೆನುಗೊಂಡ, 24.12.2021, 10 ದಿನಗಳು. ನೈಮೀಶಾರಣ್ಯ, ಅಯೋಧ್ಯ, ಅಲಹಾಬಾದ್, ಚಿತ್ರಕೂಟ, ಗಯಾ, ಬೈದ್ಯನಾಥ್, ಕಾಶಿ 19.01.2022, 10 ದಿನಗಳು. ತಿರುವಣಮಲೈ, ಚಿದಂಬರಂ, ನವಗ್ರಹಗಳು, ಕುಂಭಕೋಣಂ, ತಂಜಾವೂರು, ಶ್ರೀರಂಗಂ, ರಾಮೇಶ್ವರಂ, ಕನ್ಯಾಕುಮಾರಿ, ಮದುರೈ, ಪಳನಿ, ತಿರುವನಂತಪುರಂ, ಕಾಲಡಿ, ಗುರುವಾಯುರು 20.12.2021, 01.01.2022, 7/10 ದಿನಗಳು. ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್ NO- 92, 2ನೇ ಮುಖ್ಯ ರಸ್ತೆ, ಎನ್.ಆರ್.ಕಾಲೋನಿ, ತ್ಯಾಗರಾಜನಗರ, Near KEB Quarters ಬೆಂಗಳೂರು-70. 9342287551, 8050629305

20.12.2021 ರಿಂದ 14 ದಿನಗಳು ಪಂಚದ್ವಾರಕಾ, ಓಂಕಾರೇಶ್ವರ್, ಉಜ್ಜಯಿನಿ, ಸೋಮನಾಥ್, ಮಾತ್ರಗಯಾ, ಡಾಕೂರ್, ಅಹಮದಾಬಾದ್/ 19.01.2022 ರಿಂದ 14 ದಿನಗಳು ಕಾಶಿ.,ಗಯಾ, ಪ್ರಯಾಗ, ಅಯೋಧ್ಯ, ನೈಮೀಶಾರಣ್ಯ, ಗೋರಕ್‌ಪುರ್/ 2022ರ ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ 15/20/25 ದಿನಗಳ ಗಂಗೋತ್ರಿ, ಯಮುನೋತ್ರಿ, ಬದರಿನಾಥ್, ಕೇದಾರನಾಥ್, ಕಾಶಿ,ಗಯಾ ಪೂರಿಜಗನ್ನಾಥ್, ವೈಷ್ಣೋದೇವಿ ಯಾತ್ರೆಗಳಿಗೆ ಕೂಡಲೇ ಸಂಪರ್ಕಿಸಿ: 'ಶ್ರೀಸುಧಾ ಟ್ರಾವಲ್ಸ್' 22429289, 9448119290, 9019301300

EDUCATION SPECIAL
We are coming out with special offer for Admission Notice, Education Success Congratulation Ads
DH Classifieds More value, more impact
For details contact:
Jerry : 9731810277
Vishal : 9845114560
Tanveer: 9886213331
E-mail: dhclassifieds@deccanherald.co.in

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಎಸ್‌ಐಪಿ: ವೃದ್ಧಿಸುವುದು ಧನ

ಹಣಕಾಸು ಸಾಕ್ಷರತೆ

ಪ್ರಮೋದ್ ಬಿ.ಪಿ.

ಸಣ್ಣ ಹೂಡಿಕೆದಾರರ ವಲಯದಲ್ಲಿ ಸಾಮಾನ್ಯವಾಗಿ ಕೇಳಿಬರುವ ಪದ ಸಿಸ್ಟಮ್ಯಾಟಿಕ್ ಇನ್ವೆಸ್ಟ್‌ಮೆಂಟ್ ಪ್ಲಾನ್ ಅರ್ಥಾತ್ 'ಎಸ್‌ಐಪಿ'. ಕ್ರಮಬದ್ಧವಾಗಿ ಹೂಡಿಕೆ ಮಾಡಬೇಕು ಎನ್ನುವವರಿಗೆ 'ಎಸ್‌ಐಪಿ' ಒಳ್ಳೆಯ ಆಯ್ಕೆ. ಕನ್ನಡದಲ್ಲಿ 'ಎಸ್‌ಐಪಿ'ಯನ್ನು ವ್ಯವಸ್ಥಿತ ಹೂಡಿಕೆ ಯೋಜನೆ ಎಂದು ಕರೆಯಬಹುದು. 1993ರಿಂದ 2021ರವರೆಗೆ ಸುಮಾರು 4.3 ಕೋಟಿ 'ಎಸ್‌ಐಪಿ' ಹೂಡಿಕೆ ಖಾತೆಗಳು ಆರಂಭಗೊಂಡಿವೆ. ಕಳೆದ ಎರಡು ವರ್ಷಗಳಲ್ಲಂತೂ 'ಎಸ್‌ಐಪಿ' ನಿರೀಕ್ಷೆಗೂ ಮೀರಿ ಬೆಳವಣಿಗೆ ಸಾಧಿಸುತ್ತಿದೆ.

ಏನಿದು 'ಎಸ್‌ಐಪಿ'?: 'ಎಸ್‌ಐಪಿ' ಎನ್ನುವುದು ಹೂಡಿಕೆ ಉತ್ಪನ್ನವಲ್ಲ; ಇದು ಹೂಡಿಕೆಯ ವಿಧಾನ. ಷೇರುಗಳಲ್ಲಿ ಹೂಡಿಕೆ, ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ, ಚಿನ್ನ ಖರೀದಿ, ಪಿಪಿಎಫ್ ಹೂಡಿಕೆ, ಅಂಚೆ ಕಚೇರಿ ಹೂಡಿಕೆ, ನಿಶ್ಚಿತ ಠೇವಣಿ... ಹೀಗೆ ಬಹುತೇಕ ಎಲ್ಲ ರೀತಿಯ ಹೂಡಿಕೆಗಳಲ್ಲೂ 'ಎಸ್‌ಐಪಿ' ವಿಧಾನವನ್ನು ಅಳವಡಿಸಿಕೊಳ್ಳಬಹುದು. ಒಂದು ಪೂರ್ವನಿಗದಿತ ದಿನದಂದು, ಪೂರ್ವ ನಿಗದಿತ ಮೊತ್ತವನ್ನು ಹೂಡಿಕೆ ಉತ್ಪನ್ನವೊಂದಕ್ಕೆ ವ್ಯವಸ್ಥಿತವಾಗಿ ಸ್ವಯಂಚಾಲಿತವಾಗಿ ವರ್ಗಾಯಿಸುವ ವಿಧಾನವೇ 'ಎಸ್‌ಐಪಿ'.

ಎಸ್‌ಐಪಿ ಹೇಗೆ ಕೆಲಸ ಮಾಡುತ್ತದೆ?: ಮ್ಯೂಚುವಲ್ ಫಂಡ್‌ಗಳನ್ನು ಉದಾಹರಣೆಯಾಗಿ ತೆಗೆದುಕೊಂಡು 'ಎಸ್‌ಐಪಿ' ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ತಿಳಿದುಕೊಳ್ಳೋಣ. ಯಾವುದೇ 'ಎಸ್‌ಐಪಿ' ಆರಂಭಿಸಬೇಕಾದರೆ ಮೊದಲಿಗೆ ಈ ನಾಲ್ಕು ಪ್ರಮುಖ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕು. ಯಾವ ಮ್ಯೂಚುವಲ್ ಫಂಡ್ ಅಥವಾ ಯೋಜನೆಯಲ್ಲಿ ಹೂಡಿಕೆ ಮಾಡುತ್ತೀರಿ; ಮ್ಯೂಚುವಲ್ ಫಂಡ್‌ಗೆ ಪ್ರತಿ ಬಾರಿ ಹೂಡಿಕೆ ಮಾಡಬೇಕಿರುವ ಮೊತ್ತ ಎಷ್ಟು; ಹೂಡಿಕೆಯನ್ನು ಪ್ರತಿ ವಾರ, ಪ್ರತಿ ತಿಂಗಳು ಅಥವಾ ಮೂರು ತಿಂಗಳಿಗೆ ಒಮ್ಮೆ ಮಾಡುವಿರೋ; ನಿಮ್ಮ ಖಾತೆಯಿಂದ ಹೂಡಿಕೆ ಫಂಡ್‌ಗೆ ಹಣ ವರ್ಗಾವಣೆಯಾಗಬೇಕಿರುವ ದಿನಾಂಕ ಯಾವುದು.

ಈ ನಾಲ್ಕು ವಿಚಾರಗಳನ್ನು ತೀರ್ಮಾನಿಸಿದ ಮೇಲೆ ನೀವು ಮುಂದುವರಿಯಬಹುದು. ಉದಾಹರಣೆ; ನಾನು ಮ್ಯೂಚುವಲ್ ಫಂಡ್ ಕಂಪನಿಯೊಂದು ನಿರ್ವಹಿಸುತ್ತಿರುವ ಒಂದು ಗ್ರೋತ್ ಫಂಡ್‌ನಲ್ಲಿ ಪ್ರತಿ ತಿಂಗಳು ₹ 10 ಸಾವಿರ ಹೂಡಿಕೆಗೆ ನಿರ್ಧರಿಸಿದ್ದೇನೆ. ಪ್ರತಿ ತಿಂಗಳ ಐದನೇ ದಿನದಂದು ನಾನು ಮ್ಯೂಚುವಲ್ ಫಂಡ್ 'ಎಸ್‌ಐಪಿ'ಗೆ ಹಣ ಪಾವತಿಸಲು ತೀರ್ಮಾನಿಸಿದ್ದೇನೆ ಮತ್ತು 2021ರ ಏಪ್ರಿಲ್‌ನಿಂದಲೇ ಈ ಹೂಡಿಕೆ ಪ್ರಕ್ರಿಯೆ ಆರಂಭಿಸಿದ್ದೇನೆ ಎಂದಿಟ್ಟುಕೊಳ್ಳಿ. ಇದರಂತೆ ಹೋದರೆ 2021ರ ಏಪ್ರಿಲ್‌ನಿಂದ ನವೆಂಬರ್‌ವರೆಗೆ ತಿಂಗಳಿಗೆ ₹ 10 ಸಾವಿರದಂತೆ ₹ 80 ಸಾವಿರ ಹೂಡಿಕೆ ಮ್ಯೂಚುವಲ್ ಫಂಡ್‌ಗೆ ವರ್ಗಾವಣೆ ಆಗಿರುತ್ತದೆ.

ಮಾರುಕಟ್ಟೆ ಏರುಗತಿಯಲ್ಲಿ ಇದ್ದಾಗ ನಿಮ್ಮ ಹೂಡಿಕೆ ಮೊತ್ತಕ್ಕೆ ಕಡಿಮೆ ಮ್ಯೂಚುವಲ್ ಫಂಡ್ ಯೂನಿಟ್‌ಗಳು ಲಭಿಸುತ್ತವೆ. ಆದರೆ, ಮಾರುಕಟ್ಟೆ ಹೆಚ್ಚು ಇಳಿಕೆ ಕಂಡಾಗ ನಿಮಗೆ ಹೆಚ್ಚು ಮ್ಯೂಚುವಲ್ ಫಂಡ್ ಯೂನಿಟ್‌ಗಳು ಹಂಚಿಕೆಯಾಗುತ್ತವೆ. 'ಎಸ್‌ಐಪಿ'ಯನ್ನು ದೀರ್ಘಾವಧಿಗೆ ಮಾಡುವುದರಿಂದ ಮಾರುಕಟ್ಟೆಯ ಏರಿಳಿತದ ಲಾಭ ನಿಮಗೆ ಲಭಿಸಿ ಮ್ಯೂಚುವಲ್ ಫಂಡ್ ಹೂಡಿಕೆಯಲ್ಲಿ ವೆಚ್ಚದ ಸರಾಸರಿ ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ. ಹಾಗಾಗಿಯೇ ಎಸ್‌ಐಪಿ ಇತ್ತೀಚಿನ ದಿನಗಳಲ್ಲಿ ಹೆಚ್ಚು ಪ್ರಚಲಿತವಾಗುತ್ತಿದೆ.

ಎಸ್‌ಐಪಿ ಅನುಕೂಲಗಳು:

1. ತಿಂಗಳ ಸಂಬಳ ಪಡೆಯುವವರಿಗೆ, ನಿರ್ದಿಷ್ಟ ಆದಾಯ ಪಡೆಯುವವರಿಗೆ ಈ ಹೂಡಿಕೆ ಸರಾಗವಾಗುತ್ತದೆ.

2. ಎಸ್‌ಐಪಿಗಳು ಸ್ವಯಂಚಾಲಿತ ಆಗಿರುವುದರಿಂದ ಮಾರುಕಟ್ಟೆ ಏರಿದ್ದಾಗ ಹೆಚ್ಚಿಗೆ ಹಣ ಹಾಕುವುದು ಮತ್ತು ಮಾರುಕಟ್ಟೆ ಬಿದ್ದಾಗ ಹಣ ಹಿಂಪಡೆದುಕೊಳ್ಳುವ ಧೋರಣೆಯಿಂದ ಹೂಡಿಕೆದಾರರು ದೂರವಿರಬಹುದು. ಹೀಗಾದಾಗ ದೀರ್ಘಾವಧಿಯಲ್ಲಿ ಸಂಪತ್ತು ಸೃಷ್ಟಿಸಲು ಸಾಧ್ಯವಾಗುತ್ತದೆ.

3. ಎಸ್‌ಐಪಿಗಳನ್ನು ನಿಮ್ಮ ಅನುಕೂಲಕ್ಕೆ ಮತ್ತು ಆದಾಯದ ಮಟ್ಟಕ್ಕೆ ತಕ್ಕಂತೆ ರೂಪಿಸಿಕೊಳ್ಳಬಹುದು.

4. ಮಾರುಕಟ್ಟೆ ಏರುಗತಿಯಲ್ಲಿದ್ದಾಗಲೂ ಮಾರುಕಟ್ಟೆ ಇಳಿಕೆ ಹಾದಿಯಲ್ಲಿದ್ದಾಗಲೂ ಎಸ್‌ಐಪಿ ಮುಂದುವರಿಸುವುದರಿಂದ, ಮಾರುಕಟ್ಟೆಯ ಏರಿಳಿತಗಳ ಲಾಭ ನಿಮಗೆ ಸಿಗುತ್ತದೆ.

(ಲೇಖಕ: ಸುವಿಷನ್ ಹೋಲ್ಡಿಂಗ್ಸ್ ಪ್ರೈ.ಲಿ.,ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಅನಿಶ್ಚಿತತೆಯ ನಡುವೆಯೂ ವಾರದ ಅವಧಿಯಲ್ಲಿ ಏರಿಕೆ ಕಂಡ ಷೇರುಪೇಟೆ

ಷೇರುಪೇಟೆ ಸೂಚ್ಯಂಕಗಳು ಸತತ ಎರಡನೆಯ ವಾರ ಗಳಿಕೆ ದಾಖಲಿಸಿವೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಷೇರುಗಳನ್ನು ಮಾರಾಟ ಮಾಡುತ್ತಿರುವ ಜೊತೆಗೆ ಜಾಗತಿಕ ವಿದ್ಯಮಾನಗಳು ಆಶಾದಾಯಕವಾಗಿರದಿದ್ದರೂ ಸೂಚ್ಯಂಕಗಳು ಸುಧಾರಣೆ ಕಂಡಿವೆ. ನವೆಂಬರ್ 12ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ 60,686 ಅಂಶಗಳಲ್ಲಿ ವಹಿವಾಟು ಮುಗಿಸಿ ಶೇ 1.03ರಷ್ಟು ಜಿಗಿದಿದೆ. 18,102 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 1.03ರಷ್ಟು ಹೆಚ್ಚಳವಾಗಿದೆ. ನಿಫ್ಟಿ ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಕ್ರಮವಾಗಿ ಶೇ 1.5ರಷ್ಟು ಮತ್ತು ಶೇ 1ರಷ್ಟು ಏರಿಕೆಯಾಗಿವೆ.

ನಿಫ್ಟಿ ಮಾಹಿತಿ ತಂತ್ರಜ್ಞಾನ ವಲಯ ಶೇ 3ರಷ್ಟು, ಎನರ್ಜಿ ವಲಯ ಶೇ 2ರಷ್ಟು ಗಳಿಕೆ ಕಂಡಿವೆ. ನಿಫ್ಟಿ ಬ್ಯಾಂಕ್ ಮತ್ತು ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕಗಳು ಇಳಿಕೆಯಾಗಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 3,317.16 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 5,887.66 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಏರಿಕೆ-ಇಳಿಕೆ: ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 7.5ರಷ್ಟು, ಏರ್‌ಟೆಲ್ ಶೇ 6ರಷ್ಟು, ಟೆಕ್ ಮಹೀಂದ್ರ ಶೇ 5ರಷ್ಟು, ಅದಾನಿ ಪೋರ್ಟ್ಸ್ ಶೇ 5ರಷ್ಟು ಮತ್ತು ಟೈಟನ್ ಶೇ 4.5ರಷ್ಟು ಗಳಿಕೆ ಕಂಡಿವೆ. ಇಂಡಸ್ ಇಂಡ್ ಬ್ಯಾಂಕ್ ಶೇ 12ರಷ್ಟು, ಡಿವೀಸ್ ಲ್ಯಾಬ್ಸ್ ಶೇ 7ರಷ್ಟು, ಎಸ್‌ಬಿಐ ಶೇ 3.5ರಷ್ಟು ಮತ್ತು ಟಾಟಾ ಸ್ಟೀಲ್ ಶೇ 2.6ರಷ್ಟು ಇಳಿಕೆಯಾಗಿವೆ.

ಮುನ್ನೋಟ: ಹಣದುಬ್ಬರದ ಆತಂಕ ಹೆಚ್ಚಾಗಿರುವ ಕಾರಣ ಈ ವಾರ ಷೇರುಪೇಟೆಯಲ್ಲಿ ಅನಿಶ್ಚಿತತೆ ಹೆಚ್ಚುವ ಸಾಧ್ಯತೆಯಿದೆ. ತ್ರೈಮಾಸಿಕ ಫಲಿತಾಂಶಗಳು ಕೂಡ ನಿರೀಕ್ಷಿತ ಮಟ್ಟದಲ್ಲಿ ಇರದ ಕಾರಣ ಹೂಡಿಕೆದಾರರು ಷೇರುಗಳ ಆಯ್ಕೆಯಲ್ಲಿ ಎಚ್ಚರಿಕೆ ವಹಿಸಬೇಕಿದೆ. ಹೊಸದಾಗಿ ಡಿ-ಮ್ಯಾಟ್ ಖಾತೆ ತೆರೆದು ಹೂಡಿಕೆ ಆರಂಭಿಸುವವರು ಒಂದೇ ಬಾರಿಗೆ ದೊಡ್ಡ ಮೊತ್ತದ ಹೂಡಿಕೆ ಮಾಡಲು ಹೋಗಬಾರದು. ಹಂತ ಹಂತವಾಗಿ ಉತ್ತಮ ಷೇರುಗಳನ್ನು ಆಯ್ಕೆ ಮಾಡಿ ಹೂಡಿಕೆ ಮಾಡುವ ಬಗ್ಗೆ ಆಲೋಚಿಸಬೇಕು.

ಜಾಗತಿಕ ವಿದ್ಯಮಾನಗಳು ಮತ್ತು ದೇಶಿಯ ಬೆಳವಣಿಗೆಗಳು ಷೇರುಪೇಟೆಯ ಮೇಲೆ ಪರಿಣಾಮ ಬೀರಲಿವೆ. ಈ ವಾರ ರಾಜೇಶ್ ಎಕ್ಸ್‌ಪೋರ್ಟ್ಸ್, ಸಹರಾ ಒನ್ ಮೀಡಿಯಾ ಆ್ಯಂಡ್ ಎಂಟರ್‌ಟೇನ್ಮೆಂಟ್, ಪಾರ್ಲೆ ಇಂಡಸ್ಟ್ರೀಸ್, ಆರ್‌ಜೆ ಬಯೋಟೆಕ್, ಎಸ್‌ಕೆಸಿ, ಪಿಎಫ್‌ಬಿಎಲ್, ಎಸ್‌ಎಸ್‌ಎಲ್ ಫೈನಾನ್ಸ್, ಕೆಇಎಲ್ ಸೇರಿ ಕೆಲವು ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ.

ಕರ್ತಾರ್‌ಪುರ ಕಾರಿಡಾರ್: ಪ್ರಧಾನಿಗೆ ಮನವಿ

ನವದೆಹಲಿ (ಪಿಟಿಐ): ಪಂಜಾಬ್‌ನ ಬಿಜೆಪಿ ನಾಯಕರ ನಿಯೋಗವು ಭಾನುವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ಗುರುಪೂರ್ಣಿಮೆಗೆ ಮೊದಲು ಕರ್ತಾರ್‌ಪುರ ಕಾರಿಡಾರ್ ಅನ್ನು ಸಾರ್ವಜನಿಕರಿಗೆ ಮತ್ತೆ ಮುಕ್ತಗೊಳಿಸುವಂತೆ ಮನವಿ ಮಾಡಿದೆ.

ಕೋವಿಡ್–19ನಿಂದಾಗಿ ಪಾಕಿಸ್ತಾನದ ಕರ್ತಾರ್‌ಪುರದ ಗುರುದ್ವಾರ ದರ್ಬಾರ್ ಸಾಹಿಬ್‌ಗೆ ಮಾರ್ಚ್, 2020ರಂದು ತೀರ್ಥಯಾತ್ರೆಯನ್ನು ಸ್ಥಗಿತಗೊಳಿಸಲಾಗಿತ್ತು.

'ಪಂಜಾಬ್‌ನ 11 ನಾಯಕರನ್ನು ಒಳಗೊಂಡ ನಿಯೋಗವು ಮೋದಿ ಅವರನ್ನು ಅವರ ಅಧಿಕೃತ ನಿವಾಸದಲ್ಲಿ ಭೇಟಿ ಮಾಡಿತು. ಈ ವೇಳೆ ಗುರು ನಾನಕ್ ದೇವ್ ಅವರ ಭಕ್ತರ ಭಾವನೆಗಳನ್ನು ಪರಿಗಣಿಸುವಂತೆ ಅವರಲ್ಲಿ ಮನವಿ ಮಾಡಲಾಯಿತು. ಈ ಬಗ್ಗೆ ಚಿಂತನೆ ನಡೆಸುವುದಾಗಿ ಪ್ರಧಾನಿ ಮೋದಿ ಭರವಸೆ ನೀಡಿದರು' ಎಂದು ಪಂಜಾಬ್‌ನ ಬಿಜೆಪಿ ಘಟಕದ ಅಧ್ಯಕ್ಷ ಅಶ್ವಾನಿ ಶರ್ಮಾ ಅವರು ಪಿಟಿಐಗೆ ತಿಳಿಸಿದರು.

ಗುರು ನಾನಕ್ ದೇವ್ ಅವರ ಜನ್ಮ ದಿನಾಚರಣೆಯ ಅಂಗವಾಗಿ ಗುರುಪೂರ್ಣಿಮೆಯನ್ನು ಆಚರಿಸಲಾಗುತ್ತದೆ. ಈ ವರ್ಷ ನವೆಂಬರ್ 19ರಂದು ಗುರುಪೂರ್ಣಿಮೆ ಆಚರಿಸಲಾಗುತ್ತಿದೆ.

₹ 34 ಕೋಟಿ ಮೊತ್ತದ 'ಐಟಿಸಿ' ವಂಚನೆ ಪತ್ತೆ

ನವದೆಹಲಿ (ಪಿಟಿಐ): ಏಳು ನಕಲಿ ಕಂಪನಿಗಳನ್ನು ಸೃಷ್ಟಿಸುವ ಮೂಲಕ ₹ 34 ಕೋಟಿ ಮೊತ್ತದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ವಂಚನೆ ಮಾಡಿರುವ ಪ್ರಕರಣವನ್ನು ಜಿಎಸ್‌ಟಿ ಅಧಿಕಾರಿಗಳು ಭೇದಿಸಿದ್ದಾರೆ ಎಂದು ಹಣಕಾಸು ಸಚಿವಾಲಯವು ಭಾನುವಾರ ತಿಳಿಸಿದೆ.

ಸರಕುಗಳನ್ನು ಮಾರಾಟ ಮಾಡದೇ ಐಟಿಸಿ ವಂಚನೆ ಮಾಡುವ ಉದ್ದೇಶದಿಂದ ನಕಲಿ ಜಿಎಸ್‌ಟಿ ಇನ್‌ವಾಯ್ಸ್ ಸಿದ್ಧಪಡಿಸಲು ಏಳು ಕಂಪನಿಗಳನ್ನು ಸೃಷ್ಟಿಸಲಾಗಿದೆ ಎಂದು ಹೇಳಿದೆ.

ದೆಹಲಿ ಪೂರ್ವ ವಿಭಾಗದ ಕೇಂದ್ರ ಸರಕು ಮತ್ತು ಸೇವಾ ತೆರಿಗೆ (ಸಿಜಿಎಸ್‌ಟಿ) ಆಯುಕ್ತರ ಕಚೇರಿಯ ಅಧಿಕಾರಿಗಳು ಈ ವಂಚನೆ ಪ್ರಕರಣವನ್ನು ಭೇದಿಸಿದ್ದಾರೆ. ಈ ಏಳು ಕಂಪನಿಗಳು ₹ 220 ಕೋಟಿ ಮೊತ್ತದ ನಕಲಿ ಜಿಎಸ್‌ಟಿ ಇನ್‌ವಾಯ್ಸ್ ಸೃಷ್ಟಿಸಿದ್ದು, ₹ 34 ಕೋಟಿ ಮೊತ್ತವನ್ನು ಐಟಿಸಿ ರೂಪದಲ್ಲಿ ವರ್ಗಾವಣೆ ಮಾಡಿವೆ.

ನಕಲಿ ಕಂಪನಿಗಳ ಸೃಷ್ಟಿ ಮತ್ತು ನಕಲಿ ಜಿಎಸ್‌ಟಿ ಇನ್‌ವಾಯ್ಸ್ ಸೃಷ್ಟಿಸಿ ಮಾರಾಟ ಮಾಡುವುದರ ಹಿಂದಿನ ಸೂತ್ರಧಾರಿ ರಿಷಬ್ ಜೈನ್ ಅವರನ್ನು ಶನಿವಾರ ಬಂಧಿಸಲಾಗಿದ್ದು, ನವೆಂಬರ್ 26ರವರೆಗೆ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪ್ರಕಟಣೆಯು ತಿಳಿಸಿದೆ.

ದೇಶದಲ್ಲಿ ಪೆಟ್ರೋಲ್, ಡೀಸೆಲ್ ದರ ಏರಿಕೆ

ಎಲ್ಲ ಕಾರುಗಳಲ್ಲಿ ಸಿಎನ್‌ಜಿ ಆಯ್ಕೆ: ಮಾರುತಿ ಇಂಗಿತ

ಉದಯಪುರ (ರಾಜಸ್ಥಾನ) (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು ತನ್ನ ಎಲ್ಲ ಮಾದರಿ ಕಾರುಗಳಲ್ಲಿ ಸಿಎನ್‌ಜಿ ಆಯ್ಕೆಯನ್ನು ನೀಡುವ ಪ್ರಯತ್ನದಲ್ಲಿದೆ ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಶಶಾಂಕ್ ಶ್ರೀವಾಸ್ತವ ಹೇಳಿದ್ದಾರೆ.

ಪೆಟ್ರೋಲ್, ಡೀಸೆಲ್ ದರ ಹೆಚ್ಚಳದಿಂದಾಗಿ ಸಿಎನ್‌ಜಿ ಚಾಲಿತ ವಾಹನಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಡೀಸೆಲ್ ಕಾರುಗಳ ಮಾರಾಟದಲ್ಲಿ ಇಳಿಕೆ ಕೂಡ ಆಗುತ್ತಿದೆ. ಹೀಗಾಗಿ ಕಂಪನಿಯು ಸಿಎನ್‌ಜಿ ಚಾಲಿತ ವಾಹನಗಳ ಬಗ್ಗೆ ಹೆಚ್ಚು ಗಮನ ಹರಿಸಿದೆ ಎಂದು ಹೇಳಿದ್ದಾರೆ.

ಹಿಂದಿನ ಹಣಕಾಸು ವರ್ಷದಲ್ಲಿ ಕಂಪನಿಯು ಸಿಎನ್‌ಜಿ ಚಾಲಿತ 1.62 ಲಕ್ಷ ಕಾರುಗಳನ್ನು ಮಾರಾಟ ಮಾಡಿದ್ದು, ದೇಶದಲ್ಲಿ ಹೆಚ್ಚಿನ ಸಿಎನ್‌ಜಿ ಕಾರುಗಳನ್ನು ತರುವ ಉದ್ದೇಶದಿಂದ ಸಿಎನ್‌ಜಿ ಪೂರೈಕೆ ಮಾಡುವ ಮಳಿಗೆಗಳನ್ನು ತೆರೆಯುವ ಕೆಲಸಕ್ಕೂ ವೇಗ ನೀಡಿದೆ.

'2021–22ರಲ್ಲಿ ಒಟ್ಟಾರೆ 3 ಲಕ್ಷ ಸಿಎನ್‌ಜಿ ವಾಹನ ಮಾರಾಟ ಮಾಡುವ ನಿರೀಕ್ಷೆ ಇಟ್ಟುಕೊಂಡಿದ್ದೇವೆ. ಸದ್ಯ ನಾವು 15 ಬ್ರ್ಯಾಂಡ್‌ಗಳನ್ನು ಮಾರಾಟ ಮಾಡುತ್ತಿದ್ದು ಅವುಗಳ ಪೈಕಿ ಏಳರಲ್ಲಿ ಮಾತ್ರವೇ ಸಿಎನ್‌ಜಿ ಆಯ್ಕೆ ಇದೆ. ಇನ್ನುಳಿದ ಕಾರುಗಳಲ್ಲಿಯೂ ಸಿಎನ್‌ಜಿ ಆಯ್ಕೆ ನೀಡುವ ಪ್ರಯತ್ನ ನಡೆದಿದೆ' ಎಂದು ಅವರು ತಿಳಿಸಿದ್ದಾರೆ.

ದೇಶಿ ಮಾರುಕಟ್ಟೆಯಲ್ಲಿ ಕಂಪನಿಯು ಸಿಎನ್‌ಜಿ ವಿಭಾಗದಲ್ಲಿ ಶೇಕಡ 85ರಷ್ಟು ಮಾರುಕಟ್ಟೆ ಪಾಲನ್ನು ಹೊಂದಿದೆ. ಕಂಪನಿಯು ಸದ್ಯ ಆಲ್ಟೊ, ಎಸ್–ಪ್ರೆಸೊ, ವ್ಯಾಗನ್‌ಆರ್, ಇಕೊ, ಟೂರ್–ಎಸ್, ಎರ್ಟಿಗಾ ಮತ್ತು ಸೂಪರ್ ಕ್ಯಾರಿ ಮಾದರಿಗಳಲ್ಲಿ ಸಿಎನ್‌ಜಿ ಆಯ್ಕೆಯನ್ನು ನೀಡುತ್ತಿದೆ. ಈಚೆಗಷ್ಟೇ ಬಿಡುಗಡೆ ಮಾಡಿರುವ ಹೊಸ ಸೆಲೆರಿಯೊ ಕಾರಿನಲ್ಲಿಯೂ ಸಿಎನ್‌ಜಿ ಆಯ್ಕೆ ನೀಡಲು ಮುಂದಾಗಿದೆ.

ಸಿಎನ್‌ಜಿ ಕಾರ್ ಮಾರಾಟ

1.9 ಲಕ್ಷ 2019–20ರಲ್ಲಿ ಮಾರಾಟ ಆಗಿರುವ ಸಿಎನ್‌ಜಿ ಕಾರುಗಳು

1.6 ಲಕ್ಷ 2019–20ರಲ್ಲಿ ಮಾರಾಟ ಆಗಿರುವ ಸಿಎನ್‌ಜಿ ಕಾರುಗಳಲ್ಲಿ ಮಾರುತಿಯ ಕಾರುಗಳ ಸಂಖ್ಯೆ

ಕಣಿವೆಯಲ್ಲಿ 200 ಉಗ್ರರು ಈಗಲೂ ಸಕ್ರಿಯ

ಕಾಶ್ಮೀರ: ಉಗ್ರರ ಸಂಖ್ಯೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 133 ಉಗ್ರರ ಕೊಂದಿರುವ ಭದ್ರತಾ ಪಡೆ
- ಪಾಕಿಸ್ತಾನದಿಂದ ಕಾಶ್ಮೀರ ಕಣಿವೆಗೆ ನುಸುಳಿ ಬಂದಿರುವ 15–20 ಉಗ್ರರು
- ಲಷ್ಕರ್ ಎ–ತೈಯಬಾ, ಜೈಶ್–ಎ–ಮಹಮ್ಮದ್ ಸಂಘಟನೆಯ ಉಗ್ರರು

ಶ್ರೀನಗರ: ಕಾಶ್ಮೀರ ಕಣಿವೆಯಲ್ಲಿ ಈ ವರ್ಷ ಭದ್ರತಾ ಪಡೆಗಳಿಗೆ 133 ಉಗ್ರರು ಬಲಿಯಾದರೂ ಉಗ್ರ ಚಟುವಟಿಕೆಯಲ್ಲಿ ಕಾರ್ಯ ಪ್ರವೃತ್ತರಾದವರ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬಂದಿದ್ದು, ಸುಮಾರು 200 ಉಗ್ರರು ಸಕ್ರಿಯರಾಗಿರುವ ಆತಂಕಕಾರಿ ಬೆಳವಣಿಗೆ ತಿಳಿದು ಬಂದಿದೆ.

ಗಡಿಯಲ್ಲಿ ನುಸುಳುವಿಕೆ ಸಂಖ್ಯೆ ಹೆಚ್ಚಾಗಿರುವುದು ಹಾಗೂ ಸ್ಥಳೀಯವಾಗಿ ಆಗಿಂದಾಗ್ಗೆ ಉಗ್ರರ ನೇಮಕಾತಿ ಪ್ರಕ್ರಿಯೆ ನಡೆಯುತ್ತಿರುವುದು ಉಗ್ರರು ಯಥಾಸ್ಥಿತಿ ಕಾಪಾಡಿಕೊಳ್ಳಲು ಕಾರಣವಾಗಿದೆ. ಈ ವರ್ಷ ಕಾಶ್ಮೀರದಲ್ಲಿ 100 ಸ್ಥಳೀಯ ಯುವಕರು ಹೊಸದಾಗಿ ಉಗ್ರ ಸಂಘಟನೆಗಳನ್ನು ಸೇರಿದ್ದರೆ, 15-20 ಉಗ್ರರು ಕಾಶ್ಮೀರ ಕಣಿವೆಗೆ ಪಾಕಿಸ್ತಾನದಿಂದ ನುಸುಳಿ ಬಂದಿದ್ದಾರೆ. ಕಳೆದ ವರ್ಷ 207 ಮಂದಿ ಉಗ್ರರನ್ನು ಹತ್ಯೆ ಮಾಡಲಾಗಿತ್ತು. 174 ಮಂದಿ ಉಗ್ರ ಸಂಘಟನೆಗಳನ್ನು ಸೇರಿದ್ದರು.

'ಈ ರೀತಿಯ ಉಗ್ರರ ನೇಮಕಾತಿಯನ್ನು ನೋಡಿದಾಗ ಭದ್ರತಾ ಪಡೆಯ ಕಾರ್ಯಾಚರಣೆಗಳು ಯಾವುದೇ ಫಲ ನೀಡುತ್ತಿಲ್ಲ. ಒಬ್ಬ ಉಗ್ರ ಸತ್ತ ಜಾಗಕ್ಕೆ ಮತ್ತೊಬ್ಬನನ್ನು ತಕ್ಷಣವೇ ನೇಮಕ ಮಾಡಿಕೊಳ್ಳಲಾಗುತ್ತಿದೆ. 2020ರಲ್ಲಿ ಪಾಕಿಸ್ತಾನದ ಗಡಿ ದಾಟಿ ಬಂದವರ ಸಂಖ್ಯೆ ಕಡಿಮೆ ಇದ್ದು, ಈ ವರ್ಷವೇ ಹೆಚ್ಚಾಗಿದೆ. ಸುಮಾರು 35-40 ಪಾಕಿಸ್ತಾನಿ ಉಗ್ರರು ಸದ್ಯ ಕಾರ್ಯ ಪ್ರವೃತ್ತರಾಗಿದ್ದಾರೆ. ಅವರಲ್ಲಿ 12 ಜನ ಜೈಶ್- ಎ- ಮೊಹಮ್ಮದ್ ಸಂಘಟನೆಗೆ ಸೇರಿದರೆ, ಉಳಿದವರು ಲಷ್ಕರ್- ಎ-ತೈಯಬಾ ಸಂಘಟನೆಗೆ ಸೇರಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಪಾಕ್‌ನ ಈ ಉಗ್ರರು ತಳಮಟ್ಟದ ನೆಟ್‌ವರ್ಕ್ ರಚಿಸಿಕೊಂಡು (ಒಜಿಡಬ್ಲು) ಭದ್ರತಾ ಪಡೆಗಳಿಗೆ ಸಿಗದಂತೆ ದಾಳಿ ನಡೆಸುತ್ತಿದ್ದಾರೆ. ಪಾಕಿಸ್ತಾನದ ಉಗ್ರರು ಹೊಸದಾಗಿ ನೇಮಕಗೊಂಡ ಸ್ಥಳೀಯ ಯುವ ಉಗ್ರರನ್ನು ಬಳಸಿಕೊಂಡು ಭದ್ರತಾ ಪಡೆಗಳ ಮೇಲೆ ದಾಳಿ ಹಾಗೂ ಅಲ್ಲಲ್ಲಿ ಗ್ರೆನೇಡ್ ದಾಳಿ ನಡೆಸುತ್ತಿದ್ದಾರೆ. ಹೊಸದಾಗಿ ನೇಮಕಗೊಂಡವರ ಬಗ್ಗೆ ಯಾವುದೇ ಪೂರ್ವಪರ ಮಾಹಿತಿಯು ಸ್ಥಳೀಯ ಪೊಲೀಸರು ಹಾಗೂ ಭದ್ರತಾಪಡೆಗಳಿಗೂ ಇಲ್ಲ. ಅಲ್ಲದೇ ಈ ಉಗ್ರರ ಮೇಲೆ ಯಾವ ಕಣ್ಗಾವಲೂ ಇಲ್ಲ. ಜನರೊಂದಿಗೆ ಇದ್ದುಕೊಂಡು ಭಯೋತ್ಪಾದನಾ ಕೃತ್ಯಗಳಲ್ಲಿ ತೊಡಗಿದ್ದಾರೆ ಎಂದು ಪೊಲೀಸ್ ಮೂಲಗಳು ಮಾಹಿತಿ ನೀಡಿವೆ.

ಎಷ್ಟೇ ಉಗ್ರರನ್ನು ಕೊಂದರೂ ಅಷ್ಟೇ ಪ್ರಮಾಣದ ಉಗ್ರರನ್ನು ಹೊಸದಾಗಿ ನೇಮಕ ಮಾಡಿಕೊಳ್ಳಲಾಗುತ್ತಿದೆ ಹಾಗಾಗಿ ಭಯೋತ್ಪಾದನೆ ಜಮ್ಮು ಮತ್ತು ಕಾಶ್ಮೀರದಲ್ಲೂ ಇನ್ನೂ ಚಾಲ್ತಿಯಲ್ಲಿದೆ. ಸಂವಿಧಾನದ ವಿಧಿ 370 ಅನ್ನು ರದ್ದುಗೊಳಿಸಿದ ಸ್ವಲ್ಪ ದಿನಗಳ ನಂತರ ಕಾನೂನು ಸುವ್ಯವಸ್ಥೆ ತಕ್ಕಮಟ್ಟಿಗೆ ಸರಿದಾರಿಗೆ ಬಂದಿದೆ ಎನ್ನುತ್ತಿರುವಾಗಲೇ ಇತ್ತೀಚೆಗೆ ಭಯೋತ್ಪಾದಕ ಕೃತ್ಯಗಳು ಹೆಚ್ಚಾಗುತ್ತಿವೆ ಎಂದು ಅತಿಕ್ರಮಣಾ ತಡೆ ವಿಭಾಗದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ದುಷ್ಕೃತ್ಯದಲ್ಲಿ ತೊಡಗಿರುವ ಹತ್ತಾರು ಯುವಕರ ಹೆಸರು ಉಗ್ರರ ಪಟ್ಟಿಯಲ್ಲಿ ಇಲ್ಲ. ಆದರೆ ಉಗ್ರ ಚಟುವಟಿಕೆ ಮಾಡುವಷ್ಟು ತರಬೇತಿ ಹಾಗೂ ಪರಿಣತಿ ಹೊಂದಿರುವ ಈ ಅರೆಕಾಲಿಕ ಉಗ್ರರೇ ಕಳೆದ ಅಕ್ಟೋಬರ್‌ನಿಂದ ಈವರೆಗೆ 15 ನಾಗರಿಕರನ್ನು ಹತ್ಯೆ ಮಾಡಿದ್ದಾರೆ. ಈ ವರ್ಗದ ಉಗ್ರರು ಶಸ್ತ್ರಾಸ್ತ್ರ ತರಬೇತಿಗಾಗಿ ಗಡಿದಾಟಿಯೂ ಹೋಗುವುದಿಲ್ಲ, ಭೂಗತರಾಗಿಯೂ ಇರುವುದಿಲ್ಲ. ಶಕ್ತಿ ಪ್ರದರ್ಶನಕ್ಕಾಗಿ ಹಾಗೂ ಹಣದ ಆಸೆಗಾಗಿ ಈ ಕೆಲಸ ಮಾಡುತ್ತಿರಬಹುದು. ಈ ಸ್ಥಳೀಯ ಉಗ್ರರನ್ನು ಲಷ್ಕರ್ ಎ ತೈಯಬಾ, ಜೈಶೆ ಮೊಹಮ್ಮದ್, ಹಿಜ್ಬುಲ್ ಮುಜಾಹಿದ್ದೀನ್ ಸಂಘಟನೆಗಳು ಬಳಸಿಕೊಳ್ಳುತ್ತಿವೆ ಎಂದು ಅವರು ಹೇಳಿದರು.

2024ರ ವಿಶ್ವಕಪ್‌ಗೆ ಅಮೆರಿಕ ಆತಿಥ್ಯ?

ಸಿಡ್ನಿ (ಪಿಟಿಐ): 2024ರ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಗೆ ಅಮೆರಿಕ ಆತಿಥ್ಯ ವಹಿಸುವ ಸಾಧ್ಯತೆಯಿದೆ. 2028ರ ಲಾಸ್ ಎಂಜಲೀಸ್ ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಸೇರ್ಪಡೆಗೊಳಿಸಲು ಉದ್ದೇಶಿಸಿರುವ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ವಿಶ್ವಕಪ್ ಟೂರ್ನಿಯನ್ನು ವೇದಿಕೆಯನ್ನಾಗಿ ಬಳಸಿಕೊಳ್ಳುವ ಸಾಧ್ಯತೆಯಿದೆ.

ಅಮೆರಿಕ ಕ್ರಿಕೆಟ್ ಹಾಗೂ ವೆಸ್ಟ್ ಇಂಡೀಸ್ ಕ್ರಿಕೆಟ್ ಮಂಡಳಿಗಳಿಂದ ಬರುವ ಜಂಟಿ ಬಿಡ್‌ಗೆ ಐಸಿಸಿಯು ಟೂರ್ನಿ ಆಯೋಜನೆಯ ಹಕ್ಕು ನೀಡುವ ನಿರೀಕ್ಷೆಯಿದೆ.

‘ಐಸಿಸಿ ಟೂರ್ನಿಗಳನ್ನು ಆಯೋಜಿಸುವ ತಾಣಗಳನ್ನು ನಿರ್ಧರಿಸುವ ಕಾಲ ಸನ್ನಿಹಿತವಾಗಿದೆ. ವಿಶ್ವದಾದ್ಯಂತ ಕ್ರಿಕೆಟ್‌ಅನ್ನು ವ್ಯಾಪಕವಾಗಿ ವಿಸ್ತರಿಸುವ ಉದ್ದೇಶವನ್ನು ಮಂಡಳಿ ಹೊಂದಿದೆ’ ಎಂದು ‘ಸಿಡ್ನಿ ಮಾರ್ನಿಂಗ್ ಹೆರಾಲ್ಡ್’ ತನ್ನ ವರದಿಯಲ್ಲಿ ಹೇಳಿದೆ.

ಎಲ್ಲವೂ ಯೋಜನೆಗಳ ಪ್ರಕಾರ ನಡೆದರೆ, 2014ರಲ್ಲಿ ಬಾಂಗ್ಲಾದೇಶದಲ್ಲಿ ನಡೆದ ಟಿ20 ವಿಶ್ವಕಪ್ ಬಳಿಕ ಭಾರತ, ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ಆತಿಥ್ಯ ವಹಿಸದ ಮೊದಲ ಟೂರ್ನಿಯಾಗಲಿದೆ.

2024ರ ಟಿ20 ಟೂರ್ನಿಯಲ್ಲಿ 20 ತಂಡಗಳು 55 ಪಂದ್ಯಗಳನ್ನು ಆಡುವ ನಿರೀಕ್ಷೆಯಿದೆ. 2021 ಮತ್ತು 2022ರ ಆವೃತ್ತಿಗಳಲ್ಲಿ 16 ತಂಡಗಳು 45 ಪಂದ್ಯಗಳನ್ನು ಆಡಿವೆ; ಆಡಲಿವೆ.

ಹಸನ್ ಅಲಿ –ಎಎಫ್‌ಪಿ ಚಿತ್ರ

ಅಭಿಮಾನಿಗಳ ಕ್ಷಮೆ ಕೋರಿದ ಹಸನ್ ಅಲಿ

ಕರಾಚಿ (ಪಿಟಿಐ): ಪಾಕಿಸ್ತಾನ ಕ್ರಿಕೆಟ್ ತಂಡದ ಆಟಗಾರ ಹಸನ್ ಅಲಿ ಅವರು ಈಚೆಗೆ ನಡೆದ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಕ್ಯಾಚ್ ಕೈಚೆಲ್ಲಿದ್ದಕ್ಕಾಗಿ ಬಹಿರಂಗ ಕ್ಷಮೆ ಯಾಚಿಸಿದ್ದಾರೆ.

ಆಸ್ಟ್ರೇಲಿಯಾ ಎದುರಿನ ಸೆಮಿಫೈನಲ್‌ನ 19ನೇ ಓವರ್‌ನಲ್ಲಿ ಅಲಿ ಅವರು ಮ್ಯಾಥ್ಯೂ ವೇಡ್ ಅವರ ಕ್ಯಾಚ್ ಕೈಚೆಲ್ಲಿದ್ದರು. ನಂತರದ ಮೂರೂ ಎಸೆತಗಳಲ್ಲಿ ವೇಡ್ ಸಿಕ್ಸರ್ ಬಾರಿಸಿ ತಮ್ಮ ತಂಡಕ್ಕೆ ಗೆಲುವಿನ ಕಾಣಿಕೆ ನೀಡಿದ್ದರು. ಶಾಹೀನ್ ಆಫ್ರಿದಿ ಬೌಲಿಂಗ್ ಮಾಡಿದ್ದ ಆ ಓವರ್‌ನಲ್ಲಿ ಅಲಿ ಡೀಪ್ ಮಿಡ್‌ವಿಕೆಟ್‌ನಲ್ಲಿ ಫೀಲ್ಡಿಂಗ್ ಮಾಡುತ್ತಿದ್ದರು. ಪಾಕ್ ಪಂದ್ಯದಲ್ಲಿ ಸೋತ ನಂತರ ಅಲಿ ಅವರ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಟೀಕೆಗಳ ಮಹಾಪೂರ ಹರಿದಿದ್ದವು. ಕೆಲವು ದಿಗ್ಗಜ ಕ್ರಿಕೆಟಿಗರು ಅವರ ಪರವಾಗಿ ನಿಂತಿದ್ದರು.

ಈ ಕುರಿತು ಟ್ವೀಟ್ ಮಾಡಿರುವ ಅಲಿ, ‘ನನಗೆ ಗೊತ್ತಿದೆ ತಮಗೆಲ್ಲರಿಗೂ ಬಹಳ ಬೇಸರವಾರಿಗೆ. ನಿಮ್ಮೆಲ್ಲರ ನಿರೀಕ್ಷೆಯನ್ನು ಈಡೇರಿಸಲು ನಮ್ಮಿಂದ ಸಾಧ್ಯವಾಗಿಲ್ಲ. ನಿಮಗಿಂತಲೂ ಹೆಚ್ಚು ಬೇಸರ ನನಗಾಗಿದೆ. ನನ್ನಿಂದ ನಿಮಗಿರುವ ನಿರೀಕ್ಷೆಯಲ್ಲಿ ಒಂದಿನಿತೂ ಕಡಿಮೆ ಮಾಡಬೇಡಿ. ಕಠಿಣ ಶ್ರಮವಹಿಸಿ ಬೆಳೆಯುತ್ತೇನೆ. ಪಾಕಿಸ್ತಾನ ತಂಡವನ್ನು ಉನ್ನತ ಹಂತದವರೆಗೂ ಪ್ರತಿನಿಧಿಸಿ, ನಿಮ್ಮ ನಿರೀಕ್ಷೆಗಳನ್ನು ಈಡೇರಿಸುವೆ’ ಎಂದಿದ್ದಾರೆ. 2017ರ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ವಿಜಯದಲ್ಲಿ ಅಲಿ ಪ್ರಮುಖ ಪಾತ್ರ ವಹಿಸಿದ್ದರು.

ಮಿಚೆಲ್ ಮಾರ್ಷ್–ಡೇವಿಡ್ ವಾರ್ನರ್ ಅಬ್ಬರಕ್ಕೆ ಒಲಿದ ಜಯ; ಕೇನ್ ವಿಲಿಯಮ್ಸನ್ ಅರ್ಧಶತಕ ವ್ಯರ್ಥ

ಆಸ್ಟ್ರೇಲಿಯಾ ಮುಡಿಗೆ ಕಿರೀಟ

ದುಬೈ: ಆಸ್ಟ್ರೇಲಿಯಾ ಕ್ರಿಕೆಟ್ ತಂಡವು ಮೊದಲ ಬಾರಿ ಟಿ20 ಕ್ರಿಕೆಟ್ ವಿಶ್ವಕಪ್ ಗೆದ್ದುಕೊಂಡಿತು.

ಭಾನುವಾರ ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಫೈನಲ್‌ನಲ್ಲಿ ಮಿಚೆಲ್ ಮಾರ್ಷ್ (ಅಜೇಯ 77;50ಎ) ಮತ್ತು ಡೇವಿಡ್ ವಾರ್ನರ್ (53; 38ಎ) ಅವರ ಅಬ್ಬರದ ಅರ್ಧಶತಕಗಳ ಬಲದಿಂದ ಆಸ್ಟ್ರೇಲಿಯಾ 8 ವಿಕೆಟ್‌ಗಳಿಂದ ನ್ಯೂಜಿಲೆಂಡ್ ಎದುರು ಜಯಿಸಿತು. ಏಕದಿನ ಕ್ರಿಕೆಟ್‌ನಲ್ಲಿ ಆಸ್ಟ್ರೇಲಿಯಾ ತಂಡವು ಐದು ಬಾರಿ ವಿಶ್ವಕಪ್ ಜಯಿಸಿರುವ ದಾಖಲೆ ಇದೆ.

ಚುಟುಕು ವಿಶ್ವಕಪ್ ಇತಿಹಾಸದಲ್ಲಿ ಆಸ್ಟ್ರೇಲಿಯಾ ಎರಡನೇ ಬಾರಿ ಫೈನಲ್ ತಲುಪಿತ್ತು. ನ್ಯೂಜಿಲೆಂಡ್ ಮೊದಲ ಬಾರಿ ಪ್ರಶಸ್ತಿ ಸುತ್ತಿಗೆ ಲಗ್ಗೆ ಇಟ್ಟಿತ್ತು. ಕಳೆದ ಜೂನ್‌ನಲ್ಲಿ ಟೆಸ್ಟ್ ವಿಶ್ವ ಚಾಂಪಿಯನ್ ಆಗಿದ್ದ ನ್ಯೂಜಿಲೆಂಡ್ ಇಲ್ಲಿಯೂ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡವಾಗಿತ್ತು. ಆದರೆ, ಟಾಸ್ ಗೆಲುವು ಈ ಪಂದ್ಯದಲ್ಲಿಯೂ ಪ್ರಮುಖವಾಯಿತು. ಅದೃಷ್ಟ ಆಸ್ಟ್ರೇಲಿಯಾದತ್ತ ವಾಲಿತು. ನಾಯಕ ಆ್ಯರನ್ ಫಿಂಚ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದ್ದು ಫಲ ನೀಡಿತು.

ಆಸ್ಟ್ರೇಲಿಯಾ ಬೌಲರ್‌ಗಳು ಕಿವೀಸ್‌ಗೆ ಆರಂಭದಲ್ಲಿಯೇ ಪೆಟ್ಟು ಕೊಟ್ಟರು. ಈ ಹಂತದಲ್ಲಿ ಕೇನ್ ವಿಲಿಯಮ್ಸನ್ (85; 48ಎಸೆತ, 10ಬೌಂಡರಿ, 3ಸಿಕ್ಸರ್) ಆತಂಕ ದೂರ ಮಾಡಿದರು.

ಅದರಿಂದಾಗಿ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 172 ರನ್‌ಗಳನ್ನು ಗಳಿಸಲು ಸಾಧ್ಯವಾಯಿತು. ಅದಕ್ಕುತ್ತರವಾಗಿ ಫಿಂಚ್ ಬಳಗವು 18.5 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 173 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ ತಂಡದ ನಾಯಕ ಫಿಂಚ್ ಮತ್ತೊಮ್ಮೆ ಬ್ಯಾಟಿಂಗ್ ವೈಫಲ್ಯ ಅನುಭವಿಸಿದರು. ಆದರೆ, ವಾರ್ನರ್ ಮಾತ್ರ ಹೆಜ್ಜೆ ತಪ್ಪಲಿಲ್ಲ. ತಮ್ಮ ಉತ್ತಮ ಲಯವನ್ನು ಮುಂದುವರಿಸಿದರು. ಅವರಿಗೆ ಮಾರ್ಷ್ ಜೊತೆಗೂಡಿದರು.

ಎರಡನೇ ವಿಕೆಟ್‌ಗೆ 92 ರನ್ ಸೇರಿಸಿದರು. ಕಿವೀಸ್ ಬೌಲರ್‌ಗಳ ಪ್ರಯತ್ನಗಳಿಗೆ ಫಲ ಸಿಗಲಿಲ್ಲ. ಬೌಲ್ಟ್ ಒಬ್ಬರೇ ಎರಡು ವಿಕೆಟ್‌ಗಳನ್ನು ಗಳಿಸಿದರು. ಆದರೆ ಫೀಲ್ಡಿಂಗ್‌ನಲ್ಲಿ ಆದ ಲೋಪಗಳೂ ಕಿವೀಸ್ ಪಾಲಿಗೆ ಮುಳುವಾದವು.

13ನೇ ಓವರ್‌ನಲ್ಲಿ ವಾರ್ನರ್ ಔಟಾದಾಗ ಕಿವೀಸ್ ಬೌಲರ್‌ಗಳು ಎದುರಾಳಿಗಳಿಗೆ ಕಡಿವಾಣ ಹಾಕುವ ಪ್ರಯತ್ನ ಮಾಡಿದರು. ಆದರೆ ಪರಿಸ್ಥಿತಿ ಅರಿತು ತಾಳ್ಮೆಯಿಂದ ಆಡಿದ ಮಾರ್ಷ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ (ಅಜೇಯ 28; 18ಎ) ತಂಡವನ್ನು ಗೆಲುವಿನ ದಡ ಮುಟ್ಟಿಸಿದರು. ಟಿಮ್ ಸೌಥಿ ಹಾಕಿದ 19ನೇ ಓವರ್‌ನ ಐದನೇ ಎಸೆತವನ್ನು ರಿವರ್ಸ್ ಸ್ಕೂಪ್ ಮೂಲಕ ಬೌಂಡರಿ ಗಟ್ಟಿದ್ದ ಮ್ಯಾಕ್ಸ್‌ವೆಲ್ ವಿಜಯದ ಕೇಕೆ ಹಾಕಿದರು.

ಚಾಂಪಿಯನ್ ಆಸ್ಟ್ರೇಲಿಯಾ ತಂಡದ ಆಟಗಾರರು ಪ್ರಶಸ್ತಿಯೊಂದಿಗೆ ಸಂಭ್ರಮಿಸಿದರು –ರಾಯಿಟರ್ಸ್ ಚಿತ್ರ

ನಗದು ಬಹುಮಾನ

ಪ್ರಶಸ್ತಿ ವಿಜೇತರು	₹12 ಕೋಟಿ
ರನ್ನರ್ ಅಪ್	₹6 ಕೋಟಿ
ಸೆಮಿಫೈನಲ್	ಎರಡು ತಂಡಗಳಿಗೆ ತಲಾ ₹3 ಕೋಟಿ

ಮುಖ್ಯಾಂಶಗಳು

- ಎರಡು ವಿಕೆಟ್ ಕಬಳಿಸಿದ ನ್ಯೂಜಿಲೆಂಡ್ ವೇಗದ ಬೌಲರ್ ಟ್ರೆಂಟ್ ಬೌಲ್ಟ್
- ಫಿಂಚ್ ಬಳಗದ ವಿಜಯದ ಬೌಂಡರಿ ಹೊಡೆದ ಗ್ಲೆನ್ ಮ್ಯಾಕ್ಸ್‌ವೆಲ್

ನ್ಯೂಜಿಲೆಂಡ್‌ಗೆ ಬೆಂಬಲ ಸೂಚಿಸಿದ ಇಂಗ್ಲೆಂಡ್ ತಂಡದ ಅಭಿಮಾನಿಗಳು

ಇಂಗ್ಲೆಂಡ್ ಮತ್ತು ಪಾಕಿಸ್ತಾನ ಕ್ರಿಕೆಟ್ ತಂಡಗಳ ಅಭಿಮಾನಿಗಳು ಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು ಬೆಂಬಲಿಸಿದರು. ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ತಂಡವು ನ್ಯೂಜಿಲೆಂಡ್ ಎದುರು ಮತ್ತು ಪಾಕಿಸ್ತಾನ ತಂಡವು ಆಸ್ಟ್ರೇಲಿಯಾ ಎದುರು ಸೋತಿದ್ದವು.

‘ಕಿವೀಸ್ ತಂಡವು ಪ್ರಶಸ್ತಿ ಜಯಿಸುವ ಎಲ್ಲ ಅರ್ಹತೆಗಳನ್ನೂ ಹೊಂದಿದೆ. ಆಸ್ಟ್ರೇಲಿಯಾ ಒಳ್ಳೆಯ ತಂಡ ಇದೆ. ಆದರೆ ಒಂದು ದಿನದ ಮಟ್ಟಿಗೆ ನಾನು ನ್ಯೂಜಿಲೆಂಡ್ ಅಭಿಮಾನಿಯಾಗಿರುತ್ತೇನೆ’ ಎಂದು ಇಂಗ್ಲೆಂಡ್‌ನ 45 ವರ್ಷದ ಸಾಫ್ಟ್‌ವೇರ್ ಉದ್ಯೋಗಿಯೊಬ್ಬರು ಹೇಳಿದರು. ಇಂಗ್ಲೆಂಡ್‌ನಿಂದ ವಿಶ್ವಕಪ್ ವೀಕ್ಷಣೆಗಾಗಿ ಯುಎಇಗೆ ಬಂದಿರುವ ಇಂಗ್ಲೆಂಡ್‌ನ ಅಭಿಮಾನಿ ಮಾರ್ಕ್ ಲೂಯಿಸ್, ‘ಇಂಗ್ಲೆಂಡ್ ಜಯಿಸುವ ನಿರೀಕ್ಷೆ ಇತ್ತು. ಅವರು ಚೆನ್ನಾಗಿ ಆಡಿದರು. ಆದರೆ, ಫೈನಲ್ ಪ್ರವೇಶಿಸಲಾಗಲಿಲ್ಲ. ಈ ಪಂದ್ಯದಲ್ಲಿ ಕಿವೀಸ್‌ಗೆ ನನ್ನ ಬೆಂಬಲ’ ಎಂದರು.

ಸ್ಕೋರ್ ಕಾರ್ಡ್

ನ್ಯೂಜಿಲೆಂಡ್ 4ಕ್ಕೆ 172 (20 ಓವರ್)
ಗಪ್ಟಿಲ್ ಸಿ ಸ್ಟೋಯಿನಿಸ್ ಬಿ ಜಂಪಾ 28 (35ಎ, 4X3), ಡೆರಿಲ್ ಸಿ ವೇಡ್ ಬಿ ಹ್ಯಾಜಲ್‌ವುಡ್ 11 (8ಎ, 6X1), ವಿಲಿಯಮ್ಸನ್ ಸಿ ಸ್ಮಿತ್ ಬಿ ಹ್ಯಾಜಲ್‌ವುಡ್ 85 (48ಎ, 4X10, 6X3), ಫಿಲಿಪ್ಸ್ ಸಿ ಮ್ಯಾಕ್ಸ್‌ವೆಲ್ ಬಿ ಹ್ಯಾಜಲ್‌ವುಡ್ 18 (17ಎ, 4X1, 6X1), ನಿಶಾಮ್ ಔಟಾಗದೆ 13 (7ಎ, 6X1), ಸೀಫರ್ಟ್ ಔಟಾಗದೆ 8 (6ಎ, 4X1)
ಇತರೆ (ಬೈ 1, ಲೆಗ್‌ಬೈ 3, ನೋಬಾಲ್ 1, ವೈಡ್ 4) 9
ವಿಕೆಟ್ ಪತನ: 1–28 (ಡೆರಿಲ್ ಮಿಚೆಲ್, 3.5), 2–76 (ಮಾರ್ಟಿನ್ ಗಪ್ಟಿಲ್, 11.1), 3–144 (ಗ್ಲೆನ್ ಫಿಲಿಪ್ಸ್, 17.2), 4–148 (ಕೇನ್ ವಿಲಿಯಮ್ಸನ್, 17.5)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 4–0–60–0, ಜೋಶ್ ಹ್ಯಾಜಲ್‌ವುಡ್ 4–0–16–3, ಗ್ಲೆನ್ ಮ್ಯಾಕ್ಸ್‌ವೆಲ್ 3–0–28–0, ಪ್ಯಾಟ್ ಕಮಿನ್ಸ್ 4–0–27–0, ಆ್ಯಡಂ ಜಂಪಾ 4–0–26–1, ಮಿಚೆಲ್ ಮಾರ್ಷ್ 1–0–11–0

ಆಸ್ಟ್ರೇಲಿಯಾ 2ಕ್ಕೆ 173 (18.5 ಓವರ್)
ವಾರ್ನರ್ ಬಿ ಬೌಲ್ಟ್ 53 (38ಎ, 4X4, 6X3), ಫಿಂಚ್ ಸಿ ಡೆರಿಲ್ ಬಿ ಬೌಲ್ಟ್ 5 (7ಎ, 4X1), ಮಾರ್ಷ್ ಔಟಾಗದೆ 77 (50ಎ, 4X6, 6X4), ಮ್ಯಾಕ್ಸ್‌ವೆಲ್ ಔಟಾಗದೆ 28 (18ಎ, 4X4, 6X1)
ಇತರೆ (ಲೆಗ್‌ಬೈ 4, ವೈಡ್ 6) 10
ವಿಕೆಟ್ ಪತನ: 1–15 (ಆ್ಯರನ್ ಫಿಂಚ್, 2.3), 2–107 (ಡೇವಿಡ್ ವಾರ್ನರ್, 12.2)
ಬೌಲಿಂಗ್: ಟ್ರೆಂಟ್ ಬೌಲ್ಟ್ 4–0–18–2, ಟಿಮ್ ಸೌಥಿ 3.5–0–43–0, ಆ್ಯಡಂ ಮಿಲ್ನೆ 4–0–30–0, ಇಶ್ ಸೋಧಿ 3–0–40–0, ಮಿಚೆಲ್ ಸ್ಯಾಂಟನರ್ 3–0–23–0, ಜೇಮ್ಸ್ ನಿಶಾಮ್ 1–0–15–0

ಫಲಿತಾಂಶ: ಆಸ್ಟ್ರೇಲಿಯಾಗ 8 ವಿಕೆಟ್‌ಗಳ ಜಯ; ಪ್ರಶಸ್ತಿ

ಪಂದ್ಯದ ವೇಳೆ ಗಂಭೀರ ಗಾಯ: ಕ್ರಿಕೆಟಿಗ ಪ್ರಜ್ವಲ್‌ಗೆ ಐಸಿಯುನಲ್ಲಿ ಚಿಕಿತ್ಸೆ

ಆಟಗಾರರ ಡಿಕ್ಕಿ; ಮಿದುಳಿಗೆ ಪೆಟ್ಟು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ರಾಜನಗರದ ಮೈದಾನದಲ್ಲಿ ನಡೆಯುತ್ತಿರುವ ಕೆಎಸ್‌ಸಿಎ ಮೊದಲ ಡಿವಿಷನ್ ಕ್ರಿಕೆಟ್ ಟೂರ್ನಿಯ ಪಂದ್ಯದ ವೇಳೆ ಫೀಲ್ಡಿಂಗ್ ಮಾಡುವಾಗ ಇಬ್ಬರು ಆಟಗಾರರು ಪರಸ್ಪರ ಡಿಕ್ಕಿ ಹೊಡೆದು ಆಟಗಾರನೊಬ್ಬ ಗಂಭೀರವಾಗಿ ಗಾಯಗೊಂಡಿದ್ದಾನೆ.

ಹುಬ್ಬಳ್ಳಿ ಕ್ರಿಕೆಟ್ ಅಕಾಡೆಮಿ ‘ಎ’-ಧಾರವಾಡದ ಎಸ್‌ಡಿಎಂ ‘ಬಿ’ ತಂಡಗಳ ನಡುವೆ ಶನಿವಾರ ಪಂದ್ಯ ನಡೆದಿತ್ತು. 19ನೇ ಓವರ್‌ನಲ್ಲಿ ಫೀಲ್ಡಿಂಗ್ ಮಾಡುವಾಗ ಕವರ್ಸ್ ಹಾಗೂ ಪಾಯಿಂಟ್ ಕ್ಷೇತ್ರದ ನಡುವೆ ಎಸ್‌ಡಿಎಂ ತಂಡದ ಪ್ರಜ್ವಲ್ ಶಿರೋಳ ಮತ್ತು ಪ್ರಜ್ವಲ್ ಬೋರಣ್ಣನವರ ಡಿಕ್ಕಿಯಾಗಿ, ಪ್ರಜ್ವಲ್ ಶಿರೋಳ ಪ್ರಜ್ಞಾಹೀನನಾಗಿ ಮೈದಾನದಲ್ಲಿ ಕುಸಿದು ಬಿದ್ದಿದ್ದಾನೆ.

ತಕ್ಷಣವೇ ಕ್ಲಬ್‌ನ ಸದಸ್ಯರು, ಪಂದ್ಯ ನೋಡುತ್ತಿದ್ದವರು ಮತ್ತು ಕೆಎಸ್‌ಸಿಎ ಸಿಬ್ಬಂದಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಕೆಲ ಸಮಯದಲ್ಲಿಯೇ ಸ್ಕ್ಯಾನಿಂಗ್ ಮಾಡಿದಾಗ ಮಿದುಳಿಗೆ ಬಲವಾಗಿ ಪೆಟ್ಟು ಬಿದ್ದಿದ್ದು ದೃಢಪಟ್ಟಿತ್ತು. ತಕ್ಷಣವೇ ಶಸ್ತ್ರಚಿಕಿತ್ಸೆ ಮಾಡಬೇಕು ಎಂದು ವೈದ್ಯರು ಹೇಳಿದ್ದರು.

ಪ್ರಜ್ವಲ್ ಶಿರೋಳ

ಈ ಕುರಿತು ‘ಪ್ರಜಾವಾಣಿ’ ಜೊತೆ ಮಾತನಾಡಿದ ಕೆಎಸ್‌ಸಿಎ ಧಾರವಾಡ ವಲಯದ ಚೇರ್ಮನ್ ವೀರಣ್ಣ ಸವಡಿ, ‘ಪ್ರಜ್ವಲ್ ಶಿರೋಳ ಪ್ರಜ್ಞಾಹೀನನಾಗಿದ್ದರಿಂದ ತುರ್ತಾಗಿ ಶಸ್ತ್ರಚಿಕಿತ್ಸೆ ಮಾಡಲೇಬೇಕು ಎಂದು ವೈದ್ಯರು ಹೇಳಿದ್ದರು. ಪೋಷಕರಿಗೆ ವಿಷಯ ತಿಳಿಸಿ ಒಂದೂವರೆ ಗಂಟೆಗಳ ಕಾಲ ವೈದ್ಯರು ಶಸ್ತ್ರಚಿಕಿತ್ಸೆ ಮಾಡಿದರು. ಪ್ರಜ್ವಲ್ ಚೇತರಿಸಿಕೊಳ್ಳುತ್ತಿದ್ದಾನೆ ಎಂದು ವೈದ್ಯರು ತಿಳಿಸಿದ ಬಳಿಕವೇ ನಾವು ನೆಮ್ಮದಿಯ ನಿಟ್ಟುಸಿರು ಬಿಟ್ಟೆವು’ ಎಂದು ಘಟನೆಯನ್ನು ವಿವರಿಸಿದರು.

‘ಸಕಾಲಕ್ಕೆ ನಿರ್ಧಾರ ತೆಗೆದುಕೊಂಡು ಚಿಕಿತ್ಸೆ ಕೊಡಿಸಿದ್ದರಿಂದ ಮಗನ ಜೀವಕ್ಕೆ ಯಾವುದೇ ಅಪಾಯವಾಗಿಲ್ಲ’ ಎಂದು ಪ್ರಜ್ವಲ್ ಶಿರೋಳ ತಂದೆ ಹನುಮಂತ ತಿಳಿಸಿದರು. ಪ್ರಜ್ವಲ್ ಶಿರೋಳ 19 ವರ್ಷದ ಒಳಗಿನವರ ವಿಭಾಗದ ರಾಜ್ಯ ಟೂರ್ನಿಯಲ್ಲಿ ಧಾರವಾಡ ವಲಯವನ್ನು ಪ್ರತಿನಿಧಿಸಿದ್ದರು.

ಚಿಕಿತ್ಸೆ ಖರ್ಚು ಭರಿಸಲಿರುವ ಕೆಎಸ್‌ಸಿಎ

ಗಾಯಗೊಂಡಿರುವ ಪ್ರಜ್ವಲ್ ಶಿರೋಳ ಸಂಪೂರ್ಣ ಚಿಕಿತ್ಸಾ ವೆಚ್ಚವನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಭರಿಸಲಿದೆ.

‘ಶನಿವಾರ ಸಂಜೆ ಪ್ರಜ್ವಲ್ ಶಿರೋಳಗೆ ಪ್ರಜ್ಞೆಬಂದಿದೆ. ಮಂಗಳವಾರದ ತನಕ ಐಸಿಯುನಲ್ಲಿಯೇ ಚಿಕಿತ್ಸೆ ನೀಡಬೇಕು ಎಂದು ವೈದ್ಯರು ತಿಳಿಸಿದ್ದಾರೆ. ಆತನ ಪೋಷಕರು ಚಿಂತಿಸಬೇಕಿಲ್ಲ. ನಮ್ಮ ಸಂಸ್ಥೆ ಆಟಗಾರನ ಪರ ಇರಲಿದೆ. ಸಂಪೂರ್ಣ ಖರ್ಚು ನೋಡಿಕೊಳ್ಳಲಿದೆ’ ಎಂದು ಕೆಎಸ್‌ಸಿಎ ಧಾರವಾಡ ವಲಯದ ನಿಮಂತ್ರಕ ಅವಿನಾಶ ಪೋತದಾರ ತಿಳಿಸಿದರು.

ಪಾಕಿಸ್ತಾನ ಮಹಿಳಾ ತಂಡದ ಎದುರಿನ ಏಕದಿನ ಕ್ರಿಕೆಟ್ ಸರಣಿಯಲ್ಲಿ ಗೆದ್ದ ವೆಸ್ಟ್ ಇಂಡೀಸ್ ತಂಡ –ಟ್ವಿಟರ್ ಚಿತ್ರ

ಟೇಲರ್ ಶತಕದ ಮಿಂಚು: ವಿಂಡೀಸ್ ಕ್ಲೀನ್‌ಸ್ವೀಪ್

ಕರಾಚಿ (ಪಿಟಿಐ): ನಾಯಕಿ ಸ್ಟೆಫಾನಿ ಟೇಲರ್ ಅಜೇಯ ಶತಕದ ಬಲದಿಂದ ವೆಸ್ಟ್ ಇಂಡೀಸ್ ತಂಡವು ಭಾನುವಾರ ನಡೆದ ಪಾಕಿಸ್ತಾನ ಎದುರಿನ ಮಹಿಳೆಯರ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಜಯಭೇರಿ ಬಾರಿಸಿತು. ಇದರೊಂದಿಗೆ ಸರಣಿಯಲ್ಲಿ 3–0ಯಿಂದ ಕ್ಲೀನ್ ಸ್ವೀಪ್ ಮಾಡಿಕೊಂಡಿತು.

ಟಾಸ್ ಗೆದ್ದ ವಿಂಡೀಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಬ್ಯಾಟರ್ ಮುನೀಬಾ ಅಲಿ (58; 88ಎ, 8ಬೌಂಡರಿ) ಮತ್ತು ಅಲಿಯಾ ರಿಯಾಜ್ (ಔಟಾಗದೆ 44, 57ಎ) ಅವರ ಬ್ಯಾಟಿಂಗ್ ನೆರವಿನಿಂದ 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 225 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ವಿಂಡೀಸ್ ತಂಡದ ಆರಂಭ ಚೆನ್ನಾಗಿರಲಿಲ್ಲ. ಕೇವಲ 15 ರನ್‌ಗಳಾಗುವಷ್ಟರಲ್ಲಿ ಮೂರು ವಿಕೆಟ್‌ಗಳನ್ನು ಕಳೆದುಕೊಂಡ ತಂಡವು ಆತಂಕದಲ್ಲಿತ್ತು.

ಆದರೆ, ನಾಯಕಿಗೆ ತಕ್ಕ ಆಟವಾಡಿದ ಟೇಲರ್ (ಔಟಾಗದೆ 102, 117ಎ, 12ಬೌಂಡರಿ) ಆತಂಕ ದೂರ ಮಾಡಿದರು. ಅದರಿಂದಾಗಿ ತಂಡವು 44 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 226 ರನ್ ಗಳಿಸಿ ಜಯಭೇರಿ ಬಾರಿಸಿತು.

ಹೈಲಿ ಮ್ಯಾಥ್ಯೂಸ್ (49; 58ಎ, 8ಬೌಂಡರಿ) ಮತ್ತು ಅಜೇಯ ಅರ್ಧಶತಕ ಗಳಿಸಿದ ಚೆಡಿಯನ್ ನೇಷನ್ (ಔಟಾಗದೆ 51; 67ಎ, 7ಬೌಂಡರಿ) ತಂಡದ ಜಯಕ್ಕೆ ಮಹತ್ವದ ಕಾಣಿಕೆ ನೀಡಿದರು. ಟೇಲರ್ ಮತ್ತು ಮ್ಯಾಥ್ಯೂಸ್ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 83 ರನ್ ಸೇರಿಸಿದರು. ಮ್ಯಾಥ್ಯೂಸ್ ಔಟಾದ ನಂತರ ಮುರಿಯದ ಐದನೇ ವಿಕೆಟ್ ಜೊತೆಯಾಟದಲ್ಲಿ ಟೇಲರ್ ಮತ್ತು ನೇಷನ್ 128 ರನ್ ಸೇರಿಸಿದರು. ಇದರಿಂದಾಗಿ ತಂಡವು ಗೆಲುವಿನ ದಡ ಸೇರಿತು.

ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ: 50 ಓವರ್‌ಗಳಲ್ಲಿ 7ಕ್ಕೆ 225 (ಮುನೀಬಾ ಅಲಿ 58, ಒಮೇಮಾ ಸೊಹೈಲ್ 27, ಇರಾಮ್ ಜಾವೇದ್ 26, ಆಲಿಯಾ ರಿಯಾಜ್ ಔಟಾಗದೆ 44, ಶಕಿರಾ ಸೆಲ್ಮನ್ 40ಕ್ಕೆ2, ಅಲಿಯಾ ಅಲಿನ್ 41ಕ್ಕೆ2), ವೆಸ್ಟ್ ಇಂಡೀಸ್: 44 ಓವರ್‌ಗಳಲ್ಲಿ 4ಕ್ಕೆ 226 (ಸ್ಟೆಫಾನಿ ಟೇಲರ್ ಔಟಾಗದೆ 102, ಹೈಲಿ ಮ್ಯಾಥ್ಯೂಸ್ 49, ಚೆಡಿಯನ್ ನೇಷನ್ ಔಟಾಗದೆ 51, ಅನಾಮ್ ಅಮಿನ್ 45ಕ್ಕೆ2) ಫಲಿತಾಂಶ: ವೆಸ್ಟ್ ಇಂಡೀಸ್ ತಂಡಕ್ಕೆ 6 ವಿಕೆಟ್‌ಗಳ ಜಯ.

ಆನ್‌ಲೈನ್ ಚೆಸ್: ಹರಿಕೃಷ್ಣಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಟರ್‌ನ್ಯಾಷನಲ್ ಮಾಸ್ಟರ್ ಹರಿಕೃಷ್ಣ ಎ.ರಾ ಅವರು ಯುನೈಟೆಡ್ ಕರ್ನಾಟಕ ಚೆಸ್ ಸಂಸ್ಥೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲಾ ಚೆಸ್ ಸಂಸ್ಥೆ ಆಯೋಜಿಸಿದ್ದ ಆನ್‌ಲೈನ್ ರ್‍ಯಾಪಿಡ್ ಚೆಸ್ ಚಾಂಪಿಯನ್‌ಷಿಪ್‌ನ ಮುಕ್ತ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ಚೆನ್ನೈನ ಎಸ್‌ಆರ್‌ಎಂ ವಿಶ್ವವಿದ್ಯಾಲಯದ ಎರಡನೇ ವರ್ಷದ ಬಿಕಾಂ ವಿದ್ಯಾರ್ಥಿಯಾಗಿರುವ ಹರಿಕೃಷ್ಣ 10 ಸುತ್ತುಗಳಲ್ಲಿ 8.5 ಪಾಯಿಂಟ್ ಕಲೆ ಹಾಕಿದರು.

ತಲಾ ಎಂಟು ಪಾಯಿಂಟ್ ಗಳಿಸಿದ ಕೌಸ್ತುವ್ ಕುಂದು, ಇಂಟರ್‌ನ್ಯಾಷನಲ್ ಮಾಸ್ಟರ್ ಗಿರಿನಾಥ್ ಪಿ.ಡಿ.ಎಸ್, ಅಶ್ವತ್ಥ್ ಆರ್, ಪೀಟರ್ ಆನಂದ್ ಹಾಗೂ ಅನದ್ಕತ್ ಕರ್ತವ್ಯ ಕ್ರಮವಾಗಿ ಎರಡರಿಂದ ಐದನೇ ಸ್ಥಾನಗಳಿಗೆ ಸಮಾಧಾನಪಟ್ಟುಕೊಂಡರು.

ಕೃಷ್ಣ ಮತ್ತು ಅರ್ಪಣ್ ದಾಸ್ ಅವರು ತಲಾ ಏಳೂವರೆ ಪಾಯಿಂಟ್ ಕಲೆ ಹಾಕಿದರು. 55 ವರ್ಷ ಮೇಲಿನ ವರಿಗಾಗಿ ಆಯೋಜಿಸಿದ್ದ ಬೆಸ್ಟ್ ವೆಟೆರನ್ ವಿಭಾಗದ ಪ್ರಶಸ್ತಿ ಸುರೇಶ್ ಬಾಬು ಅವರ ಪಾಲಾಯಿತು.

14 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ವೃಷಾಂಕ್ ಚೌಹಾಣ್ (7.5 ಪಾಯಿಂಟ್) ಮೊದಲಿಗರಾದರು. ನಿಶೇಷ್ ಬಿ ಮತ್ತು ಅಭಿನವ್ ಬ್ಯಾನರ್ಜಿ ಎರಡು ಹಾಗೂ ಮೂರನೇ ಸ್ಥಾನ ಗಳಿಸಿದರು. ಸಿದ್ಧಾರ್ಥ್ ಆರ್ ಮತ್ತು ಕ್ರಿಸ್ ಜಾನ್ಸನ್ ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನ ಗಳಿಸಿದರು.

ಬಾಲಕಿಯರ ವಿಭಾಗದಲ್ಲಿ ಫರ್ಹಾತ್ (6.5 ಪಾಯಿಂಟ್), ಸಂಜನಾ,ಧೃತಿ, ಚಿನ್ಮಯಿ ಮತ್ತು ಕಮಲಿನಿ ರಮೇಶ್ ಕ್ರಮವಾಗಿ ಒಂದರಿಂದ ಐದನೇ ಸ್ಥಾನ ಗಳಿಸಿದರು.

ಕಿವೀಸ್ ತಂಡದಲ್ಲಿ ಮಿಚೆಲ್

ವೆಲ್ಲಿಂಗ್ಟನ್: ಭಾರತ ಪ್ರವಾಸ ಕೈಗೊಳ್ಳಲಿರುವ ನ್ಯೂಜಿಲೆಂಡ್ ಟೆಸ್ಟ್ ತಂಡದಲ್ಲಿ ಗಾಯಾಳು ಡೆವಾನ್ ಕಾನ್ವೆ ಬದಲಿಗೆ ಡೆರಿಲ್ ಮಿಚೆಲ್ ಅವರನ್ನು ಸೇಪರ್ಡೆಗೊಳಿಸಲಾಗಿದೆ.

ಇಂಗ್ಲೆಂಡ್ ವಿರುದ್ಧ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಕಾನ್ವೆ ಅವರ ಬಲಗೈಗೆ ಗಾಯವಾಗಿತ್ತು. ಔಟ್ ಆದ ನಿರಾಶೆಯಲ್ಲಿ ಬ್ಯಾಟ್‌ಗೆ ಬಲವಾಗಿ 'ಪಂಚ್' ಮಾಡಿದ ಪರಿಣಾಮ ಗಾಯಗೊಂಡಿದ್ದರು. 46 ರನ್ ಗಳಿಸಿ ಕಾನ್ವೆ ತಂಡದ ಗೆಲುವಿನಲ್ಲಿ ಅಮೂಲ್ಯ ಕೊಡುಗೆ ಸಲ್ಲಿಸಿದ್ದರು.



ಮಿಚೆಲ್ –ರಾಯಿಟರ್ಸ್ ಚಿತ್ರ

ಪಾಕಿಸ್ತಾನ ಎದುರಿನ ಪಂದ್ಯದಲ್ಲಿ ಮಿಚೆಲ್ (ಅಜೇಯ 72) ಗೆಲುವಿನ ರೂವಾರಿಯಾಗಿದ್ದರು. ಭಾರತ ದಲ್ಲಿ ಕಿವೀಸ್ ತಂಡವು ಮೂರು ಪಂದ್ಯಗಳ ಟ್ವೆಂಟಿ-20 ಹಾಗೂ ಎರಡು ಪಂದ್ಯಗಳ ಟೆಸ್ಟ್ ಸರಣಿಗಳಲ್ಲಿ ಭಾಗವಹಿಸಲಿವೆ.

ಒಲಿಂಪಿಕ್ಸ್ ಶೂಟಿಂಗ್: ಏಷ್ಯಾಕ್ಕೆ ಕಾಯ್ದಿರಿಸಿದ ಸ್ಥಾನ ಹೆಚ್ಚಳ

ನವದೆಹಲಿ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಶೂಟಿಂಗ್ ಕ್ರೀಡೆಯ ಅರ್ಹತೆಗಾಗಿ ಏಷ್ಯಾದ ದೇಶಗಳಿಗೆ ಕಾಯ್ದಿರಿಸಿದ್ದ ಸ್ಥಾನಗಳನ್ನು ಅಂತರರಾಷ್ಟ್ರೀಯ ಶೂಟಿಂಗ್ ಫೆಡರೇಷನ್ (ಐಎಸ್‌ಎಸ್‌ಎಫ್) 38ರಿಂದ 48ಕ್ಕೆ ಹೆಚ್ಚಿಸಿದೆ.

2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಇದು ಜಾರಿಗೆ ಬರುವ ನಿರೀಕ್ಷೆಯಿದೆ. 2022ರಿಂದಲೇ ಅರ್ಹತಾ ಸ್ಪರ್ಧೆಗಳು ಆರಂಭವಾಗಲಿವೆ. ಟೋಕಿಯೊ ಕೂಟದಲ್ಲಿ 38 ಸ್ಥಾನಗಳಿದ್ದವು.

‘ಏಷ್ಯಾಕ್ಕೆ ಕಾಯ್ದಿರಿಸಿದ ಸ್ಥಾನಗಳನ್ನು 38ರಿಂದ 48ಕ್ಕೆ ಹೆಚ್ಚಿಸಲಾಗಿದೆ ಎಂದು ದೃಢೀಕರಿಸುವ ಪತ್ರವನ್ನು ಐಎಸ್‌ಎಸ್‌ಎಫ್‌ನಿಂದ ಏಷ್ಯನ್ ಶೂಟಿಂಗ್ ಕಾನ್ಫೆಡರೇಷನ್ (ಎಎಸ್‌ಸಿ) ಸ್ವೀಕರಿಸಿದೆ’ ಎಂದು ಎಎಸ್‌ಸಿಯು ಟ್ವಿಟರ್ ಮತ್ತು ಫೇಸ್‌ಬುಕ್ ಖಾತೆಗಳೂ ಮಾಹಿತಿ ನೀಡಿದೆ.

2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತದ ದಾಖಲೆಯ 15 ಶೂಟರ್‌ಗಳು ಅರ್ಹತೆ ಗಿಟ್ಟಿಸಿದ್ದರು. ಆದರೆ ಒಂದು ಪದಕವೂ ದಕ್ಕಿರಲಿಲ್ಲ.

ಲಿಬಿಯಾ ಅಧ್ಯಕ್ಷ ಸ್ಥಾನಕ್ಕೆ ಗಡಾಫಿ ಪುತ್ರ ಸ್ಪರ್ಧೆ

ಟ್ರಿಪೋಲಿ (ರಾಯಿಟರ್ಸ್): ಲಿಬಿಯಾದಲ್ಲಿ ಡಿ. 24ರಂದು ನಡೆಯಲಿರುವ ಅಧ್ಯಕ್ಷೀಯ ಚುನಾವಣೆಗೆ ಅಭ್ಯರ್ಥಿಯಾಗಿ ಸ್ಪರ್ಧಿಸಲು ಅಲ್ಲಿನ ಮಾಜಿ ನಾಯಕ ಮುಅಮ್ಮರ್ ಗಡಾಫಿ ಅವರ ಪುತ್ರ ಸೈಫ್ ಅಲ್-ಇಸ್ಲಾಮ್ ಅಲ್-ಗಡಾಫಿ ಅವರು ಭಾನುವಾರ ಹೆಸರು ನೋಂದಣಿ ಮಾಡಿಕೊಂಡಿದ್ದಾರೆ ಎಂದು ಅಲ್ಲಿನ ಚುನಾವಣಾ ಆಯೋಗವು ತಿಳಿಸಿದೆ.

ಅಧ್ಯಕ್ಷ ಸ್ಥಾನಕ್ಕೆ ತೀವ್ರ ಸ್ಪರ್ಧೆ ಒಡ್ಡುವ ನಾಯಕರಲ್ಲಿ ಪಟ್ಟಿಯಲ್ಲಿ ಸೈಫ್ ಅಲ್-ಇಸ್ಲಾಮ್ ಅಲ್ ಗಡಾಫಿ ಅವರ ಹೆಸರು ಮುಂಚೂಣಿಯಲ್ಲಿದೆ. ಲಿಬಿಯಾದ ಪೂರ್ವ ವಿಭಾಗದ ಸೇನಾ ಕಮಾಂಡರ್ ಖಲೀಫಾ ಹಫ್ತಾರ್, ಪ್ರಧಾನ ಮಂತ್ರಿ ಅಬ್ದುಲ್ ಹಮಿದ್ ಅಲ್-ದ್ಬಿಬಾ ಮತ್ತು ಸಂಸತ್ತಿನ ಸ್ಪೀಕರ್ ಅಗುಯಿಲಾ ಸಲೇಹ್ ಕೂಡಾ ಕಣದಲ್ಲಿದ್ದಾರೆ.

ಸೆಭಾ ಪಟ್ಟಣದಲ್ಲಿ ಭಾನುವಾರ ಸಾಂಪ್ರದಾಯಿಕವಾಗಿ ಕಂದು ಬಣ್ಣದ ನಿಲುವಂಗಿ, ತಲೆಗೆ ಪೇಟಾ ಸುತ್ತುಕೊಂಡು ಚುನಾವಣಾ ನೋಂದಣಿ ಕೇಂದ್ರಕ್ಕೆ ಹಾಜರಾದ ಸೈಫ್ ಅಲ್-ಇಸ್ಲಾಮ್ ಅಲ್ ಗಡಾಫಿ ಅವರು, ದಾಖಲೆಗಳಿಗೆ ಸಹಿ ಹಾಕಿದ್ದಾರೆ ಎನ್ನುವ ಛಾಯಾಚಿತ್ರಗಳು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟವಾಗಿವೆ.

ಸೈಫ್ ಅಲ್‌ಇಸ್ಲಾಂ ಅಲ್‌ಗಡಾಫಿ (ಕುಳಿತಿರುವವರು) ದಕ್ಷಿಣ ಪಟ್ಟಣ ಸೆಭಾದ ನೋಂದಣಿ ಕೇಂದ್ರದಲ್ಲಿ ಹೆಸರು ನೋಂದಾಯಿಸಿದರು –ರಾಯಿಟರ್ಸ್ ಚಿತ್ರ

ಕೆರೆಗೆ ಕಾರು ಉರುಳಿ ನಾಲ್ವರು ಭಾರತೀಯರ ಸಾವು

ಕಠ್ಮಂಡು (ಪಿಟಿಐ): ನೇಪಾಳದ ದಕ್ಷಿಣ ಭಾಗದ ರೌತಹತ್ ಜಿಲ್ಲೆಯಲ್ಲಿ ಶನಿವಾರ ಕಾರೊಂದು ಕೆರೆಗೆ ಉರುಳಿಬಿದ್ದುದರಿಂದ ಅದರಲ್ಲಿದ್ದ ನಾಲ್ವರು ಭಾರತೀಯರು ಮೃತಪಟ್ಟಿದ್ದಾರೆ.

ಮೃತರೆಲ್ಲರೂ ಬಿಹಾರ ರಾಜ್ಯದ 27ರಿಂದ 30 ವರ್ಷದೊಳಗಿನ ಯುವಕರು. ಮದ್ಯ ಸೇವಿಸಿ ಕಾರು ಚಾಲನೆ ಮಾಡಿದ್ದರಿಂದಲೇ ಈ ಅಪಘಾತ ಸಂಭವಿಸಿರಬಹುದು ಎಂದು ಪೊಲೀಸ್ ಮೂಲಗಳನ್ನು ಉಲ್ಲೇಖಿಸಿ ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಬದುಕಿ ಉಳಿದದ್ದೇ ಅದೃಷ್ಟ: ಕೇನ್ಸ್

ಕ್ಯಾನ್‌ಬೆರಾ, ಆಸ್ಟ್ರೇಲಿಯಾ (ಪಿಟಿಐ): ‘ಮುಂದೇನಾಗುತ್ತದೆಯೋ ಯಾರು ಬಲ್ಲ, ನನಗೆ ಎದ್ದು ನಿಲ್ಲಲು ಸಾಧ್ಯವಾದರೂ ಆಗಬಹುದು, ನಡೆದಾಡಲು ಸಾಧ್ಯವಾದರೂ ಆಗಬಹುದು. ಅದ್ಯಾವುದರ ಬಗ್ಗೆ ಸದ್ಯ ಏನನ್ನೂ ಹೇಳಲಾಗದು. ಆದರೆ ಸದ್ಯ ಬದುಕಿ ಉಳಿದಿದ್ದೇನೆ ಎಂಬುದು ನನ್ನ ಅದೃಷ್ಟ...’

ಬೆನ್ನುಮೂಳೆಯಲ್ಲಿ ಆಘಾತವಾಗಿ ಆಸ್ಪತ್ರೆಯಲ್ಲಿ ಜೀವಸುರಕ್ಷಾ ವ್ಯವಸ್ಥೆಯಲ್ಲಿದ್ದು ವಾಪಸಾಗಿ ಮೂರು ತಿಂಗಳ ನಂತರ ನ್ಯೂಜಿಲೆಂಡ್ ಕ್ರಿಕೆಟ್ ತಂಡದ ಮಾಜಿ ಆಲ್‌ರೌಂಡರ್ ಕ್ರಿಸ್ ಕೇನ್ಸ್ ಆಡಿದ ಮಾತು ಇದು.

ಕ್ರಿಸ್ ಕೇನ್ಸ್ –ಎಎಫ್‌ಪಿ ಚಿತ್ರ

ಗಾಲಿಕುರ್ಚಿಯಲ್ಲಿ ದಿನಗಳೆಯುತ್ತಿರುವ 51 ವರ್ಷದ ಕೇನ್ಸ್ ಅನಾರೋಗ್ಯಕ್ಕೆ ಒಳಗಾದ ನಂತರ ಸೊಂಟಕ್ಕಿಂತ ಕೆಳಗಿನ ಭಾಗ ನಿಸ್ತೇಜವಾಗಿತ್ತು. ನಂತರ ಅವರನ್ನು ಅನೇಕ ಸಂಕೀರ್ಣ ಶಸ್ತ್ರಚಿಕಿತ್ಸೆಗಳಿಗೆ ಒಳಪಡಿಸಲಾಗಿತ್ತು.

‘ಭವಿಷ್ಯ ಏನು ಎಂಬುದು ಯಾರಿಗೂ ಗೊತ್ತಿಲ್ಲ. ನನ್ನ ಪಾಲಿಗಂತೂ ಕಾಲವೇ ಎಲ್ಲವನ್ನೂ ಹೇಳಬೇಕು. ಆದ್ದರಿಂದ ಕಾದು ನೋಡುವುದೊಂದೇ ಉಳಿದಿರುವ ದಾರಿ’ ಎಂದು ಅವರು ಹೇಳಿರುವುದಾಗಿ ಕ್ಯಾನ್‌ಬೆರಾ ಟೈಮ್ಸ್ ವರದಿ ಮಾಡಿದೆ.

ಮೂರು ತಿಂಗಳಲ್ಲಿ ಇದೇ ಮೊದಲ ಬಾರಿ ಕೇನ್ಸ್ ಅವರು ತಮ್ಮ ಎದೆಯ ಭಾಗ ಮತ್ತು ಕೈಗಳನ್ನು ಅಲುಗಾಡಿಸಲು ಶುರು ಮಾಡಿದ್ದಾರೆ.

ಜಗತ್ತಿನ ಶ್ರೇಷ್ಠ ಆಲ್‌ರೌಂಡರ್‌ಗಳಲ್ಲಿ ಒಬ್ಬರಾಗಿದ್ದ ಕೇನ್ಸ್ 1989ರಿಂದ 2006ರ ಅವಧಿಯಲ್ಲಿ 62 ಟೆಸ್ಟ್, 215 ಏಕದಿನ ಮತ್ತು ಎರಡು ಟ್ವೆಂಟಿ–20 ಪಂದ್ಯಗಳನ್ನು ಆಡಿದ್ದಾರೆ.

ಎನ್‌ಸಿಎ ಮುಖ್ಯಸ್ಥ ಸ್ಥಾನಕ್ಕೆ ಭಾರತದ ಮಾಜಿ ಬ್ಯಾಟರ್

‘ಆಪ್ತಮಿತ್ರ’ನ ಸ್ಥಾನ ತುಂಬಲಿರುವ ಲಕ್ಷ್ಮಣ್

ನವದೆಹಲಿ (ಪಿಟಿಐ): ಭಾರತ ತಂಡದ ಮಾಜಿ ಬ್ಯಾಟರ್ ವಿ.ವಿ.ಎಸ್. ಲಕ್ಷ್ಮಣ್ ಅವರು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ)ಯ ಮುಖ್ಯಸ್ಥರಾಗಲಿದ್ದಾರೆಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಹಿರಿಯ ಅಧಿಕಾರಿಯೊಬ್ಬರು ಖಚಿತಪಡಿಸಿದ್ದಾರೆ.

ತಮ್ಮ ‘ಆಪ್ತಮಿತ್ರ’ ರಾಹುಲ್ ದ್ರಾವಿಡ್ ಅವರ ಸ್ಥಾನವನ್ನು ಲಕ್ಷ್ಮಣ್ ವಹಿಸಿಕೊಳ್ಳುವರು. ಭಾರತ ತಂಡದ ಮುಖ್ಯ ಕೋಚ್ ಆಗಿದ್ದ ರವಿ ಶಾಸ್ತ್ರಿ ಅವರ ಅವಧಿ ಇತ್ತೀಚೆಗೆ ಮುಗಿದ ಕಾರಣ ಆ ಸ್ಥಾನಕ್ಕೆ ರಾಹುಲ್ ದ್ರಾವಿಡ್ ಅವರನ್ನು ನೇಮಕ ಮಾಡಲಾಗಿದೆ. ಅದರಿಂದಾಗಿ ಎನ್‌ಸಿಎ ಮುಖ್ಯಸ್ಥರ ಹುದ್ದೆ ತೆರವಾಗಿತ್ತು.

‘ಲಕ್ಷ್ಮಣ್ ಅವರು ಎನ್‌ಸಿಎಯ ನೂತನ ಮುಖ್ಯಸ್ಥರಾಗಲಿದ್ದಾರೆ’ ಎಂದು ಹೆಸರು ಬಹಿರಂಗಪಡಿಸಬಾರದೆಂಬ ಷರತ್ತಿನ ಮೇಲೆ ಹಿರಿಯ ಅಧಿಕಾರಿ ಸುದ್ದಿಸಂಸ್ಥೆಗೆ ಖಚಿತಪಡಿಸಿದ್ದಾರೆ.

ಐಪಿಎಲ್‌ನಲ್ಲಿ ಆಡುವ ಸನ್‌ರೈಸರ್ಸ್ ಹೈದರಾಬಾದ್ ತಂಡದ ಮೆಂಟರ್ ಸ್ಥಾನದಿಂದ ಲಕ್ಷ್ಮಣ್ ಈಗಾಗಲೇ ನಿರ್ಗಮಿಸಿದ್ದಾರೆ. ಹಿತಾಸಕ್ತಿ ಸಂಘರ್ಷ ನಿಯಮ ತಪ್ಪಿಸುವ ಉದ್ದೇಶದಿಂದ ಲಕ್ಷ್ಮಣ್ ಅವರು ವೀಕ್ಷಕ ವಿವರಣೆಗಾರರ ಪ್ಯಾನೆಲ್‌ನಿಂದ ಹೊರಬಂದಿದ್ದಾರೆ ಮತ್ತು ಪತ್ರಿಕೆಗಳಿಗೆ ಅಂಕಣ ಬರೆಯುವುದನ್ನು ನಿಲ್ಲಿಸಿದ್ದಾರೆ.

ಕೋಲ್ಕತ್ತದಲ್ಲಿ ಡಿಸೆಂಬರ್ 4ರಂದು ನಡೆಯಲಿರುವ ಬಿಸಿಸಿಐನ ವಾರ್ಷಿಕ ಮಹಾಸಭೆಗೆ ಮೊದಲೇ ಲಕ್ಷ್ಮಣ್ ಅವರ ನೇಮಕ ಜಾರಿಗೆ ಬರಲಿದೆ.

ಎನ್‌ಸಿಎ ಮುಖ್ಯಸ್ಥರ ಹುದ್ದೆ ವಹಿಸಿಕೊಳ್ಳುವಂತೆ ಬಿಸಿಸಿಐ ನೀಡಿದ್ದ ಪ್ರಸ್ತಾವವನ್ನು ಲಕ್ಷ್ಮಣ್ ಆರಂಭದಲ್ಲಿ ನಿರಾಕರಿಸಿದ್ದರು. ಹೈದರಾಬಾದ್‌ನಲ್ಲಿ ನೆಲೆಸಿರುವ ಅವರು, ಅಕಾಡೆಮಿ ಬೆಂಗಳೂರಿನಲ್ಲಿರುವ ಕಾರಣ ಅಲ್ಲಿ ಕಡೇಪಕ್ಷ 200 ದಿನಗಳ ಕಾಲ ಇರಬೇಕಾಗುತ್ತದೆ. ಭಾರತ ತಂಡದ ಮುಖ್ಯ ಕೋಚ್ ಮತ್ತು ಎನ್‌ಸಿಎ ಮುಖ್ಯಸ್ಥರ ನಡುವೆ ಸಮನ್ವಯ ಸರಾಗವಾಗಿ ಆಗಲು ಬಿಸಿಸಿಐ ಬಯಸಿದ್ದು, ಈಗ ಭಾರತದ ಇಬ್ಬರು ದಿಗ್ಗಜ ಆಟಗಾರರಾದ ದ್ರಾವಿಡ್ ಮತ್ತು ಲಕ್ಷ್ಮಣ್ ಈ ಪ್ರಮುಖ ಹುದ್ದೆಗಳನ್ನು ವಹಿಸಿಕೊಳ್ಳಲಿದ್ದಾರೆ.

ಭಾರತ ಸೀನಿಯರ್ ತಂಡದ ಆಯ್ಕೆಗೆ ದಾರಿ ಮಾಡಿಕೊಡುವ 19 ವರ್ಷದೊಳಗಿನವರ ತಂಡ ಮತ್ತು ಭಾರತ ‘ಎ’ ತಂಡ ಸಜ್ಜುಗೊಳಿಸುವ ಹೊಣೆ ಲಕ್ಷ್ಮಣ್ ಅವರ ಹೆಗಲೇರಲಿದೆ.

ವಿ.ವಿ.ಎಸ್. ಲಕ್ಷ್ಮಣ್ ಮತ್ತು ರಾಹುಲ್ ದ್ರಾವಿಡ್– ಪ್ರಜಾವಾಣಿ ಚಿತ್ರ

ವಿವಿಎಸ್ ಲಕ್ಷ್ಮಣ್

ಮಾದರಿ	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ
ಟೆಸ್ಟ್	134	8,781	281	17	56
ಏಕದಿನ	86	2,338	131	6	10
ಪ್ರಥಮದರ್ಜೆ	267	19,730	353	55	98

ಮ್ಯಾರಥಾನ್: ಗ್ಲೋರಿಯಾ ಜಯಭೇರಿ

ಅಥೆನ್ಸ್ (ಎಎಫ್‌ಪಿ): ಕಾನಸ್ಟೆಂಟಿನೊಸ್ ಕೆಲಾಜೊಸ್ ಮತ್ತು ಗ್ಲೋರಿಯಾ ಟಿಜಿಯೊವನ್ ಪ್ರಿವಿಲಿಗಿಯೊ ಭಾನುವಾರ ನಡೆದ 38ನೇ ಅಥೆನ್ಸ್ ಮ್ಯಾರಥಾನ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದರು.

31 ವರ್ಷದ ಗ್ರೀಕ್ ಓಟಗಾರ ಕೆಲಾ ಜೊಸ್ 42 ಕಿ.ಮೀ ದೂರವನ್ನು 2 ಗಂಟೆ, 16 ನಿಮಿಷ ಮತ್ತು 49 ಸೆಕೆಂಡುಗಳಲ್ಲಿ ಪೂರ್ಣಗೊಳಿಸಿದರು. ಇದರೊಂದಿಗೆ 2004ರ ಅಥೆನ್ಸ್ ಒಲಿಂಪಿಕ್ಸ್‌ನಲ್ಲಿ ನಿಕೊಸ್ ಪೊಲಿಯಾಸ್ ಅವರು ಮಾಡಿದ್ದ (2ನಿ, 17ನಿ, 26ಸೆ) ದಾಖಲೆಯನ್ನು ಅಳಿಸಿಹಾಕಿದರು.

ಗ್ರೀಸ್‌ನ ಪೆನಾಜಿಯೊಟಿಸ್ ಪೌರಿಕಾಸ್ ಮತ್ತು ಚಾರ್ಲಾಂಪೊಸ್ ಪಿಸ್ತೊಲಿಸ್ ಕ್ರಮವಾಗಿ ಎರಡು ಮತ್ತು 3ನೇ ಸ್ಥಾನ ಪಡೆದರು.

ಮಹಿಳೆಯರ ವಿಭಾಗದಲ್ಲಿಯೂ ಗ್ರೀಸ್ ದೇಶದ ಗ್ಲೋರಿಯಾ (2ಗಂ, 41ನಿ,30ಸೆ) ಮೊದಲ ಸ್ಥಾನ ಪಡೆದರು. ವಿದೇಶಿ ಓಟಗಾರರು ಕಡಿಮೆ ಸಂಖ್ಯೆ ಯಲ್ಲಿ ಭಾಗವಹಿಸಿದ್ದ ಸ್ಪರ್ಧೆಯಲ್ಲಿ ಆತಿಥೇಯ ಅಥ್ಲೀಟ್‌ಗಳು ಪಾರಮ್ಯ ಮೆರೆದರು. ಎರಡು ವರ್ಷಗಳ ನಂತರ ನಡೆದ ಸ್ಪರ್ಧೆಯಲ್ಲಿ 2555 ಸ್ಪರ್ಧಿಗಳಿದ್ದರು.

ಗ್ಲೋರಿಯಾ ಟಿಜಿಯೊವನ್ ಪ್ರಿವಿಲಿಗಿಯೊ

ಬಿಎಫ್‌ಸಿಗೆ ಚೆಟ್ರಿಯದೇ ಸಾರಥ್ಯ

ಇಂಡಿಯನ್ ಸೂಪರ್ ಲೀಗ್ ಟೂರ್ನಿಗೆ ತಂಡ ಪ್ರಕಟ; ಗುರುಪ್ರೀತ್ ಸಿಂಗ್‌ಗೆ ಅವಕಾಶ

ಬೆಂಗಳೂರು (ಪಿಟಿಐ): ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಗೆ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡವನ್ನು ಪ್ರಕಟಿಸಲಾಗಿದೆ. ಸತತ ಒಂಬತ್ತನೇ ಆವೃತ್ತಿಗೆ ಸುನಿಲ್ ಚೆಟ್ರಿ ಅವರು ತಂಡದ ನಾಯಕತ್ವ ವಹಿಸಲಿದ್ದಾರೆ.

ಜರ್ಮನ್ – ಇಟಾಲಿಯನ್ ಕೋಚ್ ಮಾರ್ಕೊ ಪೆಜೌಲಿ ಮಾರ್ಗದರ್ಶನದಲ್ಲಿ ಪಳಗಿರುವ ತಂಡವು ಈ ಬಾರಿಯ ಟೂರ್ನಿಯ ಮೊದಲ ಪಂದ್ಯದಲ್ಲಿ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ಎದುರು ಆಡಲಿದೆ. ನವೆಂಬರ್ 20ರಂದು ಈ ಹಣಾಹಣಿ ನಿಗದಿಯಾಗಿದೆ.

ಮಕ್ಕಳ ದಿನಾಚರಣೆಯ ಸಂದರ್ಭದಲ್ಲಿ, ಬೆಂಗಳೂರಿನ ಶ್ರೀ ಗುರು ಹರಿಕೃಷ್ಣ ಶಾಲೆಯ ವಿದ್ಯಾರ್ಥಿಗಳ ಸಮ್ಮುಖದಲ್ಲಿ ತಂಡದ ಆಟಗಾರರ ಹೆಸರುಗಳನ್ನು ಪ್ರಕಟಿಸಿದ್ದು ಗಮನಸೆಳೆಯಿತು. ಈ ವಿಷಯವನ್ನು ಬೆಂಗಳೂರು ಎಫ್‌ಸಿಯು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದೆ.

ಆಕಾಶದೀಪ್ ಸಿಂಗ್, ದಮೈಪಾಂಗ್ ಲಿಂಗ್ಡೊ ಮತ್ತು ಶಿವಶಕ್ತಿ ನಾರಾಯಣನ್ ಅವರು ಈ ಬಾರಿಯೂ ಸ್ಥಾನ ಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

2021–22ರ ಆವೃತ್ತಿಯು ಬೆಂಗಳೂರು ಎಫ್‌ಸಿ ಆಡಲಿರುವ ಐದನೇ ಆವೃತ್ತಿಯಾಗಿದೆ. ಮೊದಲ ಎರಡು ಆವೃತ್ತಿಯಲ್ಲಿ ಫೈನಲ್ ತಲುಪಿದ್ದ ತಂಡವು 2018–19ರ ಆವೃತ್ತಿಯಲ್ಲಿ ಪ್ರಶಸ್ತಿ ಗೆದ್ದಿತ್ತು. 2019–20ರಲ್ಲಿ ಸೆಮಿಫೈನಲ್‌ವರೆಗೆ ತಲುಪಿತ್ತು.

ತಂಡ: ಗೋಲ್‌ಕೀಪರ್‌ಗಳು: ಗುರುಪ್ರೀತ್ ಸಿಂಗ್ ಸಂಧು, ಲಾರಾ ಶರ್ಮಾ, ಶರೋನ್ ಪಡತ್ತಿಲ್ **ಡಿಫೆಂಡರ್ಸ್:** ಪ್ರತೀಕ್ ಚೌಧರಿ, ವುಂಗಾಗಯಮ್ ಮೈರಾಂಗ್, ಅಜಿತ್ ಕುಮಾರ್, ಪರಾಗ್ ಶ್ರೀವಾಸ್, ಅಲನ್ ಕೋಸ್ಟಾ, ಸಾರ್ಥಕ್ ಗೋಲುಯಿ, ರೊಂದು ಮುಸಾವು ಕಿಂಗ್.**ಮಿಡ್‌ಫೀಲ್ಡರ್ಸ್:** ಸುರೇಶ್ ವಾಂಗ್‌ಜಮ್, ಅಜಯ್ ಚೆಟ್ರಿ, ಆಶಿಕ್ ಕುರುಣಿಯನ್, ನಾಮಗ್ಯಾಲ್ ಭುಟಿಯಾ, ನೊರೆಮ್ ರೋಶನ್ ಸಿಂಗ್, ವಿಶ್ವ ದರ್ಜೀ, ಲಿಂಗ್ಡೊ, ಆಕಾಶದೀಪ್ ಸಿಂಗ್, ರೋಹಿತ್ ಕುಮಾರ್, ಜಯೇಶ್ ರಾಣೆ, ಡ್ಯಾನಿಶ್ ಫಾರೂಕ್, ಬ್ರೂನೊ ರಾಮಿರೆಸ್, ಇಮಾನ್ ಬಸಾಫ. **ಫಾರ್ವರ್ಡ್ಸ್:** ಸುನಿಲ್ ಚೆಟ್ರಿ, ಎಡ್ಮಂಡ್ ಲಾಲ್‌ರಿಂದಿಕಾ, ಉದಾಂತ್ ಸಿಂಗ್, ಕ್ಲೇಟನ್ ಸಿಲ್ವಾ, ಲಿಯೊನ್ ಅಗಸ್ಟಿನ್, ಶಿವಶಕ್ತಿ ನಾರಾಯಣನ್, ಪ್ರಿನ್ಸ್ ಇಬಾರ, ಹರ್ಮನ್‌ಪ್ರೀತ್ ಸಿಂಗ್, ವಿದ್ಯಾಸಾಗರ್ ಸಿಂಗ್.

ಸುನಿಲ್ ಚೆಟ್ರಿ

ಮಹಿಳಾ ಬಿಗ್‌ಬ್ಯಾಷ್ ಲೀಗ್: ಸಿಡ್ನಿ ಸಿಕ್ಸರ್ಸ್‌ಗೆ ನಿರಾಸೆ

ಮಂದಾನ ಮಿಂಚು; ಥಂಡರ್ ಜಯ

ಮ್ಯಾಕೆ, ಆಸ್ಟ್ರೇಲಿಯಾ (ಪಿಟಿಐ): ಭಾರತ ಟಿ20 ಕ್ರಿಕೆಟ್ ತಂಡದ ಉಪನಾಯಕಿ ಸ್ಮೃತಿ ಮಂದಾನ ಅವರ ಭರ್ಜರಿ ಬ್ಯಾಟಿಂಗ್ ಬಲದಿಂದ ಸಿಡ್ನಿ ಥಂಡರ್ ತಂಡವು ಅಮೋಘ ಜಯ ಗಳಿಸಿತು.

ಮಹಿಳಾ ಬಿಗ್‌ಬ್ಯಾಷ್ ಲೀಗ್ ಟಿ20 ಟೂರ್ನಿಯಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಸಿಡ್ನಿ ಥಂಡರ್ ತಂಡವು ಆರು ವಿಕೆಟ್‌ಗಳಿಂದ ಸಿಡ್ನಿ ಸಿಕ್ಸರ್ಸ್ ತಂಡವನ್ನು ಸೋಲಿಸಿ ಸಂಭ್ರಮಿಸಿತು. ತಂಡದ ಪರ ವೈಯಕ್ತಿಕ ಗರಿಷ್ಠ ಮೊತ್ತ ಗಳಿಸಿ ಮಂದಾನ ಮಿಂಚಿದರು. 45 ರನ್ ಗಳಿಸಲು ಅವರು 39 ಎಸೆತಗಳನ್ನು ಎದುರಿಸಿದ್ದರು. ಅವರ ಮೋಹಕ ಇನಿಂಗ್ಸ್‌ನಲ್ಲಿ ಆರು ಭರ್ಜರಿ ಬೌಂಡರಿಗಳಿದ್ದವು.

ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ್ದ ಸಿಡ್ನಿ ಸಿಕ್ಸರ್ಸ್ 20 ಓವರ್‌ಗಳಲ್ಲಿ ಆರು ವಿಕೆಟ್ ಕಳೆದುಕೊಂಡು ಕೇವಲ 94 ರನ್ ಗಳಿಸಿತ್ತು.

ಈ ತಂಡದಲ್ಲಿದ್ದ ಭಾರತದ ಆರಂಭಿಕ ಬ್ಯಾಟರ್ ಶಫಾಲಿ ವರ್ಮಾ ಕೇವಲ 8 ರನ್ ಗಳಿಸಿ ನಿರಾಸೆ ಮೂಡಿಸಿದರು. ಎಲಿಸ್ ಪೆರಿ (40, 40ಎಸೆತ, 3 ಬೌಂಡರಿ) ಉತ್ತಮ ಬ್ಯಾಟಿಂಗ್ ಸಾಮರ್ಥ್ಯ ತೋರಿದರು. ಥಂಡರ್ ತಂಡವು 15.2 ಓವರ್‌ಗಳಲ್ಲಿ 96 ರನ್ ಗಳಿಸಿತು. ನಾಲ್ಕು ವಿಕೆಟ್ ಕಳೆದುಕೊಂಡಿತು.

ಮಂದಾನ ಅವರು ಕೊರಿನ್ ಹಿಲ್ (19) ಜೊತೆಗೂಡಿ ಮೂರನೇ ವಿಕೆಟ್ ಜೊತೆಯಾಟದಲ್ಲಿ 53 ರನ್ ಗಳಿಸಿದ್ದು, ತಂಡದ ಜಯದಲ್ಲಿ ಪ್ರಮುಖ ತಿರುವಾಯಿತು.

ಮತ್ತೊಂದು ಪಂದ್ಯದಲ್ಲಿ ಅಡಿಲೇಡ್ ಸ್ಟ್ರೈಕರ್ಸ್ ತಂಡವು ಎಂಟು ವಿಕೆಟ್‌ಗಳಿಂದ ಬ್ರಿಸ್ಬೇನ್ ಹೀಟ್ ತಂಡವನ್ನು ಸೋಲಿಸಿತು. ಬ್ರಿಸ್ಬೇನ್ ತಂಡದಲ್ಲಿದ್ದ ಭಾರತದ ಪೂನಮ್ ಯಾದವ್ 3.2 ಓವರ್ ಬೌಲ್ ಮಾಡಿ 19 ರನ್ ನೀಡಿದರು.

ಸ್ಮೃತಿ ಮಂದಾನ– ಟ್ವಿಟರ್ ಚಿತ್ರ

ಹೈದರಾಬಾದ್ ರೇಸ್

ಸಫ್ರೋನ್ ಆರ್ಟ್ ಗೆಲ್ಲುವ ನಿರೀಕ್ಷೆ

ತೋತಾರಾಮ್ಸ್ ಕಪ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಸಫ್ರೋನ್ ಆರ್ಟ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 12.50ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಗಾಲ್ವೆ ಬೇ 9, ಲೈಟ್ಸ್ ಆನ್ 10, ಚೈನಾ ಟೌನ್ 1
2ನೇ ರೇಸ್: ಡೆಸ್ಪಾಂಗ್ 10, ಎನ್ ಆರ್ ಐ ಟಚ್ 2, ಗ್ರೆಗೋರ್ ಕ್ಲೆಗೇನ್ 1
3ನೇ ರೇಸ್: ಬುಕ್ಲಿ 6, ಮೂನ್‌ಲೈಟ್ ರೂಬಿ 2, ಸ್ಟನ್ನಿಂಗ್ ಫೋರ್ಸ್ 3
4ನೇ ರೇಸ್: ನಾಟಿ ಡ್ಯಾನ್ಸರ್ 3, ಕಾಸ್ಮಿಕ್ ರನ್ 2, ಸೂಪರ್ ಏಂಜೆಲ್ 7
5ನೇ ರೇಸ್: ಲೊರೆನಾ 8, ಸಾಲಿಸ್‌ಬರಿ 2, ಸದರ್ನ್ ಆರ್ಕ್ಟ್ 4
6ನೇ ರೇಸ್: ವಿಷನರ್ 4, ಕೆಬೆಲ್ಲೊ 8, ಪಿಂಕ್ ಸ್ಪ್ಲೆಂಡರ್ 6
7ನೇ ರೇಸ್: ಸಫ್ರೋನ್ ಆರ್ಟ್ 9, ಸ್ತ್ರಾಮ್‌ಜೆಟ್ 6, ಎನ್ ಆರ್ ಐ ವ್ಯಾಲಿ 2
8ನೇ ರೇಸ್: ಓವರ್ ಜಾಯ್ 1, ಸಿರಿ 2, ಲೈಟ್ನಿಂಗ್ ಫೇರಿ 5

ಉತ್ತಮ ಬೆಟ್: ನಾಟಿ ಡ್ಯಾನ್ಸರ್

ಜಾಕ್‌ಪಾಟ್	1ನೇ ಮಿನಿ ಜಾಕ್‌ಪಾಟ್	2ನೇ ಮಿನಿ ಜಾಕ್‌ಪಾಟ್
4,5,6,7,8	2,3,4,5	5,6,7,8
1ನೇ ಟ್ರಿಬಲ್ 1,2,3	2ನೇ ಟ್ರಿಬಲ್ 3,4,5	3ನೇ ಟ್ರಿಬಲ್ 6,7,8

ಮಿನುಗಿದ ರಿಷಭ್; ಜ್ಯೋತಿಗೆ 4ನೇ ಸ್ಥಾನ

ಢಾಕಾ (ಪಿಟಿಐ): ಯುವ ಆರ್ಚರಿ ಪಟು ರಿಷಭ್ ಯಾದವ್ ಅವರು ಏಷ್ಯನ್ ಚಾಂಪಿಯನ್‌ಷಿಪ್‌ನ ರ‍್ಯಾಂಕಿಂಗ್ ಸುತ್ತಿನಲ್ಲಿ ಉತ್ತಮ ಸಾಮರ್ಥ್ಯ ತೋರಿದರು.

ಭಾನುವಾರ ಇಲ್ಲಿಯ ಬನಾನಿ ಆರ್ಮಿ ಕ್ರೀಡಾಂಗಣದಲ್ಲಿ ಚಾಂಪಿಯನ್‌ಷಿಪ್‌ನ ರ‍್ಯಾಂಕಿಂಗ್ ಸುತ್ತುಗಳು ಆರಂಭವಾಗಿದ್ದು, ರಿಷಭ್ ಅವರು ತಮ್ಮ ಮಾರ್ಗದರ್ಶಕ ಅಭಿಷೇಕ್ ವರ್ಮಾ ಅವರನ್ನು ಹಿಂದಿಕ್ಕಿ ಮೂರನೇ ಸ್ಥಾನ ಗಳಿಸಿದರು.

ರಿಕರ್ವ್ ಮತ್ತು ಕಾಂಪೌಂಡ್ ಅರ್ಹತಾ ಸುತ್ತುಗಳ ತಂಡ ಹಾಗೂ ಮಿಶ್ರ ವಿಭಾಗದಲ್ಲಿ ಭಾರತದ ಆರ್ಚರ್‌ಗಳು ಒಟ್ಟಾರೆ ಎರಡನೇ ಸ್ಥಾನ ಗಳಿಸಿದರು. ನಿರೀಕ್ಷೆಯಂತೆ ಕೊರಿಯಾ ಅಗ್ರಸ್ಥಾನ ಗಳಿಸಿತು.

ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಬಾರಿ ಕಣಕ್ಕಿಳಿದಿರುವ 19 ವರ್ಷದ ರಿಷಭ್, 708 ಪಾಯಿಂಟ್ಸ್ ಗಳಿಸಿದರು. ಒಂದು ಪಾಯಿಂಟ್‌ನಿಂದ ಅಭಿಷೇಕ್ ವರ್ಮಾ ಅವರನ್ನು ಹಿಂದಿಕ್ಕಿದರು. ಕೊರಿಯಾದ ಚೊಯಿ ಯೊಂಗಿ ಅಗ್ರಸ್ಥಾನ ಗಳಿಸಿದರೆ, ಅದೇ ದೇಶದ ಕಿಮ್ ಜೊಂಗೊ ಎರಡನೇ ಸ್ಥಾನ ತಮ್ಮದಾಗಿಸಿಕೊಂಡರು. ಅಭಿಷೇಕ್ ಅವರು ನಾಲ್ಕನೇ ಸ್ಥಾನ ಗಳಿಸಿದರು.

ರಿಷಭ್ 2012ರಿಂದ ಅಭಿಷೇಕ್ ಅವರಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಮಹಿಳೆಯರ ಕಾಂಪೌಂಡ್ ವಿಭಾಗದಲ್ಲಿ, ವಿಶ್ವಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತೆ ಜ್ಯೋತಿ ಸುರೇಖಾ ವೆನ್ನಂ 701 ಪಾಯಿಂಟ್ಸ್ ಗಳಿಸಿ ನಾಲ್ಕನೇ ಸ್ಥಾನ ಗಳಿಸಿದರು. ಈ ವಿಭಾಗದ ಮೊದಲ ಮೂರೂ ಸ್ಥಾನಗಳು ಕೊರಿಯಾ ಆರ್ಚರಿಪಟುಗಳ ಪಾಲಾದವು.

ಕೆಡೆಟ್ ಆರ್ಚರಿಪಟುಗಳಾದ ಪರ್ಣೀತ್ ಕೌರ್, ಪ್ರಿಯಾ ಗುರ್ಜರ್ ಅವರು ಐದು ಮತ್ತು ಆರನೇ ಸ್ಥಾನಗಳನ್ನು ಗಳಿಸಿದರೆ, ಮುಸ್ಕಾನ್ ಕಿರಾರ್ ಏಳನೇ ಸ್ಥಾನಕ್ಕೆ ತೃಪ್ತಿಪಡಬೇಕಾಯಿತು.

ರಿಕರ್ವ್ ವಿಭಾಗದಲ್ಲಿ ಕಪಿಲ್ (675 ಪಾಯಿಂಟ್ಸ್), ಪ್ರವೀಣ್ ಜಾಧವ್ (670), ಹಾಗೂ ಪಾರ್ಥ್ ಸಾಳುಂಕೆ (670) ಕ್ರಮವಾಗಿ ಐದು, ಆರು ಮತ್ತು ಏಳನೇ ಸ್ಥಾನ ಗಳಿಸಿದರು.

ವಿಶ್ವ ಯೂತ್ ಚಾಂಪಿಯನ್ ಕೋಮಲಿಕಾ ಬಾರಿ 644 ಪಾಯಿಂಟ್ಸ್‌ನೊಂದಿಗೆ ಎಂಟನೇ ಸ್ಥಾನಕ್ಕೆ ಕುಸಿದು ನಿರಾಸೆ ಮೂಡಿಸಿದರು. ಅಂಕಿತಾ ಭಕತ್, ಮಧು ವೇದ್ವಾನ್ ಮತ್ತು ರಿಧಿ ಐದು, ಆರು ಮತ್ತು ಏಳನೇ ಸ್ಥಾನಗಳನ್ನು ಪಡೆದುಕೊಂಡರು.

ರಿಷಭ್ ಯಾದವ್– ಟ್ವಿಟರ್ ಚಿತ್ರ

ಜ್ಯೋತಿ ಸುರೇಖಾ ವೆನ್ನಂ